ಶನಿವಾರ, ಆಗಸ್ಟ್ 14, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವಾತಂತ್ರ್ಯ ಸಂಭ್ರಮ

ಪಂಜಾಬ್‌ನ ಅಮೃತಸರದಲ್ಲಿ ಸ್ವಾತಂತ್ರ್ಯ ದಿನಾಚರಣೆಗೂ ಮುನ್ನ ಯುವತಿಯರಿಬ್ಬರು ತಮ್ಮ ಮುಖ ಮತ್ತು ಕೈಗಳ ಮೇಲೆ ತ್ರಿವರ್ಣ ಧ್ವಜದ ಬಣ್ಣಗಳನ್ನು ಹಚ್ಚಿಕೊಂಡು ಸಂಭ್ರಮಿಸಿದರು

ಈಗ ಶಾಪಿಂಗ್ ಬಗ್ಗೆ ಯಾರೂ ಗದರಿಸೋಲ್ಲ ... ...ಬೇಡ ಬೇಡ ಎಂದು ಕೂಡ ಹೇಳೋಲ್ಲ.

JioMart.com ನಲ್ಲಿ ಸಹ ಫುಲ್ ಪೈಸ ವಸೂಲ್ ಆಫರ್ಸ್ ಗಳನ್ನು ಪಡೆಯಿರಿ

ಅಥವಾ ನಿಮ್ಮ ಹತ್ತಿರದ ಅಂಗಡಿಗೆ ಭೇಟಿ ನೀಡಿ.
SMART SUPERSTORE | SMART POINT | Reliance fresh

ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು) — ಪ್ರತಿಯೊಂದು ಎಮ್‌ಆರ್‌ಪಿ ₹60 ರಿಂದ — BUY ANY2 GET ANY1 FREE

ಕೇಕ್ ಶ್ರೇಣಿ 1.75 ℓ / ಮಾಜಾ 1.5 ℓ (ಆಯ್ದ ಪ್ರಕಾರಗಳು) — ಪ್ರತಿಯೊಂದು ಎಮ್‌ಆರ್‌ಪಿ ₹80 ರಿಂದ — BUY ANY2 GET ANY1 FREE

ಚಾಕೋಲೇಟ್ ಹೋಮ್ ಪ್ಯಾಕ್ಸ್ 126 g ರಿಂದ (ಕ್ಯಾಡ್‌ಬರಿ ಡೇರಿ ಮಿಲ್ಕ್/ ಪರ್ಕ್/ಫೈವ್ ಸ್ಟಾರ್ /ಮಂಚ್ ಮಹಾ/ ಕಿಟ್ ಕ್ಯಾಟ್) ಲೊಟ್ಟೆ ಚಾಕೋ ಪೈ 336 g — ಪ್ರತಿಯೊಂದು ಎಮ್‌ಆರ್‌ಪಿ ₹99 ರಿಂದ — BUY ANY2 GET ANY1 FREE

ಯಿಪ್ಪೀ ಮ್ಯಾಜಿಕ್ ಮಸಾಲಾ / ಟಾಪ್ ರೇಮನ್‌ಮಸಾಲಾ / ಚಿಂಗ್ಸ್ ಸೀಕ್ರೆಟ್ ನೂಡಲ್ಸ್ 240 g ರಿಂದ (ಆಯ್ದ ಪ್ರಕಾರಗಳು) — ಪ್ರತಿಯೊಂದು ಎಮ್‌ಆರ್‌ಪಿ ₹60 ರಿಂದ — BUY ANY2 GET ANY1 FREE

ಹೋಲ್ ಸ್ಪೈಸಸ್ (ಸಂಪೂರ್ಣ ರೇಂಜ್) — BUY ANY2 GET ANY1 FREE — ಎಮ್‌ಆರ್‌ಪಿ ಮೇಲೆ

ಕೋಲ್ಗೇಟ್ ಡೆಂಟಲ್ ಕ್ರೀಮ್ /ಮ್ಯಾಕ್ಸ್ ಫ್ರೆಶ್ / ಸ್ವರ್ಣ ವೇದಶಕ್ತಿ/ಕ್ಲೋಸ್ ಅಪ್/ಮೆಸ್ವಾಕ್/ ಪೆಪ್ಸೊಡೆಂಟ್ ಜರ್ಮಿಚೆಕ್ ಟೂತ್‌ಪೇಸ್ಟ್ 300 g ರಿಂದ (ಆಯ್ದ ಪ್ರಕಾರಗಳು) — ಪ್ರತಿಯೊಂದು ಎಮ್‌ಆರ್‌ಪಿ ₹129 ರಿಂದ — BUY ANY2 GET ANY1 FREE

ಪಿಯರ್ಸ್ / ಡವ್ / ಲಕ್ಸ್ / ಗೋದ್ರೆಜ್ ನಂ.1 ಸೋಪ್ / ಸಂತೂರ್ ಸೋಪ್ (ಕಿಟ್ಟೆಡ್ ಪ್ಯಾಕ್) (ಆಯ್ದ ಪ್ರಕಾರಗಳು) — ಪ್ರತಿಯೊಂದು ಎಮ್‌ಆರ್‌ಪಿ ₹125 ರಿಂದ — BUY ANY2 GET ANY1 FREE

ವಿಸ್ಪರ್ ಅಲ್ಟ್ರಾ XL 44s / ಸ್ಟೇಫ್ರೀ ಡ್ರೈಮ್ಯಾಕ್ಸ್ 42s / ಸಾಫ್ಟೀ XL 54s (ಆಯ್ದ ಪ್ರಕಾರಗಳು) — ಪ್ರತಿಯೊಂದು ಎಮ್‌ಆರ್‌ಪಿ ₹399 ರಿಂದ — BUY ANY2 GET ANY1 FREE

ಡವ್ / ಹೆಡ್ & ಶೋಲ್ಡರ್ಸ್ / ಲೋರಿಯಾಲ್ / ಟ್ರೆಸೆಮೆ/ಪ್ಯಾಂಟೀನ್ ಶ್ಯಾಂಪೂ 580 ml ರಿಂದ (ಆಯ್ದ ಪ್ರಕಾರಗಳು) — ಎಮ್‌ಆರ್‌ಪಿ ₹500 ರಿಂದ — BUY ANY1 GET ANY1 FREE

ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ (ಆಯ್ದ ಪ್ರಕಾರಗಳು) — ಎಮ್‌ಆರ್‌ಪಿ ₹100 ರಿಂದ — BUY ANY1 GET ANY1 FREE

ಫಾರ್ಚೂನ್ ರಿಫೈನ್ಡ್ ರೈಸ್ ಬ್ರಾನ್ ಹೆಲ್ದಿ ಆಯಿಲ್ 5 ℓ + ದಾವತ್ ದೇವಾಯ ಬಾಸ್ಮತಿ ರೈಸ್ 5 kg — ಒಟ್ಟು ಎಮ್‌ಆರ್‌ಪಿ ₹1470 ಉಳಿಸಿರಿ ₹421 — ನಮ್ಮ ಬೆಲೆ ₹1049

ಸರ್ಫ್ ಎಕ್ಸೆಲ್ ಈಸಿ ವಾಶ್ / ಟೈಡ್ ಪ್ಲಸ್ 4 kg / ಸರ್ಫ್ ಎಕ್ಸೆಲ್ ಮ್ಯಾಟಿಕ್ / ರಿಯಲ್ ಮ್ಯಾಟಿಕ್ 4 kg + 2 kg (ಉಚಿತ) (ಟಾಪ್ / ಫ್ರಂಟ್ ಲೋಡ್) (ಆಯ್ದ ಪ್ರಕಾರಗಳು) — ಎಮ್‌ಆರ್‌ಪಿ ₹480 ರಿಂದ ನಮ್ಮ ಬೆಲೆ ₹336 ರಿಂದ — 30% ಕಡಿತ

ಗಿಣ್ಣು,ಮೊಸರು, ಮಾರ್ಗರಿನ್, ಕಪ್ ಮೊಸರು, ಹಾಲಿನ ಪಾನಿಯಗಳು, ಪನೀರ್, ಬ್ರೆಡ್, ಕೇಕ್ & ರಸ್ಕ್, ಹೆಪ್ಪುಗಟ್ಟಿದ ತರಕಾರಿತಿಂಡಿಗಳು (ಆಯ್ದ ಪ್ರಕಾರಗಳು) — ಕನಿಷ್ಠ 25%* ಕಡಿತ — *ಎಮ್‌ಆರ್‌ಪಿ ಮೇಲೆ

ಟಾಟಾ ಗೋಲ್ಡ್ ಲೀಫ್ ಚಹಾ 500 g — ಎಮ್‌ಆರ್‌ಪಿ ₹315 ನಮ್ಮ ಬೆಲೆ ₹235 — ಉಳಿಸಿರಿ ₹80

ಕೆಲ್ಲಾಗ್ ಕಾರ್ನ್ ಫ್ಲೇಕ್ಸ್ 1.2 kg / ನಟ್ ಡಿಲೈಟ್ / ಹಣ್ಣು ಮತ್ತು ನಟ್ ಮ್ಯೂಸ್ಲಿ 750 g (ಆಯ್ದ ಪ್ರಕಾರಗಳು) — ಎಮ್‌ಆರ್‌ಪಿ ₹415 ರಿಂದ ನಮ್ಮ ಬೆಲೆ ₹299 — ಉಳಿಸಿರಿ ₹116 ರಿಂದ

ನಂದಿನಿ ತುಪ್ಪ 1 ℓ — ಎಮ್‌ಆರ್‌ಪಿ ₹450 ಉಳಿಸಿರಿ ₹40 — ನಮ್ಮ ಬೆಲೆ ₹410

ಗುಡ್ ಲೈಫ್ ಕ್ಯಾಶೂ (W320) 500 g — ಎಮ್‌ಆರ್‌ಪಿ ₹499 ಉಳಿಸಿರಿ ₹100 — ನಮ್ಮ ಬೆಲೆ ₹399

ಆಶೀರ್ವಾದ ಉನ್ನತ MP (ಹಿಟ್ಟು) 10 kg — ಎಮ್‌ಆರ್‌ಪಿ ₹490 ಉಳಿಸಿರಿ ₹111 — ನಮ್ಮ ಬೆಲೆ ₹379

ಸನ್ ಪ್ರಿಮಿಯಮ್ ಸನ್‌ಫ್ಲಾವರ್ ಆಯಿಲ್ 1 ℓ — ಎಮ್‌ಆರ್‌ಪಿ ₹197 ಉಳಿಸಿರಿ ₹51 — ನಮ್ಮ ಬೆಲೆ ₹146

ತೊಗರಿಬೇಳೆ 2 kg — ಎಮ್‌ಆರ್‌ಪಿ ₹270 ಉಳಿಸಿರಿ ₹78 — ನಮ್ಮ ಬೆಲೆ ₹192 (₹96 /kg)

ಪಿಜೀನ್ ಕಾಂಬೊ 4 ಜೊತೆ ಸೆಟ್ (3 ಬರ್ನರ್ ಗ್ಯಾಸ್ ಒಲೆ + 1 ತವ ಹಂಚು + 1 ಕರಿಯುವ ಬಾಂಡಲಿ + 3 ℓ ಕುಕ್ಕರ್) — ಎಮ್‌ಆರ್‌ಪಿ ₹8485 ಉಳಿಸಿರಿ ₹5188 — ನಮ್ಮ ಬೆಲೆ ₹3297

ವಿಮ್ ಲೆಮನ್ ಡಿಶ್‌ವಾಶ್ ಜೆಲ್ 750 ml — ಎಮ್‌ಆರ್‌ಪಿ ₹170 ನಮ್ಮ ಬೆಲೆ ₹115 — ಉಳಿಸಿರಿ ₹55

ಡೊಮೆಕ್ಸ್ ಟಾಯ್ಲೆಟ್ / ಫ್ಲೋರ್ ಕ್ಲೀನರ್ 1 ℓ — ಎಮ್‌ಆರ್‌ಪಿ ₹180 ರಿಂದ ನಮ್ಮ ಬೆಲೆ ₹99 — ಉಳಿಸಿರಿ ₹81 ರಿಂದ

10% EXTRA CASHBACK# SBI Debit Card | SBI card
#Min. Trxn: ₹1,000; Max. Cashback: ₹500 per card account.
Validity: 14 - 18 Aug 2021. T&C Apply.

Pay using Paytm App. GET UP TO ₹600 Paytm CASHBACK
Offer valid on min. payment of ₹600 using Paytm Wallet only.
Valid from 14 to 18 August 2021. T&C Apply.

ಬಳ್ಳಾರಿ • ಬೆಳಗಾವಿ • ಬೆಂಗಳೂರು • ಭದ್ರಾವತಿ • ಚಿಕ್ಕಮಗಳೂರು • ದಾವಣಗೆರೆ • ಧಾರವಾಡ • ದೊಡ್ಡಬಳ್ಳಾಪುರ • ಗಂಗಾವತಿ • ಗೋಕಾಕ್ • ಹರಿಹರ • ಹಾಸನ • ಹಾವೇರಿ • ಹೊಸಪೇಟೆ • ಹುಬ್ಬಳ್ಳಿ • ಕಲ್ಬುರ್ಗಿ • ಕನಕಪುರ • ಕೋಲಾರ • ಕುಂದಾಪುರ • ಮದ್ದೂರು • ಮಾಲೂರು • ಮಂಡ್ಯ • ಮಂಗಳೂರು • ಮೈಸೂರು • ಪುತ್ತೂರು • ರಾಯಚೂರು • ಶ್ರೀರಂಗಪಟ್ಟಣ • ತುಮಕೂರು • ಉಡುಪಿ • ವಿಜಯಪುರ

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಬ್ಯಾಂಕಿಂಗ್ ಮತ್ತು ವಾಲೆಟ್ ಕೊಡುಗೆಗಳು ಜಿಯೋಮಾರ್ಟ್‌ನಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಸ್ಟಾಕ್ಸ್ ಕೊನೆಯವರೆಗೂ ಕೊಡುಗೆಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಯಾವುದೇ ಮುನ್ಸೂಚನೆಯಿಲ್ಲದೆ ಬದಲಾಗುತ್ತವೆ. ತೋರಿಸಿದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯಕ್ಕಾಗಿ ಮಾತ್ರ. ಎಲ್ಲಾ ಉತ್ಪನ್ನಗಳ ಎಂಆರ್‌ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಇತರ ಎಲ್ಲಾ ಆಫರ್‌ಗಳು 18 ಆಗಸ್ಟ್ 2021. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಶನಿವಾರ, ಆಗಸ್ಟ್ 14, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 226 | ಪುಟ 28
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್ ಸಂದರ್ಭದಲ್ಲಿ ಅಡುಗೆ ಮಾಡುವುದು ಹಲವರಿಗೆ ಮಾನಸಿಕ, ದೈಹಿಕ ಬಳಲಿಕೆಗೆ ಕಾರಣವಾಗಿದೆ. ಹಾಗಾದರೆ ಈ ಅಡುಗೆಯಲ್ಲಿ ಖುಷಿ ಕಾಣುವುದು ಹೇಗೆ?

ಚರ್ಚೆ ಸ್ಥಳ, ಸಂಸ್ಥೆ, ಪ್ರಶಸ್ತಿಗಳ ಹೆಸರು ಬದಲಾವಣೆ ಸರಿಯೇ? 5
ಕಾಬೂಲ್ ಸಮೀಪಿಸಿದ ತಾಲಿಬಾನ್ ಉಗ್ರರು 11
ಮುಂದಿನ ಜುಲೈನಿಂದ ಏಕಬಳಕೆ ಪ್ಲಾಸ್ಟಿಕ್ ಇಲ್ಲ 11

ಸೆನ್ಸೆಕ್ಸ್	ನಿಫ್ಟಿ	₹/$
55,437 ▲	16,529 ▲	74.24 ▲

ನೋಂದಣಿ ಕಚೇರಿಯಲ್ಲಿ ಜನರ ಪರದಾಟ: ಸರ್ವರ್ ಡೌನ್ ಫಲಕ ಕಾಯಂ

ಸರ್ವರ್ ಸಮಸ್ಯೆ ತಂದ 'ಅಮಾವಾಸ್ಯೆ'

• ವಿಜಯಕುಮಾರ್ ಎಸ್.ಕೆ.



ಉಪ ನೋಂದಣಾಧಿಕಾರಿಗಳ ಕಚೇರಿಗಳ ದೃಶ್ಯ –ಪ್ರಜಾವಾಣಿ ಚಿತ್ರ

ಬೆಂಗಳೂರು: ಆಸ್ತಿ ನೋಂದಣಿಗೆ ಪದೇ ಪದೇ ತೊಡಕಾಗಿ ಕಾಡುವ 'ಸರ್ವರ್ ಡೌನ್' ಸಮಸ್ಯೆಯೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ತಲೆನೋವಾಗಿ ಕಾಡುತ್ತಿದೆ. ಮೂರು–ನಾಲ್ಕು ಇಲಾಖೆಗಳ ತಂತ್ರಾಂಶಗಳ ಮೇಲೆ ನೋಂದಣಿ ಇಲಾಖೆ ಅವಲಂಬಿತವಾಗಿದ್ದು, ಈ ಸಮಸ್ಯೆ ದಿನದಿಂದ ದಿನಕ್ಕೆ ಕಗ್ಗಂಟಾಗುತ್ತಲೇ ಹೋಗುತ್ತಿದೆ.

ಸರ್ವರ್ ಸಮಸ್ಯೆಯಿಂದಾಗಿ ನೋಂದಣಿ ಕಚೇರಿಯ ಕೆಲಸ ಮಾತ್ರವಲ್ಲ; ಕಂದಾಯ ಸೇರಿದಂತೆ ವಿವಿಧ ಇಲಾಖೆಗಳ ದಾಖಲೆಗಳನ್ನು ಪಡೆಯಲು ಜನ ಪರದಾಡುವಂತಾಗಿದೆ. ಸರ್ವರ್ ಸಮಸ್ಯೆಯನ್ನು ಸರಿಪಡಿಸಲು ಸರ್ಕಾರ ಆಸಕ್ತಿ ತೋರದೇ ಇರುವುದರಿಂದ, ಕಚೇರಿ ಕೆಲಸ ನಿರ್ವಹಿಸುವ ಸಿಬ್ಬಂದಿ ಮತ್ತು ನಾಗರಿಕರು ದಾಖಲೆ ಪಡೆಯುವ ವಿಷಯದಲ್ಲಿ ಕಗ್ಗತ್ತಲಿನ ಪರಿಸ್ಥಿತಿಯಲ್ಲೇ ಇರುವಂತಾಗಿದೆ ಎಂಬ ದೂರು ವ್ಯಾಪಕವಾಗುತ್ತಿದೆ.

ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ನೋಂದಣಿ ಪ್ರಕ್ರಿಯೆ ನಿರ್ವಹಿಸುವ ತಂತ್ರಾಂಶದ ಹೆಸರು ಕಾವೇರಿ. ಇದೊಂದರಿಂದಲೇ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಲು ಆಗುವುದಿಲ್ಲ. ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆಯ ತಂತ್ರಾಂಶಗಳನ್ನು ನೋಂದಣಿ ಇಲಾಖೆ ಅವಲಂಬಿಸಿದೆ.

ಪ್ರಜಾವಾಣಿ ವಿಶೇಷ

ಕೃಷಿ ಭೂಮಿ ನೋಂದಣಿಗೆ ಕಂದಾಯ ಇಲಾಖೆಯ 'ಭೂಮಿ' ತಂತ್ರಾಂಶದ ಮೂಲಕ ಪಹಣಿ ಪಡೆದುಕೊಳ್ಳುತ್ತದೆ. 'ಭೂಮಿ' ತಂತ್ರಾಂಶದಲ್ಲಿ ದೋಷ ಕಾಣಿಸಿಕೊಂಡರೆ ಪಹಣಿ ದೊರೆಯದೆ ನೋಂದಣಿ ಪ್ರಕ್ರಿಯೆ ಸ್ಥಗಿತಗೊಳ್ಳುತ್ತಿದೆ. ಗ್ರಾಮ ವ್ಯಾಪ್ತಿಯ ಆಸ್ತಿ ಆಗಿದ್ದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 'ಇ–ಸ್ವತ್ತು' ತಂತ್ರಾಂಶದಿಂದ, ನಗರ ವ್ಯಾಪ್ತಿಯ ಆಸ್ತಿಯಾಗಿದ್ದರೆ 'ಇ–ಆಸ್ತಿ' ತಂತ್ರಾಶದಿಂದ ದಾಖಲೆಗಳನ್ನು ಕಾವೇರಿ ತಂತ್ರಾಂಶಕ್ಕೆ ಜೋಡಿಸಿಕೊಳ್ಳಬೇಕಾಗುತ್ತದೆ.

ನೋಂದಣಿ ಮತ್ತು ಮುದ್ರಾಂಕ ಶುಲ್ಕ

ವರ್ಷ	ಮೊತ್ತ (₹ಕೋಟಿಗಳಲ್ಲಿ)
2016-17	7,806
2017-18	9,024
2018-19	10,775
2019-20	11,828
2020-21	12,655
2021-22	12,655(ನಿರೀಕ್ಷೆ)

ವ್ಯಕ್ತಿಯೊಬ್ಬರು ಆಸ್ತಿಯಲ್ಲಿ ಭಾಗಶಃ ಮಾರಾಟ ಮಾಡುತ್ತಿದ್ದರೆ, ಅದಕ್ಕೆ ಬೇಕಿರುವ ನಕ್ಷೆಯನ್ನು 'ಮೋಜಣಿ' ತಂತ್ರಾಂಶದಿಂದ ಪಡೆಯಬೇಕಾಗುತ್ತದೆ. ನೋಂದಣಿಗೆ ಒಟಿಪಿಯನ್ನು ಇ–ಆಡಳಿತದ ಇಸಿಡಿಎಸ್ ಮೂಲಕ ಪಡೆಯಲಾಗುತ್ತದೆ. ನೋಂದಣಿ ಪ್ರಕ್ರಿಯೆ ನಡೆಸುವಾಗ ಯಾವುದೋ ಒಂದು ತಂತ್ರಾಂಶದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡರೆ ಇಡೀ ನೋಂದಣಿ ಪ್ರಕ್ರಿಯೆ ಅಲ್ಲೇ ನಿಲ್ಲುತ್ತದೆ.

2003ರಲ್ಲಿ ಅಭಿವೃದ್ಧಿಪಡಿಸಲಾಗಿರುವ 'ಕಾವೇರಿ' ತಂತ್ರಾಂಶದಲ್ಲೂ ಆಗಾಗ ತಾಂತ್ರಿಕ ತೊಂದರೆಗಳು ಎದುರಾಗುತ್ತವೆ. ಕೆಲವೊಮ್ಮೆ ಕಾವೇರಿ ತಂತ್ರಾಂಶ ಸರಿಯಾಗಿದ್ದರೂ, ಬೇರೆ ತಂತ್ರಾಂಶಗಳ ಲೋಪದಿಂದ ನೋಂದಣಿಗೆ ತೊಡಕಾಗುತ್ತದೆ. ಇದೆಲ್ಲದರ ಪರಿಣಾಮವಾಗಿ ನೋಂದಣಿ ಕಚೇರಿಗಳಲ್ಲಿ ದಿನವೂ ಸಿಬ್ಬಂದಿ ಮತ್ತು ಆಸ್ತಿ ನೋಂದಣಿಗೆ ಬರುವ ಜನ ಪರದಾಡುತ್ತಲೇ ಇದ್ದಾರೆ. ಸರ್ವರ್ ಡೌನ್ ಎಂಬ ಫಲಕಗಳು ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಕಾಯಂ ಆಗಿವೆ.

'ವಾರದಲ್ಲಿ ಒಮ್ಮೆಯಾದರೂ ಈ ಸಮಸ್ಯೆ ನೋಂದಣಿ ಇಲಾಖೆಯನ್ನು ಕಾಡದೆ ಬಿಡುವುದಿಲ್ಲ. ಸರ್ವರ್ ಡೌನ್ ಎಂಬ ಸಿದ್ಧ ಉತ್ತರ ಕೇಳಿ ಜನ ರೋಸಿ ಹೋಗಿದ್ದಾರೆ. ಅದರಲ್ಲೂ ವಾರದ ಮೊದಲ ದಿನ(ಸೋಮವಾರ) ಸಮಸ್ಯೆ ಹೆಚ್ಚು ಎನ್ನುತ್ತಾರೆ ಪತ್ರ ಬರಹಗಾರರು.

'ರಾಜ್ಯದ ಬಜೆಟ್‌ನಲ್ಲಿ ಶೇ 10ರಷ್ಟು ಮುದ್ರಾಂಕ ಮತ್ತು ನೋಂದಣಿ ಶುಲ್ಕದ ವರಮಾನ ಇದೆ. ಯಾವ ತಂತ್ರಾಂಶದಲ್ಲಿ ತಾಂತ್ರಿಕ ದೋಷ ಇದೆ ಎಂಬುದು ಜನರಿಗೆ ಮುಖ್ಯವಲ್ಲ. ಒಟ್ಟಾರೆ ನೋಂದಣಿ ಪ್ರಕ್ರಿಯೆ ಸುಗಮ ಆಗಬೇಕು. ಸಾಫ್ಟ್‌ವೇರ್ ಬದಲಿಸಿ ಸಮಸ್ಯೆ ಸರಿಪಡಿಸಬೇಕು' ಎಂಬುದು ಅವರ ಆಗ್ರಹ.

'3–4 ತಿಂಗಳಲ್ಲಿ ಸಮಸ್ಯೆ ಇತ್ಯರ್ಥ'

'ಬೇರೆ ಬೇರೆ ಇಲಾಖೆಯ ತಂತ್ರಾಂಶದಲ್ಲಿ ದೋಷ ಕಾಣಿಸಿಕೊಂಡರೂ ನೋಂದಣಿ ಪ್ರಕ್ರಿಯೆ ಮುಂದುವರಿಸಲು ಆಗುವುದಿಲ್ಲ. ಒಟ್ಟಾರೆಯಾಗಿ ಜನ ಅದನ್ನು ನಮ್ಮ ಇಲಾಖೆಯ ಸರ್ವರ್ ಸಮಸ್ಯೆ ಎಂದು ಭಾವಿಸುತ್ತಾರೆ. ಸಾಫ್ಟ್‌ವೇರ್ ಬದಲಿಸಿ ಸಮಸ್ಯೆಯನ್ನು ಒಟ್ಟಾರೆಯಾಗಿ ಸರಿಪಡಿಸಲು ಇ–ಆಡಳಿತ ಪ್ರಯತ್ನಿಸುತ್ತಿದೆ' ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತ ಕೆ.ಪಿ. ಮೋಹನ್‌ರಾಜ್ ಹೇಳಿದರು.

ಆಸ್ತಿಯೇ ಇಲ್ಲದೆ ನೋಂದಣಿ ಆಗುವುದು ಸೇರಿ ಅಕ್ರಮಗಳನ್ನು ತಡೆಗಟ್ಟುವ ಉದ್ದೇಶದಿಂದ ಎಲ್ಲಾ ತಂತ್ರಾಂಶಗಳಿಂದ ದಾಖಲೆಗಳನ್ನು ಪಡೆದು ನೋಂದಣಿ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದರು. 'ಬ್ಯಾಟರಿ, ಪ್ರಿಂಟರ್, ಕಂಪ್ಯೂಟರ್ ರೀತಿಯ ಹಾರ್ಡ್‌ವೇರ್ ಸಮಸ್ಯೆಗಳನ್ನು ಪರಿಹರಿಸಲು ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಒಂದು ತಿಂಗಳಲ್ಲಿ ಹಾರ್ಡ್‌ವೇರ್ ಸಮಸ್ಯೆ ಸರಿಯಾಗಲಿದೆ. ಮೂರು–ನಾಲ್ಕು ತಿಂಗಳಲ್ಲಿ ಸಾಫ್ಟ್‌ವೇರ್ ಸಮಸ್ಯೆಯೂ ಇತ್ಯರ್ಥವಾಗಲಿದೆ' ಎಂದರು.

'₹8.5ಕೋಟಿ ತೆರಿಗೆ ವಂಚಿಸಿದ ರಾಕ್‌ಲೈನ್ ವೆಂಕಟೇಶ್'

ಬೆಂಗಳೂರು: 'ನಗರದ ರಾಕ್‌ಲೈನ್ ಮಾಲ್‌ನ ಮಾಲೀಕ ರಾಕ್‌ಲೈನ್ ವೆಂಕಟೇಶ್ ಮತ್ತು ಪದ್ಮಕುಮಾರಿ ಅವರು ಬಿಬಿಎಂಪಿಗೆ ₹8.5 ಕೋಟಿಗೂ ಅಧಿಕ ಮೊತ್ತದ ತೆರಿಗೆ ವಂಚಿಸಿದ್ದಾರೆ' ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಆರೋಪಿಸಿದ್ದಾರೆ. 3

ವಿಕಾಸಸೌಧದಲ್ಲಿ ಶುಕ್ರವಾರ ನಡೆದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಕಚೇರಿ ಪೂಜೆಯ ಕಾರ್ಯಕ್ರಮದಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಲೆಕ್ಕಿಸದೇ ಹಲವಾರು ಮಂದಿ ಪಾಲ್ಗೊಂಡಿದ್ದರು

ಅಂತರ, ಮಾಸ್ಕ್ ಧರಿಸುವುದನ್ನು ಮರೆತಿದ್ದ ಬೆಂಬಲಿಗರು

ಆರಗ ಜ್ಞಾನೇಂದ್ರ ಕಚೇರಿ ಪೂಜೆಗೆ ನೂರಾರು ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಅಧಿಕೃತ ಕಚೇರಿಯ ಪೂಜೆ ವಿಕಾಸಸೌಧದಲ್ಲಿ ಶುಕ್ರವಾರ ನಡೆದಿದ್ದು, ಕೋವಿಡ್ ನಿಯಂತ್ರಣ ಮಾರ್ಗಸೂಚಿ ಲೆಕ್ಕಿಸದೇ ನೂರಾರು ಮಂದಿ ಪಾಲ್ಗೊಂಡಿದ್ದರು.

ಹೆಚ್ಚಿನವರು ದೈಹಿಕ ಅಂತರ, ಮಾಸ್ಕ್ ಧರಿಸುವುದನ್ನೇ ಮರೆತಿದ್ದರು. ಗೃಹ ಇಲಾಖೆಯ ಹಿರಿಯ ಅಧಿಕಾರಿಗಳು, ಹಿರಿಯ ಐಪಿಎಸ್ ಅಧಿಕಾರಿಗಳು, ಸಿಬ್ಬಂದಿಯೂ ಕಾರ್ಯಕ್ರಮದಲ್ಲಿ ಹಾಜರಿದ್ದರು.

ನಾಗರ ಪಂಚಮಿ ಹಬ್ಬದ ದಿನವಾದ ಶುಕ್ರವಾರ ಸಚಿವರ ಪೈಕಿ ಹಲವರು ತಮ್ಮ ಅಧಿಕೃತ ಕಚೇರಿಗಳ ಪೂಜೆ ನೆರವೇರಿಸಿದರು. ಆ ಪೈಕಿ ಗೃಹ ಸಚಿವರ ಕಚೇರಿ ಪೂಜೆಯ ಕಾರ್ಯಕ್ರಮದಲ್ಲಿ ಜನರು ಕಿಕ್ಕಿರಿದು ಸೇರಿದ್ದರು.

ಆರಗ ಜ್ಞಾನೇಂದ್ರ ಅವರು ಪ್ರತಿನಿಧಿಸುವ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರವೂ ಸೇರಿದಂತೆ ಶಿವಮೊಗ್ಗ ಜಿಲ್ಲೆಯಿಂದ ಹೆಚ್ಚಿನ ಜನರು ಕಚೇರಿಗೆ ಬಂದು ಪೂಜೆಯಲ್ಲಿ ಪಾಲ್ಗೊಂಡಿದ್ದರು. ಚಿಕ್ಕಮಗಳೂರು ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಅವರ ಅಭಿಮಾನಿಗಳು, ಬೆಂಬಲಿಗರೂ ಕಾರ್ಯಕ್ರಮದಲ್ಲಿದ್ದರು.

ಗೃಹ ಸಚಿವರ ಬೆಂಬಲಿಗರು ಮತ್ತು ಅಭಿಮಾನಿಗಳು ಅಂತರ ಕಾಯ್ದುಕೊಳ್ಳದೇ ಸಚಿವರೊಂದಿಗೆ ಫೋಟೊ ಸೆರೆಹಿಡಿಯುತ್ತಿದ್ದ ದೃಶ್ಯ ಕಂಡುಬಂತು. ಹಲವರು ಮಾಸ್ಕ್ ಧರಿಸದೇ ಗುಂಪುಗೂಡಿ ಫೋಟೊ ತೆಗೆದುಕೊಳ್ಳುವುದರಲ್ಲಿ ಮಗ್ನರಾಗಿದ್ದರು.

ಆಹ್ವಾನ ನೀಡಿರಲಿಲ್ಲ: ಕಚೇರಿ ಪೂಜೆ ವೇಳೆ ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಕುರಿತು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, 'ಕಚೇರಿ ಪೂಜೆಯಲ್ಲಿ ಭಾಗವಹಿಸುವಂತೆ ನಾನು ಯಾರಿಗೂ ಆಹ್ವಾನ ನೀಡಿರಲಿಲ್ಲ' ಎಂದರು.

'ಪೂಜೆ ನೆರವೇರಿಸಿ ಕಚೇರಿ ಪ್ರವೇಶಿಸಿದ್ದೇನೆ. ಗೃಹ ಇಲಾಖೆ ಮಲಗದಂತೆ ನೋಡಿಕೊಳ್ಳುತ್ತೇನೆ. ಪೊಲೀಸ್ ಇಲಾಖೆ ಎಚ್ಚರವಾಗಿದ್ದು, ಜನರು ನೆಮ್ಮದಿಯಿಂದ ನಿದ್ರಿಸುವ ವಾತಾವರಣ ರಾಜ್ಯದಲ್ಲಿರುವಂತೆ ಕೆಲಸ ಮಾಡುತ್ತೇನೆ' ಎಂದರು.

'ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಅವರ ವಾಹನಗಳಿಗೆ ಬೆಂಕಿ ಹಚ್ಚಿದ ಪ್ರಕರಣದ ತನಿಖೆ ಬಹು ಆಯಾಮಗಳಲ್ಲಿ ನಡೆಯುತ್ತಿದೆ. ಎರಡರಿಂದ ಮೂರು ದಿನಗಳಲ್ಲಿ ಸ್ಪಷ್ಟ ಮಾಹಿತಿ ಲಭ್ಯವಾಗಬಹುದು' ಎಂದರು.

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4275/-gm
ಬೆಳ್ಳಿ ₹ 61,000/- *CA
ಚಿಕ್ಕಪೇಟೆ: 41300355
Gangothri

ಸದ್ಯವೇ ಮಸೂದೆ ಮಂಡನೆ: ಶಿವರಾಂ ಹೆಬ್ಬಾರ್

ಅಪಘಾತದಲ್ಲಿ ಕಾರ್ಮಿಕ ಮೃತಪಟ್ಟರೆ ₹5 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರು, ಆಟೊ, ಟ್ಯಾಕ್ಸಿ, ಟ್ರಕ್, ಬಸ್ ಚಾಲಕರೂ ಸೇರಿದಂತೆ ಮೆಕ್ಯಾನಿಕ್, ಕ್ಲೀನರ್‌ಗಳು ಅಪಘಾತದಲ್ಲಿ ಮೃತಪಟ್ಟರೆ ಅವರ ಕುಟುಂಬದವರಿಗೆ ₹ 5 ಲಕ್ಷದವರೆಗೆ ಪರಿಹಾರ ನೀಡಲು ಕಾಯ್ದೆ ರೂಪಿಸಲಾಗುವುದು ಎಂದು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ತಿಳಿಸಿದರು.

ಕಾರ್ಮಿಕರ ಬದುಕು ಹಸನಾಗಿಸಲು ಹಲವು ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು. ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಕಾರ್ಮಿಕ ಅದಾಲತ್ ನಡೆಸಲು ಉದ್ದೇಶಿಸಲಾಗಿದೆ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾರ್ಮಿಕರಿಗೆ ಸಹಾಯಧನ, ಮಕ್ಕಳ ವಿದ್ಯಾಭ್ಯಾಸ, ಮದುವೆ–

ಶಿವರಾಂ ಹೆಬ್ಬಾರ್

ಮುಂಜಿಯಂತಹ ಸಂದರ್ಭದಲ್ಲಿ ಧನ ಸಹಾಯ ನೀಡಲು ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು.

ಆಟೊ, ಟ್ಯಾಕ್ಸಿ, ಟ್ರಕ್, ಬಸ್ ಚಾಲಕರೂ ಸೇರಿ ಮೆಕ್ಯಾನಿಕ್, ಕ್ಲೀನರ್‌ಗಳಿಗೂ ನೆರವಾಗುವುದು ಉದ್ದೇಶಿತ ಕಾಯ್ದೆಯ ಗುರಿ. ಇದಕ್ಕೆ ಸಂಪನ್ಮೂಲ ಸಂಗ್ರಹಿಸಲು ವಾಹನಗಳ ಮೇಲೆ 0.5 ವಿಶೇಷ ಸೆಸ್ ವಿಧಿಸಲು ಚಿಂತನೆ ನಡೆಸಲಾಗಿದೆ ಎಂದರು.

'ಕಳೆದ ಒಂದು ವರ್ಷದಿಂದ ಕಾರ್ಮಿಕ ಸಚಿವನಾಗಿದ್ದು, ಕಾರ್ಮಿಕರ ಸಮಸ್ಯೆಗಳನ್ನು ಅರಿಯುವಲ್ಲಿ ಸಹಕಾರಿಯಾಗಿದೆ. ಸಂಘಟಿತ, ಅಸಂಘಟಿತ, ವಲಸೆ ಕಾರ್ಮಿಕರಿಗೆ ಪ್ರತ್ಯೇಕ ಕಾಯ್ದೆಗಳಿವೆ. ಎಲ್ಲ ಕಾರ್ಮಿಕರಿಗೂ ಅನುಕೂಲ ಆಗಲು ಹೊಸ ಕಾನೂನು ಜಾರಿ ಮಾಡಲಾಗುವುದು. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗುವುದು' ಎಂದು ಹೇಳಿದರು.

ರಾಜ್ಯದ ಕಾರ್ಮಿಕರಿಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳು ಇಲಾಖೆಯ ವಿವಿಧ ಹಂತಗಳಲ್ಲಿ ಬಾಕಿ ಉಳಿದಿದ್ದು, ಈ ಎಲ್ಲ ಸಮಸ್ಯೆಗಳನ್ನು ಒಂದೇ ಬಾರಿಗೆ ಪರಿಹರಿಸಲು ಕಾರ್ಮಿಕ ಅದಾಲತ್‌ಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದರು.

'ರಾಜ್ಯದಲ್ಲಿ ವಲಸೆ ಕಾರ್ಮಿಕರಿಗೆ ವಸತಿ ಯೋಜನೆ ರೂಪಿಸಿದ್ದು, ಬೆಂಗಳೂರು, ಬೆಳಗಾವಿ, ಹಾಸನ, ಶಿವಮೊಗ್ಗ, ಮೈಸೂರು ಸೇರಿ ಹಲವೆಡೆ ವಸತಿ ಸಮುಚ್ಚಯ ನಿರ್ಮಿಸಲು ಚಿಂತನೆ ನಡೆಸಲಾಗಿದೆ' ಎಂದು ಹೆಬ್ಬಾರ್ ತಿಳಿಸಿದರು.

ಒಳ ಪುಟಗಳು
55 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್ 8
ಸ್ಫುಟ್ನಿಕ್ ವಿ, ಸ್ಫುಟ್ನಿಕ್ ಲೈಟ್ ಉತ್ಪಾದನೆ 11

ಚಿನಕುರಳಿ
ಪ್ರಕಾಶ್ ಶೆಟ್ಟಿ

ತಮಿಳುನಾಡು: ಪೆಟ್ರೋಲ್‌ಗೆ ₹3 ತೆರಿಗೆ ಕಡಿತ

ಚೆನ್ನೈ (ಪಿಟಿಐ): ತಮಿಳುನಾಡಿನ ಡಿಎಂಕೆ ಸರ್ಕಾರವು ಶುಕ್ರವಾರ ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹3 ತೆರಿಗೆ ಕಡಿತ ಮಾಡುವುದಾಗಿ ಘೋಷಿಸಿದೆ.

ಇಂಧನ ಬೆಲೆಯ ಹೆಚ್ಚಳಕ್ಕೆ ಕೇಂದ್ರ ಸರ್ಕಾರವೇ ಹೊಣೆ ಎಂದಿರುವ ಡಿಎಂಕೆ ಸರ್ಕಾರ, ಗ್ರಾಹಕರಿಗೆ ಪರಿಹಾರ ನೀಡುವ ಜವಾಬ್ದಾರಿ ಕೇಂದ್ರ ಸರ್ಕಾರದ ಮೇಲಿದೆ ಎಂದು ಹೇಳಿದೆ.

ಪ್ರಸಕ್ತ ಸಾಲಿನ ಪರಿಷ್ಕೃತ ಬಜೆಟ್ ಅನ್ನು ವಿಧಾನ ಸಭೆಯಲ್ಲಿ ಮಂಡಿಸಿದ ಹಣಕಾಸು ಸಚಿವ ಪಳನಿವೇಲ್ ತ್ಯಾಗರಾಜನ್, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಲಹೆ ಮೇರೆಗೆ ತೆರಿಗೆ ಕಡಿತ ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪ್ರಕಟಿಸಿದರು.

ಕೆಲವು ದಿನಗಳ ಹಿಂದೆ ರಾಜ್ಯದ ಆರ್ಥಿಕ ಪರಿಸ್ಥಿತಿಯ ಕುರಿತು ಹೊರಡಿಸಿದ ಶ್ವೇತಪತ್ರದ ಬಗ್ಗೆ ಉಲ್ಲೇಖಿಸಿದ ಸಚಿವರು, ತೆರಿಗೆ ಕಡಿಮೆ ಮಾಡಿರುವುದರಿಂದ ರಾಜ್ಯ ಸರ್ಕಾರಕ್ಕೆ ₹1,160 ಕೋಟಿ ಆದಾಯ ನಷ್ಟವಾಗುತ್ತದೆ ಎಂದರು.

ಟ್ವಿಟರ್ ವಿರುದ್ಧ ರಾಹುಲ್ ಗಾಂಧಿ ಆಕ್ರೋಶ

'ರಾಜಕಾರಣದಲ್ಲಿ ಟ್ವಿಟರ್ ಹಸ್ತಕ್ಷೇಪ'

ನವದೆಹಲಿ (ಪಿಟಿಐ): 'ದೇಶದ ರಾಜಕಾರಣದಲ್ಲಿ ಟ್ವಿಟರ್ ಹಸ್ತಕ್ಷೇಪ ಮಾಡುತ್ತಿದೆ. ನನ್ನ ಟ್ವಿಟರ್ ಖಾತೆಯನ್ನು ಲಾಕ್ ಮಾಡಿರುವುದು, ದೇಶದ ಪ್ರಜಾಸತ್ತಾತ್ಮಕ ರಚನೆಯ ಮೇಲೆ ನಡೆಸಿದ ದಾಳಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಿಡಿಕಾರಿದ್ದಾರೆ.

ದೆಹಲಿ ಅತ್ಯಾಚಾರ ಸಂತ್ರಸ್ತ ಬಾಲಕಿಯ ಕುಟುಂಬದವರ ಗುರುತನ್ನು ಬಹಿರಂಗಪಡಿಸಿದ ಆರೋಪದಲ್ಲಿ ಅವರ ಟ್ವಿಟರ್ ಖಾತೆಯನ್ನು 'ಲಾಕ್' ಮಾಡಲಾಗಿದೆ. ಟ್ವಿಟರ್‌ನ ಈ ಕ್ರಮದ ವಿರುದ್ಧ ರಾಹುಲ್ ಗಾಂಧಿ ಶುಕ್ರವಾರ ಹರಿಹಾಯ್ದಿದ್ದಾರೆ. ಈ ಸಂಬಂಧ ಅವರು ತಮ್ಮ ಫೇಸ್‌ಬುಕ್ ಖಾತೆ ಮತ್ತು ಯೂಟ್ಯೂಬ್ ಚಾನೆಲ್‌ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ.

'ಟ್ವಿಟರ್ ತಟಸ್ಥ ಮತ್ತು ವಸ್ತುನಿಷ್ಠ ಸಂಸ್ಥೆಯಾಗಿ ಉಳಿದಿಲ್ಲ. ಅದು ಈಗ ಪಕ್ಷಪಾತಿಯಾಗಿದೆ. ಸರ್ಕಾರ ಏನು ಹೇಳುತ್ತದೆಯೋ ಅದನ್ನು ಕೇಳುವ ಸಂಸ್ಥೆಯಾಗಿದೆ. ಟ್ವಿಟರ್, ಸರ್ಕಾರಕ್ಕೆ ಕೃತಜ್ಞ ಸಂಸ್ಥೆಯಾಗಿದೆಯೇ ಎಂಬುದನ್ನು ದೇಶದ ಜನರು ಪ್ರಶ್ನಿಸಬೇಕಿದೆ' ಎಂದು ರಾಹುಲ್ ಹೇಳಿದ್ದಾರೆ.

ಲಾಕ್ ಆದ ಖಾತೆ: ರಾಹುಲ್ ಗಾಂಧಿ ಅವರ ಟ್ವಿಟರ್ ಖಾತೆಯನ್ನು ಸ್ಥಗಿತಗೊಳಿಸಿಲ್ಲ. ಬದಲಿಗೆ ತಾತ್ಕಾಲಿಕವಾಗಿ 'ಲಾಕ್' ಮಾಡಲಾಗಿದೆ ಎಂದು ಟ್ವಿಟರ್ ಹೇಳಿದೆ.

ಲಾಕ್ ಆದ ಖಾತೆಯ ಮೂಲಕ ಯಾವುದೇ ಟ್ವೀಟ್ ಮತ್ತು ರಿಟ್ವೀಟ್ ಮಾಡಲು ಸಾಧ್ಯವಿಲ್ಲ. ಬದಲಿಗೆ ಫಾಲೋವರ್‌ಗಳಿಗೆ ವೈಯಕ್ತಿಕ ಸಂದೇಶ ಕಳುಹಿಸಬಹುದು.

ಫೇಸ್‌ಬುಕ್‌ಗೆ ಪತ್ರ

'ರಾಹುಲ್ ಗಾಂಧಿ ಅವರ ಇನ್‌ಸ್ಟಾಗ್ರಾಂ ಖಾತೆಯ ವಿರುದ್ಧವೂ ಕ್ರಮ ತೆಗೆದುಕೊಳ್ಳಿ' ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್), ಇನ್‌ಸ್ಟಾಗ್ರಾಂ ಮಾತೃಸಂಸ್ಥೆ ಫೇಸ್‌ಬುಕ್‌ಗೆ ಪತ್ರ ಬರೆದಿದೆ.

'ಅತ್ಯಾಚಾರ ಸಂತ್ರಸ್ತ ಬಾಲಕಿಯ ಕುಟುಂಬದವರ ವಿವರವನ್ನು ಬಹಿರಂಗಪಡಿಸುವಂತಹ ಚಿತ್ರ ಮತ್ತು ವಿಡಿಯೊವನ್ನು ರಾಹುಲ್ ಗಾಂಧಿ ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಇದು ಬಾಲ ನ್ಯಾಯ ಕಾಯ್ದೆ–2015ರ ಸೆಕ್ಷನ್ 74 ಮತ್ತು ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆ 2012ರ ಸೆಕ್ಷನ್ 23ರ ಸ್ಪಷ್ಟ ಉಲ್ಲಂಘನೆ. ಈ ಎರಡೂ ಸೆಕ್ಷನ್‌ಗಳು ಲೈಂಗಿಕ ದೌರ್ಜನ್ಯ ಸಂತ್ರಸ್ತ ಮಕ್ಕಳ ವಿವರ, ಕುಟುಂಬದ ವಿವರ ಬಹಿರಂಗಪಡಿಸುವುದನ್ನು ನಿಷೇಧಿಸುತ್ತದೆ. ರಾಹುಲ್ ಗಾಂಧಿ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಸಂತ್ರಸ್ತ ಬಾಲಕಿಯ ಕುಟುಂಬದವರ ಗುರುತು ಬಹಿರಂಗಪಡಿಸಿದ್ದಾರೆ. ಆ ಖಾತೆಯನ್ನು ಸ್ಥಗಿತಗೊಳಿಸಿ. ವಿಡಿಯೊ ಮತ್ತು ಚಿತ್ರವನ್ನು ತೆಗೆದುಹಾಕಿ' ಎಂದು ಎನ್‌ಸಿಪಿಸಿಆರ್ ತನ್ನ ಪತ್ರದಲ್ಲಿ ವಿವರಿಸಿದೆ.

ಆಗಸ್ಟ್ 4ರಂದು ಇಂಥದ್ದೇ ಪತ್ರವನ್ನು ಎನ್‌ಸಿಪಿಸಿಆರ್, ಟ್ವಿಟರ್‌ಗೆ ಬರೆದಿತ್ತು. ಆ ಪತ್ರದ ಆಧಾರದಲ್ಲೇ ಟ್ವಿಟರ್, ರಾಹುಲ್ ಗಾಂಧಿ ಅವರ ಟ್ವಿಟರ್ ಖಾತೆಯನ್ನು 'ಲಾಕ್' ಮಾಡಿದೆ.

ಟ್ವಿಟರ್ ಭಾರತದ ಮುಖ್ಯಸ್ಥನ ವರ್ಗಾವಣೆ

ಭಾರತದಲ್ಲಿನ ಟ್ವಿಟರ್ ಮುಖ್ಯಸ್ಥ ಮನೀಶ್ ಮಹೇಶ್ವರಿ ಅವರನ್ನು ಕಂಪನಿಯು, ಅಮೆರಿಕದಲ್ಲಿರುವ ತನ್ನ ಕಚೇರಿಗೆ ವರ್ಗಾವಣೆ ಮಾಡಿದೆ. ವರ್ಗಾವಣೆಗೆ ಏನು ಕಾರಣ ಎಂಬುದನ್ನು ಕಂಪನಿ ಬಹಿರಂಗಪಡಿಸಿಲ್ಲ. ಆದರೆ, ಅವರಿಗೆ ಕಂಪನಿಯ ಹಿರಿಯ ನಿರ್ದೇಶಕನ ಹುದ್ದೆಗೆ ಬಡ್ತಿ ನೀಡಲಾಗಿದೆ ಎಂದು ಕಂಪನಿ ಹೇಳಿದೆ.

ಟ್ವಿಟರ್‌ನಲ್ಲಿ ಸುಳ್ಳು ಸುದ್ದಿ ಟ್ವೀಟ್ ಆದ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶದಲ್ಲಿ ಮನೀಶ್ ಮಹೇಶ್ವರಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಈಗ ರಾಹುಲ್ ಗಾಂಧಿ ಅವರ ಖಾತೆಯನ್ನು 'ಲಾಕ್' ಮಾಡಿದ ಸಂಬಂಧ, ದೇಶದಲ್ಲಿ ಭಾರಿ ಚರ್ಚೆ ನಡೆಯುತ್ತಿದೆ. ಟ್ವಿಟರ್ ವಿರುದ್ಧ ವಿರೋಧ ಪಕ್ಷಗಳು ಆಕ್ರೋಶ ವ್ಯಕ್ತಪಡಿಸುತ್ತಿವೆ. ಅಂತಹ ಸಂದರ್ಭದಲ್ಲೇ ಮನೀಶ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಮನೀಶ್ ಅವರಿದ್ದ ಹುದ್ದೆಗೆ ಕಂಪನಿ ಯಾರನ್ನೂ ಈವರೆಗೆ ನೇಮಕ ಮಾಡಿಲ್ಲ.

ಇನ್ನೊಂದು ಸುದ್ದಿ 11

18ಕ್ಕೆ 'ಚಿದಾನಂದ ಕಿರಣ' ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗದ ಸಹಯೋಗದಲ್ಲಿ ಸಪ್ನ ಬುಕ್ ಹೌಸ್ ಇದೇ 18ರಂದು ಸಂಜೆ 5.30ಕ್ಕೆ ಗಾಂಧಿನಗರದ ತನ್ನ ಕೇಂದ್ರದಲ್ಲಿ 'ಚಿದಾನಂದ ಕಿರಣ' ಕೃತಿ ಬಿಡುಗಡೆ ಸಮಾರಂಭ ಹಮ್ಮಿಕೊಂಡಿದೆ.

ಈ ಕೃತಿಯನ್ನು ಆರ್. ಶೇಷಶಾಸ್ತ್ರಿ ಅವರು ಸಂಪಾದಿಸಿದ್ದಾರೆ. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಕೃತಿ ಬಿಡುಗಡೆ ಮಾಡಲಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕವಿ ದೊಡ್ಡರಂಗೇಗೌಡ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶಕುಮಾರ್ ಹೊಸಮನಿ ಭಾಗವಹಿಸಲಿದ್ದಾರೆ.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಹಾಗೂ ಕನ್ನಡ ಪರ ಹೋರಾಟಗಾರ ವ.ಚ. ಚನ್ನೇಗೌಡ ಅವರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಮರ್ಷಿಯಲ್ ಸ್ಟ್ರೀಟ್ ಪರಿಶೀಲಿಸಿದ ಕಂದಾಯ ಸಚಿವ ಆರ್. ಅಶೋಕ

'ಗುತ್ತಿಗೆದಾರರೇ ನೆಲಹಾಸು ವೆಚ್ಚ ಭರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗಿರುವ ನಗರದ ಕಮರ್ಷಿಯಲ್ ಸ್ಟ್ರೀಟ್‌ನ ನೆಲಹಾಸುಗಳ (ಟೈಲ್ಸ್) ಬಣ್ಣ ತಿಂಗಳೊಳಗೇ ಹಾಳಾಗಿದೆ. ಅವುಗಳನ್ನು ತೆರವು ಗೊಳಿಸಿ, ಗುತ್ತಿಗೆದಾರರ ಹಣದಿಂದಲೇ ಹೊಸ ಟೈಲ್ಸ್ ಅಳವಡಿಸಿ, ಮಾದರಿ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಿ' ಎಂದು ಕಂದಾಯ ಸಚಿವ ಆರ್. ಅಶೋಕ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಶಿವಾಜಿನಗರದಲ್ಲಿನ ಕಮರ್ಷಿಯಲ್ ಸ್ಟ್ರೀಟ್‌ಗೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದ ಅವರು, 'ಈ ರಸ್ತೆಯು 450 ಮೀಟರ್ ಉದ್ದವಿದ್ದು, ಸ್ಮಾರ್ಟ್ ಸಿಟಿ ರಸ್ತೆ ವತಿಯಿಂದ ₹5.5 ಕೋಟಿ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗತ್ತಿಕೊಳ್ಳಲಾಗಿದೆ. ರಸ್ತೆಗೆ ಹೊಂದಿಕೆಯಾಗುವ ಅಡ್ಡರಸ್ತೆಗಳನ್ನೂ ಅಭಿವೃದ್ಧಿ ಪಡಿಸಲಾಗುತ್ತಿದೆ' ಎಂದರು.

'ಕಮರ್ಷಿಯಲ್ ಸ್ಟ್ರೀಟ್ ರಸ್ತೆಗೆ ಯಾವುದೇ ಹೆಚ್ಚುವರಿ ಹಣ ವ್ಯಯಿಸುವುದಿಲ್ಲ. ಕಳಪೆ ಟೈಲ್ಸ್ ಅಳವಡಿಸಿರುವುದರಿಂದ ಅವರೇ ಈ ವೆಚ್ಚವನ್ನು ಭರಿಸಬೇಕು. ಮೂರು ವರ್ಷಗಳ ಕಾಲ ಗುತ್ತಿಗೆದಾರರೇ ರಸ್ತೆಯ ನಿರ್ವಹಣೆ ಮಾಡಲಿದ್ದಾರೆ' ಎಂದರು.

'ರಸ್ತೆಯ ಎರಡೂ ಬದಿ ಪಾದಚಾರಿ ಮಾರ್ಗಗಳಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ಒಎಫ್‌ಸಿಗಳನ್ನೂ ಅಳವಡಿಸಲಾಗಿದೆ ಅಂಗಡಿಗಳಿಗೆ ಮಳೆ ನೀರು ನುಗ್ಗದ ಹಾಗೆ ಮಳೆ ಬಿದ್ದ ನೀರು ಸರಾಗವಾಗಿ ಕಾಲುವೆಗೆ ಹರಿಯುವ ವ್ಯವಸ್ಥೆ ಮಾಡಲಾಗಿದೆ. ಇರುವ ರಸ್ತೆಯನ್ನು ತ್ವರಿತಗತಿಯಲ್ಲಿ ದುರಸ್ತಿಗೊಳಿಸಿ ಮಾದರಿ ರಸ್ತೆಯನ್ನಾಗಿ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

ರಾಜಕಾಲುವೆ ಪರಿಶೀಲನೆ: ಹಲಸೂರು ಕೆರೆ ಬಳಿಯ ಗುರುದ್ವಾರ ಜಂಕ್ಷನ್ ಮುಂಭಾಗದ ರಾಜಕಾಲುವೆಯನ್ನು ಪರಿಶೀಲನೆ ಮಾಡಿ, 'ಮಳೆಗಾಲದ ವೇಲೆ ನೀರು ಸರಾಗವಾಗಿ ಹರಿದು ಹೋಗಬೇಕು. ಈ ಭಾಗದಲ್ಲಿ ಯಾವುದೇ ಸಮಸ್ಯೆ ಆಗಬಾರದು. ಕಾಲುವೆಯಲ್ಲಿ ತುಂಬಿರುವ ಹೂಳನ್ನು ಕಾಲ ಕಾಲಕ್ಕೆ ತೆರವುಗೊಳಿಸುತ್ತಿರಬೇಕು' ಎಂದು ಸೂಚನೆ ನೀಡಿದರು.

ಶಾಸಕ ರಿಜ್ವಾನ್ ಅರ್ಷದ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಪೂರ್ವವಲಯ ಆಯುಕ್ತ ಮನೋಜ್ ಜೈನ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, ಪೂರ್ವ ವಲಯ ಜಂಟಿ ಆಯುಕ್ತರಾದ ಪಲ್ಲವಿ, ವಲಯ ಮುಖ್ಯ ಎಂಜಿನಿಯರ್ ಪ್ರಭಾಕರ್, ಸ್ಮಾರ್ಟ್ ಸಿಟಿ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಮರ್ಷಿಯಲ್ ಸ್ಟೀಟ್ ಅನ್ನು ಸಚಿವ ಆರ್. ಅಶೋಕ ಪರಿಶೀಲಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಸಂಸದ ಪಿ..ಸಿ ಮೋಹನ್, ಶಾಸಕ ರಿಜ್ವಾನ್ ಅರ್ಷದ್ ಇದ್ದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಪುಸ್ತಕ ನೀತಿ: ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪುಸ್ತಕ ನೀತಿ ಪುನರ್ ರಚನೆಗೆ ಸಾರ್ವಜನಿಕರಿಂದ ಸಲಹೆ ಹಾಗೂ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

'ಕನ್ನಡ ಪುಸ್ತಕ ಲೋಕವು ಆಧುನಿಕ ಮಾಧ್ಯಮಗಳ ನೂತನ ಆವಿಷ್ಕಾರಗಳ ಫಲವಾಗಿ ವಿಸ್ತಾರಗೊಳ್ಳುತ್ತಿದೆ. ಹೀಗಾಗಿ, ಪುಸ್ತಕೋದ್ಯಮದ ಎಲ್ಲ ಸಾಧ್ಯತೆ ಮತ್ತು ಸವಾಲುಗಳನ್ನು ಹೊಸ ದೃಷ್ಟಿಕೋನದಿಂದ ನೋಡುವ ಅಗತ್ಯತೆ ಇದೆ. ಆದ್ದರಿಂದ ಕನ್ನಡ ಪುಸ್ತಕ ನೀತಿಯನ್ನು ಪುನರ್ ರಚಿಸಲು ನಿರ್ಧರಿಸಲಾಗಿದೆ. ಇ–ಪುಸ್ತಕ, ಆಡಿಯೊ ಪುಸ್ತಕ ಒಳಗೊಂಡಂತೆ ಆಧುನಿಕ ಪುಸ್ತಕೋದ್ಯಮದ ಸಾಧಕ- ಬಾಧಕಗಳು ಹಾಗೂ ಕನ್ನಡ ಪುಸ್ತಕ ಲೋಕದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಈ ಪುಸ್ತಕ ನೀತಿ ರಚನೆ ಆಗಬೇಕಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಎಂ.ಎನ್. ನಂದೀಶ್ ಹಂಚೆ ತಿಳಿಸಿದ್ದಾರೆ.

'ನಾಡಿನ ಬರಹಗಾರರು, ಚಿಂತಕರು, ಓದುಗರು, ಪ್ರಕಾಶಕರು ಹಾಗೂ ಆಸಕ್ತ ಸಾರ್ವಜನಿಕರು ಪುಸ್ತಕಲೋಕಕ್ಕೆ ಸಂಬಂಧಿಸಿದಂತೆ ಅನುಷ್ಠಾನ ಮಾಡಬಹುದಾದ ಸಲಹೆ ಮತ್ತು ಅಭಿಪ್ರಾಯಗಳನ್ನು ಅಂಚೆ ಮೂಲಕ ಇದೇ 30ರೊಳಗೆ ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು -560002 ಈ ವಿಳಾಸಕ್ಕೆ ಕಳುಹಿಸಬೇಕು. ಇ ಮೇಲ್ ವಿಳಾಸ kannadappradhikaara@gmail.com ಮೂಲಕವೂ ಕಳುಹಿಸಬಹುದಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗವಿಕಲ ಬಾಲಕಿಯ ದತ್ತು ಸ್ವೀಕಾರ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ವಿದ್ಯಾರಣ್ಯಪುರದ ಕಲ್ಪವೃಕ್ಷ ಅಂಗವಿಕಲ ಮಕ್ಕಳ ಶಾಲೆಯ ಬಾಲಕಿಯನ್ನು ದತ್ತುಸ್ವೀಕಾರ ಮಾಡುವ ಮೂಲಕ 'ವಿಶ್ವಕನ್ನಡ ರಕ್ಷಕದಳ' ಕನ್ನಡಪರ ಸಂಘಟನೆಯ ಬೆಂಗಳೂರು ನಗರ ಜಿಲ್ಲಾ ಘಟಕಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಕುಮಾರ.ಎಂ ತಳವಾರ, 'ಅನ್ಯಭಾಷಿಕರನ್ನು ಅವರ ಭಾಷೆಯಲ್ಲಿಯೇ ಮಾತನಾಡಿಸುವ ನಮ್ಮ ಪರಿ ಬದಲಾಗಬೇಕು. ಅವರಿಗೆ ಪ್ರೀತಿಯಿಂದ ಕನ್ನಡ ಕಲಿಸುವಕಾರ್ಯ ಕೈಗೂಡಬೇಕು' ಎಂದರು.

ಸಂಘಟನೆಯ ರಾಜ್ಯ ಗೌರವಾಧ್ಯಕ್ಷ ಹರೀಶ್ ಮಾತನಾಡಿದರು. ಸಮಾರಂಭದಲ್ಲಿ ಅಮೀನಾಬಾನು ಎಂಬ ಬಾಲಕಿಯನ್ನು ದತ್ತು ಪಡೆದು ಆಕೆಯ ಜೀವನ ನಿರ್ವಹಣೆಯ ಸಂಪೂರ್ಣ ವೆಚ್ಚದ ಜವಾಬ್ದಾರಿಯನ್ನು ಸಂಘಟನೆಯು ವಹಿಸಿಕೊಂಡಿತು.

ಸಂಘಟನೆಯ ಬೆಂಗಳೂರುನಗರ ಜಿಲ್ಲಾಧ್ಯಕ್ಷ ಜಿ.ಲೋಕೇಶ್, ಗೌರವಾಧ್ಯಕ್ಷ ಕೆ.ಬೈಮನ ಮುರಳಿ, ಪ್ರಧಾನಕಾರ್ಯದರ್ಶಿ ಆರ್.ಶ್ರೀಕಾಂತ್ ಕಲ್ಪವೃಕ್ಷ, ಪದಾಧಿಕಾರಿಗಳಾದ ಸತ್ಯನಾರಾಯಣರಾವ್, ಅಖಿಲೇಶ್, ವೀರಣ್ಣಗೌಡ, ಕೆ.ಎಸ್.ಶ್ರೀಧರ್, ಎಲ್.ಆನಂದ್, ರಾಘವೇಂದ್ರ ಪ್ರಸನ್ನ, ಗಣೇಶ್, ಬಿ.ಕೆ.ಶ್ರೀಕಾಂತ್, ರಾಜೇಶ್ ಉಪಸ್ಥಿತರಿದ್ದರು.

'ಭಾಷಾ ಬೆಳವಣಿಗೆಗೆ ಜನರ ಪಾಲ್ಗೊಳ್ಳುವಿಕೆ ಅಗತ್ಯ'

ಬೆಂಗಳೂರು: 'ಕನ್ನಡ ಭಾಷೆಗೆ ಇರುವಂತೆ ಜಗತ್ತಿನ ಬೇರೆ ಯಾವುದೇ ದೇಶದಲ್ಲಿ ಭಾಷೆಗೆ ಪ್ರಾಧಿಕಾರವಿಲ್ಲ. ಭಾಷೆಯ ಬೆಳವಣಿಗೆಗೆ ರಚನೆಯಾಗಿರುವ ಪ್ರಾಧಿಕಾರದ ಕಾರ್ಯಗಳಲ್ಲಿ ಜನರು ಹೆಚ್ಚಾಗಿ ಪಾಲ್ಗೊಳ್ಳುವ ಮೂಲಕ ಕನ್ನಡಕ್ಕೆ ಕೊಡುಗೆ ನೀಡಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ನಗರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಭಾಷಾಂತರ ನಿರ್ದೇಶನಾಲಯ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 'ಕನ್ನಡ ಅನುವಾದ ಕಮ್ಮಟ'ಕ್ಕೆ ಶುಕ್ರವಾರ ಚಾಲನೆ ನೀಡಿ, ಮಾತನಾಡಿದರು.

'ಆಯಾ ಕಾಲಘಟ್ಟದಲ್ಲಿ ಇದ್ದಂತಹ ಸಮಸ್ಯೆಗಳನ್ನು ಪರಿಹರಿಸಿಕೊಂಡು, ಭಾಷೆಯ ಅಭಿವೃದ್ಧಿಗೆ ಉತ್ತೇಜನ ನೀಡುವ ಮೂಲಕ ಪ್ರಾಧಿಕಾರವು ರಾಜ್ಯದಾದ್ಯಂತ ಕನ್ನಡದ ಹಲವು ಮಜಲುಗಳನ್ನು ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದೆ. ಕನ್ನಡ ಅನುವಾದ ಕಮ್ಮಟದಲ್ಲಿ ಭಾಗವಹಿಸಿದ ಅಭ್ಯರ್ಥಿಗಳನ್ನು ಬಳಸಿಕೊಂಡು 'ಅನುವಾದಕರ ಕಣಜ' ಸಿದ್ಧಪಡಿಸಲಾಗುವುದು' ಎಂದರು.

ಟಿ.ಎಸ್. ನಾಗಾಭರಣ

ಪ್ರಾಧಿಕಾರದ ಸದಸ್ಯ ಹಾಗೂ ಕಮ್ಮಟದ ಸಂಯೋಜಕ ಪ್ರೊ.ಎಂ. ಅಬ್ದುಲ್ ರೆಹಮಾನ್ ಪಾಷ ಮಾತನಾಡಿ, 'ಹಲವು ಇಲಾಖೆಗಳಲ್ಲಿ ಕನ್ನಡ ಅನುವಾದಕರ ಕೊರತೆ ಇರುವುದರಿಂದ ಆದೇಶಗಳು ಆಂಗ್ಲ ಭಾಷೆಯಲ್ಲಿಯೇ ಪ್ರಕಟಿತವಾಗುತ್ತಿವೆ. ಸರ್ಕಾರದ ಕಾರ್ಯಗಳಲ್ಲಿ ಕನ್ನಡ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಅನುವಾದಕರ ಅಗತ್ಯವಿದೆ' ಎಂದರು.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ಲ ಇದ್ದರು.

ನಗರದಲ್ಲಿ ಇಂದು

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ 'ಏಕತೆ ಮತ್ತು ದೈಹಿಕ ಸದೃಢತೆಗಾಗಿ ಸ್ವಾತಂತ್ರ್ಯತೆಯ ಓಟ': ಅತಿಥಿ–ಗೃಹ ಸಚಿವ ಆರಗ ಜ್ಞಾನೇಂದ್ರ, ಅಧ್ಯಕ್ಷತೆ-ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಸ್ಥಳ-ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 07.15



ಪ್ರವೀಣ್ ಸೂದ್

ಸಸಿ ನೆಡುವ ಅಭಿಯಾನ ಹಾಗೂ ಇಂಗು ಗುಂಡಿ ಉದ್ಘಾಟನೆ: ಶಾಸಕ ದಿನೇಶ್ ಗುಂಡೂರಾವ್, ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ, ಆಯೋಜನೆ–ಪಾಲಿಕೆ, ಸಹಯೋಗ–ಯುನೈಟೆಡ್ ವೇ ಆಫ್ ಬೆಂಗಳೂರು, ಸ್ಥಳ–ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 9

ಕಂಕಟಾಲ ಮಳಿಗೆ ಉದ್ಘಾಟನೆ: ಭಾಗವಹಿಸುವವರು–ಎಂ.ಬಿ.ಪಾಟೀಲ, ಆಶಾ ಪಾಟೀಲ, ಸೌಮ್ಯಾರೆಡ್ಡಿ, ಸೋವಿತ್ ನಂದಾ, ಮಲ್ಲಿಕಾರ್ಜುನ ರಾವ್, ಸ್ಥಳ–ಜಯನಗರ, ಕಾಸ್ಮೊಪಾಲಿಟನ್ ಕ್ಲಬ್ ಹತ್ತಿರ, ಬೆಳಿಗ್ಗೆ 9.30

ಡಾ.ವಿಜಯಾಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ ಹಾಗೂ ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ ಪ್ರದಾನ: ನಲ್ಲೂರು ಪ್ರಸಾದ್, ಪುರಸ್ಕೃತರು–ಚಿದಾನಂದ ಸಾಲಿ, ಪ್ರೇಮಾ ಭಟ್, ಭಾಗವಹಿಸುವವರು–ಆರ್.ಲಕ್ಷ್ಮೀ ನಾರಾಯಣ, ಆಯೋಜನೆ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎಂವಿಸೀ ಸಭಾಂಗಣ, ಎನ್.ಆರ್.ಕಾಲೊನಿ, ಬೆಳಿಗ್ಗೆ 11

ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ 'ಬ್ರಹ್ಮಯಾನ' ಪುಸ್ತಕ ಬಿಡುಗಡೆ ಹಾಗೂ ಬಿ.ವಿ. ವಸಂತಕುಮಾರ್ ಅವರಿಗೆ 'ಪ್ರೊ. ಮಲ್ಲೇಪುರಂ ಸಾಹಿತ್ಯ ಪ್ರಶಸ್ತಿ' ಪ್ರದಾನ: ಸಾನ್ನಿಧ್ಯ–ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪ್ರದಾನ–ಮನು ಬಳಿಗಾರ್, ಪುಸ್ತಕ ಬಿಡುಗಡೆ–ಸಿ.ಸೋಮಶೇಖರ್, ಅತಿಥಿ–ವೂಡೇ ಪಿ.ಕೃಷ್ಣ, ಆಯೋಜನೆ–ಭಾರತೀಯ ವಿದ್ಯಾಭವನ, ಉದಯ ಪ್ರಕಾಶನ, ಸ್ಥಳ–ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 11

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಪ್ರಸನ್ನ ರಾಮನಗರಂ, ಪ್ರೊ.ಎಂ.ಎಂ. ಗುಪ್ತ ಹಾಗೂ ನಾ.ಗೀತಾಚಾರ್ಯ ಅವರ ಪುಸ್ತಕಗಳ ಬಿಡುಗಡೆ: ಸಾಹಿತಿ ದೊಡ್ಡರಂಗೇಗೌಡ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಅತಿಥಿಗಳು–ಕೆ.ಈ.ರಾಧಾಕೃಷ್ಣ, ಎಂ.ವಿ.ಸತ್ಯನಾರಾಯಣ, ಆಯೋಜನೆ–ಶೇಷಾದ್ರಿಪುರ ಸಂಜೆ ಪದವಿ ಕಾಲೇಜು, ಶೇಷಾದ್ರಿಪುರ, ಮಧ್ಯಾಹ್ನ 3

'ಶರಣ ವಚನಗಳಲ್ಲಿ ಆರೋಗ್ಯ' ಉಪನ್ಯಾಸ: ವಿಜಯಲಕ್ಷ್ಮೀ ಬಾಳೆಕುಂದ್ರಿ, ಅಧ್ಯಕ್ಷತೆ–ಕೆ.ವಿ. ನಾಗರಾಜಮೂರ್ತಿ, ಭಾಗವಹಿಸುವವರು–ಪ್ರಮೀಳಾ ಶಂಕರ್, ಪ್ರೇಮಾ ಸೋಮಸುಂದರ್, ಪ್ರಮೀಳಾ ಗರಡಿ, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಮಧ್ಯಾಹ್ನ 3 (ಆನ್‌ಲೈನ್ ಕಾರ್ಯಕ್ರಮ)



ನಾಗರಾಜ ಮೂರ್ತಿ

ನಾ.ಕಸ್ತೂರಿ ಬದುಕು ಬರಹ ಕುರಿತ ವಿಶೇಷ ಉಪನ್ಯಾಸ: ಬೇಲೂರು ರಾಮಮೂರ್ತಿ, ಭಾಗವಹಿಸುವವರು–ಪದ್ಮಮ್ಮ, ಮಧ್ಯಾಹ್ನ 3.30 (ಆನ್‌ಲೈನ್ ಕಾರ್ಯಕ್ರಮ)

ಶರಣ್ಯ

ಭರತನಾಟ್ಯ ರಂಗಪ್ರವೇಶ: ಶರಣ್ಯ ಬಿ.ರವಿ, ಅತಿಥಿಗಳು–ಎಂ.ಆರ್.ಕೃಷ್ಣಮೂರ್ತಿ, ಸೌಂದರ್ಯ ಶ್ರೀವತ್ಸ, ಚಂದೀಶ್ ಆರ್.ಬಲ್ಲಾಳ್, ಸ್ಥಳ–ಶಿವರಾತ್ರೀಶ್ವರ ಕೇಂದ್ರ, ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.30

ಸ್ವಾತಂತ್ರ್ಯ ಸಂಗೀತ ಸಂಭ್ರಮ: ಉದ್ಘಾಟನೆ–ಶಾಂತಾ ರಾಮಸ್ವಾಮಿ, ಅಧ್ಯಕ್ಷತೆ–ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿ–ಕೆ.ಎನ್.ರಾಜಶೇಖರ್, ಸತೀಶ್, ಸಿ.ಎಸ್. ಶೇಷಾದ್ರಿ, ಆಯೋಜನೆ, ಸ್ಥಳ–ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಬಸವನಗುಡಿ, ಸಂಜೆ 5.30

'ಅಸಮಾಧಾನ ಬಹಿರಂಗವಾಗದಿರಲಿ'

ಪ್ರಜಾವಾಣಿ ವಾರ್ತೆ

ರಾಮನಗರ: 'ರಾಜಕೀಯದಲ್ಲಿ ಸ್ಥಾನಮಾನ ಬಯಸುವುದು ಸರ್ವೇ ಸಾಮಾನ್ಯ. ಆದರೆ, ಸಚಿವರು ತಮಗೆ ನೀಡಿರುವ ಖಾತೆ ಬಗ್ಗೆ ಅಪೇಕ್ಷೆಗಳನ್ನು ನಾಲ್ಕು ಗೋಡೆಗಳ ಮಧ್ಯೆ ತಿಳಿಸುವ ಕೆಲಸ ಆಗಬೇಕು. ಬಹಿರಂಗ ಮಾಡಬಾರದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅಭಿಪ್ರಾಯಪಟ್ಟರು.

ಅಶ್ವತ್ಥ ನಾರಾಯಣ

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಮನಗರ ಜಿಲ್ಲಾ ಉಸ್ತುವಾರಿಗೂ ಯಾವುದೇ ಪೈಪೋಟಿ ಇಲ್ಲ. ಪೈಪೋಟಿ ಕೆಲಸದಲ್ಲಿ ಆಗಬೇಕಿದ್ದು, ಅದಕ್ಕೆ ಸಿದ್ಧರಿದ್ದೇವೆ' ಎಂದರು.

ಬಿಜೆಪಿ ಶಾಸಕ ಸತೀಶ್ ರೆಡ್ಡಿ ಕಾರುಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿರುವ ಘಟನೆ ಎಲ್ಲರಿಗೂ ಆಶ್ಚರ್ಯ ತಂದಿದೆ. ಆರೋಪಿಗಳ ಸುಳಿವು ಸಿಕ್ಕಿದ್ದು, ಸದ್ಯದಲ್ಲೇ ಬಂಧಿಸಲಿದ್ದೇವೆ ಎಂದು ಹೇಳಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 14ರಿಂದ 16ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಹೊಸಕೆರೆಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ವಿಜಯ ಚಿತ್ರಮಂದಿರ ಹಿಂಭಾಗ, ಸರ್ಕಾರಿ ಶಾಲೆ, ಎಂ.ಎಂ. ರಸ್ತೆ, ಸ್ಯಾಟಲೈಟ್ ಬಸ್ ನಿಲ್ದಾಣ, ತಿರುಮಲಾಪುರ, ರಾಘವೇಂದ್ರ ಬಡಾವಣೆ, ಪೈಪ್‌ಲೈನ್ ರಸ್ತೆ, ಭೈರವೇಶ್ವರ ಕೈಗಾರಿಕಾ ಪ್ರದೇಶ, ಮಾರಣ್ಣ ಬಡಾವಣೆ, ಪಂಚಮುಖ ಗಣೇಶ ದೇಗುಲ, ಹೊಯ್ಸಳ ವೃತ್ತ, ಅಪೂರ್ವ ಬಡಾವಣೆ, ಬಿಡಿಎ ಬಡಾವಣೆ, ಉಪಕಾರ್ ಬಡಾವಣೆ, ಮಾರುತಿ ನಗರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು.

ಮುಸ್ಲಿಮರಿಂದ ನಾಗಪೂಜೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಪಟ್ಟಣದ ತಾಲ್ಲೂಕು ಪಂಚಾಯ್ತಿ ಆವರಣದಲ್ಲಿನ ನಾಗರಮೂರ್ತಿಗೆ ಶುಕ್ರವಾರ ಹಿಂದೂ, ಮುಸ್ಲಿಮರು ಸೇರಿ ವಿಶೇಷ ಪೂಜೆ ಸಲ್ಲಿಸಿದರು.

ಮುಸ್ಲಿಂ ಸಮಾಜದ ಮುಖಂಡ, ರಾಯಲ್ ಹೋಟೆಲ್ ಮಾಲೀಕ ಜಿಲಾನಿ ಬನ್ನಿಮಟ್ಟಿ ಮಾತನಾಡಿ, 'ದೇವರು ಒಬ್ಬನೇ ನಾಮ ಹಲವು. ಅದನ್ನು ಅರಿತುಕೊಂಡು ನಡೆಯುವುದು ಪ್ರತಿಯೊಬ್ಬರ ಕರ್ತವ್ಯ' ಎಂದು ಅಭಿಪ್ರಾಯಪಟ್ಟರು

ನಿಧನ ವಾರ್ತೆ

ಕಾಳಯ್ಯ

ರಾಜರಾಜೇಶ್ವರಿ ನಗರ: ಬಿಜೆಪಿ ಮುಖಂಡ, ಕೆಂಗುಂಟೆಯ ಶ್ರೀ-ಲಕ್ಷ್ಮಿವೆಂಕಟೇಶ್ವರ ಸ್ವಾಮಿ ಹಾಗೂ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಕಾಳಯ್ಯ (62) ಹೃದಯಘಾತದಿಂದ ನಿಧನರಾದರು.

ಅವರು ಕೆಂಗುಂಟೆಯಲ್ಲಿ ವಾಸವಾಗಿದ್ದರು. ಅವರಿಗೆ ಪತ್ನಿಯರು, ಪುತ್ರ, ಪುತ್ರಿ ಇದ್ದಾರೆ. ಸುಮನಹಳ್ಳಿ ಚಿತಾಗಾರದಲ್ಲಿ ಶನಿವಾರ ಬೆಳಿಗ್ಗೆ 11.30ಕ್ಕೆ ಅಂತ್ಯಕ್ರಿಯೆ ನಡೆಯ ಲಿದೆ.

ಕುಟುಂಬ ಸದಸ್ಯರ ಸಂಪರ್ಕಕ್ಕೆ 9035356295.

ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್‌.ಆರ್‌. ರಮೇಶ್ ಆರೋಪ

₹8.5ಕೋಟಿ ತೆರಿಗೆ ವಂಚಿಸಿದ ರಾಕ್‌ಲೈನ್ ವೆಂಕಟೇಶ್

ಪ್ರಜಾವಾಣಿ ವಾರ್ತೆ

ಎನ್‌.ಆರ್‌. ರಮೇಶ್

ಬೆಂಗಳೂರು: 'ನಗರದ ರಾಕ್‌ಲೈನ್ ಮಾಲ್‌ನ ಮಾಲೀಕ ರಾಕ್‌ಲೈನ್ ವೆಂಕಟೇಶ್ ಮತ್ತು ಪದ್ಮಕುಮಾರಿ ಅವರು ಬಿಬಿಎಂಪಿಗೆ ₹8.5 ಕೋಟಿಗೂ ಅಧಿಕ ಮೊತ್ತದ ತೆರಿಗೆ ವಂಚಿಸಿದ್ದಾರೆ' ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್‌.ಆರ್‌. ರಮೇಶ್ ಆರೋಪಿಸಿದ್ದಾರೆ.

'ಬಿಬಿಎಂಪಿಯ ದಾಸರಹಳ್ಳಿ ವಲಯದ ವ್ಯಾಪ್ತಿಯಲ್ಲಿರುವ ರಾಕ್‌ಲೈನ್ ಮಾಲ್ ಕೇವಲ 48,500 ಚದರ ಅಡಿ ವಿಸ್ತೀರ್ಣ ಇದೆ ಎಂದು ಬಿಬಿಎಂಪಿಗೆ ಸುಳ್ಳು ಮಾಹಿತಿ ನೀಡಿದ್ದಾರೆ. ಆದರೆ, ಆರು ಮಹಡಿ ಸೇರಿದಂತೆ 1,22,743 ಚದರ ಅಡಿ ವಿಸ್ತಾರದಲ್ಲಿ ಈ ಮಾಲ್ ನಿರ್ಮಾಣಗೊಂಡಿದೆ' ಎಂದು ಅವರು ದೂರಿದರು.

'ಪಾಲಿಕೆಗೆ ಬೃಹತ್ ಮೊತ್ತದ ತೆರಿಗೆ ವಂಚಿಸಿರುವ ಬಗ್ಗೆ ಮಹಾಲೆಕ್ಕ ಪರಿಶೋಧಕರ ಕಚೇರಿಯ ಅಧಿಕಾರಿಗಳು ಮತ್ತು ದಾಸರಹಳ್ಳಿ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿಗಳು ನಡೆಸಿದ ಜಂಟಿ ಸಮೀಕ್ಷೆ ಕಾರ್ಯದಲ್ಲಿ ತಿಳಿದು ಬಂದಿದೆ. 74,243 ಚದರ ಅಡಿ ವಿಸ್ತೀರ್ಣವನ್ನು ಮುಚ್ಚಿಟ್ಟು, ಪಾಲಿಕೆಗೆ ತೆರಿಗೆ ವಂಚಿಸಲಾಗಿದೆ' ಎಂದು ಅವರು ಹೇಳಿದರು.

'2012ರ ಅ.25ರಂದು ₹3.78 ಲಕ್ಷ ಮಾತ್ರ ತೆರಿಗೆ ಪಾವತಿಸಿದ್ದಾರೆ. ಬಡ್ಡಿ ಸೇರಿದಂತೆ ₹2.63 ಕೋಟಿ ಪಾವತಿಸುವಂತೆ 2015ರಲ್ಲಿಯೇ ಬಿಬಿಎಂಪಿಯು ರಾಕ್‌ಲೈನ್ ವೆಂಕಟೇಶ್ ಅವರಿಗೆ ನೋಟಿಸ್ ನೀಡಿತ್ತು. ಆದರೆ, ಪಾಲಿಕೆಯು ನೀಡಿದ್ದ ನೋಟಿಸ್‌ಗಳನ್ನು ಪ್ರಶ್ನಿಸಿ, ಅವರು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದರು. ಆದರೆ, ನ್ಯಾಯಾಲಯ ಈ ಅರ್ಜಿಯನ್ನು ವಜಾಗೊಳಿಸಿದೆ' ಎಂದರು.

'2011–12ರಿಂದ 2020–21ರವರೆಗಿನ ಅವಧಿಯವರೆಗೆ ಒಟ್ಟು ₹3.8 ಕೋಟಿ ಆಸ್ತಿ ತೆರಿಗೆ, ವಾರ್ಷಿಕ ಬಡ್ಡಿದರ, ದಂಡ ಸೇರಿ, ₹8.51 ಕೋಟಿ ತೆರಿಗೆ ಪಾವತಿಸಬೇಕಾಗಿದೆ' ಎಂದೂ ಹೇಳಿದರು.

'ಜಂಟಿ ಸಮೀಕ್ಷೆ ನಡೆಸಲಿ'

'ಮಾಲ್‌ನ ನೆಲಮಹಡಿ ಮಾತ್ರ ನೋಡಿ, ಉಳಿದ ಆರು ಮಹಡಿಗಳ ವಿಸ್ತೀರ್ಣವನ್ನು ಲೆಕ್ಕ ಹಾಕಲಾಗಿದೆ. ಆದರೆ, ಮಾಲ್ ಒಳಗಿನ ಚಿತ್ರಮಂದಿರವೇ 40 ಅಡಿಗಳಿಗಿಂತ ಎತ್ತರವಿರುತ್ತದೆ. ಹೊರಗಡೆಯಿಂದ ಮಹಡಿಗಳನ್ನು ಮಾತ್ರ ನೋಡಿದರೆ ಸರಿಯಾದ ಲೆಕ್ಕ ಸಿಗುತ್ತದೆಯೇ' ಎಂದು ರಾಕ್‌ಲೈನ್ ವೆಂಕಟೇಶ್ ಪ್ರಶ್ನಿಸಿದರು.

'ಕೆಲವು ಅಧಿಕಾರಿಗಳು ನನ್ನ ಬಳಿ ಹಣ ಕೇಳಲು ಬಂದಿದ್ದರು. ನಾನು ಕೊಡದ ಕಾರಣ ಈ ರೀತಿ ಆರೋಪ ಮಾಡಲಾಗುತ್ತಿದೆ. ಬಿಬಿಎಂಪಿಯಿಂದ ಕಟ್ಟಡ ವಿಸ್ತೀರ್ಣವನ್ನು ಇನ್ನೊಮ್ಮೆ ಸಮೀಕ್ಷೆ ನಡೆಸಲಿ, ನಮ್ಮ ಕಡೆಯ ಸರ್ವೆಯರ್ ಕೂಡ ಇರಲಿ. ಇಬ್ಬರೂ ಸೇರಿ ಜಂಟಿ ಸಮೀಕ್ಷೆ ನಡೆಸಲಿ ಎಂದು ನಾನು ಬಿಬಿಎಂಪಿಗೆ ಮನವಿ ಮಾಡಿದ್ದೆ. ಆದರೆ, ಅದಕ್ಕೆ ಪ್ರತಿಕ್ರಿಯೆ ಬರಲೇ ಇಲ್ಲ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'1.22 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಮಾಲ್ ನಿರ್ಮಾಣವಾಗಿದ್ದರೆ ಖಂಡಿತ ನಾನು ತೆರಿಗೆ ಪಾವತಿಸುತ್ತೇನೆ. ಆದರೆ, ರಾಕ್‌ಲೈನ್ ಮಾಲ್ ನಿರ್ಮಾಣವಾಗಿರುವುದು 48,500 ಚದರ ಅಡಿ ವಿಸ್ತೀರ್ಣದಲ್ಲಿ. ಸುಮ್ಮನೆ ನಾನೇಕೆ ಹೆಚ್ಚು ತೆರಿಗೆ ಪಾವತಿಸಲಿ' ಎಂದೂ ಅವರು ಪ್ರಶ್ನಿಸಿದರು.



ರಾಕ್‌ಲೈನ್ ವೆಂಕಟೇಶ್

'ಬಿಬಿಎಂಪಿಯಿಂದ ನನಗೆ ನೋಟಿಸ್ ಕಳಿಸಿದ್ದರು ನಿಜ. ಆದರೆ, ಆ ಲಕೋಟೆಯೊಳಗೆ ಪತ್ರವೇ ಇರಲಿಲ್ಲ. ಲಕೋಟೆ ಮಾತ್ರ ಇತ್ತು. ನಾನು ನೋಟಿಸ್ ಸ್ವೀಕರಿಸಿರಬೇಕು ಮತ್ತು ಅದಕ್ಕೆ ಪ್ರತಿಕ್ರಿಯಿಸಬಾರದು ಎಂಬ ಉದ್ದೇಶದಿಂದ ಈ ರೀತಿ ಮಾಡಿದ್ದರು. ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇನೆ. ನಾನು ತೆರಿಗೆ ಪಾವತಿಸಿಲ್ಲ ಎಂದು ಆರೋಪಿಸುವವರೂ ಬೇಕಾದರೆ ನ್ಯಾಯಾಲಯದಲ್ಲಿಯೇ ಇದನ್ನು ಪ್ರಶ್ನಿಸಲಿ' ಎಂದೂ ಪ್ರತಿಕ್ರಿಯಿಸಿದರು.

'ಡ್ರೋನ್ ವಿಧಿವಿಜ್ಞಾನ ಪ್ರಯೋಗಾಲಯ' ಅಸ್ತಿತ್ವಕ್ಕೆ

ತಿರುವನಂತಪುರ (ಪಿಟಿಐ): ದೇಶದ ಮೊದಲ 'ಡ್ರೋನ್ ವಿಧಿವಿಜ್ಞಾನ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರ'ಕ್ಕೆ ಕೇರಳ ಪೊಲೀಸ್ ಇಲಾಖೆ ಶುಕ್ರವಾರ ಚಾಲನೆ ನೀಡಿತು.

ಡ್ರೋನ್‌ಗಳನ್ನು ಬಳಸಿ ನಡೆಸುವ ದಾಳಿಗಳು ದೇಶದಲ್ಲಿನ ಭದ್ರತಾ ವ್ಯವಸ್ಥೆಗೆ ಒಡ್ಡುತ್ತಿರುವ ಸವಾಲುಗಳನ್ನು ಎದುರಿಸಲು ಈ ಕೇಂದ್ರ ಸ್ಥಾಪಿಸಲಾಗಿದೆ ಎಂದು ಪೊಲೀಸ್ ಇಲಾಖೆ ಹೇಳಿದೆ.

ಕಾಣೆಯಾಗಿದ್ದಾರೆ

ಅಗದೂರಪ್ಪ

ವಯಸ್ಸು 63, ಮಗನ ಹೆಸರು ಸುನಿಲ್, ನಂ.410, ಶಿವ ದೇವಸ್ಥಾನ ರೋಡ್, ಕೊಡ್ಲು, ಬೆಂಗಳೂರು ಇಲ್ಲಿಂದ ದಿನಾಂಕ 29.07.2021ರಿಂದ ಕಾಣೆಯಾಗಿದ್ದಾರೆ ತಿಳಿದವರು ಈ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ ಮಾಡಿಕೊಳುತ್ತೇವೆ.
ಮೊ: 95386 10510, 80504 18521, 88613 03955, 95388 84950

Sri Lakshminarayana Co-Operative Bank Ltd.,
#1627/2, Park Road, Ramamohanapura, Bangalore: 560021
Ph : 08023320489 /08023422356.
Website: www.slncb.com , E-Mail : ceo@slncb.com

Application is invited for the post of Managing Director / CEO (01 Post)

Refer RBI circular DOR.GOV.REC.25/12.10.000/2021-22 dated June 25, 2021 regarding appointment of Managing Director/CEO in UCBs.

Eligibility: The person shall be a graduate from Recognized University in India, must have knowledge of Kannada language (both reading and writing): preferably with:

a) CAIIB/ DBF/ Diploma in Co-Operative Business Management; or
b) Chartered / Cost Accountant / MBA (Finance); or
c) Post Graduate in Commerce.
d) Must have knowledge of Computer and Software Application.
e) Minimum 8 years of experience in Banking at the middle / senior level management in the Banking Sector.

The person must not be less than 35years of age and not more than 65years of age as on 31/07/2021.

Pay Scale: Commensurate with qualification and experience.

Selection Process: By Interview and subject to meeting the "Fit & Proper" criterion prescribed by Reserve Bank of India as detailed in Appendix II of the above mentioned circular.

Interested and eligible candidates may submit application along with testimonials; pass port size photograph and aadhar copy on or before 21.08.2021 to the undersigned by post/ by hand/by courier.

Date: 14/08/2021
Place: Bangalore. Sd/ - General Manager

'ಫಿಟ್ ಇಂಡಿಯಾ ಸ್ವಾತಂತ್ರ್ಯದ ಓಟ' ಕಾರ್ಯಕ್ರಮಕ್ಕೆ ಎಸ್‌.ಎಂ. ಜಯಕರ ಚಾಲನೆ ನೀಡಿದರು.

'ಆರೋಗ್ಯಪೂರ್ಣ ಬದುಕಿಗೆ ಕ್ರೀಡಾ ಚಟುವಟಿಕೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯಪೂರ್ಣ ಬದುಕಿಗಾಗಿ ದಿನದಲ್ಲಿ ಕನಿಷ್ಠ 30 ನಿಮಿಷವಾದರೂ ದೈಹಿಕ ಅಥವಾ ಕ್ರೀಡಾ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು' ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್‌.ಎಂ. ಜಯಕರ ತಿಳಿಸಿದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಪ್ರಯುಕ್ತ ವಿಶ್ವವಿದ್ಯಾಲಯವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ 'ಫಿಟ್ ಇಂಡಿಯಾ ಸ್ವಾತಂತ್ರ್ಯದ ಓಟ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಕ್ರೀಡಾ ಸಚಿವಾಲಯದ ನಿರ್ದೇಶನದಂತೆ ದೇಶದಾದ್ಯಂತ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಲ್ಲಿ ದೈಹಿಕ ಆರೋಗ್ಯ ಕ್ಷಮತೆ ಬಗ್ಗೆ ಅರಿವು ಮೂಡಿಸಲು ಇದು ಸಹಕಾರಿಯಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು 'ಫಿಟ್ ಇಂಡಿಯಾ ಸ್ವಾತಂತ್ರ್ಯದ ಓಟ'ದಲ್ಲಿ ಪಾಲ್ಗೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಯುವಜನ ಸೇವೆ ಮತ್ತು ಕ್ರೀಡಾ ಸಚಿವಾಲಯದ ಪ್ರಾದೇಶಿಕ ನಿರ್ದೇಶಕ ಕೆ.ವಿ. ಖಾದ್ರಿ ನರಸಿಂಹಯ್ಯ, ಯುವ ಅಧಿಕಾರಿ ವೈ.ಎನ್. ಉಪ್ಪಿನ್, ಕರ್ನಾಟಕ ರಾಜ್ಯ ರಾಷ್ಟ್ರೀಯ ಸೇವಾ ರಾಜ್ಯಾಧಿಕಾರಿ ಪ್ರತಾಪ್ ಲಿಂಗಯ್ಯ, ಆರ್‌.ವಿ. ಫಿಸಿಯೋಥೆರಪಿ ಕಾಲೇಜಿನ ಪ್ರಾಂಶುಪಾಲ ಪೃಥ್ವಿರಾಜ್ ಹಾಗೂ ವಿಶ್ವವಿದ್ಯಾಲಯದ ಉಪಕುಲಸಚಿವ ಬಿ. ವಸಂತ ಶೆಟ್ಟಿ ಇದ್ದರು.

ಅಧ್ಯಕ್ಷರಾಗಿ ಕೆ.ರಾಘವೇಂದ್ರ ಆಯ್ಕೆ

ಪ್ರಜಾವಾಣಿ ವಾರ್ತೆ

ಕೆ. ರಾಘವೇಂದ್ರ



ಮುಂಜಾನೆ ಸತ್ಯ

ಶಿವಣ್ಣ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ 'ಪ್ರಜಾವಾಣಿ'ಯ ಹಿರಿಯ ಉಪಸಂಪಾದಕ ಕೆ.ರಾಘವೇಂದ್ರ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಶಿವಣ್ಣ ಹಾಗೂ ಖಜಾಂಚಿಯಾಗಿ ಮುಂಜಾನೆ ಸತ್ಯ ಆಯ್ಕೆಯಾಗಿದ್ದಾರೆ.

ಶುಕ್ರವಾರ ನಡೆದ ಮಂಡಳಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಡಾನ್ಸ್ ಸ್ಪೋರ್ಟ್ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಚನಾ

ಉಡುಪಿ: ಆಸ್ಟ್ರಿಯಾದ ಗ್ರಾಜ್‌ನಲ್ಲಿ ಇದೇ 20 ರಿಂದ ಆರಂಭಗೊಳ್ಳಲಿರುವ ವಿಶೇಷ ಒಲಿಂಪಿಕ್ಸ್ ಡಾನ್ಸ್ ಸ್ಪೋರ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮಣಿಪಾಲದ ಅರ್ಚನಾ ಜೈವಿಠಲ್ ಪಾಲ್ಗೊಳ್ಳಲಿದ್ದಾರೆ.

ಅರ್ಚನಾ ಜೈವಿಠಲ್ ಶಾಸ್ತ್ರೀಯ ನೃತ್ಯ ವಿಭಾಗದಲ್ಲಿ 90 ಸೆಕೆಂಡ್‌ಗಳ ಏಕವ್ಯಕ್ತಿ ಪ್ರದರ್ಶನ ನೀಡುತ್ತಿದ್ದಾರೆ. ಮಾಹೆ ಹಾಗೂ ಅರ್ಚನಾ ಟ್ರಸ್ಟ್ ಜಂಟಿಯಾಗಿ ವಿಶೇಷ ಮಕ್ಕಳಿಗಾಗಿ ಸ್ಥಾಪಿಸಿರುವ ಆಸರೆ ಸಂಸ್ಥೆಯಲ್ಲಿರುವ ಅರ್ಚನಾ, ಏಕವ್ಯಕ್ತಿ ಶಾಸ್ತ್ರೀಯ ನೃತ್ಯ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ ಏಕೈಕ ಸ್ಪರ್ಧಿ. ಆಸ್ಟ್ರಿಯಾ, ಚೆಕ್ ರಿಪಬ್ಲಿಕ್, ಎಸ್ಟೋನಿಯಾ, ಜರ್ಮನಿ, ಗ್ರೀಸ್, ಐಸ್‌ಲ್ಯಾಂಡ್, ಲಿಥುವೇನಿಯಾ, ನಾರ್ತ್ ಮೆಸಿಡೋನಿಯಾ, ನಾರ್ವೆ, ಸ್ಲೊವೇನಿಯಾ, ಉಕ್ರೇನ್, ಅಮೆರಿಕ ಹಾಗೂ ಭಾರತ ಚಾಂಪಿಯನ್ ಷಿಪ್‌ನಲ್ಲಿ ಭಾಗವಹಿಸುತ್ತಿವೆ.



ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಸರಳವಾಗಿ ಆಚರಣೆ • ಕೋವಿಡ್ ಗುಣಮುಖರ ಸನ್ಮಾನಕ್ಕೆ ನಿರ್ಧಾರ

ಸ್ವಾತಂತ್ರ್ಯೋತ್ಸವ: ಸಾರ್ವಜನಿಕರಿಗೆ ಪ್ರವೇಶವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 75ನೇ ಸ್ವಾತಂತ್ರ್ಯೋತ್ಸವ ಆಚರಣೆಗೆ ನಗರದ ಮಾಣೆಕ್ ಷಾ ಪರೇಡ್ ಮೈದಾನ ಸಜ್ಜುಗೊಂಡಿದೆ. ಕೋವಿಡ್ ಕಾರಣದಿಂದ ಈ ಬಾರಿಯೂ ಸರಳವಾಗಿ ಆಚರಿಸಲು ನಿರ್ಧರಿಸಲಾಗಿದೆ. 100 ಕೊರೊನಾ ಸೇನಾನಿಗಳು ಹಾಗೂ ಕೋವಿಡ್‌ನಿಂದ ಗುಣಮುಖರಾಗಿರುವ 25 ಮಂದಿಯನ್ನು ಆಹ್ವಾನಿಸಿ ಸನ್ಮಾನಿಸಲಿರುವುದು ಈ ಬಾರಿಯ ವಿಶೇಷ.

'ಕೋವಿಡ್ ಕಾರಣದಿಂದ ಸರಳ ರೀತಿಯಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಗುವುದು. ಅಲ್ಲದೆ, ಸುರಕ್ಷತೆಗೆ ಆದ್ಯತೆ ನೀಡಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತ, ಪೊಲೀಸ್ ಇಲಾಖೆ ವತಿಯಿಂದ ರಾಜ್ಯಮಟ್ಟದ ಕಾರ್ಯಕ್ರಮ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಿಗ್ಗೆ 9ಕ್ಕೆ ಧ್ವಜಾರೋಹಣ ನೆರವೇರಿಸಲಿದ್ದಾರೆ. ಆ ಬಳಿಕ ಪರೇಡ್ ವಂದನೆ ಸ್ವೀಕರಿಸಿ ನಾಡಿನ ಜನತೆಗೆ ಸ್ವಾತಂತ್ರ್ಯೋತ್ಸವ ಸಂದೇಶ ನೀಡಲಿದ್ದಾರೆ.

ಸಾರ್ವಜನಿಕರಿಗೆ ಪ್ರವೇಶವಿಲ್ಲ: 'ಈ ಬಾರಿಯೂ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಪ್ರವೇಶವಿಲ್ಲ. ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಕೈಬಿಡಲಾಗಿದೆ. 20 ತುಕಡಿಗಳಿಂದ ಪಥಸಂಚಲನ ನಡೆಯಲಿದ್ದು, ದೂರದರ್ಶನದಲ್ಲಿ ಕಾರ್ಯಕ್ರಮವನ್ನು ನೇರ ಪ್ರಸಾರ ಇರಲಿದೆ' ಎಂದು ವಿವರಿಸಿದರು.

ಅತಿಥಿಗಳು, ಗಣ್ಯರು, ವಿಶೇಷ ಆಹ್ವಾನಿತರಿಗಾಗಿ 1000 ಆಸನ, ವೇದಿಕೆ ಸಿದ್ಧಪಡಿಸಲಾಗಿದೆ. ಪ್ರತಿ ಬಾರಿ 30ಕ್ಕೂ ಹೆಚ್ಚು ತುಕಡಿಗಳಿಂದ ಪಥ ಸಂಚಲನ ನಡೆಯುತ್ತಿತ್ತು. ಈ ಬಾರಿ 20 ತುಕಡಿಗಳಿಂದ 450 ಮಂದಿ ಮಾತ್ರ ಪಥಸಂಚಲನದಲ್ಲಿ ಭಾಗವಹಿಸಲಿದ್ದಾರೆ ಎಂದು ಗೌರವ್ ಗುಪ್ತ ತಿಳಿಸಿದರು.

ಬಿಗಿ ಭದ್ರತೆ: 'ಬೆಂಗಳೂರು ನಗರ ದಕ್ಷಿಣ ವಿಭಾಗದ ಉಪ ಆಯುಕ್ತರ ನೇತೃತ್ವದಲ್ಲಿ 10 ಜನ ಡಿಸಿಪಿಗಳನ್ನು ಹಾಗೂ ಕೆಎಸ್‌ಆರ್‌ಪಿ, ಸಿಎಆರ್, ಸಿಆರ್‌ಟಿ, ಕೆಎಸ್‌ಐಎಸ್‌ಎಫ್, ಕೆಎಸ್‌ಎಸ್‌ಎಫ್ ಹಾಗೂ ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಭಾಗವಹಿಸುವ ಎಲ್ಲರಿಗೂ ಮಾಸ್ಕ್ ಕಡ್ಡಾಯ. ಪಾಸ್ ಇದ್ದರೆ ಮಾತ್ರ ಪ್ರವೇಶ ನೀಡಲಾಗುತ್ತದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಮಾಹಿತಿ ನೀಡಿದರು.

'ಮೈದಾನದ ಸುತ್ತಮುತ್ತ ಪ್ರದೇಶದಲ್ಲಿ ಸೂಕ್ಷ್ಮವಾಗಿ ನಿಗಾ ವಹಿಸಲು ಆಯಕಟ್ಟಿನ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಹಾಗೂ ಬ್ಯಾರಿಕೇಡ್ ವ್ಯಾನ್‌ಗಳನ್ನು ಅಳವಡಿಸಲಾಗಿದೆ. ಯಾವುದೇ ವಿಷಮ ಸಂಭವಿಸಿದಲ್ಲಿ ತುರ್ತು ಸೇವೆಗಾಗಿ ಅಗ್ನಿಶಾಮಕ ಹಾಗೂ ಆಂಬುಲೆನ್ಸ್ ವಾಹನಗಳ ವ್ಯವಸ್ಥೆ ಮಾಡಲಾಗಿದೆ' ಎಂದರು.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಸೇರಿದಂತೆ ಇನ್ನಿತರೆ ಹಿರಿಯ ಅಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿದ್ದರು.

ಸ್ವಾತಂತ್ರ್ಯೋತ್ಸವಕ್ಕಾಗಿ ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನವನ್ನು ಕೆಲಸಗಾರರು ಶುಕ್ರವಾರ ಸಿದ್ಧಪಡಿಸುತ್ತಿದ್ದ ದೃಶ್ಯ ಕಂಡುಬಂತು –ಪ್ರಜಾವಾಣಿ ಚಿತ್ರ

ವಾಹನ ಸಂಚಾರ ಮಾರ್ಗ ಬದಲಾವಣೆ

ಸ್ವಾತಂತ್ರ್ಯೋತ್ಸವ ನಿಮಿತ್ತ ಭಾನುವಾರ ಬೆಳಿಗ್ಗೆ 8.30ರಿಂದ 10.30ರವರೆಗೆ ಕಬ್ಬನ್ ರಸ್ತೆಯ ಬಿ.ಆರ್.ವಿ. ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗೆ ಎರಡೂ ದಿಕ್ಕುಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಇನ್‌ಫೆಂಟ್ರಿ ರಸ್ತೆಯಲ್ಲಿ ಮಣಿಪಾಲ್ ಕೇಂದ್ರದ ಕಡೆಗೆ ಸಂಚರಿಸುವ ವಾಹನಗಳು ನೇರವಾಗಿ ಇನ್‌ಫೆಂಟ್ರಿ ರಸ್ತೆ, ಸಫೀನಾ ಪ್ಲಾಜಾ ಬಳಿ ಎಡತಿರುವು ಪಡೆದು, ಡಿಸ್ಪೆನ್ಸರಿ ರಸ್ತೆ, ಕಾಮರಾಜ ರಸ್ತೆ ಮತ್ತು ಡಿಕನ್ಸನ್ ರಸ್ತೆ ಕಡೆಗೆ ಸಾಗಬೇಕು ಅಥವಾ ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಬೇಕು ಎಂದು ಕಮಲ್ ಪಂತ್ ಹೇಳಿದರು.

ಪ್ರತಿ ವಾರ್ಡ್‌ಗೆ 250 ಡೋಸ್ ಹಂಚಿಕೆ

'ಕೋವಿಶೀಲ್ಡ್ ಲಸಿಕೆಗೆ ಹೆಚ್ಚು ಬೇಡಿಕೆ ಇರುವುದರಿಂದ ಹೊಸದಾಗಿ 50 ಸಾವಿರ ಡೋಸ್ ತರಿಸಲಾಗಿದೆ. ಪ್ರತಿ ವಾರ್ಡ್‌ಗೆ 250 ಡೋಸ್ ಹಂಚಿಕೆ ಮಾಡಲಾಗಿದೆ' ಎಂದು ಗೌರವ್ ಗುಪ್ತ ಹೇಳಿದರು.

'ಪ್ರತಿದಿನ 60 ಸಾವಿರ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದ್ದು, 400 ಪ್ರಕರಣಗಳು ದಾಖಲಾಗುತ್ತಿವೆ. ಪ್ರಸ್ತುತ ಕೋವಿಡ್ ಪ್ರಕರಣಗಳ ದೃಢಪ್ರಮಾಣ ಶೇ 0.61 ರಷ್ಟಿದೆ' ಎಂದರು.

ಜನನಿಬಿಡ ಪ್ರದೇಶಗಳಲ್ಲಿ ಶೋಧ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದು, ಶ್ವಾನದಳದ ಸಮೇತ ನಗರದ ಜನನಿಬಿಡ ಪ್ರದೇಶಗಳಲ್ಲಿ ಶುಕ್ರವಾರ ಶೋಧ ನಡೆಸಿದರು.

ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿರುವ ಮೆಜೆಸ್ಟಿಕ್‌ನ ರೈಲ್ವೆ ನಿಲ್ದಾಣ ಹಾಗೂ ಬಸ್ ನಿಲ್ದಾಣಗಳಲ್ಲಿ ಸುತ್ತಾಡಿದ ಪೊಲೀಸರು, ಪ್ರತಿಯೊಂದು ಸ್ಥಳದಲ್ಲೂ ತಪಾಸಣೆ ನಡೆಸಿದರು. ಪ್ರಯಾಣಿಕರ ಬ್ಯಾಗ್‌ಗಳು, ಕಸದ ತೊಟ್ಟಿಗಳು, ಅಂಗಡಿಗಳಲ್ಲೂ ಪರಿಶೀಲಿಸಿದರು.

ನಿಲ್ದಾಣಗಳ ಆವರಣದಲ್ಲೂ ಶ್ವಾನದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು. ಪ್ರಯಾಣಿಕರು ಕುಳಿತುಕೊಳ್ಳುವ ವಿಶ್ರಾಂತಿ ಕೊಠಡಿಗಳು ಹಾಗೂ ಅಧಿಕಾರಿಗಳ ಕೊಠಡಿಗಳಲ್ಲೂ ತಪಾಸಣೆ ನಡೆಸಲಾಯಿತು. ಲೋಹ ಶೋಧಕಗಳನ್ನೂ ಶೋಧಕ್ಕೆ ಬಳಸಲಾಯಿತು.

'ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಶುಕ್ರವಾರ ಶ್ವಾನದಳದಿಂದ ಪರಿಶೀಲನೆ ನಡೆಸಿ, ಅದೇ ಸ್ಥಳದಲ್ಲಿ ಭದ್ರತೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸಿಬ್ಬಂದಿ ನಿರಂತರವಾಗಿ ಗಸ್ತು ಸಹ ತಿರುಗಲಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಮೆಜೆಸ್ಟಿಕ್‌ನ ರೈಲು ನಿಲ್ದಾಣದಲ್ಲಿ ಶ್ವಾನದಳದ ಸಿಬ್ಬಂದಿ ಶುಕ್ರವಾರ ಶೋಧ ನಡೆಸಿದರು

ಆ.15ಕ್ಕೆ ಸಂಗೊಳ್ಳಿ ರಾಯಣ್ಣ ಸ್ಮರಣೆ

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಜನ್ಮದಿನವಾದ ಆಗಸ್ಟ್ 15ರಂದು ರಾಜಧಾನಿ ಮತ್ತು ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಂಡು, ರಾಯಣ್ಣ ಅವರಿಗೆ ಗೌರವ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ.

ಅದೇ ರೀತಿ, ಹುತಾತ್ಮರಾದ ದಿನವಾದ ಜನವರಿ 26ರಂದು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಗೌರವ ಸಲ್ಲಿಸಬೇಕು ಎಂದು ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

ಕೆಂಪು ಕೋಟೆಗೆ ಬಿಗಿ ಭದ್ರತೆ

ನವದೆಹಲಿ (ಪಿಟಿಐ): 75ನೇ ಸ್ವಾತಂತ್ರ್ಯೋತ್ಸವ ದಿನದಂದು ಕೆಂಪು ಕೋಟೆ ಸೇರಿದಂತೆ ರಾಜಧಾನಿಯಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

ಕೆಂಪು ಕೋಟೆಯ ಸುತ್ತಲೂ ಎನ್‌ಎಸ್‌ಜಿ, 'ಸ್ವಾಟ್' ಕಮಾಂಡೊಗಳನ್ನು ನಿಯೋಜಿಸಲು ಉದ್ದೇಶಿಸಲಾಗಿದೆ. ಇತ್ತೀಚೆಗೆ ಜಮ್ಮು ವಾಯು ಪಡೆ ನೆಲೆ ಮೇಲೆ ಡ್ರೋನ್ ದಾಳಿ ನಡೆದ ಹಿನ್ನೆಲೆಯಲ್ಲಿ ಮತ್ತಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಡ್ರೋನ್‌ಗಳನ್ನು ಹೊಡೆದುರುಳಿಸುವ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

350 ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಐದು ಸಾವಿರ ಭದ್ರತಾ ಸಿಬ್ಬಂದಿಯನ್ನು ಕೆಂಪು ಕೋಟೆ ಸುತ್ತ ನಿಯೋಜಿಸಲಾಗಿದೆ.

ಅಂಜುದೀವ್ ದ್ವೀಪದಲ್ಲಿ ಧ್ವಜಾರೋಹಣ

ಕಾರವಾರ: ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂಭ್ರಮಾಚರಣೆ ಭಾಗವಾಗಿ ಇಲ್ಲಿನ ಸೀಬರ್ಡ್ ನೌಕಾನೆಲೆ ವ್ಯಾಪ್ತಿಯ ಅಂಜುದೀವ್ ದ್ವೀಪದಲ್ಲಿ ಶುಕ್ರವಾರ ರಾಷ್ಟ್ರ ಧ್ವಜಾರೋಹಣ ನೆರವೇರಿಸಲಾಯಿತು.

ನೌಕಾದಳದಿಂದ ದೇಶದ 75 ದ್ವೀಪಗಳಲ್ಲಿ ಆ.13ರಿಂದ ಆ.15ರವರೆಗೆ ಬೇರೆ ಬೇರೆ ದಿನ ಧ್ವಜಾರೋಹಣ ಮಾಡಲಾಗುತ್ತಿದೆ. ಇದೇ ರೀತಿ ಎಲ್ಲ ಸಶಸ್ತ್ರ ಪಡೆಗಳೂ ತಲಾ 75 ಕಡೆಗಳಲ್ಲಿ ಧ್ವಜಾರೋಹಣ ಹಮ್ಮಿಕೊಳ್ಳುತ್ತಿವೆ. ಇದಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ದೆಹಲಿಯಲ್ಲಿ ಶುಕ್ರವಾರ ವರ್ಚುವಲ್ ವೇದಿಕೆಯ ಮುಖಾಂತರ ಚಾಲನೆ ನೀಡಿದರು. ಬಳಿಕ ಕಾರವಾರದ ಅಂಜುದೀವ್ ದ್ವೀಪದಲ್ಲೂ ತ್ರಿವರ್ಣ ಧ್ವಜ ಮುಗಿಲೆತ್ತರದಲ್ಲಿ ಹಾರಾಡಿತು. ಪೋರ್ಚುಗೀಸರ ಆಡಳಿತದಲ್ಲಿ ಗೋವಾದ ಭಾಗವಾಗಿದ್ದ ಈ ದ್ವೀಪವನ್ನು 1961ರ ಡಿ.10ರಂದು ಭಾರತೀಯ ಸಶಸ್ತ್ರ ಪಡೆಗಳು ವಶಕ್ಕೆ ಪಡೆದಿದ್ದವು. ಸೀಬರ್ಡ್ ನೌಕಾನೆಲೆಯ ಸ್ಥಾಪನೆ ಬಳಿಕ ಮಹತ್ವ ಪಡೆದಿದೆ. ಹಾಗಾಗಿ ಇಲ್ಲಿನ ರಾಷ್ಟ್ರಧ್ವಜಾರೋಹಣ ಹೆಚ್ಚಿನ ಮಹತ್ವ ಪಡೆದಿದೆ. ಕರ್ನಾಟಕ ನೌಕಾ ವಲಯದ ಫ್ಲ್ಯಾಗ್ ಆಫೀಸರ್ ಕಮಾಂಡಿಂಗ್ ರಿಯರ್ ಅಡ್ಮಿರಲ್ ಮಹೇಶ ಸಿಂಗ್ ಸೇರಿದಂತೆ ವಿವಿಧ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಮೇಘಾ ಮುಡಿಗೇರಿದ 'ಮಿಸೆಸ್ ಇಂಡಿಯಾ ಕರ್ನಾಟಕ' ಕಿರೀಟ

ಬೆಂಗಳೂರು: ಯಲಹಂಕದಲ್ಲಿ ನಡೆದ 'ಮಿಸೆಸ್ ಇಂಡಿಯಾ ಕರ್ನಾಟಕ-2021' ಸೌಂದರ್ಯ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಮೇಘಾ ರವೀಂದ್ರಸ್ವಾಮಿ ವಿಜೇತರಾದರು.

ಸ್ಪರ್ಧೆಯ ನಂತರದ ಸ್ಥಾನಗಳಿಗೆ ಕ್ರಮವಾಗಿ ಶ್ರದ್ಧಾ ದಾಮೋದರ್, ನವ್ಯಾಗೌಡ ಮತ್ತು ಶೀತಲ್ ನೆಟಲ್ ಕರ್, ಶಿಲ್ಪಾ ಶ್ರೀಧರ್ ಮತ್ತು ಅರ್ಚನಾ ಜಯರಾಮ್, ಡಾ ಶ್ವೇತಾ ಜಕ್ಕಾ ಮತ್ತು ನೀತು ಆರ್ ಪ್ರಸನ್ನ ಆಯ್ಕೆಯಾದರು. ಅಂತಿಮ ಸ್ಪರ್ಧೆಯಲ್ಲಿ ಒಟ್ಟು 25 ಗೃಹಿಣಿಯರು ಭಾಗವಹಿಸಿದ್ದರು.

'ಸೂಪರ್ ಕ್ಲಾಸಿಕ್ ವಿನ್ನರ್' ವಿಭಾಗದಲ್ಲಿ ರಜಿನಿ ಲಕ್ಕಾ ಹಾಗೂ 'ಕ್ಲಾಸಿಕ್ ವಿನ್ನರ್' ವಿಭಾಗದಲ್ಲಿ ಶ್ರುತಿ ಶಿವಲಿಂಗಯ್ಯ ವಿಜೇತರಾದರು.

'ಕೇವಲ ಸೌಂದರ್ಯಕ್ಕೆ ಈ ಸ್ಪರ್ಧೆ ಸೀಮಿತವಲ್ಲ. ಹೆಣ್ಣಿನೊಳಗೆ ಅಡಗಿರುವ ಅನೇಕ ಕಲೆಗಳನ್ನು ಅರಿಯಲು ಅತ್ಯುತ್ತಮ ಅವಕಾಶವಾಗಿ ಈ ಸ್ಪರ್ಧೆ ರೂಪುಗೊಂಡಿದೆ. ಇವರು ಸ್ತ್ರೀ ಸಮುದಾಯಕ್ಕೆ ಆದರ್ಶ' ಎಂದು ಮಿಸೆಸ್ ಇಂಡಿಯಾ ಕರ್ನಾಟಕ ಸ್ಪರ್ಧೆಯ ಆಯೋಜಕಿ ಪ್ರತಿಭಾ ಸಂಶಿಮಠ ತಿಳಿಸಿದರು.

'ಮಿಸೆಸ್ ಇಂಡಿಯಾ ಕರ್ನಾಟಕದಲ್ಲಿ ವಿಜೇತರಾದವರು ರಾಷ್ಟ್ರಮಟ್ಟದಲ್ಲಿ ದೀಪಾಲಿ ಫಡ್ನಿಸ್ ಆಯೋಜಿಸುವ ಮಿಸೆಸ್ ಇಂಡಿಯಾ ಸೌಂದರ್ಯ ಸ್ಪರ್ಧೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ' ಎಂದರು.

ಸ್ವಾತಂತ್ರ್ಯದಿನದಂದು 'ಯುವ ಸಂಕಲ್ಪ ಯಾತ್ರೆ'ಗೆ ಚಾಲನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ 'ನವಭಾರತ'ದ ದೃಷ್ಟಿಕೋನವನ್ನು ದೇಶದಾದ್ಯಂತ ಕೊಂಡೊಯ್ಯಲು ಬಿಜೆಪಿಯ ಯುವ ಘಟಕವು 'ಯುವ ಸಂಕಲ್ಪ ಯಾತ್ರೆ'ಯನ್ನು ವರ್ಷಪೂರ್ತಿ ಕೈಗೊಂಡಿದ್ದು, ಸ್ವಾತಂತ್ರ್ಯ ದಿನದಂದು ಯಾತ್ರೆಗೆ ಚಾಲನೆ ದೊರೆಯಲಿದೆ.

'10 ಲಕ್ಷಕ್ಕೂ ಹೆಚ್ಚು ಭಾರತೀಯ ಜನತಾ ಯುವ ಮೋರ್ಚಾ (ಬಿಜೆವೈಎಂ) ಸ್ವಯಂಸೇವಕರು ಸಂಘಟನೆಯ 13,350 ಮಂಡಲಗಳಲ್ಲಿ ರಾಷ್ಟ್ರಗೀತೆಯ ಸಾಮೂಹಿಕ ಪ್ರದರ್ಶನದಲ್ಲಿ ಭಾಗವಹಿಸಲಿದ್ದಾರೆ. ಆಗಸ್ಟ್ 15ರಂದು ಉದಯಪುರದಲ್ಲಿ ಯುವ ಸಂಕಲ್ಪ ಯಾತ್ರೆಯನ್ನು ಆರಂಭಿಸಲಾಗುವುದು' ಎಂದು ಬಿಜೆವೈಎಂ ಅಧ್ಯಕ್ಷ ತೇಜಸ್ವಿ ಸೂರ್ಯ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಗುಜರಾತ್‌ನ ಪ್ರತಿ ವಿಧಾನಸಭಾ ಕ್ಷೇತ್ರ ಮತ್ತು ಕರ್ನಾಟಕದ 37 ಸ್ಥಳಗಳಲ್ಲಿ ಯಾತ್ರೆಯನ್ನು ಕೈಗೊಳ್ಳಲಾಗುವುದು. ಯಾತ್ರೆಯ ಅಂಗವಾಗಿ ಮೂರು ದಿನಗಳ ಮ್ಯಾರಥಾನ್ ನಡೆಯಲಿದೆ. ಅಂತೆಯೇ 75 ಸ್ಥಳಗಳಲ್ಲಿ 75 ಕಿ.ಮೀ.ಗಳ ಸೈಕಲ್ ರ್‍ಯಾಲಿಯನ್ನೂ ಆಯೋಜಿಸಲಾಗಿದೆ' ಎಂದೂ ಅವರು ಹೇಳಿದರು

ರೈಲು ಗಾಲಿ ಕಾರ್ಖಾನೆ ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in ಇ-ಟೆಂಡರ್ ವೆಬ್‌ಸೈಟ್: www.ireps.gov.in

ಟೆಂಡರ್ ಪ್ರಕಟಣೆ ಸಂ : ಆರ್‌ಡಬ್ಲ್ಯೂಎಫ್/ಎಂ/ಓಟಿ/ಸೇಫ್ಟಿ/2021-22/06 ದಿ: 11/08/2021

ಇ–ಟೆಂಡರ್‌ಗಳು : ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಈ ಕೆಳಕಂಡ ಕೆಲಸಕ್ಕೆ ಎಲೆಕ್ಟ್ರಾನಿಕ್ ಟೆಂಡರ್‌ನ್ನು ಆನ್‌ಲೈನ್ ವೆಬ್‌ಸೈಟ್ **http://www.ireps.gov.in** ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ & ಕೆಲಸದ ವಿವರ	ಅಂದಾಜು ಮೊತ್ತ
ಆರ್‌ಡಬ್ಲ್ಯೂಎಫ್/ಎಂ/ಸೇಫ್ಟಿ/ಓಟಿ/21–22/01/ದಿ:11/08/2021 ರೈಲು ಗಾಲಿ ಕಾರ್ಖಾನೆಯ – ಫ್ಯಾಕ್ಟರಿ ಪ್ರದೇಶ, ಆಡಳಿತ ಕಟ್ಟಡ, ರೈಲ್ವೆ ಆಸ್ಪತ್ರೆ, ತಾಂತ್ರಿಕ ತರಬೇತಿ ಕೇಂದ್ರ, ಜನರಲ್ ಸ್ಟೋರ್ಸ್ ಡಿಪೋ ಮತ್ತು ವಾರ್ಡ ಈ ಪ್ರದೇಶಗಳಿಗೆ ಅಗ್ನಿ ಸುರಕ್ಷತಾ ಪರಿಶೋದನೆಯನ್ನು ಮಾಡುವುದು (ಸಾರಿಗೆ ವೆಚ್ಚ ಸೇರಿದಂತೆ)	ರೂ. 4,99,800/-

ಟೆಂಡರ್ ಕೊನೆಯ ದಿನಾಂಕ &ಸಮಯ: 13/09/2021, 15.00 ಗಂಟೆಯವರೆಗೆ,
ಟೆಂಡರ್ ಪೂರ್ಣಗೊಳ್ಳುವ ಅವಧಿ : 4 ತಿಂಗಳು. ವಿವರವಾದ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್ **www.rwf.indianrailways.gov.in** ನಲ್ಲಿ ನೋಡಬಹುದು.
ಪ್ರಧಾನ ಸಂರಕ್ಷಣಾ ಅಧಿಕಾರಿ

PUBLIC NOTICE

This is to bring to the notice of the general public that my client is intending to purchase all that piece and parcel of residential property bearing BBMP Khata No. 224/2500/1966/178&178A, Kothnur, Ward No.194-Anjanapura-Gottigere, Bangalore (earlier Site No. 178 (Item No.1) and Site No. 178A (Item No.2), both situated in the layout known as 'Classic Orchards' formed in residentially converted Survey Nos. 173, 174/1B, 81/2C, 82/1,80/2B,81/2B, situated at Kothanur Village, Uttarahalli Hobli, Bangalore South Taluk) ("Schedule Property") belonging to **Mrs. S. Indira** wife of **Mr.Sudarshan. R** residing at **No.178, classic Orchards Layout, Bannerghatta road, Bangalore 560076 (Owner).**

Any person or persons asserting any right, title, interest or claim in the Schedule Property or any part thereof or having any kind of claims thereon or having any kind of claim against the documents of title or objecting to any sale or transaction by the Owner, should write to the undersigned within **ten days** from the date of issuance of this notice with all documentary proof on which they are basing and asserting their rights with regard to the Schedule Property.

SCHEDULE

All that piece and parcel of residential property bearing BBMP Khata No. 224/2500/1966/178&178A, Kothnur, Ward No.194-Anjanapura-Gottigere, Bangalore (earlier Site No. 178(Item No.1) and Site No. 178A(Item No.2), both situated in the layout known as 'Classic Orchards' formed in residentially converted Survey Nos. 173, 174/1B, 81/2C, 82/1,80/2B,81/2B, situated at Kothanur Village, Uttarahalli Hobli, Bangalore South Taluk) together in all measuring about 9780 square feet and bounded as follows:
East: Property bearing Site No. 184; **West:** Road; **North**: Property bearing Site No. 177; **South**: Property bearing Site No. 179; Comprising of Item No. 1 and Item No. 2 as set out below

Item No.	Site No	Extent Sq. Ft.	EAST	WEST	NORTH	SOUTH
1	178	4865	Property bearing Site No. 184	Road	Property bearing Site No. 177	Property bearing Site No. 178/A
2	178A	4915	Property bearing Site No. 184	Road	Property bearing Site No. 178	Property bearing Site No. 179

Approved by
1 .
(Owner)

Sunitha R - Advocate
ASLF Law Offices No.34, 7th Cross,
Vasanth Nagar,Off:Cunningham road,
Bengaluru – 560 052
Phone: +91-80-4242 3000 Fax: 91-80-42423030.

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100 ದೂರವಾಣಿ : 080–41362000 ಫ್ಯಾಕ್ಸ್ : 080–41362010
ವೆಬ್‌ಸೈಟ್ : www.timken.com/en-in ಇ–ಮೇಲ್: tilinvestor@timken.com

ಈ ಪ್ರಕಾರವಾದ 41 ಷೇರು ಸರ್ಟಿಫಿಕೇಟುಗಳು ಪ್ರತಿ ಷೇರಿಗೆ ರೂ.10/– ರಂತೆ ಕಂಪನಿಯ ಒಟ್ಟಾರೆ 2885 ಈಕ್ವಿಟಿ ಷೇರುಗಳನ್ನು ಹೊಂದಿರುವ ಸಂಖ್ಯೆಗಳು 69096, 137996, 137997, 75727, 114101, 114102, 28285, 62750, 21296, 179848, 179849, 2465, 29523, 179259, 179260, 179261, 56375, 69694, 84501, 54577, 149283, 125062, 125063, 54124, 18680, 216382, 114852, 48225, 113545, 37655, 7304, 33130, 897, 216084, 10000, 211685, 165792, 165793, 55092, 84190 ಹಾಗೂ 55157 ಮತ್ತು ಮನೋಜ್ ಕುಮಾರ್ ರಾಯ್‌ಚೌಧರಿ ಜೊತೆಯಲ್ಲಿ ಮಿಸಸ್. ಪೂರ್ಣಿಮ ರಾಯ್‌ಚೌಧರಿ, ವಿದ್ಯಾ ನರೇದಿ, ಪೂನಂ ಜಗ್ಗಿ, ಲಕಂಶಿ ಡಿ ಷಾ, ನರಿಂದರ್ ಕೌರ್, ಬಸಂತಿ ಗೋರ್ಸಿಯ ಜೊತೆಯಲ್ಲಿ ಜವಹಾರ್ ಕೆ ಗೋರ್ಸಿಯ, ಅಭಿಜಿತ್ ಧರ್, ಭರತ್ ದುಜಾರಿ, ಶಾಂತಾಬೆನ್ ಜಯಂತಿಲಾಲ್ ಷಾ, ಎಂಡಿ ಜಮೀಲ್, ಪಂಕಜ್ ಕಾಂತಿಲಾಲ್ ಮೊರಾಕಿಯ, ವಿಭಾ ವಿ ದೋಶಿ ಜೊತೆಯಲ್ಲಿ ವಿಜಯ್ ಎನ್. ದೋಶಿ, ಅಣ್ಣಮ್ಮ ಅಬ್ರಾಹಂ, ಮಿತೇಶ್ ಕಕ್ಕಡ್, ಸುನಿತಾ ರಾಣಿ, ಜಿತೇಶ್ ಬಿ ಷಾ ಜೊತೆಯಲ್ಲಿ ಕನಕಲತಾ ಬಿ ಷಾ, ಮಿಸ್. ರೇಣು ಪೂರಿ ಜೊತೆಯಲ್ಲಿ ಕೇವಾಲ್ ಕೃಷ್ಣನ್ ಭಲ್ಲಾ, ತಪನ್ ಕುಮಾರ್ ಡೇ, ಯಶೋವರ್ಧನ್ ಸಿನ್ಹಾ ಜೊತೆಯಲ್ಲಿ ಮಿಸಸ್. ಸುನಿತಾ ಸಿನ್ಹಾ, ಅನಿಲ್ ಖೋಸ್ಲ, ನವಲ್ ಕುಮಾರ್ ಸಿಂಗ್, ನಿಶಾ ಜಲನ್ ಜೊತೆಯಲ್ಲಿ ಮಿಸ್ಟರ್. ನಿರ್ಮಲ್ ಜಲನ್, ಶಿಬಾಶಿಶ್ ರಾಯ್, ಕೆ ಲಕ್ಷ್ಮೀ, ಜಯಂತಿಲಾಲ್ ಕಪೂರ್‌ಚಂದ್ ಸೋಲಂಕಿ ಮತ್ತು ಅರುಣಾ ವಿನೋದ್ ಮರ್ವಾಹ ಜೊತೆಯಲ್ಲಿ ಎಲ್‌ಟಿ ಕೊಲ್ ವಿನೋದ್ ಮರ್ವಾಮ ಇವರ ಹೆಸರುಗಳಲ್ಲಿ ನೋಂದಾಯಿತವಾದ ಟಿಮ್‌ಕೆನ್ ಇಂಡಿಯಾ ನಿಯಮಿತದ ಡಿಸ್ಟಿಂಕ್ಟಿವ್ ಸಂಖ್ಯೆಗಳು. 40908401–500, 44020875–924, 44020925–928, 41571501–600, 43338465–514, 43338515–518, 36827301–400, 40273801–900, 36128401–500, 62299414–463, 62299464–467, 34245301–400, 36951101–200, 62281038–1137, 62281138–147, 62281148–152, 39636301–400, 40968201–300, 42448901–9000, 39456501–600, 44344185–234, 43653076–125, 43653126–129, 39411201–300, 35866801–900, 63545345–394, 43360375–424, 3881301–400, 43322671–720, 37764301–400, 34729201–300, 37311801–900, 34088501–600, 63535751–800, 34998801–900, 63393656–705, 44846347–396, 44846397–400, 39508001–8100, 42417801–900 ಮತ್ತು 39514501–600 ಗಳನ್ನು ಒಳಗೊಂಡ ಎಲ್ಲಾ ಷೇರು ಸರ್ಟಿಫಿಕೇಟುಗಳು ಕಾಣೆಯಾಗಿದ್ದು, ಮೇಲೆ ತಿಳಿಸಿರುವ ಎಲ್ಲಾ ಷೇರುದಾರರಿಂದ ಇದರ ಬದಲಾಗಿ ಷೇರು ಸರ್ಟಿಫಿಕೇಟುಗಳ ಪ್ರತಿಗಳನ್ನು ನೀಡಲು ಕಂಪನಿಯು ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ. ಸದರಿ ಪ್ರಕಟಣೆಯಲ್ಲಿ ತಿಳಿಸಿರುವಂತೆ ಮೂಲ ಷೇರು ಸರ್ಟಿಫಿಕೇಟುಗಳ ಕಣ್ಮರೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ಯಾವುದೇ ವ್ಯಕ್ತಿಗೆ (ಗಳಿಗೆ) ಆಕ್ಷೇಪಣೆಗಳು ಇದ್ದಲ್ಲಿ, ಈ ಪ್ರಕಟಣೆಯು ಪ್ರಕಟಗೊಂಡ 7 ದಿನದೊಳಗೆ ಮೇಲೆ ತಿಳಿಸಿರುವ ವಿಳಾಸಕ್ಕೆ ತನ್ನ/ತಮ್ಮ/ಅವರ ಆಕ್ಷೇಪಣೆಗಳನ್ನು ಕಂಪನಿಗೆ ಸಲ್ಲಿಸಬೇಕು ಎಂಬುದಾಗಿ ಇದರಲ್ಲಿ ಸೂಚಿಸಿರುವಂತೆ ನಿಮ್ಮನ್ನು/ತಮ್ಮನ್ನು ವಿನಂತಿಸಲಾಗಿದೆ. ತದನಂತರ ಕಂಪನಿಯು ಕಳೆದು ಹೋಗಿರುವ ಮೂಲ ಷೇರು ಸರ್ಟಿಫಿಕೇಟುಗಳಿಗೆ ಬದಲಾಗಿ ಸರ್ಟಿಫಿಕೇಟುಗಳ ಪ್ರತಿಯನ್ನು ನೀಡಲು ತೀರ್ಮಾನಿಸುತ್ತದೆ. ಸಾರ್ವಜನಿಕರು ಕಳೆದು ಹೋಗಿರುವ ಮೇಲಿನ ಷೇರು ಸರ್ಟಿಫಿಕೇಟುಗಳೊಂದಿಗೆ ಯಾವುದೇ ರೀತಿಯಲ್ಲೂ ಸಹ ವ್ಯವಹರಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ.

ಟಿಮ್‌ಕೆನ್ ಇಂಡಿಯಾ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್
ಸ್ಥಳ: ಬೆಂಗಳೂರು
ದಿನಾಂಕ: 13.08.2021

ವಿದ್ಯಾರ್ಥಿಗಳಿಂದ 'ಸ್ವಾತಂತ್ರ್ಯ ಓಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವ ನಿಮಿತ್ತ ರಾಜ್ಯದ ಎಲ್ಲ 48 ವಿಶ್ವವಿದ್ಯಾಲಯಗಳಲ್ಲಿ ಸ್ವಾತಂತ್ರ್ಯ ಓಟ ಕಾರ್ಯಕ್ರಮವನ್ನು ಆ.13 (ಶುಕ್ರವಾರ) ಆರಂಭಿಸಿದ್ದು, ಅ. 2ರವರೆಗೆ ನಡೆಯಲಿದೆ ಎಂದು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಹೇಳಿದರು.

ನಾರಾಯಣಗೌಡ

ಅಲ್ಲದೆ, ಆ.15 ರಿಂದ ಮೂರು ದಿನ ಬೆಂಗಳೂರಿನಿಂದ ಚಿಕ್ಕಮಗಳೂರುವರೆಗೆ ಸೈಕಲ್ ಜಾಥಾ ಏರ್ಪಡಿಸಲಾಗಿದೆ. ಇದರಲ್ಲಿ 75 ಮಂದಿ ಭಾಗವಹಿಸುತ್ತಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆ.15 ರಂದು ರಾಜ್ಯದ 75 ಶಾಲೆಗಳಲ್ಲಿ ಮ್ಯೂರಲ್ ಪೇಂಟಿಂಗ್ ಕಾರ್ಯಕ್ರಮ, 'ಸ್ವಾತಂತ್ರ್ಯದ ಅಮೃತ ಮಹೋತ್ಸವ' ಶೀರ್ಷಿಕೆಯಡಿ ರಾಜ್ಯ ಮಟ್ಟದ ಪ್ರಬಂಧ ಹಾಗೂ ಚರ್ಚಾಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ವಿಜೇತರಿಗೆ ಪ್ರಥಮ ಬಹುಮಾನ ₹25 ಸಾವಿರ, ದ್ವಿತೀಯ ಬಹುಮಾನ ₹15 ಸಾವಿರ ಮತ್ತು ತೃತೀಯ ಬಹುಮಾನ ₹10 ಸಾವಿರ ನೀಡಲಾಗುವುದು ಎಂದರು.

ಶಿಖರದಿಂದ ಸಾಗರ: ಸ್ವಾತಂತ್ರ್ಯದ ಅಮೃತ ವರ್ಷದ ಅಂಗವಾಗಿ 'ಶಿಖರದಿಂದ ಸಾಗರ' ಎಂಬ ಅಭಿಯಾನ ಹಮ್ಮಿಕೊಳ್ಳಲಾಗಿದೆ. ರಾಜ್ಯ ಐವರು ಯುವತಿಯರು ಕಾಶ್ಮೀರದಲ್ಲಿ ಕೊಲ್ಹೋಯ್ ಪರ್ವತ ಏರಲಿದ್ದಾರೆ. ಬಳಿಕ 3 ಸಾವಿರ ಕಿ.ಮೀ ಸೈಕಲ್ ಯಾನ ಮಾಡುತ್ತಾ ಕಾರವಾರ ತಲುಪುತ್ತಾರೆ. ಕಾರವಾರದಿಂದ ರಾಜ್ಯದ ಕರಾವಳಿ ಪ್ರದೇಶದಲ್ಲಿ 300 ಕಿ.ಮೀ.ನಷ್ಟು ಸಮುದ್ರದಲ್ಲಿ ಕಯಾಕಿಂಗ್ ಯಾನ ಮಾಡುತ್ತಾ ಮಂಗಳೂರು ತಲುಪುತ್ತಾರೆ ಎಂದು ನಾರಾಯಣಗೌಡ ಹೇಳಿದರು.

ಆ. 17 ರಿಂದ ಆರಂಭವಾಗುವ 45 ದಿನಗಳ ಸಾಹಸ ಯಾತ್ರೆಯಲ್ಲಿ ಮಡಿಕೇರಿಯ ಪುಷ್ಪಾ, ಶಿವಮೊಗ್ಗದ ಐಶ್ವರ್ಯಾ, ಧನಲಕ್ಷ್ಮಿ, ಬೆಂಗಳೂರಿನ ಆಶಾ ಮತ್ತು ಮೈಸೂರಿನ ಬಿಂದು ಭಾಗವಹಿಸುತ್ತಾರೆ ಎಂದು ತಿಳಿಸಿದರು.

2022 ರಲ್ಲಿ ಖೇಲೊ ಇಂಡಿಯಾ ಗೇಮ್ಸ್: ಖೇಲೊ ಇಂಡಿಯಾ ಯೂನಿವರ್ಸಿಟಿ ಗೇಮ್ಸ್–2021 ಅನ್ನು ಬೆಂಗಳೂರಿನಲ್ಲಿ 2022 ರ ಮಾರ್ಚ್ 5 ರಿಂದ 12 ರವರೆಗೆ ನಡೆಸಲಾಗುವುದು. ಈ ವರ್ಷ ನಡೆಯಬೇಕಿದ್ದ ಈ ಪಂದ್ಯಾವಳಿಯನ್ನು ಕೋವಿಡ್ ಕಾರಣ ಮುಂದೂಡಲಾಗಿದೆ ಎಂದರು.

ಪ್ಯಾರಿಸ್‌ನಲ್ಲಿ 2024 ರಲ್ಲಿ ನಡೆಯುವ ಒಲಿಂಪಿಕ್ಸ್‌ಗೆ ಕರ್ನಾಟಕದಿಂದ ಕನಿಷ್ಠ 100 ಕ್ರೀಡಾಪಟುಗಳನ್ನು ಕಳುಹಿಸುವ ಯೋಜನೆ ರೂಪಿಸಲಾಗಿದೆ. ಈಗಾಗಲೇ 35 ಕ್ರೀಡಾಪಟುಗಳನ್ನು ಗುರುತಿಸಲಾಗಿದೆ. ಈ ಕ್ರೀಡಾಪಟುಗಳಿಗೆ ತಲಾ ₹5 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು. ಈ ಬಗ್ಗೆ ಸಾರ್ವಜನಿಕರು ಸಹ ಅಗತ್ಯ ಸಲಹೆ ಸೂಚನೆಗಳನ್ನು ನೀಡಬಹುದು ಎಂದರು.

ಎಲ್ಲ ಇಲಾಖೆಯಲ್ಲಿ ಶೇ 2ರಷ್ಟು ಮೀಸಲು

ಕ್ರೀಡಾಪಟುಗಳಿಗೆ ಈಗಾಗಲೇ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಶೇ 2 ರಷ್ಟು ಮೀಸಲು ನೀಡಲಾಗಿದೆ. ಉಳಿದ ಇಲಾಖೆಗಳಲ್ಲೂ ಮೀಸಲು ನೀಡಲು ಕಡತ ಸಿದ್ಧಪಡಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಜಮ್ಮು ಕಾಶ್ಮೀರ: ಪಾಕ್ ಉಗ್ರನ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯ ಮೀರ್‌ಬಜಾರ್ ಪ್ರದೇಶದಲ್ಲಿ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ಗುರುವಾರ ರಾತ್ರಿ ನಡೆದ ಗುಂಡಿನ ಚಕಮಕಿಯಲ್ಲಿ ಲಷ್ಕರ್ ಎ ತಯಬಾ(ಎಲ್‌ಇಟಿ) ಭಯೋತ್ಪಾದಕ ಸಂಘಟನೆಗೆ ಸೇರಿದ ಪಾಕಿಸ್ತಾನದ ಉಗ್ರನೊಬ್ಬ ಹತನಾಗಿದ್ದು, ಮತ್ತೊಬ್ಬ ಪರಾರಿಯಾಗಿದ್ದಾನೆ.

ಸ್ವಾತಂತ್ರ್ಯ ದಿನಾಚರಣೆಗೆ ಮೊದಲು ನಡೆದಿರುವ ಗುಂಡಿನ ಚಕಮಕಿಯಲ್ಲಿ ಭದ್ರತಾ ಪಡೆಯ ಇಬ್ಬರು ಯೋಧರು ಮತ್ತು ಕೆಲವು ನಾಗರಿಕರು ಗಾಯಗೊಂಡಿದ್ದಾರೆ. ಹತನಾದ ಉಗ್ರನನ್ನು ಉಸ್ಮಾನ್ ಎಂದು ಗುರುತಿಸಲಾಗಿದೆ. ಈತ ಪಾಕಿಸ್ತಾನದವನಾಗಿದ್ದು, ಎಲ್‌ಇಟಿ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದ ಎಂದು ಕಾಶ್ಮೀರ ಪೊಲೀಸ್ ಮುಖ್ಯಸ್ಥ ವಿಜಯ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಶ್ರೀನಗರ – ಜಮ್ಮು ಹೆದ್ದಾರಿಯಲ್ಲಿ ಗುರುವಾರ ಸಂಜೆ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರ ಮೇಲೆ ಇಬ್ಬರು ಎಲ್‌ಇಟಿ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ನಂತರ ಉಗ್ರರ ಬೆನ್ನುಹತ್ತಿದ ಬಿಎಸ್‌ಎಫ್ ಯೋಧರು, ಅವರನ್ನು ಮೀರ್ ಬಜಾರ್ ಸಮೀಪದ ಕಟ್ಟಡವೊಂದರಲ್ಲಿ ಕೂಡಿ ಹಾಕಿದರು. ಉಗ್ರರು ಮತ್ತು ಭದ್ರತಾ ಪಡೆಯ ನಡುವೆ ಗುಂಡಿನ ಚಕಮಕಿ ನಡೆಯಿತು.

ಘಟನೆಯಲ್ಲಿ ಒಬ್ಬ ಉಗ್ರ ಹತನಾದ. ಮತ್ತೊಬ್ಬ ಪರಾರಿಯಾದ. ಉಗ್ರರನ್ನು ಕೂಡಿ ಹಾಕಿದ್ದ ಕಟ್ಟಡದಿಂದ 12 ಅಂಗಡಿಗಳ ಮಾಲೀಕರು, ಆರು ಮಹಿಳೆಯರು ಮತ್ತು ನಾಲ್ವರು ಕಾರ್ಮಿಕರು ಸೇರಿ 22 ಮಂದಿಯನ್ನು ರಕ್ಷಿಸಿ ಸ್ಥಳಾಂತರಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಉಸ್ಮಾನ್ ಒಬ್ಬ ಆತಂಕಕಾರಿ ಉಗ್ರಗಾಮಿಯಾಗಿದ್ದ. ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ಭದ್ರತಾ ಪಡೆಗಳು, ನಾಗರಿಕರ ಮೇಲೆ ದಾಳಿ ನಡೆಸಿ, ಆತಂಕದ ವಾತಾವರಣ ಸೃಷ್ಟಿಸಿ, ಜನರನ್ನು ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳದಂತೆ ಮಾಡುವುದು ಈತನ ಉದ್ದೇಶವಾಗಿತ್ತು ಎಂದು ಕುಮಾರ್ ಹೇಳಿದರು. 'ಹತ್ಯೆಯಾದ ಉಗ್ರನಿಂದ ಒಂದು ಎಕೆ -47 ರೈಫಲ್, ನಾಲ್ಕು ಮ್ಯಾಗಜಿನ್‌ಗಳು, ಕೆಲವು ಗ್ರೆನೇಡ್‌ಗಳು ಮತ್ತು ಸೆಲ್‌ನೊಂದಿಗೆ ಆರ್‌ಪಿಜಿ ಲಾಂಚರ್ ಅನ್ನು ವಶಪಡಿಸಿಕೊಳ್ಳಲಾಯಿತು' ಎಂದು ಅವರು ಹೇಳಿದರು.

ಡ್ರ್ಯಾಗನ್ ಸ್ವಾತಂತ್ರ್ಯೋತ್ಸವದ ಅಂಗವಾಗಿ ಗರುಡಾ ಮಾಲ್‌ನಲ್ಲಿ ಪ್ರದರ್ಶಿಸಿರುವ ಡ್ರ್ಯಾಗನ್ ಮಾದರಿಗಳು ಜನರ ಗಮನ ಸೆಳೆದವು –ಪ್ರಜಾವಾಣಿ ಚಿತ್ರ

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

For the Quarter ended 30th June, 2021

(₹ in Crores except per share data)

Particulars	Quarter ended 30th June, 2021 (Un-Audited)	Quarter ended 30th June, 2020 (Un-Audited)	Year ended 31st March, 2021 (Audited)
Total income from operations (net)	87.98	256.66	981.23
Net Loss from ordinary activities after tax	(117.28)	(158.87)	(652.10)
Net Loss for the period after tax (after extraordinary items)	(117.28)	(158.87)	(652.10)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			3,504.92
Earnings Per Share (before extraordinary items) (of ₹ 10/- each)			
Basic :	(5.14)	(6.53)	(27.64)
Diluted :	(5.14)	(6.53)	(27.64)
Earnings Per Share (after extraordinary items) (of ₹ 10/- each)			
Basic :	(5.14)	(6.53)	(27.64)
Diluted :	(5.14)	(6.53)	(27.64)

Notes:
1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 12th August, 2021 and have been subjected to 'Limited review' by the Statutory Auditors of the Company.
3. **Un-Audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 30th June, 2021 (Un-Audited)	Quarter ended 30th June, 2020 (Un-Audited)	Year ended 31st March, 2021 (Audited)
Total income from operations (net)	0.93	0.05	10.18
Loss before tax and exceptional items	(19.81)	(17.77)	(117.50)
Profit/ (Loss) after tax and exceptional items	(19.81)	(17.77)	(102.78)

Place : Bengaluru
Date : 12.08.2021

For and Behalf of Board of Directors
S.V Ranganath
Interim Chairman and Independent Director

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಎಂಸಿಇಸಿಎಚ್‌ಎಸ್ ಬಡಾವಣೆಯಲ್ಲಿ ₹70 ಲಕ್ಷ ವೆಚ್ಚದಲ್ಲಿ ಅಳವಡಿಸಿರುವ ಕಾವೇರಿ ಪೈಪ್‌ಲೈನ್ ಮೂಲಕ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸುವ ಸೌಲಭ್ಯಕ್ಕೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಈ ಹಿಂದೆ ಅಳವಡಿಸಿದ್ದ ಕೊಳವೆ ಮಾರ್ಗದ ಗಾತ್ರ ಕಡಿಮೆಯಿದ್ದ ಕಾರಣ ನೀರುಪೂರೈಕೆ ಸಾಮರ್ಥ್ಯ ಕಡಿಮೆಯಿತ್ತು. ಈಗ ಅದನ್ನು ಬದಲಿಸಿ, ಕೊಳವೆಮಾರ್ಗದ ಗಾತ್ರ ಹೆಚ್ಚಿಸಿ ಜನಸಂಖ್ಯೆಗನುಗುಣವಾಗಿ ನೀರಿನ ಪೂರೈಕೆ ಹೆಚ್ಚಿಸಲಾಗಿದೆ. ಇದರಿಂದ ಬಾಲಾಜಿ ಕೃಪ, ಎಂಸಿಇಸಿಎಚ್‌ಎಸ್, ವಿನ್ ಫೀಲ್ಡ್ ಗಾರ್ಡನ್, ಸೂರ್ಯೋದಯ ಹಾಗೂ ಸೆಂಟ್ರಲ್ ಎಕ್ಸೈಜ್ ಮತ್ತಿತರ ಬಡಾವಣೆಗಳ ನಾಗರಿಕರಿಗೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

ಚಾಲನೆ: ಸೂರ್ಯೋದಯ ಬಡಾವಣೆಯಲ್ಲಿ ₹70 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಅಡ್ಡರಸ್ತೆಗಳ ಮತ್ತು ₹3 ಕೋಟಿ ವೆಚ್ಚದಲ್ಲಿ ಕಟ್ಟಿಗೇನಹಳ್ಳಿ ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ಕಾಂಗ್ರೆಸ್ ಮುಖಂಡರಾದ ಟಿ.ವೆಂಕಟರಾಮರೆಡ್ಡಿ, ಎಚ್.ಎ. ಶಿವಕುಮಾರ್, ರಾಜಣ್ಣ, ಚನ್ನಕೇಶವ, ಮುರಳಿ, ವಿಶ್ವ, ಗೋವಿಂದರಾಜು, ರಮೇಶ್, ಸೂರ್ಯೋದಯ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಸಿ.ಪಾಟೀಲ್ ಇದ್ದರು.

ಸೂರ್ಯೋದಯ ಬಡಾವಣೆಯಲ್ಲಿ ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಟಿ.ವೆಂಕಟರಾಮ ರೆಡ್ಡಿ, ಎಚ್.ಎ.ಶಿವಕುಮಾರ್, ರಾಜಣ್ಣ, ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಸಿ.ಪಾಟೀಲ್ ಇತರರು ಇದ್ದರು.

ಮಹಾರಾಷ್ಟ್ರದಲ್ಲಿ ವರದಿಯಾದ ಎರಡನೇ ಸಾವು

ಮುಂಬೈಗೆ 'ಡೆಲ್ಟಾ ಪ್ಲಸ್' ಸಂಕಟ

ಮುಂಬೈ (ಪಿಟಿಐ): ಕೊರೊನಾದ ರೂಪಾಂತರ ತಳಿಯಾದ ಡೆಲ್ಟಾ ಪ್ಲಸ್ ವೈರಾಣುವಿನಿಂದ, ಮುಂಬೈನಲ್ಲಿ 63 ವರ್ಷದ ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ.

ಇದು ಮುಂಬೈನಲ್ಲಿ ಡೆಲ್ಟಾ ಪ್ಲಸ್‌ನಿಂದ ಸಂಭವಿಸಿದ ಮೊದಲ ಸಾವಿನ ಪ್ರಕರಣವಾಗಿದ್ದು, ಮಹಾರಾಷ್ಟ್ರದಲ್ಲಿ ವರದಿಯಾದ ಎರಡನೇ ಸಾವಿನ ಪ್ರಕರಣ. ಇದುವರೆಗೆ ರಾಜ್ಯದಲ್ಲಿ ಒಟ್ಟು 65 ಡೆಲ್ಟಾ ಪ್ರಕರಣಗಳು ವರದಿಯಾಗಿವೆ.

ಲಸಿಕೆಯ ಒಂದು ಡೋಸ್ ಕೂಡ ಪಡೆಯದಿದ್ದ, 80 ವರ್ಷದ ಮಹಿಳೆಯೊಬ್ಬರು ಜೂನ್ 13ರಂದು ಮಹಾರಾಷ್ಟ್ರದ ರತ್ನಾಗಿರಿಯಲ್ಲಿ ಮೃತಪಟ್ಟಿದ್ದರು. ಅದು, ರಾಜ್ಯದಲ್ಲಿ ಡೆಲ್ಟಾ ಪ್ಲಸ್‌ನ ಮೊದಲ ಪ್ರಕರಣವಾಗಿತ್ತು.

ಮುಂಬೈನಲ್ಲಿ ಮೃತಪಟ್ಟ ಮಹಿಳೆಯು, ಕೋವಿಡ್–19 ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದಿದ್ದರು. ಅವರಿಗೆ, ಯಾವುದೇ ಪ್ರಯಾಣ ಹಿನ್ನೆಲೆ ಇರಲಿಲ್ಲ ಎಂದು ತಿಳಿದುಬಂದಿದೆ.

ಅವರ ಸಂಪರ್ಕಕ್ಕೆ ಬಂದಿದ್ದ, ಮುಂಬೈನವರೇ ಆದ ಆರು ಜನರಲ್ಲಿ ಕೊರೊನಾ ವೈರಸ್ ಪತ್ತೆಯಾಗಿದೆ. ಆರೂ ಜನರ ಜಿನೋಮ್ ಸ್ವೀಕ್ವೆನ್ಸ್ ಪರೀಕ್ಷೆ ನಡೆದಿದ್ದು, ಆ ಪೈಕಿ ಇಬ್ಬರಲ್ಲಿ ಡೆಲ್ಟಾ ಪ್ಲಸ್ ಸೋಂಕು ಇರುವುದು ತಿಳಿದುಬಂದಿದೆ. ಇನ್ನಿಬ್ಬರ ಪರೀಕ್ಷಾ ವರದಿ ಬರಬೇಕಿದೆ.

ಮುಂಬೈನ ಘಾಟ್‌ಕೋಪರ್‌ನ ಈ ಮಹಿಳೆಯು ಆಸ್ಪತ್ರೆಯೊಂದರ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಯ ಭಾಗವಾಗಿ ಅವರಿಗೆ ಸ್ಟಿರಾಯ್ಡ್ ಹಾಗೂ ರೆಮ್‌ಡೆಸಿವಿರ್ ನೀಡಲಾಗಿತ್ತು. ಜುಲೈ 27ರಂದು ಮೃತಪಟ್ಟಿದ್ದ ವೃದ್ಧೆಯ ಜಿನೋಮ್ ಸೀಕ್ವೆನ್ಸಿಂಗ್ ವರದಿಯು ಆಗಸ್ಟ್ 11ರಂದು ಬಂದಿದೆ. ಆ ನಂತರವಷ್ಟೇ, ಮಹಿಳೆಯು ಡೆಲ್ಟಾ ಪ್ಲಸ್ ವೈರಸ್ ಸೋಂಕಿಗೆ ಒಳಗಾಗಿದ್ದರು ಎಂಬುದು ತಿಳಿದುಬಂದಿದೆ ಎಂದು ಬೃಹನ್‌ಮುಂಬೈ ಮಹಾನಗರ ಪಾಲಿಕೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದಲ್ಲಿ, ಡೆಲ್ಟಾ ಪ್ಲಸ್ ವೈರಾಣು ಸೋಂಕಿನ 20 ಪ್ರಕರಣಗಳು ಬುಧವಾರ ಒಂದೇ ದಿನ ವರದಿಯಾಗಿದೆ.

ಮಹಿಳೆಯರಿಗೆ ಲಸಿಕೆ: ರಾಜ್ಯಗಳಿಗೆ ಪತ್ರ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆ ಪಡೆಯುವುದರಲ್ಲಿ ಮಹಿಳೆಯರು ಹಿಂದೆ ಇದ್ದಾರೆ ಎಂದು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಕಳವಳ ವ್ಯಕ್ತಪಡಿಸಿದೆ. ಲಸಿಕೆ ಅಭಿಯಾನದಲ್ಲಿ ಮಹಿಳೆಯರು ಹಿಂದೆ ಬೀಳುವುದನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ಪತ್ರ ಬರೆದಿದೆ.

ಮಹಿಳೆಯರು ಲಸಿಕೆ ಪಡೆಯುವುದರಲ್ಲಿ ಹಿಂದಿರುವ ಕುರಿತು ಮಾಧ್ಯಮವೊಂದು ಮಾಡಿದ್ದ ವರದಿಯನ್ನು ಉಲ್ಲೇಖಿಸಿ ಪತ್ರ ಬರೆದಿರುವ ಎನ್‌ಸಿಡಬ್ಲ್ಯು, 'ಮನೆಯಿಂದ ಹೊರಗಡೆ ಹೋಗಿ ದುಡಿಯದ ಮಹಿಳೆಯ ಆರೋಗ್ಯವನ್ನು ಆದ್ಯತೆಯ ವಿಷಯವಾಗಿ ಹಲವಾರು ಕುಟುಂಬಗಳು ಪರಿಗಣಿಸುವುದಿಲ್ಲ. ಆದ್ದರಿಂದ, ಮನೆಯಲ್ಲೇ ಇರುವ ಮಹಿಳೆಯರ ಲಸಿಕೆ ವಿಚಾರ ಪ್ರಾಮುಖ್ಯ ಪಡೆದಿಲ್ಲ. ಸೋಂಕಿಗೆ ಒಳಗಾದ ಕುಟುಂಬದ ಸದಸ್ಯನನ್ನು ಆರೈಕೆ ಮಾಡುವ ವೇಳೆ ಮಹಿಳೆಯರು ಸೋಂಕಿಗೆ ಒಳಗಾಗುವ ಅಪಾಯವಿರುತ್ತದೆ. ಆದ್ದರಿಂದ ಲಸಿಕೆ ತೆಗೆದುಕೊಳ್ಳುವುದು ಅತ್ಯಗತ್ಯ' ಎಂದಿದೆ.

ಸಮಾಜದಲ್ಲಿರುವ ಲಿಂಗ ತಾರತಮ್ಯವೇ ಲಸಿಕೆ ಅಭಿಯಾನದಲ್ಲಿ ಮಹಿಳೆಯರು ಹಿಂದೆ ಬೀಳಲು ಕಾರಣ. ಜೊತೆಗೆ, ಸಂಪನ್ಮೂಲಗಳ ಮತ್ತು ತಂತ್ರಜ್ಞಾನದ ಲಭ್ಯತೆಯಲ್ಲಿರುವ ತಾರತಮ್ಯವೂ ಇದಕ್ಕೆ ಕಾರಣ ಎಂದು ಎನ್‌ಸಿಡಬ್ಲ್ಯು ಹೇಳಿದೆ.

'ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಚಿಂತನೆ ಸದ್ಯಕ್ಕೆ ಇಲ್ಲ. ಈ ಬಗ್ಗೆ ಊಹಾಪೋಹಗಳನ್ನು ರೈತರು ನಂಬಬಾರದು ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದರು.

ಶುಕ್ರವಾರ ತಮ್ಮ ಕಚೇರಿಯ ಪೂಜೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. 'ಕೃಷಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಇಲಾಖೆಯ ಆಳ ಮತ್ತು ಅಗಲ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಇಲಾಖೆಯನ್ನು ಜನಸ್ನೇಹಿಯಾಗಿಸುವುದು ನನ್ನ ಮುಂದಿರುವ ಸವಾಲು' ಎಂದೂ ಅವರು ಹೇಳಿದರು.

'ಈ ಇಲಾಖೆಯಲ್ಲಿ ಲೈನ್‌ಮನ್‌ಗಳಿಂದ ಹಿಡಿದು ವ್ಯವಸ್ಥಾಪಕ ನಿರ್ದೇಶಕರವರೆಗೆ ಇದ್ದಾರೆ. ಎಲ್ಲ ಹಂತಗಳಲ್ಲಿ ಸುಧಾರಣೆ ತಂದು, ಇಲಾಖೆಯನ್ನು ಕ್ರಿಯಾಶೀಲವಾಗಿಸುವ ಬಗ್ಗೆ ಆಲೋಚನೆ ನಡೆಸಿದ್ದೇನೆ' ಎಂದು ಸುನಿಲ್ ತಿಳಿಸಿದರು.

ರಾಜಕೀಯ ವ್ಯಕ್ತಿಗಳ ಹೆಸರೇಕೆ?: ಕ್ಯಾಂಟೀನ್‌ಗಳಿಗೆ ರಾಜಕೀಯ ವ್ಯಕ್ತಿಗಳ ಹೆಸರೇಕೆ? ಅದಕ್ಕೆ ಯಾರ ಹೆಸರು ಇಡಬೇಕು ಅಥವಾ ಬಿಡಬೇಕು ಎಂಬುದರ ಚರ್ಚೆ ಆಗಲಿ. ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಬೇಕು ಎಂಬುದು ಸಾರ್ವಜನಿಕರ ಒತ್ತಾಯ ವಾಗಿದೆ ಎಂದು ಅವರು ಹೇಳಿದರು.

ಅನ್ನಪೂರ್ಣೇಶ್ವರಿ ಹೆಸರು ಇಟ್ಟರೆ ಬೇರೆ ಪಕ್ಷದವರು ವಿರೋಧ ಏಕೆ ಮಾಡಬೇಕು. ಸರ್ಕಾರಕ್ಕೆ ಹೆಸರು ಬದಲಿಸಬೇಕು ಎಂಬ ಉದ್ದೇಶವಿಲ್ಲ. ಬದಲಿಸಬೇಕು ಎಂಬುದು ಜನರ ಅಭಿಪ್ರಾಯ. ಹಿಂದೆ ವಾಜಪೇಯಿ ಅವರ ಅವಧಿ ಸುವರ್ಣ ಚತುಷ್ಪಥ ರಸ್ತೆಗೆ ವಾಜಪೇಯಿ ಅವರ ಹೆಸರು ಇಡಲಾಗಿತ್ತು. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣವೇ ರಸ್ತೆಗಳಲ್ಲಿದ್ದ ಬೋರ್ಡ್‌ಗಳನ್ನೇ ಕಿತ್ತು ಹಾಕಿಸಿತು. ಇದು ಇವರ ಸಂಸ್ಕೃತಿ. ಆದ್ದರಿಂದ ಕಾಂಗ್ರೆಸ್‌ನವರಿಂದ ನಾವು ಸಂಸ್ಕೃತಿ ಕಲಿಯಬೇಕಿಲ್ಲ ಎಂದು ಸುನಿಲ್ ಹೇಳಿದರು.

'ತಪ್ಪು ಆಗಿದ್ದರೆ ತನಿಖೆ'

'ಸೌರ ವಿದ್ಯುತ್ ಯೋಜನೆಗಳಲ್ಲಿ ಈ ಹಿಂದೆ ನಡೆದಿರುವ ಹಗರಣದ ತನಿಖೆ ನಡೆಸಬೇಕು ಎಂದು ವಿಧಾನಸಭೆ ಕಲಾಪದಲ್ಲಿ ಒತ್ತಾಯ ಮಾಡಿದ್ದಕ್ಕೆ ಈಗಲೂ ಬದ್ಧನಾಗಿದ್ದೇನೆ' ಎಂದು ಸುನಿಲ್ ತಿಳಿಸಿದರು.

'ಇಲಾಖೆಯಲ್ಲಿ ಈ ಹಿಂದೆ ಯಾವುದಾದರೂ ತಪ್ಪುಗಳು ಆಗಿದ್ದರೆ, ಅದನ್ನು ಸರಿಪಡಿಸುವ ಮತ್ತು ಸುಧಾರಣೆ ಮಾಡುವುದು ನಮ್ಮ ಮೊದಲ ಆದ್ಯತೆಯಾಗಿದೆ. ಅಧಿಕಾರಿಗಳ ಸಭೆ ನಡೆಸಿ ಸಮಗ್ರ ಮಾಹಿತಿ ಪಡೆಯುತ್ತೇನೆ. ಪ್ರಮಾದಗಳು ಆಗಿದ್ದರೆ ತನಿಖೆ ನಡೆಸಲಾಗುವುದು' ಎಂದು ಅವರು ಹೇಳಿದರು.

ಗೋಹತ್ಯೆ ನಿಯಂತ್ರಣ ಮಸೂದೆಗೆ ಅಸ್ಸಾಂ ವಿಧಾನಸಭೆ ಅಸ್ತು

ಗುವಾಹಟಿ (ಪಿಟಿಐ): ಜಾನುವಾರುಗಳ ಹತ್ಯೆ, ಸಾಗಣೆ ಮತ್ತು ಸೇವಿಸುವುದನ್ನು ನಿಯಂತ್ರಿಸುವ ಮಸೂದೆಗೆ ಅಸ್ಸಾಂ ವಿಧಾನಸಭೆ ಶುಕ್ರವಾರ ಅನುಮೋದನೆ ನೀಡಿದೆ.

ವಿರೋಧ ಪಕ್ಷಗಳ ಸಭಾತ್ಯಾಗದ ನಡುವೆ 'ಅಸ್ಸಾಂ ಜಾನುವಾರು ಸಂರಕ್ಷಣಾ ಕಾಯ್ದೆ 2021' ಮಸೂದೆಯನ್ನು ಅಂಗೀಕರಿಸಲಾಯಿತು. ಈ ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕು ಎನ್ನುವ ವಿರೋಧ ಪಕ್ಷಗಳ ಒತ್ತಾಯವನ್ನು ಸರ್ಕಾರ ತಿರಸ್ಕರಿಸಿತು.

ಮಸೂದೆ ಅಂಗೀಕಾರವಾಗಿದೆ ಎಂದು ಸ್ಪೀಕರ್ ಪ್ರಕಟಿಸುತ್ತಿದ್ದಂತೆ ಆಡಳಿತಾರೂಢ ಬಿಜೆಪಿ ಸದಸ್ಯರು 'ಭಾರತ ಮಾತಾ ಕಿ ಜೈ' ಮತ್ತು 'ಜೈ ಶ್ರೀ ರಾಮ' ಎಂದು ಘೋಷಣೆ ಹಾಕಿದರು.

ಹಿಂದೂ, ಜೈನರು, ಸಿಖ್ಖರು ಮತ್ತು ಗೋಮಾಂಸ ಸೇವಿಸದ ಇತರೆ ಸಮುದಾಯದವರು ಪ್ರಾಬಲ್ಯ ಹೊಂದಿರುವ ಪ್ರದೇಶಗಳಲ್ಲಿ ಜಾನುವಾರು ಹತ್ಯೆಗೆ ಅನುಮತಿ ನೀಡಬಾರದು ಎಂದು ಮಸೂದೆಯಲ್ಲಿ ತಿಳಿಸಲಾಗಿದೆ.

ಶನಿವಾರ • ಆಗಸ್ಟ್ 14, 2021 ಪ್ರಜಾವಾಣಿ

ಶಾಸಕ ಸತೀಶ್ ರೆಡ್ಡಿ ಕಾರುಗಳಿಗೆ ಬೆಂಕಿ ಹಚ್ಚಿದ್ದ ಪ್ರಕರಣ • ಮೂವರನ್ನು ಬಂಧಿಸಿದ ಪೊಲೀಸರು

‘ಭೇಟಿಗೆ ಅವಕಾಶ ಸಿಗದಿದ್ದಕ್ಕೆ ಕಾರಿಗೆ ಬೆಂಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ.ಸತೀಶ್ ರೆಡ್ಡಿ ಅವರ ಕಾರುಗಳಿಗೆ ಬೆಂಕಿ ಹಚ್ಚಿದ್ದ ಪ್ರಕರಣ ಭೇದಿಸಿರುವ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಗಾರ್ವೆಬಾವಿಪಾಳ್ಯದ ನಿವಾಸಿ ಸಾಗರ್ (19), ಬೇಗೂರಿನ ಶ್ರೀಧರ್ (20) ಹಾಗೂ ನವೀನ್ ಅಲಿಯಾಸ್ ಕಾಳಪ್ಪ (22) ಬಂಧಿತರು. ಬುಧವಾರ (ಆ. 11) ತಡರಾತ್ರಿ ಸತೀಶ್ ರೆಡ್ಡಿ ಅವರ ಮನೆ ಆವರಣಕ್ಕೆ ನುಗ್ಗಿದ್ದ ಆರೋಪಿಗಳು, ಕಾರುಗಳಿಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದರು. ಸುಳಿವು ಪತ್ತೆ ಮಾಡಿ ಶುಕ್ರವಾರ ಸಂಜೆ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

‘ಆರೋಪಿಗಳ ಬಂಧನಕ್ಕೆ ಐದು ತಂಡಗಳನ್ನು ರಚಿಸಲಾಗಿತ್ತು. ಪುರಾವೆ ಸಮೇತ ಆರೋಪಿಗಳನ್ನು ಬಂಧಿಸುವಲ್ಲಿ ತಂಡಗಳು ಯಶಸ್ವಿಯಾಗಿವೆ. ತನಿಖಾ ತಂಡಗಳಿಗೆ ₹ 1 ಲಕ್ಷ ಬಹುಮಾನ ಘೋಷಿಸಲಾಗಿದೆ’ ಎಂದೂ ತಿಳಿಸಿದರು.

ಸಮಸ್ಯೆ ಹೇಳಲು ಸಿಗದ ಅವಕಾಶ: ‘ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಿವಾಸಿಗಳಾದ ಆರೋಪಿಗಳು, ತಮ್ಮ ಸಮಸ್ಯೆಗಳನ್ನು ಶಾಸಕರಿಗೆ ಹೇಳಿಕೊಳ್ಳಲು ಹಲವು ಬಾರಿ ಮನೆಗೆ ಬಂದು ಹೋಗಿದ್ದರು. ಆದರೆ, ಅವರಿಗೆ ಒಮ್ಮೆಯೂ ಶಾಸಕರ ಭೇಟಿಗೆ ಅವಕಾಶ ಸಿಕ್ಕಿರಲಿಲ್ಲ. ಇದರಿಂದ ಸಿಟ್ಟಾಗಿದ್ದ ಅವರು ಶಾಸಕರ ಮನೆ ಆವರಣಕ್ಕೆ ನುಗ್ಗಿ ಕೃತ್ಯ ಎಸಗಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಾಸಕ ಸತೀಶ್ ರೆಡ್ಡಿ ಶ್ರೀಮಂತರು. ನಮ್ಮಂಥ ಬಡವರ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ನಮ್ಮ ಸಮಸ್ಯೆಗಳನ್ನೂ ಆಲಿಸಲು ಅವರ ಬಳಿ ಸಮಯವಿಲ್ಲ. ಮನೆ ಬಳಿ ಹೋದರೂ ಅವರನ್ನು ಭೇಟಿಯಾಗಲು ಅವಕಾಶ ಸಿಗಲಿಲ್ಲ. ಇದರಿಂದ ಸಿಟ್ಟಾಗಿ, ಅವರ ಕಾರುಗಳಿಗೆ ಬೆಂಕಿ ಹಚ್ಚಿದೆವು’ ಎಂಬುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಕದ್ದ ಬೈಕ್ ನೀಡಿದ ಸುಳಿವು: ‘ಕಾರುಗಳಿಗೆ ಬೆಂಕಿ ಹಚ್ಚಲು ಸಂಚು ರೂಪಿಸಿದ್ದ ಆರೋಪಿಗಳು, ಶಾಸಕ ಸತೀಶ್ ರೆಡ್ಡಿ ಮನೆ ಬಳಿ ಹಲವು ಬಾರಿ ಸುತ್ತಾಡಿದ್ದರು. ಸಮೀಪದಲ್ಲೇ ಇದ್ದ ಬಂಕ್‌ನಲ್ಲಿ ತಮ್ಮ ಬೈಕ್‌ಗಳಿಗೆ ಪೆಟ್ರೋಲ್ ಹಾಕಿಸಿಕೊಂಡಿದ್ದರು. ಅದೇ ಪೆಟ್ರೋಲ್ ಬಾಟಲಿಗೆ ತುಂಬಿಕೊಂಡು ಕಾರುಗಳ ಮೇಲೆ ಸುರಿದು ಬೆಂಕಿ ಹಚ್ಚಿದ್ದರು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಕೃತ್ಯ ಎಸಗಿ ಪರಾರಿಯಾಗುವ ವೇಳೆ ಆರೋಪಿಗಳು, ಸ್ಥಳೀಯರೊಬ್ಬರ ಬೈಕ್ ಕದ್ದುಕೊಂಡು ಹೋಗಿದ್ದರು. ಅದರ ದೃಶ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದೇ ಬೈಕ್ ನೀಡಿದ್ದ ಸುಳಿವಿನಿಂದ ಆರೋಪಿಗಳು ಸಿಕ್ಕಿಬಿದ್ದರು. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದೂ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

‘ಸುಳಿವು ಸಿಗದಿರಲು ಕಸರತ್ತು’

‘ಆರೋಪಿಗಳು ತಮ್ಮ ಸುಳಿವು ಪೊಲೀಸರಿಗೆ ಸಿಗಬಾರದೆಂದು ನಾನಾ ಕಸರತ್ತು ಮಾಡಿದ್ದರು. ಚಪ್ಪಲಿ, ಬಟ್ಟೆಗಳನ್ನು ಹಲವು ಬಾರಿ ಬದಲಾಯಿಸಿದ್ದರು. ಕೊನೆಯಲ್ಲಿ ಬೈಕ್ ಕದ್ದುಕೊಂಡು ಅದರಲ್ಲೇ ಪರಾರಿಯಾಗಿದ್ದರು’ ಎಂದೂ ಮೂಲಗಳು ಹೇಳಿವೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಗಾಂಜಾ ತರಿಸಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಠಾಣೆಯ ವ್ಯಾಪ್ತಿಯಲ್ಲಿ 9 ಕೆ.ಜಿ 90 ಗ್ರಾಂ ಗಾಂಜಾ ಜಪ್ತಿ ಮಾಡಿದ್ದ ಪೊಲೀಸರು, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಗಾಂಜಾ ತರಿಸಿ ನಗರದಲ್ಲಿ ಮಾರಾಟ ಮಾಡುತ್ತಿದ್ದ ಸಂಗತಿಯನ್ನು ಪತ್ತೆ ಮಾಡಿದ್ದಾರೆ.

‘ಆಗಸ್ಟ್ 11ರಂದು ಕಾರ್ಯಾಚರಣೆ ನಡೆಸಲಾಗಿತ್ತು. ಬಿಎಂಟಿಸಿ ನೌಕರರಾದ ವಿಠ್ಠಲ್ ಭಜಂತ್ರಿ ಹಾಗೂ ಶರಣಬಸಪ್ಪ ಎಂಬುವರನ್ನು ಬಂಧಿಸಲಾಗಿದೆ. ವಿಜಯಪುರದ ಅವರಿಬ್ಬರು, ನಗರದಲ್ಲಿ ಚಾಲಕ ಹಾಗೂ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ವಿಜಯಪುರದ ಪರಿಚಯಸ್ಥರ ಮೂಲಕ ಆರೋಪಿಗಳು ಗಾಂಜಾ ಖರೀದಿಸುತ್ತಿದ್ದರು. ಗಾಂಜಾವನ್ನು ಬಟ್ಟೆ ಚೀಲದಲ್ಲಿ ಕಟ್ಟಿ, ಅದನ್ನೇ ಕೆಎಸ್‌ಆರ್‌ಟಿಸಿ ಬಸ್‌ಗಳ ಮೂಲಕ ನಗರಕ್ಕೆ ತರಿಸುತ್ತಿದ್ದರು. ಪೊಟ್ಟಣದಲ್ಲಿ ಏನಿದೆ ಎಂಬುದು ಕೆಎಸ್‌ಆರ್‌ಟಿಸಿ ಚಾಲಕರಿಗೆ ಗೊತ್ತಾಗುತ್ತಿರಲಿಲ್ಲ. ಊಟ ಹಾಗೂ ಇತರೆ ಸಾಮಗ್ರಿ ಇರುವುದಾಗಿ ಆರೋಪಿಗಳು ಸುಳ್ಳು ಹೇಳುತ್ತಿದ್ದರು.’

‘ಕೆಂಗೇರಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಆರೋಪಿಗಳು ಗಾಂಜಾ ಮಾರುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಅವರನ್ನು ಬಂಧಿಸಲಾಗಿದೆ’ ಎಂದೂ ಪೊಲೀಸರು ತಿಳಿಸಿದರು.

ಪಂಜಾಬ್ ಮೂಲದ ದಂಪತಿ ಆರೋಪಿಗಳು– ದಾಖಲೆಗಳ ಜಪ್ತಿ

ನಕಲಿ ಅಂಕಪಟ್ಟಿ ಜಾಲ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರತಿಷ್ಠಿತ ವಿಶ್ವ-ವಿದ್ಯಾಲಯಗಳ ಹೆಸರಿನಲ್ಲಿ ನಕಲಿ ಅಂಕಪಟ್ಟಿ ತಯಾರಿಸಿ ಮಾರುತ್ತಿದ್ದ ಆರೋಪದಡಿ ದಂಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಪಂಜಾಬ್‌ನ ಮುಖೇಶ್ ಹಾಗೂ ಪತ್ನಿ ರೋಹಿ ಬಂಧಿತರು. ಅವರಿಂದ ನಕಲಿ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಹಾಗೂ ಸ್ಥಿರಾಸ್ತಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ ದಂಪತಿ, ಪೀಣ್ಯ ಬಳಿ ಶೈಕ್ಷಣಿಕ ಸಂಸ್ಥೆಯೊಂದನ್ನು ತೆರೆದಿದ್ದರು. ಐಟಿಐ ಹಾಗೂ ಇತರೆ ಕೋರ್ಸ್‌ಗಳಿಗೆ ತರಬೇತಿ ನೀಡುವುದಾಗಿ ಹೇಳುತ್ತಿದ್ದರು. ಸಂಸ್ಥೆ ಹೆಸರಿನಲ್ಲಿ ನಕಲಿ ಅಂಕಪಟ್ಟಿ ದಂಧೆ ನಡೆಸುತ್ತಿದ್ದರು’ ಎಂದೂ ತಿಳಿಸಿದರು.

‘ಪಿಯುಸಿ ಉತ್ತೀರ್ಣರಾದ ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ಪರೀಕ್ಷೆ ಬರೆಯದೇ ಅಂಕಪಟ್ಟಿ ನೀಡುವುದಾಗಿ ಹೇಳುತ್ತಿದ್ದರು. ಸಾವಿರದಿಂದ ಲಕ್ಷಾಂತರ ರೂಪಾಯಿ ಪಡೆದು ನಕಲಿ ಅಂಕಪಟ್ಟಿ ಮಾರುತ್ತಿದ್ದರು.’

‘ಪ್ರತಿಷ್ಠಿತ ವಿಶ್ವವಿದ್ಯಾಲಯ-ಗಳ ಹೆಸರಿನಲ್ಲಿ ಬಿ.ಟೆಕ್, ಎಂ.ಟೆಕ್, ಎಂ.ಬಿ.ಎ, ಬಿ.ಕಾಂ ಹಾಗೂ ಇತರೆ ಕೋರ್ಸ್‌ಗಳ ನಕಲಿ ಅಂಕಪಟ್ಟಿಗಳನ್ನು ಆರೋಪಿಗಳು ಮಾರಿದ್ದಾರೆ. ರಾಜ್ಯ ಹಾಗೂ ಹೊರ ರಾಜ್ಯದ 500ಕ್ಕೂ ಹೆಚ್ಚು ಮಂದಿ ಅಂಕಪಟ್ಟಿ ಖರೀದಿಸಿದ್ದಾರೆ. ಅದೇ ಅಂಕಪಟ್ಟಿ ಬಳಸಿ ಹಲವರು ಖಾಸಗಿ ಹಾಗೂ ಸರ್ಕಾರಿ ಕೆಲಸ ಗಿಟ್ಟಿ-ಸಿಕೊಂಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ಹೇಳಿದರು.

ಮನೆ, ಕಚೇರಿ ಮೇಲೆ ದಾಳಿ: ‘ಆರೋಪಿಗಳ ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ಮಾಡಲಾಯಿತು. ನಕಲಿ ಅಂಕಪಟ್ಟಿಗಳೂ ಪತ್ತೆಯಾದವು. ದಂಪತಿಯನ್ನು ಬಂಧಿಸಲಾಗಿದ್ದು, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಬೇಕಿದೆ’ ಎಂದೂ ಪೊಲೀಸರು ತಿಳಿಸಿದರು.

‘ಸಿ.ವಿ. ರಾಮನ್ ವಿಶ್ವವಿದ್ಯಾಲಯ, ರವೀಂದ್ರನಾಥ್ ಠಾಗೋರ್ ವಿಶ್ವವಿ-ದ್ಯಾಲಯ, ಅಸೆಟ್ ವಿಶ್ವವಿದ್ಯಾಲಯ ಸೇರಿ ಹಲವು ವಿಶ್ವವಿದ್ಯಾಲಯಗಳ ನಕಲಿ ಅಂಕಪಟ್ಟಿಗಳು ಆರೋಪಿಗಳ ಬಳಿ ಸಿಕ್ಕಿವೆ. ಈ ಬಗ್ಗೆ ವಿಶ್ವವಿದ್ಯಾಲ-ಯದ ಆಡಳಿತ ಮಂಡಳಿಗೂ ಮಾಹಿತಿ ನೀಡಲಾಗುವುದು’ ಎಂದೂ ಹೇಳಿದರು.

'ನಕಲಿ ಅಂಕಪಟ್ಟಿ ತಯಾರಿಕೆಯಲ್ಲಿ ಆರೋಪಿಗಳ ಜೊತೆ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದು-ವರಿಸಲಾಗಿದೆ’ ಎಂದೂ ಪೊಲೀಸರು ತಿಳಿಸಿದರು.

ಕೆಲಸಕ್ಕಿದ್ದ ಮನೆಯಲ್ಲಿ ಕಳವು: ಸೆರೆ

ಪ್ರಜಾವಾಣಿ ವಾರ್ತೆ

ಪೊಲೀಸರು ಜಪ್ತಿ ಮಾಡಿರುವ ಚಿನ್ನಾಭರಣ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಪುಷ್ಪಾ ಎಂಬುವರನ್ನು ಆರ್.ಎಂ.ಸಿ ಯಾರ್ಡ್ ಪೊಲೀಸರು ಬಂಧಿಸಿದ್ದು, ಅವರಿಂದ ₹ 18 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

‘ಆರೋಪಿ ಪುಷ್ಪಾ, ಯಶವಂತಪುರದ ಗೋಲ್ಡನ್ ಗ್ರಾಂಡ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ-ರುವ ವೆಂಕಟೇಶ್ ಪ್ರಭು ಎಂಬುವರ ಫ್ಲ್ಯಾಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಮಾಲೀಕ ನೀಡಿದ್ದ ದೂರು ಆಧರಿಸಿ ಅರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘2021ರ ಜೂನ್ 1ರಂದು ಪುಷ್ಪಾ ಕೆಲಸಕ್ಕೆ ಸೇರಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಒಂದೊಂದೇ ಚಿನ್ನಾಭರಣ ಕದ್ದಿದ್ದರು. ಇತ್ತೀಚೆಗೆ ಕೆಲಸಕ್ಕೆ ಬರುವುದನ್ನೇ ನಿಲ್ಲಿಸಿದ್ದರು. ಆಭರ-ಣಗಳನ್ನು ಬ್ಯಾಂಕ್ ಲಾಕರ್‌ನಲ್ಲಿಡಲು ಯೋಚಿಸಿದ್ದ ಮಾಲೀಕ, ಮನೆಯಲ್ಲಿ ಹುಡುಕಾಡಿದ್ದರು. ಆಭರಣ ಸಿಕ್ಕಿರಲಿಲ್ಲ. ಪುಷ್ಪಾ ಸಹ ಕೆಲಸಕ್ಕೆ ಬಾರದಿದ್ದರಿಂದ, ಅವರ ಮೇಲೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು’ ಎಂದೂ ತಿಳಿಸಿವೆ.

‘ಪುಷ್ಪಾ ಅವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ-ರು. ಮತ್ತಿಕೆರೆಯಲ್ಲಿರುವ ಅವರ ಬಾಡಿಗೆ ಮನೆಯಲ್ಲೇ ಚಿನ್ನಾಭರಣ ಪತ್ತೆಯಾದವು’ ಎಂದೂ ಮೂಲಗಳು ಹೇಳಿವೆ.

ಸಂಸಾರ ನಿರ್ವಹಣೆಗಾಗಿ ಕೃತ್ಯ: ‘ಆಂಧ್ರಪ್ರದೇಶ ಚಿತ್ತೂರಿನ ಪುಷ್ಪಾ, ಕೆಲಸ ಅರಸಿ ನಗರಕ್ಕೆ ಬಂದಿದ್ದರು. ಸಂಸಾರ ನಿರ್ವಹಣೆ ಕಷ್ಟವಾಗಿತ್ತು. ಅದೇ ಕಾರಣಕ್ಕೆ ಕೆಲಸಕ್ಕಿದ್ದ ಮನೆಯಲ್ಲೇ ಕಳ್ಳತನ ಮಾಡಿದ್ದರು. ಈ ಬಗ್ಗೆ ಆರೋಪಿ ಹೇಳಿಕೆ ನೀಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ನಕಲಿ ಕೀ ಬಳಸಿ ಮನೆಗಳಲ್ಲಿ ಕಳವು

ಬೆಂಗಳೂರು: ನಕಲಿ ಕೀ ಬಳಸಿ ಮನೆಗಳಲ್ಲಿ ಕಳವು ಮಾಡಿದ್ದ ಆರೋಪಿಯನ್ನು ಕೆ.ಪಿ.ಅಗ್ರಹಾರ ಪೊಲೀಸರು ಬಂಧಿಸಿದ್ದು, ಆತನಿಂದ ₹ 10 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

’35 ವರ್ಷದ ಆರೋಪಿ, ಸಿಟಿ ಮಾರುಕಟ್ಟೆಯಲ್ಲಿರುವ ಬ್ಯಾನರ್ ಮುದ್ರಣ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಮನೆಯವರನ್ನು ಪರಿಚಯ ಮಾಡಿಕೊಂಡು ಕೃತ್ಯ ಎಸಗುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಸಲಿ ಕೀಗಳನ್ನು ಕದಿಯುತ್ತಿದ್ದ ಆರೋಪಿ, ನಕಲಿ ಕೀ ಮಾಡಿಸಿಟ್ಟುಕೊ-ಳ್ಳುತ್ತಿದ್ದ. ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ನಕಲಿ ಕೀ ಬಳಸಿ ಒಳ ಪ್ರವೇ-ಶಿಸುತ್ತಿದ್ದ. ನಗದು, ಚಿನ್ನಾಭರಣ ಕದ್ದು ಪರಾರಿಯಾಗುತ್ತಿದ್ದ. ಕೆ.ಪಿ.ಅಗ್ರಹಾರ ಠಾಣೆ ವ್ಯಾಪ್ತಿಯ ಮೂರು ಮನೆಗಳಲ್ಲಿ ಆರೋಪಿ ಕಳ್ಳತನ ಮಾಡಿರುವುದು ಗೊತ್ತಾಗಿದೆ’ ಎಂದೂ ತಿಳಿಸಿವೆ.

ಅತಿವೃಷ್ಟಿ ಪರಿಹಾರ ಮೊತ್ತ ಪರಿಷ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ವರ್ಷದ ಜುಲೈನಲ್ಲಿ ಉಂಟಾದ ಭಾರಿ ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ಸಂತ್ರಸ್ತರಾದವರಿ-ಗೆ ನೀಡುವ ಪರಿಹಾರದ ಮೊತ್ತವನ್ನು ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ರಾಜ್ಯದ 13 ಜಿಲ್ಲೆಗಳ 61 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಕೇಂದ್ರ ಸರ್ಕಾರದ ಎಸ್‌ಡಿಆರ್‌ಎಫ್/ ಎನ್‌ಡಿಆರ್‌ಎಫ್ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ದರದಲ್ಲಿ ಪರಿಹಾರ ಒದಗಿಸಲಾಗಿದೆ ಎಂದು ಸರ್ಕಾರ ಆದೇಶದಲ್ಲಿ ತಿಳಿಸಿದೆ.

ಪರಿಷ್ಕೃತ ಪರಿಹಾರದ ಮೊತ್ತ:

- ಪ್ರವಾಹ ನೀರು ನುಗ್ಗಿರುವ ಮನೆಗಳ ಗೃಹೋಪಯೋಗಿ ವಸ್ತುಗಳು ಮತ್ತು ಬಟ್ಟೆ ಬರೆ ಹಾನಿಗೆ ₹3,800 ರಿಂದ ₹10,000 ಕ್ಕೆ ಏರಿಕೆ.
- ಶೇ 75 ಕ್ಕಿಂತ ಹೆಚ್ಚು ಸಂಪೂರ್ಣ ಮನೆ ಹಾನಿಗೆ(ಎ ವರ್ಗ) ₹95 ಸಾವಿರದಿಂದ ₹5 ಲಕ್ಷಕ್ಕೆ ಏರಿಕೆ
- ಶೇ 25 ರಿಂದ ಶೇ 75 ರಷ್ಟು ತೀವ್ರವಾಗಿ ಮನೆ ಹಾನಿ (ಕೆಡವಿ ಹೊಸದಾಗಿ ನಿರ್ಮಿಸಲು, ಬಿ ವರ್ಗ) ₹95 ಸಾವಿರದಿಂದ ₹5 ಲಕ್ಷಕ್ಕೆ ಏರಿಕೆ
- ಶೇ 25 ರಿಂದ ಶೇ 75 ರಷ್ಟು ಗಂಭೀರ-ಸ್ವರೂಪದಲ್ಲಿ ಮನೆ ಹಾನಿಯಾಗಿದ್ದರೆ ದುರಸ್ತಿಗೆ ₹95 ಸಾವಿರದಿಂದ ₹3 ಲಕ್ಷಕ್ಕೆ ಏರಿಕೆ
- ಶೇ 15–25 ರಷ್ಟು ಭಾಗಶಃ ಮನೆ ಹಾನಿಗೆ (ಸಿ ವರ್ಗ) ₹5,200 ರಿಂದ ₹50 ಸಾವಿರ

ಸುದ್ದಿ 2 ನಿಮಿಷ

‘ಬಾಕಿಗೆ ₹300 ಕೋಟಿ ಹೊಂದಾಣಿಕೆ’

ಬೆಂಗಳೂರು: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ ₹300 ಕೋಟಿ ಬಿಡುಗಡೆ ಮಾಡಿದ್ದು, ಇದನ್ನು 2019–20 ಸಾಲಿನ ಬಿಡುಗಡೆಗೆ ಬಾಕಿ ಇರುವ ₹300 ಕೋಟಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, 2021–22 ನೇ ಸಾಲಿಗೆ ₹2 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಲು ಅನುಮತಿ ನೀಡಿದೆ ಎಂದರು.

2018–19 ನೇ ಸಾಲಿನ ಸಂಬಂಧಿಸಿದಂತೆ ಬಾಕಿ ಇರುವ ₹127.69 ಕೋಟಿಯನ್ನು ಬಿಡುಗಡೆಗೊಳಿಸಲು ಪ್ರಸಕ್ತ ಲಭ್ಯವಿರುವ ಅನುದಾನ ಪೂರ್ಣವಾಗಿ ವೆಚ್ಚವಾದ ನಂತರ ಪ್ರಸ್ತಾವನೆ ಸಲ್ಲಿಸಲು ಅವಕಾಶ ಇದೆ. ಯೋಜನಾ ಇಲಾಖೆ ಅನುದಾನವನ್ನು ಕ್ಷೇತ್ರವಾರು ಬಿಡುಗಡೆ ಮಾಡುವ ಬದಲಾಗಿ ಜಿಲ್ಲಾವಾರು ಬಿಡುಗಡೆ ಮಾಡಲು ಸರ್ಕಾರ ನಿರ್ಣಯಿಸಿದೆ ಎಂದರು.

ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಉಳಿಕೆಯಾದ ಅನುದಾನವನ್ನು ರಾಜ್ಯ ಮಟ್ಟದ ಕೇಂದ್ರೀಕೃತ ಬ್ಯಾಂಕ್ ಖಾತೆಗೆ ಜಮೆಗೊಳಿಸಲಾಗುತ್ತದೆ. ಶಾಸಕರು ಕಾಮಗಾರಿಗಳನ್ನು ನೀಡಿದ ನಂತರ ಅದು ತಡವಾದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಶಾಸಕರ ಅನುದಾನ ಬಿಡುಗಡೆಗೆ ಯಾವುದೇ ಅಡೆತಡೆ ಆಗದಂತೆ ಮಾರ್ಗಸೂಚಿ ಹೊರಡಿಸಲು ಸೂಚಿಸಲಾಗುವುದು ಎಂದು ಹೇಳಿದರು.



ಬ್ಲ್ಯಾಕ್‌ಮೇಲ್‌ಗೆ ಹೆದರಿ ಆತ್ಮಹತ್ಯೆ

ಬೆಂಗಳೂರು: ಸ್ನೇಹಿತೆ ಜೊತೆಗಿನ ವಿಡಿಯೊ ಇಟ್ಟುಕೊಂಡು ಕೆಲ ಯುವಕರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರಿಂದ ನೊಂದಿದ್ದರು ಎನ್ನಲಾದ ಸುಪ್ರಿತ್ ಎಂಬುವರು ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಅರಸಿಕೆರೆಯ ಸುಪ್ರಿತ್, ಗುರುವಾರವಷ್ಟೇ ನಗರಕ್ಕೆ ಬಂದು ಉಪ್ಪಾರಪೇಟೆ ಠಾಣೆ ವ್ಯಾಪ್ತಿಯ ವಸತಿಗೃಹವೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದರು. ಅದೇ ಕೊಠಡಿಯಲ್ಲೇ ವಿಷ ಕುಡಿದು ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮರಣ ಪತ್ರ ಸಹ ಸಿಕ್ಕಿದೆ. ಅದನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡು ನಾಲ್ವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸುಪ್ರಿತ್ ಹಾಗೂ ಅವರ ಸ್ನೇಹಿತೆ, ಅರಸಿಕೆರೆ ಸಮೀಪದ ಗುಡ್ಡವೊಂದಕ್ಕೆ ಇತ್ತೀಚೆಗೆ ಹೋಗಿದ್ದರು. ಅವರಿಬ್ಬರ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ ಸ್ಥಳೀಯ ನಾಲ್ವರು ಯುವಕರು, ಹಣಕ್ಕಾಗಿ ಪೀಡಿಸಿದ್ದರು. ಹೆದರಿದ್ದ ಸುಪ್ರಿತ್, ಹಣ ಕೊಟ್ಟು ಅಲ್ಲಿಂದ ವಾಪಸು ಬಂದಿದ್ದರು. ಅದಾದ ನಂತರವೂ ಯುವಕರು ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು. ನೊಂದ ಸುಪ್ರಿತ್, ಬೆಂಗಳೂರಿಗೆ ಬಂದಿದ್ದರು’ ಎಂದೂ ಮೂಲಗಳು ತಿಳಿಸಿವೆ.

‘ಗುರುವಾರ ರಾತ್ರಿ ಸುಪ್ರಿತ್ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಶುಕ್ರವಾರ ಬೆಳಿಗ್ಗೆ ತಿಂಡಿ ತಿನ್ನಲು ಕೊಠಡಿಯಿಂದ ಹೊರಗೆ ಬಾರದಿದ್ದಾಗ ಅನುಮಾನಗೊಂಡ ವಸತಿಗೃಹದ ಸಿಬ್ಬಂದಿ, ಬಾಗಿಲು ಬಡಿದಿದ್ದರು. ಯಾವುದೇ ಪ್ರತಿಕ್ರಿಯೆ ಸಿಗದಿದ್ದಾಗ ಠಾಣೆಗೆ ಮಾಹಿತಿ ನೀಡಿದ್ದರು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಚಿತ್ರಾವಳಿ

ಚಿತ್ರಕಲಾವಿದ ಗಣೇಶ್ ದೊಡ್ಡಮನಿ ಅವರ ‘ಎ ಸೆನ್ಸ್ ಆಫ್ ದಿ ಲ್ಯಾಂಡ್’ ಕಲಾ ಪ್ರದರ್ಶನ ನಗರದ ಎಂಕೆಎಫ್ ಮ್ಯೂಸಿಯಂ ಆರ್ಟ್ ಗ್ಯಾಲರಿಯಲ್ಲಿ ಶುಕ್ರವಾರ ಪ್ರದರ್ಶನಗೊಂಡಿತು – ಪ್ರಜಾವಾಣಿ ಚಿತ್ರ

ಇಂಧನ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ವಿ.ಸುನಿಲ್ ಕುಮಾರ್ ದಂಪತಿ ಮತ್ತು ಕುಟುಂಬದ ಸದಸ್ಯರು ಕಚೇರಿ ಪೂಜೆಯಲ್ಲಿ ಭಾಗವಹಿಸಿದ್ದರು

ಆಭರಣ ಪ್ರದರ್ಶನ ನಗರದ ಜೆ.ಡಬ್ಲ್ಯೂ. ಮ್ಯಾರಿಯೆಟ್‌ನಲ್ಲಿ ನಡೆಯುತ್ತಿರುವ ದಕ್ಷಿಣ ಭಾರತ ಆಭರಣ ಮೇಳದಲ್ಲಿ ವರಮಹಾಲಕ್ಷ್ಮಿಯ ಪ್ರಯುಕ್ತ ಪ್ರದರ್ಶನಕ್ಕೆ ಇರಿಸಲಾದ ಲಕ್ಷ್ಮಿ ವಿನ್ಯಾಸದ ಆಭರಣಗಳು ಗಮನಸೆಳೆಯುತ್ತಿವೆ – ಪ್ರಜಾವಾಣಿ ಚಿತ್ರ

‘ಲಿಂಗಾಯತ ಧರ್ಮದ ಹೋರಾಟ ನಿಂತಿಲ್ಲ’

ಪ್ರಜಾವಾಣಿ ವಾರ್ತೆ

ಕೂಡಲಸಂಗಮ: ‘ಲಿಂಗಾಯತ ಹೋರಾಟ ನಿಂತಿಲ್ಲ. ಸ್ವತಂತ್ರ ಧರ್ಮದ ಮಾನ್ಯತೆ ದೊರೆಯುವ ವರೆಗೆ ಹೋರಾಟ ನಿರಂತರ. ಕೋವಿಡ್ ಹರಡುವ ಭೀತಿಯಿಂದ ಸಮಾವೇ-ಶಗಳನ್ನು ಸಂಘಟಿಸಿರಲಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಹೈದರಾಬಾದ್‌ನಲ್ಲಿ ಲಿಂಗಾಯತ ಹೋರಾಟದ ಸಮಾವೇಶ ಮಾಡುತ್ತೇವೆ’ ಎಂದು ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ ಧನ್ನೂರ ಹೇಳಿದರು.

ಕೂಡಲಸಂಗಮ ಬಸವ ಧರ್ಮ ಪೀಠದ ಸಿದ್ಧರಾಮೇಶ್ವರ ಶರಣ ಧಾಮದಲ್ಲಿ ಶುಕ್ರವಾರ ನಡೆದ 826ನೇ ಬಸವ ಪಂಚಮಿ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ದೆಹಲಿಯ ಸಂಸತ್ ಭವನದ ಮುಖ್ಯದ್ವಾರದ ಸ್ಥಳದಲ್ಲಿ ಬಸವಣ್ಣನ ಪುತ್ಥಳಿ ನಿರ್ಮಿಸುವ ಕಾರ್ಯವನ್ನು ಕೇಂದ್ರ ಸರ್ಕಾರ ಮಾಡಬೇಕು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಧಾನಸೌಧದ ಎದುರು ಬಸವಣ್ಣ ಮೂರ್ತಿ ನಿರ್ಮಾಣಕ್ಕೆ ಆದೇಶಿಸಿದ್ದಾರೆ. ಆದಷ್ಟು ಬೇಗ ಅದು ಅನಾವರಣಗೊ-ಳ್ಳಬೇಕು. ಬಸವ ಕಲ್ಯಾಣದ ಅನುಭವ ಮಂಟಪ ಕಾಮಗಾರಿ ನಿರ್ಮಾಣ ಕಾರ್ಯ ಭರದಿಂದ ನಡೆಸಬೇಕು’ ಎಂದು ಒತ್ತಾಯಿಸಿದರು.

ಬಸವ ಧರ್ಮ ಪೀಠದ ಮಹಾದೇಶ್ವರ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿದ್ದ ಕೂಡಲಸಂಗಮ ಅಭಿವೃದ್ಧಿ ಮಂಡಳಿ ಆಯುಕ್ತ ರಘು ಎ.ಇ ಮಾತನಾಡಿ, ‘ಭಕ್ತಿ, ಶಕ್ತಿಯ ಕೇಂದ್ರ ಕೂಡಲಸಂಗಮ-ವಾಗಿದ್ದು, ಈ ಸ್ಥಳದಿಂದಲೇ ಬಸವಾದಿ ಶರಣರ ಸಂದೇಶಗಳು ಜಗತ್ತಿಗೆ ಬಿತ್ತರಿಸುವ ಅಗತ್ಯವಿದೆ. ನಿತ್ಯ ಈ ಕ್ಷೇತ್ರದಲ್ಲಿ ಬಸವಾದಿ ಶರಣರ ಆದರ್ಶ ಮೌಲ್ಯಗಳನ್ನು ಬಿತ್ತರಿಸುವ ಕಾಯಕವನ್ನು ನಾವೆಲ್ಲರೂ ಮಾಡಬೇಕು’ ಎಂದರು.

ಸಮಾರಂಭದಲ್ಲಿ ವಿಜಯಪುರ ನಿವೃತ್ತ ಕೃಷಿ ಅಧಿಕಾರಿ ಸಿ.ಬಿ. ಬೇವನೂರ, ಮುಖಂಡರಾದ ಗಂಗಶೆಟ್ಟಿ ಪಾಟೀಲ, ರಾಜೇಂದ್ರಕುಮಾರ ಗಂದಗೆ ಇದ್ದರು.

‘ರೋಗಗ್ರಸ್ತ ಕಾರ್ಖಾನೆಗಳ ಬಂಡವಾಳ ಹಿಂತೆಗೆತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರಂತರ ನಷ್ಟದಿಂದ ರೋಗಗ್ರಸ್ತವಾಗಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ನಿಗಮಗಳನ್ನು ಪುನಶ್ಚೇತನ-ಗೊಳಿಸಲು ಯೋಜನೆ ರೂಪಿಸಲಾಗು-ತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ತಿಳಿಸಿದರು.

ವಿಧಾನಸೌಧದಲ್ಲಿರುವ ತಮ್ಮ ಕಚೇರಿಗೆ ಶುಕ್ರವಾರ ಪೂಜೆ ಸಲ್ಲಿಸಿದ ಬಳಿಕ ಪತ್ರಿಕಾಗೋಷ್ಠಿಯ-ಲ್ಲಿ ಮಾತನಾಡಿದ ಅವರು, ‘ಕಲಬುರ್ಗಿಯ ಸಿಮೆಂಟ್ ಕಾರ್ಪೋರೇಷನ್, ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ, ಮಂಡ್ಯದ ಮೈಷುಗರ್ಸ್ ಸಕ್ಕರೆ ಕಾರ್ಖಾನೆ ಸೇರಿದಂತೆ ಸರ್ಕಾರಿ ಸ್ವಾಮ್ಯದ ಹಲವು ಉದ್ದಿಮೆಗಳು, ನಿಗಮಗಳು ರೋಗಗ್ರಸ್ತವಾಗಿವೆ. ಅವುಗಳಿಂದ ಸರ್ಕಾರದ ಬಂಡವಾಳ ಹಿಂಪಡೆದು, ಪುನಶ್ಚೇತನಗೊಳಿಸಿ ಲಾಭದತ್ತ ಕೊಂಡೊಯ್ಯುವ ಚಿಂತನೆ ನಡೆದಿದೆ’ ಎಂದರು.

ಎರಡು ದಿನಗಳ ಹಿಂದೆ ದೆಹಲಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸರ್ಕಾರಿ ಸ್ವಾಮ್ಯದ ನಿಗಮಗಳು ಮತ್ತು ಉದ್ದಿಮೆಗಳ ಪುನಶ್ಚೇತನಕ್ಕೆ ಇರುವ ಅವಕಾಶಗಳ ಕುರಿತು ಕೇಂದ್ರ ಕೈಗಾರಿಕಾ ಸಚಿವರ ಜತೆ ಚರ್ಚೆ ನಡೆಸಲಾಗಿದೆ. ಶೀಘ್ರದಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾ-ಗುವುದು ಎಂದು ಹೇಳಿದರು.

ಕೈಗಾರಿಕಾ ಉದ್ದೇಶಕ್ಕಾಗಿ ಮಂಜೂರು ಮಾಡಿರುವ ಜಮೀನುಗಳನ್ನು ಅನ್ಯ ಉದ್ದೇಶಕ್ಕೆ ಬಳಸುವಂತಿಲ್ಲ. ಷರತ್ತು ಉಲ್ಲಂಘಿಸಿ ಅನ್ಯ ಉದ್ದೇಶಕ್ಕೆ ಜಮೀನು ಬಳಸುವವರ ವಿರುದ್ಧ ಕ್ರಮ ಜರುಗಿಸಲಾಗುವುದು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಯಾವ ಉದ್ದೇಶಕ್ಕೆ ಜಮೀನು ಹಂಚಿಕೆ ಮಾಡಿದೆಯೊ ಅದೇ ಉದ್ದೇಶಕ್ಕೆ ಬಳಕೆ ಮಾಡಬೇಕು. ಅನ್ಯ ಉದ್ದೇಶಕ್ಕೆ ಬಳಸಿರುವುದು ಕಂಡು ಬಂದರೆ ಅಂತಹವರ ವಿರುದ್ಧ ತನಿಖೆಗೆ ಆದೇಶಿಸಲಾಗುವುದು ಎಂದು ಹೇಳಿದರು.

ಕೆಜಿಎಫ್‌ನಲ್ಲಿ ಚಿನ್ನದ ಗಣಿಗಾರಿಕೆ ಸ್ಥಗಿತಗೊಂಡಿರುವ ಪ್ರದೇಶದಲ್ಲಿನ 3,200 ಎಕರೆ ಜಮೀನನ್ನು ಪಡೆದುಕೊಂಡು, ಉಪನಗರ ನಿರ್ಮಿಸುವ ಪ್ರಸ್ತಾವವಿದೆ. ರಾಜ್ಯದಲ್ಲಿ ಯಾವುದೇ ಕೈಗಾರಿಕೆಗಳು ಬಾಗಿಲು ಮುಚ್ಚಲು ಅವಕಾಶ ನೀಡುವುದಿಲ್ಲ. ದಿನದ 24 ಗಂಟೆಯೂ ಕೈಗಾರಿಕಾ ಚಟುವಟಿಕೆ ನಡೆಸುವುದಕ್ಕೆ ಪೂರಕವಾದ ವಾತಾವರಣ ಕಲ್ಪಿಸಲಾ-ಗುವುದು ಎಂದು ತಿಳಿಸಿದರು.

‘ಫೆಬ್ರುವರಿಯಲ್ಲಿ ನಡೆಯಬೇಕಿದ್ದ ಹೂಡಿಕೆದಾರರ ಸಮ್ಮೇಳನ ಕೋವಿಡ್ ಕಾರಣದಿಂದ ವಿಳಂಬವಾಗಿದೆ. ಇನ್ನೂ ದಿನಾಂಕ ನಿಗದಿಯಾಗಿಲ್ಲ. ಮುಖ್ಯಮಂ-ತ್ರಿಯವರ ಜತೆ ಚರ್ಚಿಸಿದ ಬಳಿಕ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

‘ಧಾರ್ಮಿಕ ಸಮಸ್ಯೆ ಮಾಡಲು ಹುನ್ನಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆರೆಯಲ್ಲಿ ಯಾವುದೇ ಕಾಂಕ್ರಿಟ್ ಕಂಬ ಹಾಗೂ ಮೂರ್ತಿಗಳನ್ನು ಕಟ್ಟಬಾರದೆಂಬ ಕಾನೂನಿದೆ. ಇದನ್ನು ಉಲ್ಲಂಘಿಸಿ ಬೇಗೂರು ಕೆರೆಯಲ್ಲಿ ಕಟ್ಟಿರುವ ಶಿವನ ಮೂರ್ತಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ಇದನ್ನೇ ಧಾರ್ಮಿಕ ಸಮಸ್ಯೆ-ಯನ್ನಾಗಿ ಮಾಡಲು ಹುನ್ನಾರ ನಡೆದಿದೆ’ ಎಂದು ಕೆಲ ಪರಿಸರವಾದಿಗಳು, ಕಮಿಷನರ್ ಕಮಲ್ ಪಂತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

‘ಮೂರ್ತಿ ಸ್ಥಾಪನೆ ಮಾಡಿರುವುದು ಕರ್ನಾಟಕ ಕೆರೆ ಸಂರಕ್ಷಣಾ ಹಾಗು ಅಭಿವೃದ್ಧಿ ಕಾಯ್ದೆ–2014ರ ಉಲ್ಲಂಘನೆ ಆಗುತ್ತದೆ. ಈ ವಿಷಯದ ಬಗ್ಗೆ ಎರಡು ವರ್ಷಗಳಿಂದ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಹೀಗಿರುವಾಗ, ಕೆಲ ವ್ಯಕ್ತಿಗಳು ಧಾರ್ಮಿಕ ಸಮಸ್ಯೆ ಉಂಟು ಮಾಡಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಲು ಪ್ರಯತ್ನಿಸುತ್ತಿದ್ದಾ-ರೆ. ಸುಳ್ಳು ಆರೋಪಗಳನ್ನು ಮಾಡಿ ವಿಡಿಯೊಗಳನ್ನು ಹರಿಬಿಟ್ಟು ಜನರನ್ನು ಪ್ರಚೋದಿಸುತ್ತಿದ್ದಾರೆ’ ಎಂದೂ ಮನವಿಯಲ್ಲಿ ಆರೋಪಿಸಿದ್ದಾರೆ.

‘ಹೈಕೋರ್ಟ್ ನೀಡಿರುವ ತಡೆ-ಯಾಜ್ಞೆಯನ್ನು ಕಾನೂನಿನ ಚೌಕಟ್ಟಿನಲ್ಲಿ ಪ್ರಶ್ನಿಸಬೇಕು. ಅದನ್ನು ಬಿಟ್ಟು ಸ್ಥಳದಲ್ಲಿ ಜಮಾಯಿಸಿ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡಬಾರದು. ಸುಳ್ಳು ಆರೋಪ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದೂ ಮನವಿಯಲ್ಲಿ ಆಗ್ರಹಿಸಿದ್ದಾರೆ.

ಅಧಿಕಾರಿಗಳ ಕಿರುಕುಳದಿಂದ ಹೈರಾಣಾದ ಚರಕ ಸಂಸ್ಥೆ

ಅಧಿಕಾರಶಾಹಿ ಅಡಕತ್ತರಿಗೆ ಸಿಲುಕಿದ ‘ಪವಿತ್ರ ವಸ್ತ್ರ’ ಯೋಜನೆ

• ಎಂ.ರಾಘವೇಂದ್ರ

ಸಾಗರ: ಅಧಿಕಾರಿಗಳ ಅಸಹಕಾರ, ನಿರ್ಲಕ್ಷ್ಯ ಧೋರಣೆಯಿಂದ ಸರ್ಕಾರದ ಯೋಜನೆಯೊಂದು ಹೇಗೆ ವಿಫಲ-ಗೊಳ್ಳುತ್ತದೆ ಎನ್ನುವುದಕ್ಕೆ ತಾಜಾ ಉದಾಹರಣೆ ಇದು. ಅಧಿಕಾರಿಗಳ ಕಿರುಕುಳದಿಂದ ಬೇಸರಗೊಂಡ ಸಾಗರ ತಾಲ್ಲೂಕಿನ ಹೆಗ್ಗೋಡಿನ ಚರಕ ಸಂಸ್ಥೆ ತನಗೆ ಮಂಜೂರಾಗಿದ್ದ ‘ಪವಿತ್ರ ವಸ್ತ್ರ’ ಯೋಜನೆ ಹಣವನ್ನು ಪ್ರತಿಭಟನಾ ರೂಪದಲ್ಲಿ ಸರ್ಕಾರಕ್ಕೆ ಮರಳಿಸಲು ಮುಂದಾಗಿದೆ.

ಪ್ರತಿ ತಿಂಗಳು 30 ಸಾವಿರ ಮೀಟರ್‌ನಷ್ಟು ಕೈಮಗ್ಗದ ಬಟ್ಟೆ ಉತ್ಪಾದಿಸುವ ಮೂಲಕ ಭಾರತದಲ್ಲೇ ಹೆಚ್ಚು ಉತ್ಪಾದನೆ ಮಾಡುವ ಕೈಮಗ್ಗ ಘಟಕಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಚರಕ ಸಂಸ್ಥೆ. 2009ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಇಲ್ಲಿ ನೈಸರ್ಗಿಕ ಬಣ್ಣಗಾರಿಕೆ, ಸಂಶೋಧನಾ ಅಭಿವೃದ್ಧಿ ತರಬೇತಿ ಕೇಂದ್ರವನ್ನು ಆರಂಭಿಸಲು ಮುಂದಾಯಿತು. ಆದರೆ ಈ ಸಂಬಂಧ ಆದೇಶ ಹೊರಬೀಳಲು 10 ವರ್ಷಗಳು ಬೇಕಾಯಿತು.

2019ನೇ ಸಾಲಿನಲ್ಲಿ ಸರ್ಕಾರ ತರಬೇತಿ ಕೇಂದ್ರ ಸ್ಥಾಪನೆಗೆ ₹ 33 ಲಕ್ಷ ಬಿಡುಗಡೆ ಮಾಡಿತು. ಸರ್ಕಾರ, ಖಾಸಗಿ ಸಹಭಾಗಿತ್ವದಲ್ಲಿನ ಈ ಯೋಜನೆಗೆ ಚರಕ ಸಂಸ್ಥೆ ₹ 57 ಲಕ್ಷ ವಿನಿಯೋಗಿಸಿತ್ತು. ಸರ್ಕಾರದಿಂದ ಬಿಡುಗಡೆಯಾದ ₹ 33 ಲಕ್ಷ ಫಲಾನುಭವಿ ಸಂಸ್ಥೆಗೆ ತಲುಪಲೇ ಇಲ್ಲ. ಏಕೆಂದರೆ ಈ ಹಣವನ್ನು ಕೈಮಗ್ಗ ಇಲಾಖೆ ಮತ್ತು ಚರಕ ಸಂಸ್ಥೆಯ ಜಂಟಿ ಖಾತೆಗೆ ಜಮಾ ಮಾಡಲಾಗಿತ್ತು. ಹಣ ಬಿಡುಗಡೆಗೆ ಇಲಾಖೆ ಕೇಳಿದ ನೂರೆಂಟು ದಾಖಲೆಗಳನ್ನು ಒದಗಿಸಿದರೂ ಚರಕ ಸಂಸ್ಥೆಗೆ ಯೋಜನೆಯ ಹಣ ಪಡೆಯಲು ಸಾಧ್ಯವಾಗಲೇ ಇಲ್ಲ.

ಸಾಗರ ತಾಲ್ಲೂಕಿನ ಹೆಗ್ಗೋಡಿನ ಚರಕ ಸಂಸ್ಥೆಯ ಕೈಮಗ್ಗ ನೇಯ್ಗೆ ಘಟಕ

ಪ್ರಜಾವಾಣಿ ವಿಶೇಷ

2020ನೇ ಸಾಲಿನಲ್ಲಿ ಚರಕ ಸಂಸ್ಥೆಯ ಪ್ರಮುಖರಾದ ಪ್ರಸನ್ನ ಅವರು ಅಧಿಕಾರಿಗಳ ಈ ಧೋರಣೆ ಖಂಡಿಸಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ವಿಷಯ ತಿಳಿದ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಸನ್ನ ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಸಮಸ್ಯೆ ಕುರಿತು ಚರ್ಚಿಸಿದರು.

ಈ ಚರ್ಚೆಯ ಫಲವಾಗಿ ಹುಟ್ಟಿದ್ದೇ ‘ಪವಿತ್ರ ವಸ್ತ್ರ’ ಯೋಜನೆ. ಕರ್ನಾಟಕದಲ್ಲಿ ಸುಮಾರು 2 ಸಾವಿರ ಮಠಗಳಿದ್ದು, ಪ್ರತಿ ಮಠಕ್ಕೂ ಒಂದು ವರ್ಷಕ್ಕೆ 250 ಮೀಟರ್‌ನಷ್ಟು ಖಾವಿ ಬಟ್ಟೆಯ ಅಗತ್ಯವಿದೆ. ಕೈಮಗ್ಗದ ಖಾವಿ ಬಟ್ಟೆ ಲಭ್ಯವಿಲ್ಲದ ಕಾರಣ ಮಠದವರು ಸಿಂಥೆಟಿಕ್ ಬಟ್ಟೆ ಬಳಸು-ತ್ತಿದ್ದಾರೆ. ಮಠಗಳಿಗೆ ಕೈಮಗ್ಗದ ಖಾವಿ ಬಟ್ಟೆ ಪೂರೈಸುವಂತಾದರೆ ರಾಜ್ಯದ ಎಲ್ಲಾ ನೇಕಾರರಿಗೆ ಕೈತುಂಬ ಕೆಲಸ ಸಿಗುತ್ತದೆ ಎಂದು ಪ್ರಸನ್ನ ಅವರು ನೀಡಿದ ಮಾಹಿತಿಯನ್ನು ಆಧರಿಸಿ ಯಡಿಯೂರಪ್ಪ ಅವರು ಯೋಜನೆಗೆ ಅಸ್ತು ಎಂದಿದ್ದರು.

ಚರಕದ ತರಬೇತಿ ಕೇಂದ್ರದ ಮೂಲಕವೇ ‘ಪವಿತ್ರ ವಸ್ತ್ರ’ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಆದೇಶಿಸಿತ್ತು. ಆದರೆ ಹೀಗೆ ಆದೇಶಿಸುವಾಗ ‘ಕೈಮಗ್ಗ ಇಲಾಖೆಯ ಸಹಯೋಗ’ ಎಂಬ ಪದ ಬಳಸಿದ್ದು ಯೋಜನೆ ಅನುಷ್ಠಾನಕ್ಕೆ ಮಾರಕವಾಗಿ ಪರಿಣಮಿಸಿದೆ.

ಈ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಹಣವನ್ನು ತಮ್ಮ ಖಾತೆಯಲ್ಲಿ ಇರಿಸಿಕೊಂಡಿರುವ ಕೈಮಗ್ಗ ಇಲಾಖೆ ಅಧಿಕಾರಿಗಳು ಪ್ರತಿಯೊಂದು ವಸ್ತುವಿನ ಖರೀದಿಗೂ ಇ-ಟೆಂಡರ್ ಪ್ರಕ್ರಿಯೆ ನಡೆಸಬೇಕು ಎಂಬ ಪ್ರಾಯೋಗಿಕವಾಗಿ ಸಾಧ್ಯವಿಲ್ಲದ ಷರತ್ತನ್ನು ಮುಂದಿಟ್ಟಿದ್ದಾರೆ. ಈ ಕಾರಣ ಸಣ್ಣಪುಟ್ಟ ಮಗ್ಗ ಖರೀದಿಗೆ, ಉದ್ಯೋ-ಗಿಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ, ಅವರಿಗೆ ವೇತನ ಪಾವತಿ ಸೇರಿ ಪ್ರತಿಯೊಂದಕ್ಕೂ ಇಲಾಖೆಯ ಅಧಿಕಾ-ರಿಗಳನ್ನು ಅವಲಂಬಿಸುವಂತಾಗಿದೆ.

ಯೋಜನೆ ಮಂಜೂರಾತಿಗೆ ಮುನ್ನವೇ ಎಲ್ಲಾ ಅಗತ್ಯ ದಾಖಲೆಗಳನ್ನು ಪೂರೈಸಿದ್ದರೂ ನಂತರವೂ ದಾಖಲೆಗಳನ್ನು ಕೇಳಿ ಅಧಿಕಾರಿಗಳು ಹಣ ಬಿಡುಗಡೆಗೆ ಸತಾಯಿಸುತ್ತಿದ್ದಾರೆ ಎಂಬುದು ಚರಕ ಸಂಸ್ಥೆಯ ದೂರು.

ಎರಡು ವರ್ಷಗಳಿಂದ ಇಲಾಖೆಯೊಂದಿಗೆ ಗುದ್ದಾಟ ನಡೆಸಿದ ಚರಕ ಸಂಸ್ಥೆಯವರು ರೋಸಿಹೋಗಿ ಈಗ ಮಂಜೂರಾದ ಹಣವನ್ನೇ ಸರ್ಕಾರಕ್ಕೆ ಮರಳಿಸಲು ಮುಂದಾಗಿದ್ದಾರೆ. ಇದರಿಂದಾಗಿ ಪವಿತ್ರ ವಸ್ತ್ರ ಯೋಜನೆ ನನೆಗುದಿಗೆ ಬೀಳುವಂತಾಗಿದೆ.

‘ಸಂಬಂಧಪಟ್ಟ ಸಂಸ್ಥೆಗೆ ವಿನಿಯೋಗಿಸುವ ಅಧಿಕಾರಿ ಇರಲಿ’

‘ಸರ್ಕಾರಿ, ಖಾಸಗಿ ಸಹಭಾಗಿತ್ವದಲ್ಲಿ ಯಾವುದೇ ಯೋಜನೆ ಅನುಷ್ಠಾನಗೊಳ್ಳುವಾಗ ಮಂಜೂರಾದ ಹಣವನ್ನು ಸಂಬಂಧಪಟ್ಟ ಸಂಸ್ಥೆಗೆ ವಿನಿಯೋಗಿಸುವ ಅಧಿಕಾರ ನೀಡಬೇಕು. ನಂತರ ಅನುದಾನ ಸದ್ಬಳಕೆಯಾದ ಬಗ್ಗೆ ಸಂಸ್ಥೆಯಿಂದ ಪ್ರಮಾಣಪತ್ರ ಪಡೆಯಬೇಕು. ನಿಯಮ ಉಲ್ಲಂಘಿಸಿದರೆ ಕ್ರಮ ಕೈಗೊಳ್ಳುವ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಆದರೆ ಇಲ್ಲಿ ಚರಕಕ್ಕೆ ಮಂಜೂರಾದ ಯೋಜನೆಯನ್ನು ಅನುಷ್ಠಾನಗೊಳಿಸಲು ಚರಕಕ್ಕೆ ಸಾಧ್ಯ-ವಾಗುತ್ತಿಲ್ಲ’ ಎಂದು ಬೇಸರಿಸಿದರು ಚರಕ ಸಂಸ್ಥೆ ಸಂಸ್ಥಾಪಕ ಪ್ರಸನ್ನ.

> **ಸರ್ಕಾರದ ನಿಯಮಾವಳಿಗಳ ಪ್ರಕಾರವೇ ಇಲಾಖೆ ಅಗತ್ಯ ದಾಖಲೆಗಳನ್ನು ಚರಕ ಸಂಸ್ಥೆಯಿಂದ ಕೇಳಿದೆ. ಇಲಾಖೆ ಕಾರಣದಿಂದ ಯೋಜನೆ ಅನುಷ್ಠಾನದಲ್ಲಿ ಯಾವುದೇ ವಿಳಂಬವಾಗಿಲ್ಲ.**
>
> **ಶ್ರೀನಿವಾಸ್,** ಉಪ ನಿರ್ದೇಶಕ, ಕೈಮಗ್ಗ ಮತ್ತು ಜವಳಿ ಇಲಾಖೆ

ಕಂದಾಯ ಸಚಿವ ಆರ್. ಅಶೋಕ ಸುಳಿವು • ಕೇರಳ ಮತ್ತು ಮಹಾರಾಷ್ಟ್ರದಿಂದ ರಾಜ್ಯಕ್ಕೆ ಸೋಂಕು ಹರಡುವ ಸಾಧ್ಯತೆ

ಕೋವಿಡ್: ನಗರದಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಜಾರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಿಸುವ ನಿಟ್ಟಿನಲ್ಲಿ ನಗರ ಮತ್ತು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಜಾರಿ ಮಾಡುವ ಬಗ್ಗೆ ಕಂದಾಯ ಸಚಿವ ಆರ್. ಅಶೋಕ ಸುಳಿವು ನೀಡಿದ್ದಾರೆ.

'ಕೇರಳ ಮತ್ತು ಮಹಾರಾಷ್ಟ್ರದಿಂದ ರಾಜ್ಯಕ್ಕೆ ಸೋಂಕು ಹರಡುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ, ರಾಜ್ಯ ರಾಜಧಾನಿ ಮತ್ತು ಇತರೆ ಜಿಲ್ಲೆಗಳಲ್ಲಿ ಆ. 15ರ ನಂತರ ಕಟ್ಟುನಿಟ್ಟಿನ ಮಾರ್ಗಸೂಚಿ ಅಥವಾ ನಿರ್ಬಂಧಗಳನ್ನು ಘೋಷಿಸಲಾಗುತ್ತದೆ' ಎಂದು ಅವರು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

'ಕೋವಿಡ್ ನಿಯಂತ್ರಣಕ್ಕೆ ಕರ್ಫ್ಯೂ ಒಂದೇ ಪರಿಹಾರವಲ್ಲ. ಆದರೆ, ಲಾಕ್‌ಡೌನ್ ಮತ್ತು ಇತರೆ ನಿರ್ಬಂಧಗಳಿಂದ ಜನರೂ ಸಂಕಷ್ಟಕ್ಕೆ ಈಡಾಗುತ್ತಾರೆ. ಹೀಗಾಗಿ, ನಿಧಾನ ಔಷಧಿಯಂತಹ ಕ್ರಮಗಳನ್ನು (ಕಟ್ಟುನಿಟ್ಟಿನ ನಿರ್ಬಂಧಗಳು) ಜಾರಿಗೊಳಿಸುವ ಚಿಂತನೆ ಇದೆ' ಎಂದು ಹೇಳಿದರು.

'ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಪ್ರಕರಣಗಳು ಏರಿಕೆಯಾದರೆ, ವಾರಾಂತ್ಯ ಕರ್ಫ್ಯೂನಂತಹ ನಿರ್ಬಂಧಗಳನ್ನು ವಿಧಿಸುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದೂ ಹೇಳಿದರು.

'ಮುಂದೆ ಮೊಹರಂ, ಗಣೇಶ ಚತುರ್ಥಿ, ರಾಘವೇಂದ್ರ ಆರಾಧನೆ ಸೇರಿದಂತೆ ಐದಕ್ಕೂ ಹೆಚ್ಚು ಹಬ್ಬ ಅಥವಾ ಉತ್ಸವಗಳು ಇವೆ. ಈ ಸಂದರ್ಭದಲ್ಲಿ ಕಟ್ಟುನಿಟ್ಟಿನ ನಿರ್ಬಂಧಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಬಗ್ಗೆ ಮುಖ್ಯಮಂತ್ರಿ ನೇತೃತ್ವದ ಸಭೆಯಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ' ಎಂದೂ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,32,220 ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,189	12,08,097	15,933

ಶುಕ್ರವಾರದ ಏರಿಕೆ

ಹೊಸ ಪ್ರಕರಣ	425
ಗುಣಮುಖ	424
ಸಾವು	5

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

29,26,401 ಒಟ್ಟು ಸೋಂಕಿತರು (29,24,732 ನಿನ್ನೆಯ ವಿವರ)

22,703 ಸಕ್ರಿಯ ಪ್ರಕರಣಗಳು

28,66,739 ಗುಣಮುಖರಾದವರು

36,933 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,669
ಗುಣಮುಖ	1,672
ಸಾವು	22

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ನಗರದಲ್ಲಿ ಕೋವ್ಯಾಕ್ಸಿನ್ ಲಸಿಕೆ ಕೊರತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 70 ಸಾವಿರಕ್ಕೂ ಹೆಚ್ಚು ಜನರಿಗೆ ಕೋವ್ಯಾಕ್ಸಿನ್ ಎರಡನೇ ಡೋಸ್ ಲಸಿಕೆಯ ಅವಶ್ಯಕತೆ ಇದೆ. ಆದರೆ, ಸದ್ಯ 39 ಸಾವಿರ ಡೋಸ್ ಮಾತ್ರ ಲಭ್ಯವಿದ್ದು, ಲಸಿಕೆಯ ಕೊರತೆ ಉದ್ಭವಿಸಿದೆ.

ಕೋವ್ಯಾಕ್ಸಿನ್ ಮೊದಲ ಡೋಸ್ ಲಸಿಕೆ ಪಡೆದವರು, ನಾಲ್ಕನೇ ವಾರದಲ್ಲಿ ಎರಡನೇ ಡೋಸ್ ಪಡೆಯಬೇಕು. ವಾರಗಳು ಕಳೆದಂತೆ ಕೋವ್ಯಾಕ್ಸಿನ್ ಬೇಡಿಕೆಯ ಪ್ರಮಾಣ ಹೆಚ್ಚಾಗುತ್ತಲೇ ಇದೆ.

ರಾಷ್ಟ್ರೀಯ ಆರೋಗ್ಯ ಮಿಷನ್‌ನ ನಿರ್ದೇಶಕರಾದ ಅರುಂಧತಿ ಚಂದ್ರಶೇಖರ್ ಅವರು, ಕರ್ನಾಟಕವು ಆಗಸ್ಟ್‌ನಿಂದ ಸೆ.2ರವರೆಗೆ ಕೋವ್ಯಾಕ್ಸಿನ್‌ನ 6.12 ಲಕ್ಷ ಡೋಸ್‌ಗಳನ್ನು ಪಡೆಯಲಿದೆ ಎಂದು ಹೇಳಿದ್ದರು. ಈ ಖಾಸಗಿ ವಲಯ ಅಥವಾ ಆಸ್ಪತ್ರೆಗಳಿಗೆ 1.94 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ.

ಕಳೆದ ಕೆಲವು ವಾರಗಳಿಂದ ಬಿಬಿಎಂಪಿಗೆ ಮೂರು ಅಥವಾ ನಾಲ್ಕು ದಿನಗಳಿಗೊಮ್ಮೆ ಕೋವ್ಯಾಕ್ಸಿನ್ ಲಸಿಕೆ ಪೂರೈಸಲಾಗುತ್ತಿದೆ. ನಿಗದಿತ ಪ್ರಮಾಣದ ಲಸಿಕೆಗಳು ಬಂದಿದ್ದು, ಆದ್ಯತೆ ಮೇರೆಗೆ ಎರಡನೇ ಡೋಸ್ ಲಸಿಕೆ ನೀಡುವಂತೆ ಲಸಿಕಾ ಕೇಂದ್ರಗಳಿಗೆ ಸರ್ಕಾರ ಸೂಚನೆ ನೀಡಿದೆ. ಆದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವ್ಯಾಕ್ಸಿನ್ ಲಸಿಕೆಗಳ ತೀವ್ರ ಕೊರತೆ ಕಂಡು ಬರುತ್ತಿದೆ.

'ನಮ್ಮ ಕೇಂದ್ರಕ್ಕೆ ಬೆಳಿಗ್ಗೆ 150 ಡೋಸ್‌ನಿಂದ 160 ಡೋಸ್ ಲಸಿಕೆ ಪೂರೈಸಲಾಗಿರುತ್ತದೆ. ಆದರೆ, ಅವು ಮಧ್ಯಾಹ್ನ 1 ಗಂಟೆಯ ವೇಳೆಗೇ ಖಾಲಿಯಾಗುತ್ತವೆ. ಎರಡನೇ ಡೋಸ್ ಬೇಕಾದವರು 11 ಗಂಟೆಯ ಒಳಗೆ ಬಂದರೆ ಮಾತ್ರ ಅವರಿಗೆ ಲಸಿಕೆ ನೀಡಲು ಸಾಧ್ಯವಾಗುತ್ತದೆ. 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲು ಆರಂಭಿಸಿದ ನಂತರ ಕೊರತೆ ಕಾಡುತ್ತಿದೆ' ಎಂದು ಬೊಮ್ಮನಹಳ್ಳಿ ವಲಯದ ಉತ್ತರಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯೊಬ್ಬರು ಹೇಳಿದರು. ಖಾಸಗಿ ಆಸ್ಪತ್ರೆ ಅಥವಾ ವಲಯದಲ್ಲಿ ಲಸಿಕೆ ಪಡೆಯಬೇಕು ಎಂದರೆ ದುಬಾರಿ ದರವನ್ನು ನಾಗರಿಕರು ಭರಿಸಬೇಕಾಗಿದೆ. ಕೋವ್ಯಾಕ್ಸಿನ್‌ಗೆ ₹1,410, ಕೋವಿಶೀಲ್ಡ್‌ಗೆ ₹780 ಹಾಗೂ ಸ್ಪುಟ್ನಿಕ್‌ಗೆ ₹1,145 ತೆಗೆದುಕೊಳ್ಳಲಾಗುತ್ತಿದೆ.

'ಕೋವಿಡ್ ವೇಳೆ ಶೈಕ್ಷಣಿಕ ಕ್ರಾಂತಿ ನಡೆಯಲಿ'

ಬೆಂಗಳೂರು: 'ದೆಹಲಿಯಂತೆ ಕರ್ನಾಟಕ ಸರ್ಕಾರವೂ ಕೋವಿಡ್ ಸಂದರ್ಭವನ್ನು ಶೈಕ್ಷಣಿಕ ಕ್ರಾಂತಿಗೆ ಬಳಸಿಕೊಳ್ಳಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ದೆಹಲಿ ಶಾಸಕಿ ಅತಿಶಿ ಮರ್ಲೆನಾ ಸಲಹೆ ನೀಡಿದರು.

ಎಎಪಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಶೈಕ್ಷಣಿಕ ಸಂವಾದದಲ್ಲಿ ಅವರು ಮಾತನಾಡಿದರು.

'ಏಳು ವರ್ಷಗಳ ಹಿಂದೆ ಕರ್ನಾಟಕದ ಸರ್ಕಾರಿ ಶಾಲೆಗಳಂತೆಯೇ ದೆಹಲಿ ಶಾಲೆಗಳಿದ್ದವು. ಅಲ್ಲಿಯೂ ಮೂಲ ಸೌಕರ್ಯಗಳು ಇರಲಿಲ್ಲ. ಶಿಕ್ಷಣ ಕ್ರಾಂತಿಗಾಗಿ ಬಜೆಟ್‌ನಲ್ಲಿ ಶೇ 25ರಷ್ಟು ಹಣವನ್ನು ಮೀಸಲಿಟ್ಟು, ಸಮರ್ಪಕವಾಗಿ ಬಳಕೆ ಮಾಡಲಾಯಿತು. ಇದರಿಂದ ಅಲ್ಲಿನ ಶಿಕ್ಷಣ ವ್ಯವಸ್ಥೆಯೇ ಬದಲಾಯಿತು' ಎಂದರು.

'ಶಿಕ್ಷಣದಲ್ಲಿ ಬದಲಾವಣೆ ತರಬೇಕೆಂಬ ಇಚ್ಛಾಶಕ್ತಿ ಸರ್ಕಾರಕ್ಕೆ ಇದ್ದರೆ ಸಾಕು. ಕರ್ನಾಟಕ ಸೇರಿದಂತೆ ಹಲವು ರಾಜ್ಯ ಸರ್ಕಾರಗಳಿಗೆ ಶಿಕ್ಷಣ ಆದ್ಯತೆಯ ವಿಷಯವೇ ಆಗಿಲ್ಲ. ಕೋವಿಡ್ ನಂತರ ಶಿಕ್ಷಣ ವ್ಯವಸ್ಥೆಯೇ ದೇಶಕ್ಕೆ ಹೆಚ್ಚು ಮಾರಕವಾಗಿದೆ' ಎಂದು ದೂರಿದರು.

'ಸರ್ಕಾರಗಳು ಶಿಕ್ಷಣ ಕ್ಷೇತ್ರವನ್ನು ನೋಡುವ ರೀತಿ ಬದಲಾಗಬೇಕು. ಖಾಸಗಿ ಶಾಲೆಗಳ ಲಾಬಿಗೆ ಮಣಿಯದೆ, ಸರ್ಕಾರಿ ಶಾಲೆಗಳ ಮೂಲ ಸೌಕರ್ಯ ಹಾಗೂ ಬೋಧನಾ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಬೇಕು' ಎಂದು ಒತ್ತಾಯಿಸಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ಮುಖಂಡರಾದ ಎಚ್.ಡಿ.ಬಸವರಾಜು, ಶಿಕ್ಷಣ ತಜ್ಞ ಗುರುರಾಜ ಕರಜಗಿ, ತಾನ್ಯಾ ಜಯರಾಜ್, ಪುಷ್ಪಾ ತಂತ್ರಿ, ಬಿ.ಎಸ್.ಸೂರ್ಯಪ್ರಕಾಶ್ ಹಾಗೂ ಇತರರು ಭಾಗವಹಿಸಿದ್ದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.66 ಕೋಟಿ	3.21 ಕೋಟಿ
ಸಕ್ರಿಯ ಪ್ರಕರಣ	1.68 ಕೋಟಿ	3.82 ಲಕ್ಷ
ಗುಣಮುಖ	18.54 ಕೋಟಿ	3.13 ಕೋಟಿ
ಸಾವು	43.54 ಲಕ್ಷ	4.30 ಲಕ್ಷ
ದಿನದ ಏರಿಕೆ: ಹೊಸ ಪ್ರಕರಣ	7.14 ಲಕ್ಷ	37,701
ದಿನದ ಏರಿಕೆ: ಗುಣಮುಖ	5.60 ಲಕ್ಷ	21,236 ಲಕ್ಷ
ದಿನದ ಏರಿಕೆ: ಸಾವು	10,381	471

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.41 ಲಕ್ಷ ಅಮೆರಿಕ; 35,891 ಬ್ರೆಜಿಲ್; 32,961 ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 64.69 ಅಮೆರಿಕ; 5.67 ಬ್ರೆಜಿಲ್; 13.02 ಬ್ರಿಟನ್

ಎಲ್ಲಿ ಹೆಚ್ಚು ಸಾವು: 1.345 ಲಕ್ಷ ಮಹಾರಾಷ್ಟ್ರ; 34,428 ತಮಿಳುನಾಡು; 25,068 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 63.75 ಮಹಾರಾಷ್ಟ್ರ; 36.52 ಕೇರಳ; 25.83 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

'ಮುದ್ರಾಂಕ ಶುಲ್ಕ ಇಳಿಕೆ'

'ಕರ್ನಾಟಕ ಮುದ್ರಾಂಕ ತಿದ್ದುಪಡಿ ವಿಧೇಯಕ ಜಾರಿಗೊಳಿಸಲಾಗಿದೆ. ಈವರೆಗೆ ₹35 ಲಕ್ಷ ಮನೆ ಖರೀದಿ ಮಾಡುವವರಿಗೆ ಶೇ 3ರಷ್ಟು ಮುದ್ರಾಂಕ ಶುಲ್ಕ ವಿಧಿಸಲಾಗುತ್ತಿತ್ತು. ಅದಕ್ಕಿಂತ ಹೆಚ್ಚಿನ ಮೊತ್ತದ ಮನೆ ಖರೀದಿಗೆ ಶೇ 5ರಷ್ಟು ಶುಲ್ಕ ಶುಲ್ಕ ವಿಧಿಸಲಾಗುತ್ತಿತ್ತು.
ಈಗ ₹45 ಲಕ್ಷ ವೆಚ್ಚದಲ್ಲಿ ಮನೆ (ಫ್ಲ್ಯಾಟ್) ಖರೀದಿ ಮಾಡುವವರಿಗೆ ಮುದ್ರಾಂಕ ಶುಲ್ಕವನ್ನು ಶೇ 3ಕ್ಕೆ ಇಳಿಕೆ ಮಾಡಲಾಗಿದೆ. ಆ ಮೂಲಕ ಕೆಳ ಮತ್ತು ಮಧ್ಯಮ ವರ್ಗದ ಜನರು ಮನೆಗಳನ್ನು ಖರೀದಿ ಮಾಡಲು ಪ್ರೋತ್ಸಾಹ ನೀಡಲಾಗುತ್ತಿದೆ' ಎಂದು ಆರ್. ಅಶೋಕ ತಿಳಿಸಿದರು.

ಕೋವಿಡ್: 29.26 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ 1,669 ಮಂದಿ ಕೊರೊನಾ ಸೋಂಕಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಈ ಮೂಲಕ ಒಟ್ಟು ಪ್ರಕರಣಗಳ ಸಂಖ್ಯೆ 29.26 ಲಕ್ಷ ದಾಟಿದೆ. ಬೀದರ್, ಹಾವೇರಿ, ರಾಮನಗರದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಒಂದು ದಿನದಲ್ಲಿ 1.69 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢಪ್ರಮಾಣ ಶೇ 0.98ರಷ್ಟಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 390, ಮೈಸೂರಿನಲ್ಲಿ 106 ಹಾಗೂ ಕೊಡಗಿನಲ್ಲಿ 73 ಪ್ರಕರಣ ಪತ್ತೆಯಾಗಿವೆ. ಬೆಂಗಳೂರಿನಲ್ಲಿ 425, ಹಾಸನದಲ್ಲಿ 113 ಹಾಗೂ ಉಡುಪಿಯಲ್ಲಿ 115 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 5, ದಕ್ಷಿಣ ಕನ್ನಡ ಹಾಗೂ ಕೋಲಾರದಲ್ಲಿ ತಲಾ 3, ತುಮಕೂರು, ಹಾಸನ, ಚಿತ್ರದುರ್ಗ ಹಾಗೂ ಬೆಳಗಾವಿಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಡುಪಿ ಸೇರಿದಂತೆ ಮೂರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರ ಶೇ 1.31ರಷ್ಟಿದೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 36,933ಕ್ಕೆ ಏರಿದೆ. 1,672 ಮಂದಿ ಚೇತರಿಸಿಕೊಂಡಿದ್ದು, ಗುಣಮುಖರಾದವರ ಸಂಖ್ಯೆ 28.66 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 22,703 ಆಗಿದೆ.

ಚುನಾವಣೆ ಮುಂದೂಡಿಕೆ: ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಡಿಸೆಂಬರ್ ಅಂತ್ಯದ ತನಕ ಮುಂದೂಡಲು ಸಚಿವ ಸಂಪುಟ ಕೈಗೊಂಡಿರುವ ನಿರ್ಧಾರವನ್ನು ಸರ್ಕಾರ ಹೈಕೋರ್ಟ್‌ನಲ್ಲಿ ಸಮರ್ಥಿಸಿಕೊಂಡಿದೆ.

ಕಾಲಮಿತಿಯಲ್ಲಿ ಚುನಾವಣೆ ನಡೆಸಲು ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಲು ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಮೇ 17ರಂದು ಈ ನಿರ್ಣಯ ಕೈಗೊಳ್ಳಲಾಗಿದ್ದು, ಆ ಸಂದರ್ಭದಲ್ಲಿ ದಿನಕ್ಕೆ 40 ಸಾವಿರ ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದವು' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಎಸ್. ನಾವಡಗಿ ವಿವರಿಸಿದರು.

ಅಂತಹ ಸಂದರ್ಭದಲ್ಲಿ ಚುನಾವಣೆ ನಡೆಸುವುದು ಕಷ್ಟ ಎಂಬ ಕಾರಣಕ್ಕೆ ಈ ನಿರ್ಧಾರ ಕೈಗೊಳ್ಳಲಾಗಿದೆ. ಮೀಸಲಾತಿ ಪಟ್ಟಿ ಸೇರಿ ನ್ಯಾಯಾಲಯದ ನಿರ್ದೇಶನದಂತೆ ಎಲ್ಲಾ ರೀತಿಯ ನೆರವನ್ನು ಸರ್ಕಾರ ಆಯೋಗಕ್ಕೆ ನೀಡುತ್ತಿದೆ ಎಂದು ವಿವರಿಸಿದರು.

ಆಯೋಗದ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು, 'ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರ್ಗಿ ಮಹಾನಗರ ಪಾಲಿಕೆ ಹಾಗೂ ದೊಡ್ಡಬಳ್ಳಾಪುರ ನಗರಸಭೆ ಮತ್ತು ತರೀಕೆರೆ ಪುರಸಭೆ ಚುನಾವಣೆಗೆ ವೇಳಾಪಟ್ಟಿ ವೇಳಾಪಟ್ಟಿ ಪ್ರಕಟಿಸಲಾಗಿದೆ' ಎಂದ ತಿಳಿಸಿದರು.

'ಸರ್ಕಾರ ಶಿಫಾರಸು ಮಾಡಬಹುದು, ಚುನಾವಣೆ ಮುಂದೂಡುವುದು ಅಥವಾ ನಡೆಸುವುದು ಆಯೋಗಕ್ಕೆ ಬಿಟ್ಟ ವಿಚಾರ' ಎಂದು ತಿಳಿಸಿದ ಪೀಠ, ವಿಚಾಣೆಯನ್ನು ಸೆ.14ಕ್ಕೆ ಮುಂದೂಡಿತು.

ನಿಗಮಗಳಿಗೆ ನೀಡಿದ ಅನುದಾನದ ವಿವರ ಕೇಳಿದ ಹೈಕೋರ್ಟ್

ಬೆಂಗಳೂರು: ಲಿಂಗಾಯತ, ಮರಾಠ, ಬ್ರಾಹ್ಮಣ, ಆರ್ಯವೈಶ್ಯ ಮತ್ತು ಇತರ ಅಭಿವೃದ್ಧಿ ನಿಗಮ ಮತ್ತು ಮಂಡಳಿಗಳಿಗೆ ಸರ್ಕಾರ ನೀಡಿರುವ ಅನುದಾನದ ವಿವರ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ನಿಗಮಗಳು ಈಗಾಗಲೇ ಹಣ ಖರ್ಚು ಮಾಡಿದ್ದರೆ, ಅದರ ಮಾಹಿತಿಯನ್ನೂ ಒದಗಿಸುವಂತೆ ತಿಳಿಸಿದೆ.

ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಪರ ವಕೀಲ ಎಸ್. ಬಸವರಾಜ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಆದೇಶ ಕಾಯ್ದಿರಿಸಿದೆ.

ಅಭಿವೃದ್ಧಿಗಾಗಿ ನಿಗಮ ಮತ್ತು ಮಂಡಳಿಗಳನ್ನು ಸ್ಥಾಪಿಸಿರುವ ಜಾತಿಗಳಲ್ಲಿ ಕೆಲವು ಸಮುದಾಯಗಳು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಮುಂದುವರಿದಿವೆ ಎಂದು ಈ ಹಿಂದೆ ರಚಿಸಲಾಗಿದ್ದ ಹಲವು ಆಯೋಗಗಳು ಘೋಷಿಸಿವೆ ಎಂದು ಅರ್ಜಿದಾರರು ವಿವರಿಸಿದರು.

ಹೈಕೋರ್ಟ್ ಸುದ್ದಿ

'ಪಿಟಿಸಿಎಲ್: ಆಸ್ತಿ ವಿವರ ನೋಂದಣಿ ಕಚೇರಿಗೆ ಒದಗಿಸಿ'

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರ್ಕಾರ ಮಂಜೂರು ಮಾಡಿರುವ ಜಮೀನಿನ ಪಟ್ಟಿಯನ್ನು ಎಲ್ಲಾ ನೋಂದಣಿ ಕಚೇರಿಗಳಿಗೆ ನಾಲ್ಕು ತಿಂಗಳಲ್ಲಿ ಒದಗಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ಕಾಯ್ದೆಯ(ಪಿಟಿಸಿಎಲ್) ಸೆಕ್ಷನ್ 6 ಅನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿದ್ದರೆ ಕಾಯ್ದೆಯೇ ಉದ್ದೇಶವನ್ನೇ ಸೋಲಿಸಿದಂತೆ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

ಕಂದಾಯ ಇಲಾಖೆಯ ಭೂಮಿ ತಂತ್ರಾಂಶದದಲ್ಲಿ ರಾಜ್ಯದ ಕೃಷಿ ಭೂಮಿಯ ಸಂಪೂರ್ಣ ವಿವರ ಇದೆ. ಈ ತಂತ್ರಾಂಶವನ್ನು ಅವಲಂಬಿಸಿಯೇ ಕಾವೇರಿ ತಂತ್ರಾಂಶದ ಮೂಲಕ ನೋಂದಣಿ ಕಾರ್ಯ ನಡೆಸಲಾಗುತ್ತಿದೆ. ಭೂಮಿ ಮತ್ತು ಕಾವೇರಿ ತಂತ್ರಾಂಶಗಳು ವಿಲೀನಗೊಂಡ ಬಳಿಕ ಎಲ್ಲಾ ಮಾಹಿತಿಯೂ ನೋಂದಣಿ ಇಲಾಖೆಗೆ ಲಭ್ಯವಾಗಲಿದೆ ಎಂದು ಸರ್ಕಾರ ವಿವರ ಸಲ್ಲಿಸಿತು.

'ಪಿಟಿಸಿಎಲ್ ಕಾಯ್ದೆಯ ಸೆಕ್ಷನ್ 6ರ ಪ್ರಕಾರ ಈ ಪಟ್ಟಿಯನ್ನು ಎಲ್ಲಾ ನೋಂದಣಾಧಿಕಾರಿ ಕಚೇರಿಗಳಿಗೆ ಒದಗಿಸುವುದು ಕಡ್ಡಾಯ. ಬೇರೆ ಸ್ಪಷ್ಟನೆ ನೀಡದೆ ಆ ಕೆಲಸವನ್ನು ಸರ್ಕಾರ ಮೊದಲು ಮಾಡಬೇಕು. ಡಿಸೆಂಬರ್ 16ರೊಳಗೆ ಅನುಸರಣಾ ವರದಿ ಸಲ್ಲಿಸಬೇಕು' ಎಂದು ಪೀಠ ತಿಳಿಸಿತು.

ಸಂಸತ್ ಕಲಾಪದಲ್ಲಿ ಗದ್ದಲ: ಕಾಗೇರಿ ಖಂಡನೆ

ಪ್ರಜಾವಾಣಿ ವಾರ್ತೆ

ವಿಶ್ವೇಶ್ವರ ಹೆಗಡೆ ಕಾಗೇರಿ

ಬೆಂಗಳೂರು: ಇತ್ತೀಚೆಗೆ ಮುಕ್ತಾಯಗೊಂಡ ಸಂಸತ್ ಅಧಿವೇಶನದಲ್ಲಿ ವಿರೋಧ ಪಕ್ಷಗಳ ಕೆಲವು ಸದಸ್ಯರು ಅಶಿಸ್ತಿನಿಂದ ವರ್ತಿಸಿ, ಗದ್ದಲ ನಡೆಸಿರುವುದು ಖಂಡನೀಯ ಎಂದು ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಕೆಲವು ಸದಸ್ಯರು ಪ್ರದರ್ಶಿಸಿದ ನಡವಳಿಕೆಯು ಅಶಿಸ್ತಿನಿಂದ ಕೂಡಿತ್ತು ಮತ್ತು ಅಸಹ್ಯಕರವಾಗಿತ್ತು. ಅರಾಜಕತೆಯ ವಾತಾವರಣವನ್ನು ಸೃಷ್ಟಿಸಿದ ಸದಸ್ಯರ ನಡವಳಿಕೆ ಸ್ವೀಕಾರಾರ್ಹವಲ್ಲ' ಎಂದರು.

ಸಂಸತ್ತನ್ನು ಪ್ರಜಾಪ್ರಭುತ್ವದ ದೇಗುಲ ಎಂದು ಕರೆಯಲಾಗುತ್ತದೆ. ಆದರೆ, ರಾಜ್ಯಸಭೆಯ ಕೆಲವು ಸದಸ್ಯರು ಸಂಸತ್ತಿನ ಪಾವಿತ್ರ್ಯಕ್ಕೆ ಕಳಂಕ ತಂದರು. ಇಂತಹ ವರ್ತನೆಯನ್ನು ಸಂಸತ್ತು ಅಥವಾ ಶಾಸನಸಭೆಗಳಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಮಂಗಳವಾರ ರಾಜ್ಯಸಭೆಯಲ್ಲಿ ನಡೆದಂತಹ ಘಟನೆ ಹಿಂದೆಂದೂ ನಡೆದಿರಲಿಲ್ಲ. ಸಭಾಪತಿಯವರು ಅದಕ್ಕಾಗಿಯೇ ತೀವ್ರ ವೇದನೆ ವ್ಯಕ್ತಪಡಿಸಿದರು. ರಾಜ್ಯಸಭೆಯ ಇತಿಹಾಸದಲ್ಲೇ ಅದು ಕರಾಳ ದಿನವಾಗಿ ಉಳಿಯುತ್ತದೆ. ಶಾಸನಸಭೆಯಲ್ಲಿ ಇರುವವರು ಆದರ್ಶಪ್ರಾಯವಾದ ಮಾದರಿ ನಡವಳಿಕೆ ಹೊಂದಿರಬೇಕು. ಆದರೆ, ಇಂತಹ ಘಟನೆಗಳು ಸರಿಯಾಗಿ ಚಿಂತಿಸುವ ಜನರು ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಮ್ಮ ಸದಸ್ಯರು ಗೌರವಯುತವಾಗಿ ನಡೆದುಕೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಆಯಾ ರಾಜಕೀಯ ಪಕ್ಷಗಳಿಗೆ ಸೇರಿದ್ದು. ರಾಜಕೀಯ ನಡವಳಿಕೆ ಮತ್ತು ಸಾರ್ವಜನಿಕ ನಡವಳಿಕೆ ಕುರಿತು ರಾಜಕೀಯ ಪಕ್ಷಗಳು ತಮ್ಮ ನಾಯಕರು, ಸದಸ್ಯರಿಗೆ ಪಾಠ ಹೇಳುವ ಅಗತ್ಯವಿದೆ ಎಂದು ಕಾಗೇರಿ ಹೇಳಿದರು.

'ಲೋಕಸಭೆ ಮತ್ತು ರಾಜ್ಯಸಭೆಯ ಕಲಾಪಗಳು ಕುಸ್ತಿ ಅಖಾಡದಂತೆ ಆದವು. ಈ ರೀತಿ ಅಸಭ್ಯವಾಗಿ ವರ್ತಿಸಿದ ಎಲ್ಲ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಸೆಪ್ಟೆಂಬರ್‌ನಲ್ಲಿ ವಿಧಾನಮಂಡಲದ ಅಧಿವೇಶನ ನಡೆಸಲೇಬೇಕಿದೆ. ಬೆಳಗಾವಿಯಲ್ಲಿ ಅಧಿವೇಶನ ನಡೆಸಬೇಕೊ? ಅಥವಾ ಬೆಂಗಳೂರಿನಲ್ಲೇ ನಡೆಸಬೇಕೊ? ಎಂಬ ಬಗ್ಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಇಒ ಕಚೇರಿಯಲ್ಲೇ ಟಿ.ಸಿ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿಯೇ (ಬಿಇಒ) ವಿದ್ಯಾರ್ಥಿಗಳು ವರ್ಗಾವಣಾ ಪತ್ರವನ್ನು (ಟಿ.ಸಿ) ಪಡೆಯಬಹುದು ಎಂಬ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರ ಹೇಳಿಕೆಗೆ ಖಾಸಗಿ ಶಾಲಾ ಆಡಳಿತ ಮಂಡಳಿಗಳು ವಿರೋಧ ವ್ಯಕ್ತಪಡಿಸಿವೆ.

'ಪ್ರಧಾನ ಕಾರ್ಯದರ್ಶಿಯವರ ಹೇಳಿಕೆಯಿಂದ ಪೋಷಕರು ಮತ್ತು ಶಾಲಾ ಆಡಳಿತ ಮಂಡಳಿಗಳ ನಡುವೆ ಸಂಘರ್ಷ ಏರ್ಪಡುತ್ತದೆ. ಎಲ್ಲವೂ ಬಿಇಒ ಕಚೇರಿಯಲ್ಲೇ ಆಗುವುದಾದರೆ ಶಾಲೆಗಳಾದರೂ ಏಕೆ ಬೇಕು' ಎಂದು ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಪ್ರಶ್ನಿಸಿದ್ದಾರೆ.

'ವಿದ್ಯಾರ್ಥಿಗಳು ಟಿ.ಸಿಯನ್ನು ಬಿಇಒ ಕಚೇರಿಯಲ್ಲಿ ಪಡೆದರೂ, ವ್ಯಾಸಂಗ ಪ್ರಮಾಣಪತ್ರ, ಅಂಕಪಟ್ಟಿ ಇತ್ಯಾದಿ ದಾಖಲೆಗಳನ್ನು ಪಡೆಯಲು ಶಾಲೆಗೆ ಬರಲೇಬೇಕು. ವಿದ್ಯಾರ್ಥಿಗಳನ್ನು ಶಾಲೆ ಮತ್ತು ಬಿಇಒ ಕಚೇರಿಗೆ ಅಲೆದಾಡಿಸುವುದೂ ಸೇರಿದಂತೆ ಅನೇಕ ಸಮಸ್ಯೆಗಳು ಇದರಿಂದ ಉದ್ಭವಿಸಲಿವೆ' ಎಂದು ಅವರು ಹೇಳಿದ್ದಾರೆ.

'ಕರ್ನಾಟಕ ಶಿಕ್ಷಣ ಹಕ್ಕು 1983 ಹಾಗೂ ನಂತರ ಬಂದ ಆರ್‌ಟಿಇ ಕಾಯ್ದೆಯ ನಿಯಮ 5ರಲ್ಲಿ, ಟಿ.ಸಿ ನಿರಾಕರಿಸುವ ಅಧಿಕಾರ ಶಾಲಾ ಮುಖ್ಯಸ್ಥರಿಗೆ ಇರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಇದನ್ನು ಶಾಲೆಗಳು ಪಾಲಿಸುತ್ತವೆ. ಆದರೆ, ಹಿಂದಿನ ಶಿಕ್ಷಣ ಸಚಿವರು ಹಾಗೂ ಇಲಾಖೆಯ ಅಧಿಕಾರಿಗಳು ಶುಲ್ಕದ ವಿಚಾರವಾಗಿ ಗೊಂದಲದ ಹೇಳಿಕೆಗಳನ್ನು ನೀಡಿ ಪೋಷಕರನ್ನು ತಪ್ಪು ದಾರಿಗೆ ಎಳೆದರು' ಎಂದೂ ಅವರು ದೂರಿದ್ದಾರೆ.

'ಟಿ.ಸಿ ವಿಚಾರವನ್ನು ಶಾಲಾ ಮುಖ್ಯಸ್ಥರ ನಿರ್ಧಾರಕ್ಕೆ ಬಿಡಬೇಕು ಈವರೆಗೆ ಇದ್ದಂತಹ ನಿಯಮವನ್ನೇ ಮುಂದುವರಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಡಿಕೆಶಿ ಭೇಟಿಯಾದ ರೇವೂ ನಾಯ್ಕ್ ಬೆಳಮಗಿ

ಬೆಂಗಳೂರು: ಜೆಡಿಎಸ್ ಮುಖಂಡ ರೇವೂ ನಾಯ್ಕ್ ಬೆಳಮಗಿ ಕಾಂಗ್ರೆಸ್ ಸೇರಲು ಮುಂದಾಗಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿಮಾಡಿ ಚರ್ಚೆ ನಡೆಸಿದ್ದಾರೆ.

ಬಿಜೆಪಿಯಲ್ಲಿ ಸಕ್ರಿಯರಾಗಿದ್ದ ಬೆಳಮಗಿ ಅವರು ಶಾಸಕರಾಗಿ, ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕಲಬುರ್ಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿತ್ತು. ಬಳಿಕ ಜೆಡಿಎಸ್ ಸೇರಿದ್ದ ಅವರು, ಆ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ ಸೋತರೂ, ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಸಕ್ರಿಯರಾಗಿದ್ದರು.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಪತನಗೊಂಡ ಬಳಿಕ ರೇವೂ ನಾಯ್ಕ್ ಅವರು ಜೆಡಿಎಸ್‌ನಲ್ಲೂ ಸಕ್ರಿಯರಾಗಿರಲಿಲ್ಲ. ಕಲಬುರ್ಗಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಪಡೆಯುವ ಮಹತ್ವಾಕಾಂಕ್ಷೆಯಿಂದ ಪಕ್ಷಾಂತರಕ್ಕೆ ಸಿದ್ಧತೆ ನಡೆಸಿದ್ದಾರೆ. ಅದಕ್ಕೆ ಪೂರಕವಾಗಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಮಾಡಿ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಘಾಟಿ ಸುಬ್ರಹ್ಮಣ್ಯಸ್ವಾಮಿ ದರ್ಶನ ಪಡೆದ ಯಡಿಯೂರಪ್ಪ, ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬಿ.ಎಸ್.ಯಡಿಯೂರಪ್ಪ ಹಾಗೂ ಅವರ ಪುತ್ರ ವಿಜಯೇಂದ್ರ ಘಾಟಿ ಸುಬ್ರಹ್ಮಣ್ಯಸ್ವಾಮಿ ದರ್ಶನ ಪಡೆದರು

ದೊಡ್ಡಬಳ್ಳಾಪುರ: ಶ್ರಾವಣ ಮಾಸದ ನಾಗರಪಂಚಮಿ ಹಿನ್ನೆಲೆಯಲ್ಲಿ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಕ್ಕೆ ಶಾಸಕ ಬಿ.ಎಸ್.ಯಡಿಯೂರಪ್ಪ ಶುಕ್ರವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ, ಶಾಸಕ ಎಸ್. ಆರ್.ವಿಶ್ವನಾಥ್ ಇದ್ದರು. ಕೊರೊನಾ ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ಜಿಲ್ಲಾ ಆಡಳಿತ ಸೆ.7ರವರೆಗೂ ಶನಿವಾರ, ಭಾನುವಾರ ಹಾಗೂ ಸರ್ಕಾರಿ ರಜಾ ದಿನಗಳಂದು ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ, ಖಾಸಗಿ ದೇವಾಲಯಗಳನ್ನು ಬಂದ್ ಮಾಡುವಂತೆ ಆದೇಶ ಹೊರಡಿಸಿದೆ. ಹಾಗೆಯೇ ಶುಕ್ರವಾರ ನಾಗರ ಪಂಚಮಿ ಹಿನ್ನೆಲೆಯಲ್ಲಿ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವ ಸಾಧ್ಯತೆಯಿಂದಾಗಿ ಜಿಲ್ಲಾಡಳಿತ ಶುಕ್ರವಾರ ದೇವಾಲಯ ಬಂದ್ ಮಾಡುವಂತೆ ನೀಡಿದ್ದ ಮೌಖಿಕ ಸೂಚನೆಯಿಂದಾಗಿ ದೇವಾಲಯ ಬಂದ್ ಮಾಡಲಾಗಿತ್ತು. ಹೀಗಾಗಿ ಬೆಳಗಿನಿಂದಲೇ ದೇವಾಲಯದ ಬಾಗಿಲು ಮುಚ್ಚಲಾಗಿತ್ತು.

ಆದರೆ, ಯಡಿಯೂರಪ್ಪ ಭೇಟಿಯಿಂದಾಗಿ ಆಡಳಿತ ಮಂಡಳಿ ದೇವಾಲಯದ ಬಾಗಿಲು ತೆರೆಯಲಾಯಿತು. ಯಡಿಯೂರಪ್ಪ ಅವರು ದೇವರ ದರ್ಶನ ಮಾಡಿದ ನಂತರ ಸಾರ್ವಜನಿಕರಿಗೂ ದೇವರ ದರ್ಶನಕ್ಕೆ ಸಂಜೆವರೆಗೂ ಬಾಗಿಲು ತೆರೆಯಲಾಯಿತು.

ರಾಜಕೀಯ ವಿರೋಧಿಗಳಾಗಿರುವ ಗುರು, ಶಿಷ್ಯನ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಹೊಸಕೋಟೆಯಲ್ಲಿ ನಡೆದ ಕನಕ ಕೋಆಪರೇಟೀವ್ ಸೊಸೈಟಿ ಉದ್ಘಾಟನೆಯ ವೇಳೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಸಚಿವ ಎಂಟಿಬಿ ನಾಗರಾಜ್ ಒಟ್ಟಿಗೆ ಭೋಜನವನ್ನು ಮಾಡಿದರು. ಜೊತೆಯಲ್ಲಿ ಹೆಬ್ಬಾಳ ಶಾಸಕ ಭೈರತಿ ಸುರೇಶ್ ಇದ್ದರು.

ಹೊಸಕೋಟೆ: ನಗರದಲ್ಲಿ ಶುಕ್ರವಾರ ನಡೆದ ಕನಕ ಸಮೃದ್ಧಿ ಕೋ ಆಪರೇಟಿವ್ ಸೊಸೈಟಿಯ ಉದ್ಘಾಟನಾ ಸಮಾರಂಭವು, ರಾಜಕೀಯವಾಗಿ ವಿರೋಧಿಗಳಾಗಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಸಚಿವ ಎಂ.ಟಿ.ಬಿ ನಾಗರಾಜ್ ಅವರ ಮುಖಾಮುಖಿಗೆ ವೇದಿಕೆಯಾಯಿತು.

ಸೊಸೈಟಿಯ ಉದ್ಘಾಟನೆಗೆ ಬಂದಿದ್ದ ಸಿದ್ದರಾಮಯ್ಯ ಅವರು ಎಂ.ಟಿ.ಬಿ ನಾಗರಾಜ್ ಅವರೊಟ್ಟಿಗೆ ಒಂದೇ ಟೇಬಲ್‌ನಲ್ಲಿ ಕುಳಿತು ಊಟ ಮಾಡಿ ಕುಶಲೋಪರಿ ವಿಚಾರಿಸಿದ್ದು, ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಸಿದ್ದರಾಮಯ್ಯ ಅವರು ಕಾರ್ಯಕ್ರಮಕ್ಕೆ ತಡವಾಗಿ ಬಂದರು. ಅವರ ಬರುವಿಕೆಗಾಗಿ ಎಂ.ಟಿ.ಬಿ ನಾಗರಾಜ್ ಕಾದು ಕುಳಿತಿದ್ದರು. ಜತೆಯಲ್ಲಿಯೇ ಊಟ ಮಾಡಿದ ಬಳಿಕ ಕಾರ್ಯಕ್ರಮಕ್ಕೂ ಅವರ ಜತೆಯಲ್ಲಿಯೇ ಸಾಗಿದರು. ಇದೇ ವೇಳೆ ಸಚಿವರ ಬೆಂಬಲಿಗರು ನಾಗರಾಜ್‌ಗೆ ಕಾಂಗ್ರೆಸ್ ಟಿಕೆಟ್ ನೀಡುವಂತೆ ಸಿದ್ದರಾಮಯ್ಯ ಅವರ ಮುಂದೆಯೇ ಘೋಷಣೆ ಕೂಗಿದರು.

ಸಚಿವರ ಸ್ಪಷ್ಟನೆ: 'ಸಮುದಾಯದ ಕನಕ ಸಮೃದ್ಧಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಪ್ರಾರಂಭಿಸಲಾಗಿದೆ. ಇದರ ಉದ್ಘಾಟನೆಗಾಗಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗಿತ್ತು. ಇದೇ ಸಂದರ್ಭದಲ್ಲಿ ಆಯೋಜಕರು ಊಟದ ವ್ಯವಸ್ಥೆ ಮಾಡಿದ್ದರು. ಆಗ ನಾವಿಬ್ಬರೂ ಒಂದೇ ಟೇಬಲ್‌ನಲ್ಲಿ ಭೋಜನ ಮಾಡಿದ್ದು ಬಿಟ್ಟರೆ ಮತ್ತೇನೂ ವಿಶೇಷತೆ ಇಲ್ಲ. ಅದನ್ನು ರಾಜಕೀಯವಾಗಿ ನೋಡುವುದು ಬೇಡ' ಎಂದು ಸಚಿವ ನಾಗರಾಜ್ ಸ್ಪಷ್ಟಪಡಿಸಿದರು.

ಸಂಕ್ಷಿಪ್ತ ಸುದ್ದಿ

ಆ.16 ರಿಂದ ಕೇಂದ್ರ ಸಚಿವರ ಜನಾಶೀರ್ವಾದ ಯಾತ್ರೆ

ಬೆಂಗಳೂರು: ಸಂಸತ್ ಅಧಿವೇಶನದಲ್ಲಿ ಕೇಂದ್ರದ ನೂತನ ಸಚಿವರನ್ನು ಪರಿಚಯಿಸಲು ಪ್ರಧಾನಿಯವರಿಗೆ ಅವಕಾಶ ನೀಡದೆ ಕಾಂಗ್ರೆಸ್ ಅಡ್ಡಿಪಡಿಸಿದ್ದರಿಂದ ನೂತನ ಸಚಿವರನ್ನು ಜನರಿಗೆ ಪರಿಚಯಿಸಲು ಇದೇ 16 ರಿಂದ ರಾಜ್ಯದಲ್ಲೂ 'ಜನಾಶೀರ್ವಾದ ಯಾತ್ರೆ' ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ತಿಳಿಸಿದರು.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಒಟ್ಟು ನಾಲ್ಕು ತಂಡಗಳಲ್ಲಿ ಯಾತ್ರೆ ಸಂಚರಿಸಲಿದೆ ಎಂದರು.

ಕೇಂದ್ರ ಸಚಿವರಾದ ಎ.ನಾರಾಯಣಸ್ವಾಮಿ, ಶೋಭಾ ಕರಂದ್ಲಾಜೆ, ರಾಜೀವ್ ಚಂದ್ರಶೇಖರ್ ಮತ್ತು ಭಗವಂತ ಖೂಬಾ ಅವರ ನೇತೃತದಲ್ಲಿ ಈ ತಂಡಗಳು ರಾಜ್ಯದಲ್ಲಿ ಪ್ರವಾಸ ಮಾಡಲಿವೆ. 5 ದಿನಗಳ ಪ್ರವಾಸದಲ್ಲಿ 2,030 ಕಿ.ಮೀ ದೂರ ಕ್ರಮಿಸಲಿದ್ದು, 24 ಲೋಕಸಭಾ ಕ್ಷೇತ್ರಗಳು, 72 ವಿಧಾನಸಭಾ ಕ್ಷೇತ್ರಗಳಲ್ಲಿ 161 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ದೇಶದಲ್ಲಿ ಒಟ್ಟು 160 ದಿನ ವಿವಿಧ ತಂಡಗಳು ಪ್ರವಾಸ ಮಾಡಲಿದ್ದು, ಮೋದಿ ನೇತೃತ್ವದ ಸರ್ಕಾರ ಜಾರಿಗೆ ತಂದ ಜನಪರ ಯೋಜನೆಗಳನ್ನು ಜನರಿಗೆ ಪರಿಚಯಿಸಲಿವೆ. ವಿವಿಧ ಲಸಿಕಾ ಕೇಂದ್ರಗಳು, ಪಡಿತರ ಅಂಗಡಿಗಳು, ಸಾಹಿತಿಗಳು, ಯೋಧರು, ಗಣ್ಯ ವ್ಯಕ್ತಿಗಳು, ಜನಸಂಘ ಮತ್ತು ಬಿಜೆಪಿ ಹಿರಿಯ ನಾಯಕರ ಮನೆಗಳಿಗೂ ತಂಡ ಭೇಟಿ ನೀಡಲಿದೆ ಎಂದರು. ಕೋವಿಡ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಿ ಕಾರ್ಯಕ್ರಮ ರೂಪಿಸಲಾಗುವುದು ಎಂದೂ ಸಿದ್ದರಾಜು ತಿಳಿಸಿದರು.

ಗೊರವನಹಳ್ಳಿ ದೇಗುಲ ದರ್ಶನಕ್ಕೆ ನಿಷೇಧ

ಕೊರಟಗೆರೆ: ತಾಲ್ಲೂಕಿನ ಗೊರವನಹಳ್ಳಿ ಮಹಾಲಕ್ಷ್ಮಿ ದೇವರ ದರ್ಶನಕ್ಕೆ ಹಬ್ಬದ ಸಂದರ್ಭದಲ್ಲಿ ಭಕ್ತರ ಪ್ರವೇಶ ನಿಷೇಧಿಸಲಾಗಿದೆ. ನಾಗರಪಂಚಮಿ, ವರಮಹಾಲಕ್ಷ್ಮಿ ಸೇರಿದಂತೆ ಮುಂದಿನ ಹಬ್ಬದ ದಿನಗಳಂದು ಪ್ರವೇಶ ಇರುವುದಿಲ್ಲ.

ಕೋವಿಡ್ ನಿಯಂತ್ರಿಸಲು ಮುಂಜಾಗ್ರತಾ ಕ್ರಮವಾಗಿ ಭಕ್ತರಿಗೆ ದೇಗುಲ ಪ್ರವೇಶ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಹಾಗಾಗಿ ದೇಗುಲಕ್ಕೆ ಪ್ರವೇಶ ನೀಡುತ್ತಿಲ್ಲ ಎಂದು ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ಕಾರ್ಯನಿರ್ವಾಹಕ ಅಧಿಕಾರಿ ಕೇಶವಮೂರ್ತಿ ತಿಳಿಸಿದ್ದಾರೆ.

ಶನಿವಾರ, ಭಾನುವಾರ, ಸೋಮವಾರ ಹಾಗೂ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ದೇವರ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಪೂಜೆಗೆ ಅವಕಾಶವಿಲ್ಲ. ಕೇವಲ ದರ್ಶನ ಪಡೆಯಬಹುದಾಗಿದೆ.

ಯಾವುದಾದರೂ ಒಂದು ಪ್ರಮಾಣಪತ್ರ ಇದ್ದರೆ ಸಾಕು

ಜೋಗ ವೀಕ್ಷಣೆ: ಮಾರ್ಗಸೂಚಿಯಲ್ಲಿ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಜೋಗ ಜಲಪಾತದ ವೈಭವ

ಕಾರ್ಗಲ್: ವಿಶ್ವವಿಖ್ಯಾತ ಜೋಗ ಜಲಪಾತದ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಆರ್.ಟಿ.ಪಿ.ಸಿ.ಆರ್ ನೆಗೆಟಿವ್ ವರದಿ ದೃಢೀಕರಣ ಪತ್ರ ಕಡ್ಡಾಯ ಎಂಬ ಜಿಲ್ಲಾಧಿಕಾರಿ ಆದೇಶಕ್ಕೆ ತಿದ್ದುಪಡಿ ಮಾಡಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ಕಾರ್ಯದರ್ಶಿ ಎಚ್.ಎಸ್. ರಾಮಕೃಷ್ಣ ಮಾಹಿತಿ ನೀಡಿದ್ದಾರೆ.

ಜಿಲ್ಲೆಯ ಎಲ್ಲಾ ಪ್ರವಾಸಿ ತಾಣಗಳಿಗೆ ಅನ್ವಯವಾಗುವಂತೆ 72 ಗಂಟೆಗಳ ಒಳಗಾಗಿ ಪಡೆದಿರುವ ಕೋವಿಡ್ ಆರ್.ಟಿ.ಪಿ.ಸಿ.ಆರ್. ನೆಗೆಟಿವ್ ವರದಿ, ರಾಟ್ ನೆಗೆಟಿವ್ ವರದಿ ಅಥವಾ ಕೋವಿಡ್ 2ನೇ ಲಸಿಕೆ ಪಡೆದಿರುವ ಬಗ್ಗೆ ಪ್ರಮಾಣಪತ್ರ ಈ ಮೂರರಲ್ಲಿ ಒಂದನ್ನು ಹಾಜರುಪಡಿಸಿದರೆ ಸಾಕು ಎಂದು ತಿದ್ದುಪಡಿ ಆದೇಶದಲ್ಲಿ ತಿಳಿಸಲಾಗಿದೆ. ವಾರಾಂತ್ಯದಲ್ಲಿ ಬರುವ ಪ್ರವಾಸಿಗರಿಗೂ ಇದೇ ಆದೇಶ ಮುಂದುವರಿಯುವುದು ಎಂದು ಅವರು ತಿಳಿಸಿದರು.

ಜಿಲ್ಲೆಯ ಹಲವು ಪ್ರವಾಸಿ ತಾಣಗಳಲ್ಲಿ ಜಾರಿಯಾಗುತ್ತಿರುವ ನೀತಿ ತಾರತಮ್ಯದಿಂದ ಕೂಡಿದೆ. ಜಿಲ್ಲೆಯಲ್ಲಿರುವ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮ, ಸಕ್ರೆಬೈಲು ಆನೆ ಬಿಡಾರ, ಕೊಡಚಾದ್ರಿ ತಾಣ, ನಿಟ್ಟೂರು ಸುತ್ತಲಿನ ಜಲಪಾತಗಳಿಗೆ ಪ್ರವಾಸಿಗರು ಯಾವುದೇ ಅಡೆ ತಡೆಯಿಲ್ಲದೇ ಬಂದು ಹೋಗುತ್ತಿದ್ದಾರೆ. ಆದರೆ ಜೋಗದಲ್ಲಿ ಮಾತ್ರ ಕಠಿಣ ನಿಯಮ ಇದೆ ಎಂದು ಪಟ್ಟಣ ಪಂಚಾಯಿತಿ ಮಾಜಿ ಸದಸ್ಯ ಎಸ್.ಎಲ್. ರಾಜಕುಮಾರ್ ಆರೋಪಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಉತ್ತರಗಳನ್ನು ಹೊಂದಿರುವ ವ್ಯಕ್ತಿಯ ಮಾತನ್ನು ಕೇಳಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಪ್ರಶ್ನೆಗಳಿರುವ ವ್ಯಕ್ತಿಯ ಮಾತನ್ನು ಆಲಿಸಿ. -ಆಲ್ಬರ್ಟ್ ಐನ್‌ಸ್ಟೀನ್

ವ್ಯರ್ಥವಾದ ಮುಂಗಾರು ಅಧಿವೇಶನ ಸಂಸದೀಯ ಪ್ರಜಾಸತ್ತೆಯ ದಮನ

ಸಂಸತ್ತಿನ ಈ ಹಿಂದಿನ ಹಲವು ಅಧಿವೇಶನಗಳ ರೀತಿಯಲ್ಲಿಯೇ ಈ ಬಾರಿಯ ಮುಂಗಾರು ಅಧಿವೇಶನದ ಕಲಾಪಗಳೂ ಗದ್ದಲ ಮತ್ತು ಅಡ್ಡಿಪಡಿಸುವಿಕೆಯಿಂದಾಗಿ ವ್ಯರ್ಥವಾಗಿ ಹೋಗಿವೆ. ನಿಗದಿತ ವೇಳಾಪಟ್ಟಿಗಿಂತ ಎರಡು ದಿನ ಮೊದಲೇ ಸಂಸತ್ತಿನ ಎರಡೂ ಸದನಗಳ ಅಧಿವೇಶನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಉಳಿದ ಎರಡು ದಿನಗಳ ಕಲಾಪ ಕೂಡ ಗದ್ದಲದಲ್ಲಿ ಮುಳುಗಿ ಹೋಗಲಿದೆ ಎಂಬ ಕಾರಣಕ್ಕಾಗಿಯೇ ಅಧಿವೇಶನವನ್ನು ಎರಡು ದಿನ ಮೊದಲೇ ಮೊಟಕು ಮಾಡಲಾಗಿದೆ. ಜುಲೈ 19ರಂದು ಅಧಿವೇಶನ ಆರಂಭ ಆದಾಗಿನಿಂದ ಹೆಚ್ಚಿನ ದಿನಗಳಲ್ಲಿ ಉಭಯ ಸದನಗಳಲ್ಲಿಯೂ ಕಲಾಪವು ಸಹಜವಾಗಿ ನಡೆಯಲಿಲ್ಲ. ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಿದ ಪ್ರಕರಣ, ರೈತರ ಪ್ರತಿಭಟನೆ, ಬೆಲೆ ಏರಿಕೆ, ಅದರಲ್ಲೂ ಮುಖ್ಯವಾಗಿ ತೈಲ ಬೆಲೆ ಏರಿಕೆ ವಿಚಾರಗಳ ಬಗ್ಗೆ ಚರ್ಚೆ ನಡೆಸಲು ಸರ್ಕಾರಕ್ಕೆ ಇಚ್ಛೆ ಇರಲಿಲ್ಲ. ಹಾಗಾಗಿ, ವಿರೋಧ ಪಕ್ಷಗಳು ಕಲಾಪಕ್ಕೆ ಅಡ್ಡಿ ಮಾಡಿವೆ. ಇತರ ಹಿಂದುಳಿದ ವರ್ಗಗಳನ್ನು (ಒಬಿಸಿ) ಗುರುತಿಸುವ ಅಧಿಕಾರವನ್ನು ರಾಜ್ಯಗಳಿಗೆ ಕೊಡುವ ಸಂವಿಧಾನ ತಿದ್ದುಪಡಿ ಮಸೂದೆಯ ಬಗೆಗಿನ ಚರ್ಚೆಯ ಸಂದರ್ಭದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಸಹಕಾರ ಕಂಡು ಬಂದಿತ್ತು. ಆದರೆ, ಯಾವ ಚರ್ಚೆಯೂ ಇಲ್ಲದೆ ಹಲವು ಮಸೂದೆಗಳು ಅಂಗೀಕಾರ ಪಡೆದುಕೊಂಡಿವೆ. ವಿವಾದಾತ್ಮಕವಾದ ವಿಮಾ ಮಸೂದೆಯು ಮೊಟಕುಗೊಂಡ ಅಧಿವೇಶನದ ಕೊನೆಯ ದಿನ ಗೌಜು, ಗದ್ದಲದ ನಡುವೆಯೇ ಅಂಗೀಕಾರ ಪಡೆದುಕೊಂಡಿತು. ಸದನವು ಸಂಘರ್ಷಾತ್ಮಕ ಸ್ಥಿತಿಗೆ ಸಾಕ್ಷಿಯಾಯಿತು.

ದೇಶದಲ್ಲಿ ಪ್ರಜಾತಂತ್ರದ ಸ್ವರೂಪವು ಎಷ್ಟು ಊನಗೊಂಡಿದೆ ಎಂಬುದು ಸಂಸತ್ ಕಲಾಪದಲ್ಲಿ ಪ್ರತಿಬಿಂಬಿತವಾಗಿದೆ

ಸದನ ನಡೆಯದೇ ಇದ್ದುದಕ್ಕೆ ಪರಸ್ಪರರು ಕಾರಣ ಎಂದು ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಆರೋಪ-ಪ್ರತ್ಯಾರೋಪ ನಡೆದಿದೆ. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಮತ್ತು ರಾಜ್ಯಸಭೆಯ ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಕಲಾಪವು ನಡೆಯದೇ ಇದ್ದುದಕ್ಕೆ ಕಳವಳ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ಸೇರಿ ಸರ್ಕಾರದ ಕಡೆಯವರು ವಿರೋಧ ಪಕ್ಷಗಳ ಮೇಲೆ ಆರೋಪ ಹೊರಿಸಿದ್ದಾರೆ. ಎಲ್ಲರನ್ನೂ ಆಲಿಸುವ ಸ್ಫೂರ್ತಿಯನ್ನು ತೋರಿಲ್ಲ ಮತ್ತು ನಿರಂಕುಶ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಹರಿಹಾಯ್ದಿವೆ. ಗದ್ದಲವೇ ಸಹಜ ಸ್ಥಿತಿ ಎಂಬಂತಾಗಿತ್ತು ಮತ್ತು ಸಂವಾದದ ಜಾಗದಲ್ಲಿ ಸಂಘರ್ಷವು ಬಂದು ಕೂತಿತ್ತು. ಈ ಅಧಿವೇಶನದಲ್ಲಿ ಲೋಕಸಭೆಯು ಶೇ 21ರಷ್ಟು ಮತ್ತು ರಾಜ್ಯಸಭೆಯು ಶೇ 28ರಷ್ಟು ಕಾರ್ಯದಕ್ಷತೆಯನ್ನು ಮಾತ್ರ ತೋರಿವೆ ಎಂಬುದೇ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಆಘಾತಕಾರಿ ಸುದ್ದಿ. ನಿಜವಾಗಿಯೂ ನಡೆದ ಕೋಲಾಹಲ ಎಷ್ಟು ಎಂಬುದನ್ನು ಈ ಅಂಕಿ ಅಂಶಗಳು ಸ್ಪಷ್ಟವಾಗಿ ತೆರೆದು ಇರಿಸುವುದಿಲ್ಲ. ಪ್ರಜಾಸತ್ತೆಯ ಅತ್ಯುನ್ನತ ಸಂಸ್ಥೆಯ ಮಾನದಂಡವು ಎಷ್ಟು ಕೆಳಕ್ಕೆ ಕುಸಿದಿದೆ ಮತ್ತು ಆಡಳಿತ ಮತ್ತು ವಿರೋಧ ಪಕ್ಷಗಳ ನಡುವಣ ಅಪನಂಬಿಕೆ ಯಾವ ಪ್ರಮಾಣದಲ್ಲಿದೆ ಎಂಬುದನ್ನೂ ಈ ಅಂಕಿ ಅಂಶವು ಹೇಳುವುದಿಲ್ಲ. ಸಂಸದೀಯ ವ್ಯವಸ್ಥೆಗೆ ಎಷ್ಟು ಹಾನಿ ಆಗಿದೆ ಎಂಬುದು ಸ್ಪಷ್ಟವಾಗಿ ಗೋಚರವಾಗಿದೆ. ಪ್ರಜಾಪ್ರಭುತ್ವದ ಇತರ ಸಂಸ್ಥೆಗಳು ಯಾವ ಮಟ್ಟದಲ್ಲಿ ತಳಕ್ಕೆ ಕುಸಿದಿವೆ ಮತ್ತು ದೇಶದಲ್ಲಿ ಪ್ರಜಾತಂತ್ರದ ಸ್ವರೂಪವು ಎಷ್ಟು ಊನಗೊಂಡಿದೆ ಎಂಬುದು ಸಂಸತ್ ಕಲಾಪದಲ್ಲಿ ಪ್ರತಿಬಿಂಬಿತವಾಗಿದೆ.

ಸಂಸತ್ತು ಸಹಜವಾಗಿ ಕಾರ್ಯನಿರ್ವಹಿಸಬೇಕು ಎಂಬುದನ್ನು ಖಾತರಿಪಡಿಸಿಕೊಳ್ಳುವುದರಲ್ಲಿ ಹೆಚ್ಚಿನ ಹೊಣೆಗಾರಿಕೆಯು ಸರ್ಕಾರ ಮತ್ತು ಆಡಳಿತ ಪಕ್ಷದ್ದೇ ಆಗಿದೆ ಎಂಬುದು ಚರ್ಚಾರ್ಹ ವಿಷಯವೇನೂ ಅಲ್ಲ. ಹಾಗೆಯೇ, ಶಾಸನಕ್ಕೆ ಸಂಬಂಧಿಸಿದ ಕೆಲಸಗಳು, ಸಮಾಲೋಚನೆ, ಚರ್ಚೆಗಳು ಪ್ರಜಾಸತ್ತಾತ್ಮಕವಾಗಿ ಮತ್ತು ದಕ್ಷವಾಗಿ ನಡೆಯುವಂತೆಯೂ ಸರ್ಕಾರವೇ ನೋಡಿಕೊಳ್ಳಬೇಕು. ಪ್ರಶ್ನೆ ಕೇಳುವುದು ವಿರೋಧ ಪಕ್ಷಗಳ ಹಕ್ಕು. ಸರ್ಕಾರ ಉತ್ತರ ನೀಡಲೇ ಬೇಕು. ಈ ಬಾರಿಯ ಅಧಿವೇಶನವು ಸ್ಥಗಿತಗೊಳ್ಳಲು ಅತಿ ಹೆಚ್ಚು ಕಾರಣವಾದದ್ದು ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ ನಡೆಸಲಾಗಿದೆ ಎಂಬ ಪ್ರಕರಣ. ಈ ಪ್ರಕರಣದ ಬಗ್ಗೆ ಚರ್ಚೆ ಆಗಬೇಕು ಎಂದು ವಿರೋಧ ಪಕ್ಷಗಳು ಪಟ್ಟು ಹಿಡಿದವು. ವಿರೋಧ ಪಕ್ಷಗಳು ಎಷ್ಟೇ ಹಟ ಹಿಡಿದರೂ ಸರ್ಕಾರವು ಚರ್ಚೆ ನಡೆಸುವುದಿಲ್ಲ ಎಂಬ ನಿಲುವಿನಿಂದ ಅಣುವಿನಷ್ಟೂ ಆಚೀಚೆ ಸರಿಯಲಿಲ್ಲ. ಪೆಗಾಸಸ್ ಪ್ರಕರಣದ ಬಗ್ಗೆ ಚರ್ಚೆ ನಡೆಸುವುದು ಅಗತ್ಯವಿಲ್ಲ ಎಂಬ ಸರ್ಕಾರದ ಪ್ರತಿಪಾದನೆ ಮತ್ತು ಅದಕ್ಕೆ ಸರ್ಕಾರವು ನೀಡಿರುವ ಸಮರ್ಥನೆಯು ಮನವರಿಕೆ ಆಗುವ ರೀತಿಯಲ್ಲಿ ಇಲ್ಲ. ಸುಪ್ರೀಂ ಕೋರ್ಟ್ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಈ ವಿಚಾರ ಚರ್ಚೆ ಆಗುತ್ತಲೇ ಇದೆ. ಹಾಗಿರುವಾಗ ಸಂಸತ್ತಿನಲ್ಲಿ ಚರ್ಚೆ ಬೇಕಾಗಿಲ್ಲ ಎಂಬುದಕ್ಕೆ ಏನು ಸಮರ್ಥನೆ ಇದೆ ಎಂಬುದೂ ಸ್ಪಷ್ಟವಿಲ್ಲ. ಇದರ ನಡುವೆ, ಸರ್ಕಾರವು ತನಗೆ ಬೇಕಿರುವ ಮಸೂದೆಗಳಿಗೆ ಅಂಗೀಕಾರ ಪಡೆದುಕೊಳ್ಳುವ ಕೆಲಸವನ್ನು ಮಾಡಿದೆ. ಪೆಗಾಸಸ್ ಬೇಹುಗಾರಿಕೆ ಪ್ರಕರಣ ಮತ್ತು ಅದರಲ್ಲಿ ತನ್ನ ಪಾತ್ರದ ಬಗ್ಗೆ ಯಾವ ಚರ್ಚೆಯೂ ನಡೆಯದಂತೆ ನೋಡಿಕೊಳ್ಳುವಲ್ಲಿಯೂ ಸರ್ಕಾರ ಯಶಸ್ವಿಯಾಗಿದೆ. ಇವೆಲ್ಲದರ ಪರಿಣಾಮವಾಗಿ ಸೃಷ್ಟಿಯಾದ ಬಿಕ್ಕಟ್ಟು ಸಂಸತ್ತು ಮತ್ತು ನಮ್ಮ ಪ್ರಜಾಸತ್ತೆಯ ಮೌಲ್ಯವನ್ನು ಇನ್ನಷ್ಟು ತಗ್ಗಿಸಿದೆ.

ದಿನದ ಟ್ವೀಟ್

ಕಾರ್ಯತಂತ್ರ ಏನು?

ಅಫ್ಗಾನಿಸ್ತಾನಕ್ಕೆ ಸಂಬಂಧಿಸಿದಂತೆ ಭಾರತದ ಕಾರ್ಯತಂತ್ರ ಏನು? ರಾವಲ್ಪಿಂಡಿಯಿಂದ ನಿರ್ದೇಶಿತವಾಗುತ್ತಿರುವ ತಾಲಿಬಾನಿಯರ ದಾಳಿಯ ಅಗಾಧ ಪರಿಣಾಮಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳುತ್ತೇವೆ ಎಂಬುದು ನನ್ನ ಖಚಿತ ನಂಬಿಕೆ. ಸದ್ಯಕ್ಕೆ, ಎರಡು ದ್ವೇಷಮಯ ನೆರೆರಾಷ್ಟ್ರಗಳಿಂದಾಗಿ ನಮ್ಮ ಪರಿಸ್ಥಿತಿ ಚೆನ್ನಾಗಿಲ್ಲ.

ನಿರುಪಮಾ ಮೆನನ್ ರಾವ್, ನಿವೃತ್ತ ಐಎಫ್‌ಎಸ್ ಅಧಿಕಾರಿ

ಕಿಡಿನುಡಿ

ಮೇಕೆದಾಟು ಯೋಜನೆಯ ವಿಚಾರದಲ್ಲಿ ಕಣ್ಣುಮುಚ್ಚಾಲೆ ಆಡುವುದನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿಲ್ಲಿಸಿ ನ್ಯಾಯದ ಪರವಾದ ಗಟ್ಟಿ ನಿಲುವು ತೆಗೆದುಕೊಳ್ಳಬೇಕು. ಅನಗತ್ಯ ತಕರಾರು ತೆಗೆಯುತ್ತಿರುವ ತಮಿಳುನಾಡು ಸರ್ಕಾರಕ್ಕೆ ಬಿಗಿಮಾತಿನಿಂದ ಬುದ್ಧಿ ಹೇಳಬೇಕು. ಮಹದಾಯಿ ಯೋಜನೆಯ ರೀತಿಯಲ್ಲಿ ಇಲ್ಲಿಯೂ ರಾಜಕೀಯ ಮಾಡಬಾರದು.

ಸಿದ್ದರಾಮಯ್ಯ, ವಿಧಾನಸಭೆ ವಿರೋಧಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 14-8-1996

• ತಜ್ಞ ಸಮಿತಿ ಹಠಾತ್ ರದ್ದು

ನವದೆಹಲಿ, ಆ. 13- ಕೃಷ್ಣಾ ಯೋಜನೆಯಲ್ಲಿ ಬಚಾವತ್ ತೀರ್ಪಿನ ಉಲ್ಲಂಘನೆ ಮಾಡಲಾಗಿದೆ ಎಂದಿರುವ ಆಂಧ್ರಪ್ರದೇಶ ಮತ್ತು ಕರ್ನಾಟಕದ ಪರಸ್ಪರ ಆರೋಪಗಳ ಬಗೆಗೆ ಖುದ್ದು ಅಧ್ಯಯನ ಮಾಡಿ ವರದಿ ಸಲ್ಲಿಸಲು ತಜ್ಞರ ಸಮಿತಿಯೊಂದನ್ನು ರಚಿಸಲು ಕೈಗೊಂಡಿದ್ದ ತೀರ್ಮಾನವನ್ನು ಕೇಂದ್ರ ಸರ್ಕಾರ ಇಂದು ಕೈಬಿಟ್ಟಿತು.

ಆಂಧ್ರಪ್ರದೇಶದ ಹೈಕೋರ್ಟ್ ಮುಂದೆ ಈಗ ಆಲಮಟ್ಟಿ ಅಣೆಕಟ್ಟು ಎತ್ತರದ ಔಚಿತ್ಯವನ್ನು ಪ್ರಶ್ನಿಸಿರುವ ಅರ್ಜಿಯೊಂದು ವಿಚಾರಣೆಯಲ್ಲಿ ಇರುವುದರಿಂದ ಸಬ್ ಜುಡೀಸ್ ಆಗುವುದೆಂಬ ಕಾರಣವನ್ನು ಸರ್ಕಾರ ನೀಡಿದೆ.

• ಆಲಮಟ್ಟಿ: ಸರ್ಕಾರದ ವಿರುದ್ಧ ಅವಿಶ್ವಾಸ ಮಂಡನೆ

ಬೆಂಗಳೂರು, ಆ. 13- ಆಲಮಟ್ಟಿ ಅಣೆಕಟ್ಟೆ ವಿಚಾರದಲ್ಲಿ ಸರ್ಕಾರ ತಪ್ಪುಹಾದಿ ತುಳಿಯುತ್ತಿದೆ ಎಂದು ಧರಣಿ ಹೂಡಿರುವ ಪ್ರತಿಪಕ್ಷಗಳ ಸದಸ್ಯರು, ಗದ್ದಲದ ನಡುವೆಯೇ ಇಂದು ವಿಧಾನಸಭೆಯಲ್ಲಿ ಜೆ.ಎಚ್.ಪಟೇಲ್ ನೇತೃತ್ವದ ಸಚಿವ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು.

50 ವರ್ಷಗಳ ಹಿಂದೆ

ಶನಿವಾರ, 14-8-1971

• ಬ್ಯಾಂಕುಗಳಲ್ಲಿ ವಂಚನೆ ಪ್ರಕರಣಗಳ ನಿರೋಧಕ್ಕೆ ಉನ್ನತ ಅಧ್ಯಯನ ತಂಡ

ನವದೆಹಲಿ, ಆ. 13- ಸರ್ಕಾರಿ ವ್ಯಾಪ್ತಿಗೆ ಸೇರಿದ ಬ್ಯಾಂಕುಗಳಲ್ಲಿ ವಂಚನೆ ಪ್ರಕರಣಗಳನ್ನು ಹತ್ತಿಕ್ಕಲು ಇಡೀ ನಗದು ಹಣದ ವಹಿವಾಟಿನ ಆಳ ಅಧ್ಯಯನಕ್ಕಾಗಿ ಅಧಿಕಾರಿಗಳ ತಂಡ ಕಳುಹಿಸಲು ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ.

ವಂಚನೆ ಪ್ರಕರಣಗಳು ನಡೆದಿರುವ ಬ್ಯಾಂಕುಗಳೆಂದರೆ- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ- ದೆಹಲಿ ಶಾಖೆ 60 ಲಕ್ಷ ರೂ., ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ- ಮುಂಬೈ ಶಾಖೆ 20 ಲಕ್ಷ 30 ಸಾವಿರ ರೂ., ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ- ಅಂಕೋಲಾ ಶಾಖೆ 28 ಲಕ್ಷ 31 ಸಾವಿರ ರೂ. ಮತ್ತು ದೇನಾ ಬ್ಯಾಂಕ್- ಮಂಗಳೂರು ಶಾಖೆ 15 ಲಕ್ಷ ರೂ.

• ಆಳವಾದ ಸಮುದ್ರದಲ್ಲಿ ಮೀನು ಗುರುತಿಸುವ ಘಟಕ ಸದ್ಯದಲ್ಲೇ ಮಂಗಳೂರಿಗೆ

ಬೆಂಗಳೂರು, ಆ. 13- ಆಳವಾದ ಸಮುದ್ರದಲ್ಲಿ ಮೀನು ಇರುವ ಪ್ರದೇಶಗಳನ್ನು ಗುರುತಿಸುವ ಘಟಕ ಒಂದನ್ನು ಮಂಗಳೂರಿನಲ್ಲಿ ಕೇಂದ್ರ ಸರ್ಕಾರ ಸ್ಥಾಪಿಸಲಿದೆ.

ಈ ವಿಷಯವನ್ನು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ರಾಜ್ಯ ಮತ್ಸ್ಯೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ನಿನ ಅಧ್ಯಕ್ಷ ಶ್ರೀ ಎಚ್.ಸಿ. ಲಿಂಗಾರೆಡ್ಡಿಯವರು ಈ ಘಟಕವು ಈ ವರ್ಷದ ಕೊನೆಯ ವೇಳೆಗೆ ಕಾರ್ಯಾರಂಭಿಸುವ ನಿರೀಕ್ಷೆ ಇದೆಯೆಂದು ಹೇಳಿದರು.

ಆ ಒಂದು ಗೊಣಗಾಟದಲ್ಲಿ ಸ್ವಾತಂತ್ರ್ಯಾನಂತರದ ಎಪ್ಪತ್ತೈದು ವರ್ಷಗಳ ಕತೆಯಿದೆ

ನಿಜ ಸ್ವಾತಂತ್ರ್ಯಕ್ಕಾಗಿ ಹೊಸ ರಾಜಕಾರಣ

ಅನುರಣನ

ನಾರಾಯಣ ಎ.

ಚುನಾವಣೆಯ ಸಂದರ್ಭದಲ್ಲಿ ಭಾರತೀಯರಾದ ನಾವೆಲ್ಲರೂ ಹೇಳುವ ಅಥವಾ ಇತರರು ಹೇಳಿದಾಗ ಕೇಳಿ ತಲೆಯಾಡಿಸುವ ಆ ಒಂದು ಗೊಣಗಾಟದಲ್ಲಿ, ಸ್ವಾತಂತ್ರ್ಯಾನಂತರದ ಎಪ್ಪತ್ತೈದು ವರ್ಷಗಳ ಕತೆಯಿದೆ. ಏನದು ಗೊಣಗಾಟ? ಅದು ಸಾರುವ ಕತೆ ಏನು?

'ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವವರೆಲ್ಲಾ ಕೆಟ್ಟವರು ಎಂಬುದು ಮತ್ತು ಇದ್ದವರ ಪೈಕಿ ಕಡಿಮೆ ಕೆಟ್ಟವರನ್ನು ಚುನಾಯಿಸಬೇಕಾಗಿದೆ' ಎಂಬುದೇ ಆ ಗೊಣಗಾಟ. ಸುಮ್ಮನೆ ಮಾತಿಗೆ ಮಾತು ಎಂದು ಮರೆತುಬಿಡಬಹುದಾದ ಆ ಹೇಳಿಕೆಯು ಸ್ವಾತಂತ್ರ್ಯೋತ್ತರ ರಾಜಕೀಯದ ಘೋರ ಸತ್ಯಗಳನ್ನು ತಿಳಿಸುವ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಇದ್ದವರಲ್ಲೇ ಕಡಿಮೆ ಕೆಟ್ಟವರು ಅಂದರೆ ಅವರು ಎಷ್ಟು ಕೆಟ್ಟವರು? ನೂರಕ್ಕೆ ನೂರರಷ್ಟು ಕೆಟ್ಟವರನ್ನು ಬಿಟ್ಟು ನೂರಕ್ಕೆ ತೊಂಬತ್ತೊಂಬತ್ತರಷ್ಟು ಕೆಟ್ಟವರನ್ನು ಆರಿಸಿಕೊಂಡರೆ ಅಲ್ಲಿಗೆ ಸಮಸ್ಯೆ ಮುಗಿದೇಹೋಯಿತು ಅಂತ ನಾವು ನಟಿಸುತ್ತಿರುವುದಾದರೂ ಯಾಕೆ? ಹಾಗಾದರೆ ಎಪ್ಪತ್ತೈದು ವರ್ಷಗಳಲ್ಲಿ (ಮೊದಲ ತಲೆಮಾರಿನ ನಾಯಕರುಗಳಿದ್ದ ಆರಂಭದ ದಶಕಗಳ ನಂತರ) ನಾವು ದೇಶವನ್ನು ಕಟ್ಟಿದ ಕತೆ ಎಂದರೆ, ಅದು ಖಳನಾಯಕರ ಮತ್ತು ಅರೆ-ಖಳನಾಯಕರ ಕತೆಯೇ?

ಕಾಣುವ ದೃಷ್ಟಿ ಸೂಕ್ಷ್ಮಸಮರ್ಥವಾಗಿದ್ದರೆ, ಕಂಡದ್ದನ್ನು ಒಪ್ಪಿಕೊಳ್ಳುವಷ್ಟು ಅಪ್ಪಟ ಪ್ರಾಮಾಣಿಕತೆ ಇದ್ದರೆ ಒಂದು ಸತ್ಯ ಸ್ಪಷ್ಟವಾಗಿ ಗೋಚರಿಸುತ್ತದೆ. ಅದೇನೆಂದರೆ, 1947ರಲ್ಲಿ ದೇಶ ಪಡೆದ ಸ್ವಾತಂತ್ರ್ಯವನ್ನು ನಿಭಾಯಿಸಬಲ್ಲ ಮತ್ತು 1950ರಲ್ಲಿ ಜನರು ಒಪ್ಪಿಕೊಂಡ ಸಂವಿಧಾನವನ್ನು ಸಾಕ್ಷಾತ್ಕರಿಸಬಲ್ಲ ಒಂದು ರಾಜಕೀಯ ಪಕ್ಷ ಈ ದೇಶದಲ್ಲಿ ಈಗ ಇಲ್ಲ. ಬಹುತೇಕ ಎಲ್ಲ ರಾಜಕೀಯ ಪಕ್ಷಗಳೂ ಹೇಗಿವೆ ಎಂದರೆ, ಯಾವ ಮಾರ್ಗ ಹಿಡಿದಾದರೂ ಸರಿ ಚುನಾವಣೆ ಗೆಲ್ಲಬಲ್ಲ ತಾಕತ್ತು ಪ್ರದರ್ಶಿಸುವವರನ್ನು ಒಟ್ಟು ಸೇರಿಸಿಕೊಂಡು ಅಧಿಕಾರದ ವ್ಯವಹಾರ ನಡೆಸುವ ಅಡ್ಡೆಗಳು ಎಂಬಂತಿವೆ. ಆಯಾ ಪಕ್ಷದಲ್ಲಿ ಒಂದಷ್ಟು ಮಂದಿ ಇದಕ್ಕೆ ಭಿನ್ನ ಅನ್ನಿಸುವವರು ಇರಬಹುದು. ಅವರು ಪಕ್ಷರಾಜಕಾರಣದ ಒಟ್ಟು ಪತನವನ್ನು ತಡೆಯಲಾಗದ ಅಸಹಾಯಕರು.

ಈ ರಾಜಕೀಯ ವ್ಯವಸ್ಥೆಯು ದೇಶದ ಮೇಲೆ ಹೇರಿದ ಎಲ್ಲ ಮಿತಿಗಳನ್ನು ಮೀರಿ ದೇಶ ಎಷ್ಟು ಸಾಧಿಸಬಹುದೋ ಅಷ್ಟನ್ನು ಸಾಧಿಸಿದೆ. ಇನ್ನೂ ಆಗದೇ ಉಳಿದದ್ದು ಮತ್ತು ಮುಂದೆ ಆಗಬೇಕಾದದ್ದನ್ನು ಈಗಿನ ರಾಜಕೀಯ ವ್ಯವಸ್ಥೆಯನ್ನೇ ನೆಚ್ಚಿಕೊಂಡರೆ ಮುಂದಿನ ಎಪ್ಪತ್ತೈದು ವರ್ಷಗಳಲ್ಲೂ ಸಾಧಿಸಲು ಸಾಧ್ಯವಿಲ್ಲ. ಈಗ ಭಾರತದಲ್ಲಿ ಇರುವಂತಹ ಮೂರನೆಯ ದರ್ಜೆಯ ರಾಜಕಾರಣವನ್ನು ನೆಚ್ಚಿಕೊಂಡು ಮೊದಲನೆಯ ದರ್ಜೆಯ ಪ್ರಗತಿಯನ್ನು ಸಾಧಿಸಲು ಯಾವ ದೇಶಕ್ಕೂ ಸಾಧ್ಯವಾಗಿಲ್ಲ, ಈ ದೇಶಕ್ಕೂ ಸಾಧ್ಯವಿಲ್ಲ.

ಈವರೆಗೆ ನಾವು ಅನುಸರಿಸಿಕೊಂಡು ಬಂದಿರುವ ಅಸಹ್ಯ ಆಷಾಢಭೂತಿತನ ಏನೆಂದರೆ, ನಮ್ಮ ಮುಂದಿರುವ ರಾಜಕೀಯದ ಕೊಚ್ಚೆರಾಡಿಯನ್ನು ಹಾಗೆಯೇ ಉಳಿಸಿ, ಉಳಿದಂತೆ ಎಲ್ಲವೂ ಸರಿಯಿರಬೇಕು ಎಂದು ಬಯಸುತ್ತಿರುವುದು. ಹಣ ಮಾಡಲೆಂದೇ ರಾಜಕೀಯಕ್ಕೆ ಬಂದವರನ್ನು ಚುನಾಯಿಸಿ ಸಾರ್ವಜನಿಕ ಜೀವನ ಸ್ವಚ್ಛವಾಗಿರಬೇಕೆಂದು ಬಯಸುತ್ತೇವೆ. ವ್ಯವಸ್ಥೆಯ ಬಗ್ಗೆ ಕನಿಷ್ಠ ಜ್ಞಾನವೂ ಇರದವರನ್ನು ಚುನಾಯಿಸಿ ಸಾರ್ವಜನಿಕ ಸೇವೆಗಳು ದಕ್ಷವಾಗಿರಬೇಕೆಂದು ಬಯಸುತ್ತೇವೆ, ಜಾತಿಯ ಆಧಾರದ ಮತ ಚಲಾವಣೆಯನ್ನು ಒಪ್ಪಿಕೊಳ್ಳುತ್ತಾ ಅಧಿಕಾರದಲ್ಲಿದ್ದವರು ಎಲ್ಲರನ್ನೂ ಸಮಾನವಾಗಿ ಕಾಣಬೇಕೆಂದು ಬಯಸುತ್ತೇವೆ. ಅತ್ಯಂತ ಕೊಳಕು ಹಾದಿ ಹಿಡಿದು ಅಧಿಕಾರ ಪಡೆದವನನ್ನು ಮಹಾನ್ ನಾಯಕ ಅಂತ ಕೊಂಡಾಡಿ ಸಂವಿಧಾನದ ಉಲ್ಲಂಘನೆ ಆಗುತ್ತಿದೆ, ಸಂಸದೀಯ ಪ್ರಜಾಸತ್ತೆ ಕುಸಿಯುತ್ತಿದೆ ಅಂತ ಹುಯಿಲೆಬ್ಬಿಸುತ್ತೇವೆ. ಬಾಯಿಬಡುಕೇಶ್ವರಪ್ಪರನ್ನು ಚುನಾಯಿಸಿ ಸಾರ್ವಜನಿಕ ಸಂವಾದದಲ್ಲಿ ಮೌಲ್ಯಗಳೇ ಮಾಯವಾಗುತ್ತಿವೆ ಅಂತ ಮರುಗುತ್ತೇವೆ. ನಮ್ಮ ಧರ್ಮಕ್ಕೆ ಅಥವಾ ನಮ್ಮ ಜಾತಿಗೆ ಯಾವುದೋ ರೀತಿಯಲ್ಲಿ ನೆರವಾಗುವವರು ಎಂದಾದರೆ ಅಂತಹವರು ಅಧಿಕಾರ ಪಡೆಯಲು ಎಂತಹ ಕೊಳಕು ಹಾದಿ ಹಿಡಿದರೂ, ಅಧಿಕಾರ ಪಡೆದುಕೊಂಡು ಎಂಥೆಂಥ ನೀಚ ಕೆಲಸ ಮಾಡಿದರೂ ಅವರನ್ನು ಸಮರ್ಥಿಸುತ್ತೇವೆ.

ಉಳಿದೆಲ್ಲಾ ರಂಗಗಳಿಗೆ ನಮಗೆ ಒಳ್ಳೆಯವರು, ಸಮರ್ಥರು, ಸಜ್ಜನರು ಬೇಕು. ಎಲ್ಲ ರಂಗಗಳನ್ನೂ ನಿಭಾಯಿಸಲು ಬೇಕಾದ ರಾಜಕೀಯ ಶಕ್ತಿ ಪಡೆಯಲು ಮಾತ್ರ ಯಾರಾದರೂ ಆದೀತು. ಸಂವಿಧಾನ ಕಾಲು ಮುರಿದು ಬೀಳುವುದು ಇಲ್ಲಿ. ಸ್ವಾತಂತ್ರ್ಯ ಅರ್ಥ ಕಳೆದುಕೊಳ್ಳುವುದು ಇಲ್ಲಿ. ಜನ ಕೆಟ್ಟಿರುವುದರಿಂದ ರಾಜಕೀಯ ಪಕ್ಷಗಳೂ ಕೆಟ್ಟಿವೆ ಎನ್ನುವ ಸಮಜಾಯಿಷಿಯನ್ನು ಸುಲಭವಾಗಿ ಮುಂದಿಡಬಹುದು. ಇದು ಪಲಾಯನವಾದ. 'ಇದ್ದವರಲ್ಲಿ ಕಡಿಮೆ ಕೆಟ್ಟವರನ್ನು' ಆಯ್ದುಕೊಳ್ಳುವ ಸ್ಥಿತಿ ಬದಲಾಗಿ 'ಇದ್ದದ್ದರಲ್ಲಿ ಹೆಚ್ಚು ಒಳ್ಳೆಯವರನ್ನು' ಆಯ್ದುಕೊಳ್ಳುವ ಸ್ಥಿತಿ ಬರುವುದು ಯಾವಾಗ ಎನ್ನುವುದು ಇಲ್ಲಿರುವ ಪ್ರಶ್ನೆ. ಇದು ಆಗುವುದು ರಾಜಕೀಯ ಪಕ್ಷಗಳು ಒಳ್ಳೆಯವರನ್ನು ಚುನಾವಣಾ ಕಣಕ್ಕಿಳಿಸಿದಾಗ. ರಾಜಕೀಯ ಪಕ್ಷಗಳಿಗೆ ಅಂತಹವರನ್ನು ಚುನಾವಣಾ ಕಣಕ್ಕಿಳಿಸಲು ಸಾಧ್ಯವಾಗುವುದು ಯಾವಾಗ ಎಂದರೆ ಒಳ್ಳೆಯವರನ್ನು ಸ್ಪರ್ಧಿಸುವಂತೆ ಮಾಡಿ ಗೆಲ್ಲಿಸಿಕೊಳ್ಳುವ ಸೂತ್ರವೊಂದನ್ನು ಆವಿಷ್ಕರಿಸಿಕೊಂಡ ರಾಜಕೀಯ ಪಕ್ಷಗಳು ಹುಟ್ಟಿಕೊಂಡಾಗ.

ಜನರು ಕೆಟ್ಟುಹೋಗಿದ್ದಾರೆ ಎನ್ನುವ ಕಾರಣಕ್ಕೆ ರಾಜಕಾರಣ ಕೆಟ್ಟಿದ್ದು ಸತ್ಯ ಎಂದಾದರೆ ಹೇಳಬಹುದಾಗಿರುವುದು ಇಷ್ಟೇ: ಜನರ ಕೆಟ್ಟತನಗಳನ್ನೇ ಬಳಸಿ ಅಥವಾ ಅವರನ್ನು ಇನ್ನಷ್ಟು ಕೆಡಿಸಿ ಚುನಾವಣೆ ಗೆಲ್ಲುವ ಪಕ್ಷಗಳಲ್ಲ ಇಂದು ದೇಶಕ್ಕೆ ಬೇಕಿರುವುದು. ಒಂದುವೇಳೆ ಜನ ಕೆಟ್ಟಿದ್ದರೆ ಅವರನ್ನು ಪರಿವರ್ತಿಸಿ, ಸಂವಿಧಾನ ಮಾರ್ಗದಲ್ಲಲ್ಲದೆ ಇನ್ನೊಂದು ಮಾರ್ಗದಲ್ಲಿ ಅಧಿಕಾರ ಹಿಡಿಯುವುದಿಲ್ಲ ಎಂದು ಕಟಿಬದ್ಧವಾಗಿರುವ ಪಕ್ಷಗಳು ಈ ಹೊತ್ತು ದೇಶಕ್ಕೆ ಬೇಕಿರುವುದು. ಇವೆಲ್ಲಾ ಒಣ ವೇದಾಂತ ಎನ್ನುವ ಸಿನಿಕ ಪ್ರತಿಕ್ರಿಯೆಗಳನ್ನು ಲೆಕ್ಕಿಸದೆ ಮುನ್ನುಗ್ಗಿ ರಾಜಕೀಯದ ಹೊಸ ಮಾದರಿಗಳನ್ನು ರೂಪಿಸುವವರು ಇಂದು ದೇಶಕ್ಕೆ ಬೇಕಿರುವುದು. ಪ್ರಾಯೋಗಿಕವಾದದ್ದನ್ನು ಮಾಡುವುದು ಎಂದರೆ ಕೆಟ್ಟ ದಾರಿಯನ್ನೇ ಆಯ್ದುಕೊಳ್ಳುವುದು ಅಂತ ಯಾವ ಶಾಸ್ತ್ರದಲ್ಲೂ ಬರೆದಿಲ್ಲ, ಯಾವ ವಿಜ್ಞಾನದಲ್ಲೂ ರುಜುವಾಗಿಲ್ಲ. ಕೆಟ್ಟದ್ದನ್ನು ಒಪ್ಪದೆ, ಸರಿಪಡಿಸುವಲ್ಲಿ ಸೋಲಾದರೂ ಪ್ರಯತ್ನಿಸುವ ಮನಸ್ಸುಗಳು ಇಲ್ಲದೇ ಹೋಗಿದ್ದರೆ ಈ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮವೊಂದು ನಡೆಯುತ್ತಲೇ ಇರಲಿಲ್ಲ ಎನ್ನುವುದನ್ನು ಮರೆಯಬಾರದು.

ಒಂದು ಹೊಸ ಮಾದರಿಯ ರಾಜಕೀಯ ಮತ್ತು ಅದಕ್ಕಾಗಿ ಹೊಸ ಮಾದರಿಯ ರಾಜಕೀಯ ಪಕ್ಷಗಳು ಈ ಸಂದರ್ಭದಲ್ಲಿ ಭಾರತದ ತುರ್ತು ಅಗತ್ಯಗಳು. ಇದು ಸವಾಲಿನ ಕೆಲಸ. ಆದರೆ ಎಪ್ಪತ್ತೈದು ವರ್ಷಗಳಲ್ಲಿ ಏನೇನನ್ನೋ ಸಾಧಿಸಿದ ಭಾರತೀಯರಿಗೆ, ಎಪ್ಪತ್ತೈದು ವರ್ಷಗಳಲ್ಲಿ ಎಂಥೆಂಥ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿಕೊಂಡಿರುವ ಭಾರತೀಯರಿಗೆ ತಮ್ಮ ರಾಜಕೀಯ ಕ್ಷೇತ್ರಕ್ಕೆ ಅಂಟಿಕೊಂಡಿರುವ ಮಹಾನ್ ದುರ್ದೆಸೆಯೊಂದಕ್ಕೆ ಪರಿಹಾರ ಕಂಡುಕೊಳ್ಳಲು ಅಸಾಧ್ಯ ಎನ್ನುವುದು ಸುಳ್ಳು. ನಾವೀನ್ಯ, ಸಾಹಸೀ ನಡೆಗಳು, ಆವಿಷ್ಕಾರ ಇತ್ಯಾದಿಗಳೆಲ್ಲ ಆಗಬೇಕಿರುವುದು ಉದ್ಯಮ ಮತ್ತು ವಿಜ್ಞಾನ ರಂಗಗಳಲ್ಲಿ ಮಾತ್ರವಲ್ಲ. ರಾಜಕೀಯ ರಂಗದಲ್ಲೂ ಆಗಬೇಕಿದೆ. ಹೊಸ ರೀತಿಯ ಚಳವಳಿಗಳು, ಪ್ರತಿರೋಧಗಳು, ಸಂವಹನ ಸಾಧ್ಯತೆಗಳು ತೆರೆದುಕೊಳ್ಳದೇ ಹೋದರೆ ಹೊಸ ರಾಜಕೀಯ ಮಾದರಿಯನ್ನು ಕಟ್ಟಲು ಸಾಧ್ಯವಿಲ್ಲ.

ಸ್ವಾತಂತ್ರ್ಯ ಸಂಗ್ರಾಮವು ಆವಿಷ್ಕಾರಗಳನ್ನು ಮಾಡಿತು. ಪ್ರತಿರೋಧದ ಹೊಸ ಸಾಧ್ಯತೆಗಳನ್ನು ಕಂಡುಕೊಂಡಿತು. ಅಪೂರ್ವವಾದ ಸಂಕೇತಗಳ ಮೂಲಕ ಅನನ್ಯ ಸಂವಹನ ಸಾಧನಗಳನ್ನು ರೂಪಿಸಿಕೊಂಡಿತು. ಸ್ವಾತಂತ್ರ್ಯ ಸಂಗ್ರಾಮದ ಯಶಸ್ಸಿಗೆ ಇವೆಲ್ಲವೂ ಕಾರಣವಾದವು. ಆ ಸಂಗ್ರಾಮವು ವಿದೇಶಿ ಆಡಳಿತವನ್ನು ತಿರಸ್ಕರಿಸಿದಂತೆ, ಈಗಿರುವ ಎಲ್ಲ ರಾಜಕೀಯ ಪಕ್ಷಗಳನ್ನೂ ತಿರಸ್ಕರಿಸಿ ಹೊಸ ಮಾದರಿಯ ಪಕ್ಷಗಳನ್ನು ಕಟ್ಟಲು ದೇಶದಲ್ಲೀಗ ಎರಡನೆಯ ಸ್ವಾತಂತ್ರ್ಯ ಸಂಗ್ರಾಮದ ಅಗತ್ಯವಿದೆ. ಈಗಿನ ಅನಿಷ್ಟ ರಾಜಕೀಯದ ಏಳು ಸುತ್ತಿನ ಕೋಟೆ ಅಭೇದ್ಯವೆಂದೂ ಅದನ್ನು ಮುರಿದು ಕಟ್ಟಲು ಸಾಧ್ಯವೇ ಇಲ್ಲವೆಂದೂ ಅಂದುಕೊಂಡಿರುವ ಮಾನಸಿಕ ದಾಸ್ಯದಿಂದ ಮೊದಲು ಮುಕ್ತಿ ಪಡೆಯದೇ ಹೊಸ ವ್ಯವಸ್ಥೆಯ ಕುರಿತಾದ ಯೋಚನೆ ಹುಟ್ಟಲಾರದು. ರಾಜಕೀಯದ ನಿಜ ಸ್ವಾತಂತ್ರ್ಯಕ್ಕಾಗಿ, ಈಗ ಇರುವ ಎಲ್ಲ ರಾಜಕೀಯ ಪಕ್ಷಗಳೂ ಆದಷ್ಟು ಬೇಗ ತಮ್ಮ ಅಂತ್ಯ ಕಾಣಬೇಕಾಗಿದೆ.

ಚುರುಮುರಿ

ಹಳೇ ಮದ್ಯ, ಅದೇ ಶೀಷೆ!

• ಎಸ್.ಬಿ.ರಂಗನಾಥ್

'ಹಳೇ ಮದ್ಯ, ಹೊಸ ಶೀಷೆ ಅಂದ್ರೆ ಏನ್ರೀ?' ಶ್ರೀಮತಿ ಕೇಳಿದಳು.

'ನಮ್ಮ ಬೊಮ್ಮಾಯಿ ಮಂತ್ರಿಮಂಡಲ' ಎಂದೆ.

'ಅದ್ಯಾಕ್ರೀ, ಕೆಲವು ಹೊಸ ಮುಖಗಳೂ ಇವೆಯಲ್ಲಾ!'

'ಹೌದೌದು. ಹಲವು ಖಾತೆ ಕ್ಯಾತೆ ತೆಗೆದು ಮುನಿಸಿಕೊಂಡಿವೆ'.

'ಹೈಕಮಾಂಡ್ ಎಲ್ಲಾ ಸರಿ ಮಾಡುತ್ತೇಂತ ಹೇಳಿ ಸೀಎಂ ಡ್ಯಾಮೇಜ್ ಕಂಟ್ರೋಲ್ ಮಾಡ್ತಿದಾರೆ... ನಂಗೆ ಸ್ವಾಗತ ಹೋರ್ಡಿಂಗು, ಹೂಗುಚ್ಛ, ಶಾಲು, ಗೌರವವಂದನೆ ಬೇಡಾಂತ ಹೇಳಿ ಎಲ್ರಿಗೂ ಮೇಲ್ಪಂಕ್ತಿಯಾಗಿದಾರೆ'.

'ಅವ್ರ ಸಹೋದ್ಯೋಗಿಗಳೂ ಹಾರದ ಬದಲು ಕನ್ನಡ ಪುಸ್ತಕ ಕೊಡಿ, ವಾಹನಗಳನ್ನ ದಾರಿ ಮಧ್ಯೆ ತಡೆದು ದಂಡ ಹಾಕ್ಬೇಡೀಂತ ಹೇಳಿ ಆದರ್ಶ ಮೆರೀತಿದಾರೆ!'

'ಕನ್ನಡ ಸಂಸ್ಕೃತಿ ಸಚಿವರು ಕನ್ನಡಕ್ಕೆ ಇಂಧನ ಶಕ್ತಿಯನ್ನೂ ಇಂಧನಕ್ಕೆ ಸಂಸ್ಕೃತಿಯನ್ನೂ ತುಂಬ್ತೀನೀಂತ ಹೇಳಿದಾರಲ್ಲ! ಏನ್ರೀ ಹಾಗಂದ್ರೆ?'

'ಅವ್ರು ಆ ಎರಡೂ ಖಾತೆಗಳ ಮಂತ್ರಿಗಳು. ನಾನಾ ರೀತಿ ದಾಳಿಗಳಿಂದ ನಲುಗಿರೋ ಕನ್ನಡಕ್ಕೆ ಇಂಧನ ಪೂರೈಸುವ, ಅಂದ್ರೆ ಕಸುವು ತುಂಬುವ ಹಾಗೂ ಜನರ ಜೇಬಿಗೆ ನಿರಂತರ ಕತ್ತರಿ ಹಾಕ್ತಿರೋ ಇಂಧನ ಖಾತೆಗೆ ಸಂಸ್ಕೃತಿ- ಸೌಜನ್ಯ ಕಲಿಸುವ ಕೆಲ್ಸ ಮಾಡ್ತೀನಿ ಎಂಬುದು ಅವ್ರ ಅಭಿಪ್ರಾಯ'.

'ಅವ್ರು ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲು ಮೇಲೇ ಕುಳಿತು ಕಡತ ವಿಲೇವಾರಿ ಮಾಡಿದ್ರಂತೆ. ಅದ್ರ ಹೊಸ್ತಿಲಿಗೆ ನಮಸ್ಕರಿಸಿದರಂತೆ!'

'ಹೌದು, 'ನಮೋ' ಪ್ರಧಾನಿಯಾಗಿ ಪಾರ್ಲಿಮೆಂಟ್ ಪ್ರವೇಶಿಸೋ ಮೊದಲು, ಬೊಮ್ಮಾಯಿ ಸೀಯೆಮ್ಮಾಗಿ ವಿಧಾನಸೌಧ ದೊಳಗೆ ಹೋಗೋವಾಗ ಮಾಡಿದ್ರಲ್ಲಾ ಹಾಗೆ'.

'ಬಹಳ ಹಿಂದೆ ಸಚಿವ ಗುಂಡೂರಾಯರು ಈಜಾಡುವ ಮೂಲಕ ಈಜುಗೊಳ ಉದ್ಘಾಟಿಸಿದಂತೆ ಅನ್ನಿ... ನನ್ನದೊಂದು ಸಲಹೆ'.

'ಅಪ್ಪಣೆಯಾಗಲಿ'.

'ಪಶುಸಂಗೋಪನಾ ಖಾತೆ ಮಂತ್ರಿಗಳು ಪಶುಪಾಲನೆ ಪ್ರಾರಂಭಿಸ್ತಾ ಕೆಲ್ಸ ಶುರು ಮಾಡಿದ್ರೆ ಹೇಗೆ?!'

'ಅಂದ್ರೆ? ಜನ ಕಾಯೋ ಬದಲು ದನ...'

ಹೆಂಡತಿ 'ಛೆ ಛೆ, ಶಾಂತಂ ಪಾಪಂ' ಎಂದು ಕಿವಿ ಮುಚ್ಚಿಕೊಂಡಳು!

ಸಂಗತ

ಭತ್ತಕೃಷಿ: ದಕ್ಕದೇ ಹೋದೀತು ಖುಷಿ

ಭತ್ತದ ಕೃಷಿಯಲ್ಲಿ ರೈತನಿಗೆ ಮೊದಲಿನ ಆಸಕ್ತಿ, ಆಕರ್ಷಣೆ ಉಳಿದಿಲ್ಲ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಇದು ನಾಟಿಯ ಸಮಯ. ಮಲೆನಾಡು- ಕರಾವಳಿ ಭಾಗದ ಗದ್ದೆಬಯಲುಗಳಿಗೆಲ್ಲ ಹಸಿರು ಹೊದೆಯುವ ತವಕ- ಪುಳಕ. ಹಳ್ಳಿಗಳನ್ನು ಹಬ್ಬದಂತಹ ಸಂಭ್ರಮದಲ್ಲಿ ಮೈಮರೆಸುತ್ತಿದ್ದ ಗದ್ದೆನಾಟಿ, ಕೊಯ್ಲುಗಳು ಇದೀಗ ವಿರಳ ದೃಶ್ಯಾವಳಿಗಳು. ಕೆಸರುಗದ್ದೆಯಲ್ಲಿ ಜೋಡೆತ್ತು- ಕೋಣಗಳ ಹಿಂದೆ ನೇಗಿಲೂರುವ ಕಂಬಳಿಕೊಪ್ಪೆಯ ಕೊರಳ ಸೈರನ್ನು, ದರಲೆಯ ಗೊರಬುಗಳಡಿ ಸಸಿ ಕೀಳುವ, ನಾಟಿ ಮಾಡುವ ಹೆಂಗಳೆಯರ ಹಾಡು, ಬಿಚ್ಚಿಕೊಳ್ಳುವ ಮನೆಮನೆ ಕಥೆ, ದುಡಿತದ ದಣಿವಳಿಸುವ ಕೀಟಲೆ-ಕಚಗುಳಿಗಳೆಲ್ಲಾ ಮನೋಭಿತ್ತಿಯಲ್ಲಿ ಮಸುಕಾಗಿ ಹಾದುಹೋಗುತ್ತವೆ.

ಭಾರತದಲ್ಲಿ ಕಾಲಾಂತರದಿಂದ ಭತ್ತದ ಕೃಷಿಯು ಎರಚು ಬಿತ್ತನೆ, ಕೂರಿಗೆ ಬಿತ್ತನೆ ಮತ್ತು ನಾಟಿ ಪದ್ಧತಿಗಳಲ್ಲಿ ಸಾಗಿ ಬಂದಿದ್ದು, ಸ್ವತಂತ್ರಪೂರ್ವದಲ್ಲಿ ದೇಶದಾದ್ಯಂತ ಸುಮಾರು 80,000 ದೇಸಿ ತಳಿಗಳಿದ್ದ ಮಾಹಿತಿಯಿದೆ. ಅರವತ್ತರ ದಶಕದಲ್ಲಿನ ಹಸಿರುಕ್ರಾಂತಿಯ ಆಧುನಿಕ ಕೃಷಿಪ್ರಯೋಗದಲ್ಲಿ ನಮ್ಮ ಹೊಲಗದ್ದೆಗಳಿಗೆ ಅಸಂಖ್ಯ ಅಪರಿಚಿತ ಹೈಬ್ರಿಡ್ ಮತ್ತು ವಿದೇಶಿ ತಳಿಗಳು ದಾಳಿಯಿಟ್ಟವು. ಬರುಬರುತ್ತಾ ಬೀಜ, ಗೊಬ್ಬರ ಮತ್ತು ಮಾರುಕಟ್ಟೆಯ ಸ್ವಾತಂತ್ರ್ಯವನ್ನು ಕಳಕೊಂಡ ರೈತ ಅತಂತ್ರನಾದ.

ರಾಜ್ಯದ ಹಲವು ಸಂಘಟನೆಗಳು ಸಮುದಾಯದ ಸಹಕಾರದಿಂದ ಭತ್ತದ ನೂರಾರು ದೇಸಿ ತಳಿಗಳನ್ನು ಸಂರಕ್ಷಿಸುತ್ತಿವೆ. ಭತ್ತದ ಉತ್ಪಾದನೆಯಲ್ಲಿ ಜಾಗತಿಕವಾಗಿ ಅಗ್ರಸ್ಥಾನದಲ್ಲಿದ್ದ ಭಾರತವೀಗ ಚೀನಾ ನಂತರದ ಸ್ಥಾನಕ್ಕಿಳಿದಿದ್ದು ರಫ್ತಿನಲ್ಲೂ ನಾಲ್ಕನೇ ಸ್ಥಾನಕ್ಕೆ ಜಾರಿದೆ. ಆದರೆ ಏಕದಳ ಧಾನ್ಯಗಳಲ್ಲಿ ಮೊದಲ ಸ್ಥಾನ ಭಾರತದಲ್ಲಿ ಈಗಲೂ ಭತ್ತದ್ದೇ.

ಹಾಗಿದ್ದೂ ಭತ್ತದ ಕಣಜವಾಗಿದ್ದ ಪ್ರಮುಖ ರಾಜ್ಯಗಳಾದ ಪಶ್ಚಿಮ ಬಂಗಾಳ, ಉತ್ತರಪ್ರದೇಶ, ಬಿಹಾರ, ಒಡಿಶಾ, ಅಸ್ಸಾಮಿನ ಜಲಾನಯನ ಪ್ರದೇಶಗಳಲ್ಲಿ ಭತ್ತಕೃಷಿ ಚಟುವಟಿಕೆಗಳು ಕ್ಷೀಣಿಸಿವೆ. ದಕ್ಷಿಣದ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕದಲ್ಲಿಯೂ ಭತ್ತದ ಭೂಮಿ ಶೀಘ್ರಗತಿಯಲ್ಲಿ ಅಡಿಕೆ ತೋಟವಾಗಿ ಬದಲಾಗುತ್ತಿದೆ. ಕೆಲವೆಡೆ ಪಾಳುಬಿದ್ದಿದೆ ಮತ್ತೆ ಕೆಲವೆಡೆ ಕೃಷಿಯೇತರ ಚಟುವಟಿಕೆಗೆ ಬಳಕೆಯಾಗುತ್ತಿದೆ.

ಹವಾಮಾನ ವೈಪರೀತ್ಯ, ಕೂಲಿಕಾರ್ಮಿಕರ ಅಭಾವ, ರಾಸಾಯನಿಕಗಳ ಅತಿಯಾದ ಬಳಕೆಯಿಂದ ನಿಸ್ಸಾರಗೊಂಡ ಭೂಮಿ, ಏರಿದ ರಸಗೊಬ್ಬರ-ಬೀಜದಾರಣೆ, ಬೆಳೆಗೆ ದಕ್ಕದ ಯೋಗ್ಯ ಬೆಲೆ, ಸಿಗದ ಬೆಂಬಲಬೆಲೆಯಂತಹ ಸಂಕಷ್ಟಗಳ ಸರಮಾಲೆಯಲ್ಲಿ ಹೈರಾಣಾಗಿ ಲಕ್ಷಾಂತರ ಯುವಕರು ನಗರದೆಡೆಗೆ ವಲಸೆ ಹೊರಟಿದ್ದಾರೆ. ಇದರ ಪರಿಣಾಮವಾಗಿ ನೇಗಿಲು ನೊಗವೆಲ್ಲಾ ಅಟ್ಟ ಹತ್ತಿವೆ. ಹಾಗಾಗಿ ರೈತನಿಗೆ ಆರ್ಥಿಕವಾಗಿ ಲಾಭದಾಯಕವಲ್ಲದ ಮತ್ತು ಅಧಿಕ ಮಾನವಶ್ರಮವನ್ನು ಬೇಡುವ ಭತ್ತದ ಕೃಷಿಯಲ್ಲಿ ಮೊದಲಿನ ಆಸಕ್ತಿಯಾಗಲೀ ಆಕರ್ಷಣೆಯಾಗಲೀ ಉಳಿದಿಲ್ಲವೆಂಬುದು ವಾಸ್ತವ. ತೊಂಬತ್ತರ ದಶಕದಲ್ಲಿ ನಮ್ಮ ಜಿಡಿಪಿಯ ಶೇ 25ರಷ್ಟು ಪಾಲು ಪಡೆದಿದ್ದ ಕೃಷಿಕ್ಷೇತ್ರದ ಈಗಿನ ಪಾಲು ಕೇವಲ 14ರಷ್ಟು!

ಭತ್ತಕೃಷಿಯ ಪ್ರಮುಖ ನೆಲೆಯಾಗಿದ್ದ ಕರಾವಳಿ-ಮಲೆನಾಡಿನಲ್ಲಿ ದೊಡ್ಡದೊಡ್ಡ ಜಮೀನ್ದಾರರು ಕಾಡು-ಗುಡ್ಡಗಳಿಗೇ ಬೇಲಿ ಹಾಕಿ ತಮ್ಮ ಅಡಿಕೆ ತೋಟಗಳನ್ನು ವಿಸ್ತರಿಸಿಕೊಳ್ಳುತ್ತಿದ್ದರೆ, ಸಣ್ಣಪುಟ್ಟ ಸಾಗುವಳಿದಾರರಿಗೆ ಕಣ್ಣುಕಟ್ಟಿ ಬಿಟ್ಟಂತಹ ಪರಿಸ್ಥಿತಿ. ವರಾಹಿ-ಚಕ್ರಾ, ಶರಾವತಿ, ತುಂಗಾ ಮತ್ತು ಭದ್ರಾ ನದಿ ಯೋಜನೆಗಳಲ್ಲಿ ನಿರಾಶ್ರಿತರಾದವರು ಹೆಚ್ಚಾಗಿ ಅರಣ್ಯಪ್ರದೇಶ ಮತ್ತು ಪಶ್ಚಿಮಘಟ್ಟದ ತಪ್ಪಲಲ್ಲಿ ತುಂಡುಭೂಮಿಯಲ್ಲಿ ಭತ್ತದ ಸಾಗುವಳಿಯಲ್ಲಿ ತೊಡಗಿಸಿಕೊಂಡವರು. ಅವರದ್ದು ಕೃಷಿಯೊಟ್ಟಿಗೆ ಆತುಕೊಂಡ ಅನನ್ಯ ಅನುಬಂಧ. ಪೈರು-ಫಸಲನ್ನು ಕಾಡುಪ್ರಾಣಿಗಳ ಹಾವಳಿಯಿಂದ ಹರಸಾಹಸ ಮಾಡಿ ಕಾಪಾಡಿಕೊಳ್ಳುತ್ತಲೇ ಸುಗ್ಗಿಯ ಸಂಭ್ರಮದಲ್ಲಿ ದುಡಿತದ ದಣಿವು ಮರೆತವರು. ಬದಲಾದ ಕಾಲಘಟ್ಟದಲ್ಲಿ ಭತ್ತದ ಗದ್ದೆಯೊಂದಿಗೆ ಬೆಸೆದುಕೊಂಡ ಹಬ್ಬಾಚರಣೆಗಳೂ ಅವಸಾನದ ಹಾದಿ ಹಿಡಿದಿವೆ.

ಕೃಷಿಕೇಂದ್ರ ಮತ್ತು ಸಮುದಾಯದ ಜಂಟಿ ಅಧ್ಯಯನ ವರದಿಯೊಂದರ ಪ್ರಕಾರ, ಇಲ್ಲಿಯ ರೈತರಿಗೆ ಭತ್ತ ಬೆಳೆಯಲು ಎಕರೆಗೆ ತಗಲುವ ವಾರ್ಷಿಕ ವೆಚ್ಚಕ್ಕಿಂತಲೂ ಬೆಳೆಯ ಆದಾಯ ಕಡಿಮೆ! ಅಕೇಶಿಯ, ನೀಲಗಿರಿಯಂಥ ಏಕಜಾತಿಸಸ್ಯ ನೆಡುತೋಪುಗಳ ಹೆಚ್ಚಳದಲ್ಲಿ ಮಲೆನಾಡು ಈಗಾಗಲೇ ತನ್ನ ಜೀವವೈವಿಧ್ಯವನ್ನು ಕಳೆದುಕೊಂಡಿದೆ. ಶುಂಠಿಯಂತಹ ವಾಣಿಜ್ಯ ಬೆಳೆಯ ಹಾವಳಿಯು ಎಕರೆಗಟ್ಟಲೆ ಕಾಡನ್ನು ರಾತ್ರೋರಾತ್ರಿ ಕರಗಿಸಿ ನೆಲಕ್ಕೆ ವಿಷವಿಕ್ಕಿಯಾಗಿದೆ. ಕೊರೊನಾದಂತಹ ಅನಿಶ್ಚಿತ ಕಾಲದಲ್ಲಿಯೂ ಅಡಿಕೆಯ ಬೆಲೆ ಮುಕ್ಕಾಗಿಲ್ಲ. ಹಾಗಾಗಿಯೇ ಇಲ್ಲಿನ ಭೂಹೀನರು ಕೂಡ ಅಷ್ಟಿಷ್ಟು ಒತ್ತುವರಿ ಮಾಡಿ ಅಡಿಕೆ ಸಸಿಗಳನ್ನು ಊರಲೇಬೇಕಾದ ಅನಿವಾರ್ಯದಲ್ಲಿದ್ದಾರೆ. ಕೆರೆಕಟ್ಟೆ, ಗೋಮಾಳ, ಗದ್ದೆಬಯಲು, ಸಾಗುವಳಿ ಭೂಮಿಗಳು ಮಾಯವಾಗಿ, ಲೇಔಟ್‌ಗಳಾಗಿ ಬದಲಾಗುತ್ತಿರುವ ವಿರಾಟಸ್ವರೂಪವು ಹೆದ್ದಾರಿಯಂಚಿನ ಮತ್ತು ನಗರ ಪ್ರದೇಶದ ಸುತ್ತೆಲ್ಲಾ ಕಾಣಸಿಗುತ್ತದೆ. ಭತ್ತ ಕ್ರಮೇಣ ಮರೆಗೆ ಸರಿಯುತ್ತಿದೆ.

ಯುವಮನಸುಗಳು ಹಳ್ಳಿಗೆ ಹಿಂದಿರುಗದಿದ್ದರೆ, ಮಣ್ಣಿಗೆ ಮನಸೋತು ಸಹಜ ಕೃಷಿಯೆಡೆಗೆ ಹೊರಳದಿದ್ದರೆ, ಗಾಂಧೀ ಕನಸಿನ ಸಂಯಮ ಆರ್ಥಿಕತೆಯನ್ನು ನಂಬದೇ ಹೋದರೆ ಭತ್ತದ ಕೃಷಿಗೆ ಬಂದೊದಗಿದ ಆತಂಕ ನಿವಾರಣೆಯಾಗದು. ಕಣ್ಣು ಹಾಯಿಸಿದಷ್ಟೂ ಬಯಲ ಆಲಯವನ್ನು ಸಿಂಗರಿಸುವ ಪಚ್ಚೆಪೈರು, ಕಂಗೊಳಿಸುವ ಮಣಿಸರದಂತೆ ಬಾಗಿತೂಗುವ ಕದಿರು, ಮುತ್ತಿಕ್ಕಿ ನಲಿದಾಡುವ ಭೃಂಗ ಶೃಂಗಾರವೆಲ್ಲವೂ ಮುಂದಿನ ಪೀಳಿಗೆಗೆ ದಕ್ಕದೇ ಹೋದಾವು. ಅನ್ನಕ್ಕಾಗಿ ಅನ್ಯದೇಶಗಳತ್ತ ಕೈಚಾಚಬೇಕಾದ ಪರಿಸ್ಥಿತಿಯೂ ಬಂದೆರಗೀತು ಎಂಬುದು ಸದ್ಯದ ಆತಂಕ.

ವಾಚಕರ ವಾಣಿ

ಹರಕು ಬಾಯಿಯ ನಾಯಕರು

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು, 'ಕಾಂಗ್ರೆಸ್‌ನವರು ನೆಹರೂ ಹುಕ್ಕಾಬಾರ್ ಬೇಕಾದರೆ ತೆರೆಯಲಿ' ಎಂದು ಹೇಳಿರುವುದು ಖಂಡನೀಯ. ರವಿ ಅವರು ತುಂಬಾ ಗೌರವಿಸುತ್ತಾರೆ ಎಂದು ನಾನು ಭಾವಿಸಿರುವ ಮಾಜಿ ಪ್ರಧಾನಿ ಎ.ಬಿ.ವಾಜಪೇಯಿ ಅವರು ಹಲವು ಬಾರಿ ನೆಹರೂ ಅವರ ಬಗ್ಗೆ ಆಡಿರುವ ಮಾತನ್ನು ಗಮನಿಸಲಿ (ಅವರು ನೆಹರೂ ಅವರ ಉಗ್ರ ಟೀಕಾಕಾರರೂ ಆಗಿದ್ದರು). ಸಚಿವ ಕೆ.ಎಸ್.ಈಶ್ವರಪ್ಪ ಅವರು ತಲೆ ತೆಗೆಯುವ ಮಾತನ್ನು ಸಾರ್ವಜನಿಕವಾಗಿ ಆಡಿದ್ದಾರೆ. ಇಂತಹ ಹರಕು ಬಾಯಿಯವರು ನಮ್ಮ ಪ್ರಸಕ್ತ ನಾಯಕರು ಎಂಬುದಕ್ಕೆ ನಾಚಿಕೆಯಾಗುತ್ತದೆ.

ಕೆ.ವೆಂಕಟರಾಜು, ಚಾಮರಾಜನಗರ

ಶಾಸಕರ ಧರಣಿ ದುರದೃಷ್ಟಕರ

ಶಾಸಕ ಎಂ.ಪಿ.ಕುಮಾರಸ್ವಾಮಿ ಅವರು ತಾವು ಪ್ರತಿನಿಧಿಸುವ ಮೂಡಿಗೆರೆ ತಾಲ್ಲೂಕನ್ನು ಅತಿವೃಷ್ಟಿ ತಾಲ್ಲೂಕುಗಳ ಪಟ್ಟಿಗೆ ಸೇರಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿ, ಬೆಂಗಳೂರಿನ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿ ಕಣ್ಣೀರು ಹಾಕಿದ್ದು (ಪ್ರ.ವಾ., ಆ. 13) ವಿಪರ್ಯಾಸ. ಸಚಿವ ಸ್ಥಾನ ಬೇಕು, ಇಂತಹುದೇ ಖಾತೆ ಬೇಕು ಎಂದು ಪಟ್ಟು ಹಿಡಿಯುವ ಶಾಸಕರ ಮಧ್ಯೆ, ಕ್ಷೇತ್ರದ ಹಿತಕ್ಕಾಗಿ ಧರಣಿ ಮಾಡುವ, ಕಣ್ಣೀರು ಹಾಕುವ ಇಂತಹ ಶಾಸಕರು ವಿಭಿನ್ನವಾಗಿ ನಿಲ್ಲುತ್ತಾರೆ.

ಅಧಿಕಾರದಲ್ಲಿರುವ ಪಕ್ಷವೊಂದು ತನ್ನದೇ ಶಾಸಕನನ್ನು ಈ ಹಂತಕ್ಕೆ ದೂಡಿರುವುದು ಅದರ ನಿರ್ಲಕ್ಷ್ಯಕ್ಕೆ ಉತ್ತಮ ಉದಾಹರಣೆ. ಆಡಳಿತಪಕ್ಷದ ಶಾಸಕರೊಬ್ಬರಿಗೆ ಕಳೆದ ಎರಡು ವರ್ಷಗಳಿಂದ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದಾದರೆ, ಇನ್ನು ಜನಸಾಮಾನ್ಯರ ಪಾಡು ಯಾವ ರೀತಿ ಇರಬಹುದು? ನಮ್ಮ ವ್ಯವಸ್ಥೆ ಯಾವಾಗ ಬದಲಾಗುತ್ತದೋ?

ಅಶೋಕ ಓಜಿನಹಳ್ಳಿ, ಕೊಪ್ಪಳ

ಸಂಸ್ಕೃತಿ ಬೆಳೆಯಲಿ, ಹಸಿವೂ ನೀಗಲಿ

ಸರ್ಕಾರ ಮತ್ತು ಸರ್ಕಾರಿ ಸ್ವಾಮ್ಯಕ್ಕೊಳಪಟ್ಟ ಸಂಸ್ಥೆಗಳು ನಡೆಸುವ ಸಭೆ, ಸಮಾರಂಭಗಳಲ್ಲಿ ಹೂಗುಚ್ಛ, ಹಾರ ತುರಾಯಿಗೆ ಬದಲು ಕನ್ನಡ ಪುಸ್ತಕಗಳನ್ನು ನೀಡಬಹುದು ಎಂಬ ಸರ್ಕಾರದ ಆದೇಶ, ಕನ್ನಡದ ಹಿತದೃಷ್ಟಿಯಿಂದ ಸ್ವಾಗತಾರ್ಹ ಕ್ರಮ ಎನ್ನುವುದನ್ನು ಒಂದು ನೆಲೆಯಿಂದ ಒಪ್ಪಿಕೊಳ್ಳಬಹುದು. ಯಾಕೆಂದರೆ ಈ ರೂಪದಲ್ಲಾದರೂ ಪುಸ್ತಕ ಕೊಳ್ಳುವ ಮತ್ತು ಓದುವ ಸಂಸ್ಕೃತಿ ದ್ವಿಗುಣಗೊಳ್ಳಬಹುದು ಎಂಬುದು ಕನ್ನಡಿಗರ ಕಲ್ಪನೆ. ಆದರೆ ಇದರಿಂದ ಹಾರ, ಹಣ್ಣಿನ ಬುಟ್ಟಿ, ಹೂಗುಚ್ಛ, ನೆನಪಿನ ಕಾಣಿಕೆ, ಮರದ ಹಾಗೂ ಇತರ ಕರಕುಶಲ ವಸ್ತುಗಳನ್ನು ತಯಾರಿಸುವ, ಅವನ್ನು ಮಾರುವವರ ಹಸಿವಿನ ನೋವನ್ನು ಬಲ್ಲವರಾರು?

ಆರ್ಥಿಕವಾಗಿ ಸಮಾಜದ ತಳಹಂತದಲ್ಲಿರುವ ಈ ವರ್ಗ ಇಂತಹ ವಸ್ತುಗಳನ್ನು ತಯಾರಿಸುವ ಮತ್ತು ಮಾರುವ ಮೂಲಕ ಅನ್ನದ ದಾರಿ ಕಂಡುಕೊಂಡಿತ್ತು. ಆದರೆ ಸರ್ಕಾರದ ಆದೇಶವು ಈಗ ಈ ಸಮುದಾಯದ ಅನ್ನಕ್ಕೆ ಕುತ್ತು ತಂದಿದೆ ಎನ್ನುವುದು ನಾವೆಲ್ಲ ಒಪ್ಪಿಕೊಳ್ಳಬೇಕಾದ ವಿಷಯ. ಪುಸ್ತಕ ಸಂಸ್ಕೃತಿಯೂ ಬೆಳೆಯಬೇಕು ಸಾಮಾನ್ಯರ ಹಸಿವೂ ನೀಗಬೇಕು ಎಂಬಂಥ ನಿಯಮ ಜಾರಿಗೆ ಬರಲಿ.

ಡಾ. ಅಣ್ಣಪ್ಪ ಎನ್. ಮಳೀಮಠ್, ಹಾರೋಹಿತ್ತಲು, ಹೊಸನಗರ

ಸೌರ ಗೃಹ ಯೋಜನೆ: ಸಮಯ ವ್ಯರ್ಥ ಸಲ್ಲದು

ಸೌರ ಗೃಹ ಯೋಜನೆಯಡಿ ಗ್ರಾಹಕರು ಸೌರ ವಿದ್ಯುತ್ ಚಾವಣಿ ಅಳವಡಿಸಿಕೊಳ್ಳಲು ಉತ್ಸಾಹ ತೋರುತ್ತಿದ್ದಾರೆ ಎಂದು ವರದಿಯಾಗಿದೆ (ಪ್ರ.ವಾ., ಆ. 9.) ಸೌರ ಗೃಹ ಯೋಜನೆಯು 2020ರ ಮಾರ್ಚ್‌ನಲ್ಲೇ ಆರಂಭವಾಗಿತ್ತು. ಸುಮಾರು 1,200 ಗ್ರಾಹಕರು ಆಗಲೇ ನೋಂದಾಯಿಸಿದ್ದರೂ ಇದುವರೆಗೂ ಗ್ರಾಹಕರಿಗೆ ಇದರ ಪ್ರಯೋಜನ ದಕ್ಕಿಲ್ಲ. ಏಕೆಂದರೆ, ಬೆಸ್ಕಾಂ 'ಅಡುಗೆಯಿಲ್ಲದೆ ಊಟಕ್ಕೆ ಇಟ್ಟಂತೆ' ತಯಾರಿಯೇ ಇಲ್ಲದೆ ಗ್ರಾಹಕರನ್ನು ಆಹ್ವಾನಿಸಿ ಒಂದೂವರೆ ವರ್ಷದಿಂದ ಗ್ರಾಹಕರ ಅಪಹಾಸ್ಯಕ್ಕೀಡಾಗಿದೆ. ಸುಮಾರು 250 ಗ್ರಾಹಕರು ಈಗಾಗಲೇ ತಮ್ಮ ಅರ್ಜಿಗಳನ್ನು ವಾಪಸ್ ಪಡೆದಿದ್ದಾರೆ. ಇದಕ್ಕೆ ಕಾರಣ, ಸ್ಥಾಪನಾ ಸಂಸ್ಥೆಗಳ ಆಯ್ಕೆಯ ವಿಚಾರದಲ್ಲಿ ಬೆಸ್ಕಾಂ ಮಾಡಿದ ಎಡವಟ್ಟು.

ಸೌರ ಯೋಜನೆಗಳಿಗೆ 2008ರಲ್ಲೇ ಬೆಸ್ಕಾಂ ಒತ್ತು ಕೊಟ್ಟಿದೆಯೆಂದು ವರದಿ ತಿಳಿಸಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು 2013ರಲ್ಲಿ ಸೌರವಿದ್ಯುತ್ತಿಗೆ ಬೆಲೆ ನಿಗದಿ ಮಾಡಿತು. ರಾಜ್ಯದ ಮೊದಲನೇ ಸೌರಸ್ಥಾವರವನ್ನು ಅಳವಡಿಸಲು ನಾನು ಪಟ್ಟ ಪಾಡು ಹೇಳತೀರದು. 2013ರ ಅಕ್ಟೋಬರ್‌ನಲ್ಲೇ ಬೆಸ್ಕಾಂಗೆ ಅರ್ಜಿ ಕೊಟ್ಟರೂ 2014ರ ನವೆಂಬರ್‌ವರೆಗೂ ಕಾಯಬೇಕಾಯಿತು. ಸರ್ಕಾರವು ಗೃಹ ಸೌರ ಸ್ಥಾವರದ ಅಳವಡಿಕೆಗೆ ಒತ್ತು ಕೊಟ್ಟರೂ 'ದೇವರು ಕೊಟ್ಟರೂ ಪೂಜಾರಿ ಕೊಡ' ಎಂಬಂತೆ, ಬೆಸ್ಕಾಂ ಕಚೇರಿಗಳಲ್ಲಿ ಗುಪ್ತಗಾಮಿನಿಯಂತೆ ಸೌರ ಘಟಕಕ್ಕೆ ದಿನನಿತ್ಯವೂ ಸಮಸ್ಯೆಗಳನ್ನು ಅಧಿಕಾರಿಗಳು ಹುಟ್ಟುಹಾಕುತ್ತಿದ್ದಾರೆ. 2020ರ ಮಾರ್ಚ್‌ನಿಂದ ಅಕ್ಟೋಬರ್‌ವರೆಗೂ ದೊಡ್ಡ ಘಟಕದ ಒಂದೇ ಒಂದು ಸಂಪರ್ಕವನ್ನೂ ಸ್ಥಾಪಿಸಲು ಅನುಮತಿ ಕೊಡದೆ, 20ಕ್ಕೂ ಹೆಚ್ಚು ಸ್ಥಾವರಗಳ ಬಂಡವಾಳಕ್ಕೆ ಧಕ್ಕೆ ತಂದಿದ್ದಲ್ಲದೆ, 2022ಕ್ಕೆ 40 ಗಿಗಾವಾಟ್‌ಗಳ ಗುರಿಯ ನೆನಪೇ ಇಲ್ಲದೆ ಸಮಯ ವ್ಯರ್ಥ ಮಾಡುತ್ತಿರುವುದು ವಿಷಾದನೀಯ.

ರಘುನಂದನ್, ಬೆಂಗಳೂರು

ನೆರವು ನೀಡಿ

ಏಳು ವರ್ಷದ ನನ್ನ ಮಗಳು ದೀಕ್ಷಿತಾ ಎಂ.ಸಿ. ಮೂಳೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಅವಳಿಗೆ ಚಿಕಿತ್ಸೆ ಕೊಡಿಸಲಾಗುತ್ತಿದೆ. ಚಿಕಿತ್ಸೆಗೆ ₹ 32 ಲಕ್ಷ ತಗುಲಬಹುದೆಂದು ಅಂದಾಜು ಮಾಡಲಾಗಿದೆ. ಈ ಮೊತ್ತವನ್ನು ಭರಿಸಲು ನನಗೆ ಸಾಧ್ಯವಾಗುತ್ತಿಲ್ಲ. ದಾನಿಗಳು ದಯಮಾಡಿ ನೆರವಾಗಿ. ಮೊಬೈಲ್ ಸಂಖ್ಯೆ: 9731444806, 8904595149 (ಈ ಎರಡೂ ನಂಬರ್‌ಗಳು ಗೂಗಲ್ ಮತ್ತು ಫೋನ್‌ಪೇ ಸೌಲಭ್ಯ ಹೊಂದಿವೆ)

ಮಂಜುನಾಥ ಎಸ್.ಸಿ., ಹೊಸಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಥಳ, ಸಂಸ್ಥೆ, ಪ್ರಶಸ್ತಿಗಳ ಹೆಸರು ಬದಲಾವಣೆ ಸರಿಯೇ?

ಮರುನಾಮಕರಣ ಪ್ರಹಸನಕ್ಕೂ ಇದೆಯೇ ಅಸಮಾನತೆಯ ಸೋಂಕು?

• ತೀಸ್ತಾ ಸೆತಲ್ವಾಡ್

ಒಂದು ಹೆಸರು ಏನನ್ನು ಧ್ವನಿಸುತ್ತದೆ? ಹೆಮ್ಮೆ? ನೋವಿನ ನೆನಪುಗಳು? ಅನ್ಯಾಯ? ಸಂಕುಚಿತ ಮತ್ತು ಜನಾಂಗೀಯ ಶ್ರೇಷ್ಠತೆಯ ಹಿಂದುತ್ವ ದೃಷ್ಟಿಕೋನದ ಉತ್ತರವು ಒಂದು ಬಣ್ಣವನ್ನಷ್ಟೇ ಹೊಂದಿರಲು ಸಾಧ್ಯ. ಆದರೆ, ಒಟ್ಟು ಚಿತ್ರಣವು ಸಂಕೀರ್ಣವಾಗಿದೆ; ಹೆಸರು ಬದಲಿಸುವಿಕೆಯ ಇಡೀ ವ್ಯವಹಾರದಲ್ಲಿ ಭಾರತದ 'ಕುಲೀನ' ರಾಜಕಾರಣಿಗಳ ಪ್ರಾಬಲ್ಯವನ್ನು ಗಮನಿಸಿದರೆ, ಈ ವಿಚಾರದಲ್ಲಿ ಹೆಚ್ಚು ವ್ಯಾಪಕವಾದ ಪರಿಗಣನೆಯ ಅಗತ್ಯ ಇದೆ

ಪ್ರಜಾವಾಣಿ ಚರ್ಚೆ

'ಹೆಸರಲ್ಲೇನಿದೆ?'– ಎಲಿಜಬೆತ್ ಯುಗದ ಶ್ರೇಷ್ಠ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್ ಕೇಳಿದ್ದ ಅತ್ಯಂತ ಪ್ರಸಿದ್ಧ ಪ್ರಶ್ನೆ ಇದು. ಹೆಸರಲ್ಲಿ ಏನೂ ಇಲ್ಲ, ಇರುವುದೆಲ್ಲವೂ ಸತ್ವದಲ್ಲಿ ಎಂಬುದನ್ನು ಸೂಚಿಸುವುದು ಈ ಪ್ರಶ್ನೆಯ ಉದ್ದೇಶವಾಗಿತ್ತು. ಹಾಗಿದ್ದರೂ ಸಾಮಾಜಿಕ ಮತ್ತು ರಾಜಕೀಯ ಅಸ್ಮಿತೆಯ ಪ್ರಬಲ ಪ್ರತಿಪಾದನೆಗಾಗಿ ನಾಮಕರಣ ಮತ್ತು ಮರುನಾಮಕರಣವನ್ನು ನಾವು ನೋಡುತ್ತಿದ್ದೇವೆ. ಪ್ರಜಾಸತ್ತಾತ್ಮಕ ಆಗಿರಲಿ ನಿರಂಕುಶವಾಗಿರಲಿ, ಸರ್ಕಾರಗಳು ಬರುತ್ತವೆ– ಹೋಗುತ್ತವೆ. ಅದರಂತೆಯೇ, ಸಾರ್ವಜನಿಕ ಸ್ಥಳಗಳು, ಸಂಕೇತಗಳು, ಪ್ರತಿಮೆಗಳು ಮತ್ತು ಸಂಸ್ಥೆಗಳಿಗೆ ಹೆಸರು ಇರಿಸುವುದು ಅಥವಾ ಹೆಸರು ಬದಲಿಸುವುದು ನಡೆಯುತ್ತಲೇ ಇರುತ್ತದೆ. ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಯ ಹೆಸರನ್ನು ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ಎಂದು ಬದಲಾಯಿಸಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ. ಈ ಚರ್ಚೆಯಿಂದಾಗಿ, ಇತ್ತೀಚೆಗೆ ಎರಡು ಕ್ರೀಡಾಂಗಣಗಳ ಹೆಸರು ಬದಲಾವಣೆಯತ್ತ ವಿಮರ್ಶಕರು ಬೊಟ್ಟು ಮಾಡಿದ್ದಾರೆ. ಅಹಮದಾಬಾದ್‌ನ ಸರ್ದಾರ್ ವಲ್ಲಭಭಾಯ್ ಪಟೇಲ್ ಕ್ರೀಡಾಂಗಣದ ಹೆಸರನ್ನು ನರೇಂದ್ರ ಮೋದಿ ಕ್ರೀಡಾಂಗಣ ಎಂದು ಈ ವರ್ಷವಷ್ಟೇ ಬದಲಾಯಿಸಲಾಗಿದೆ. ಅದಕ್ಕೂ ಮೊದಲು, ದೆಹಲಿಯ ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದ ಹೆಸರನ್ನು ಅರುಣ್ ಜೇಟ್ಲಿ ಕ್ರೀಡಾಂಗಣ ಎಂದು ಬದಲಿಸಲಾಗಿತ್ತು!

ಇದಕ್ಕೂ ಮೊದಲು, ಜನಸಂಘದ ಸ್ಥಾಪಕ ದೀನದಯಾಳ್ ಉಪಾಧ್ಯಾಯ ಅವರ ಹೆಸರು ಈಗಿನ ಸರ್ಕಾರಕ್ಕೆ ಅತ್ಯಂತ ಅಚ್ಚುಮೆಚ್ಚಾಗಿತ್ತು. ಜನಸಂಘದ ಸಹ ಸಂಸ್ಥಾಪಕರ ಹೆಸರಿನಲ್ಲಿ ಎರಡು ನಿಲ್ದಾಣಗಳಿವೆ– ಅವುಗಳಲ್ಲಿ ಒಂದು ಮಥುರಾದಲ್ಲಿದ್ದರೆ ಇನ್ನೊಂದು ವಾರಾಣಸಿಯ ಹೊರಭಾಗದಲ್ಲಿದೆ. ಈ ಹೆಸರು ಬದಲಾಯಿಸುವಿಕೆಗೆ ಮೊದಲು ಮಥುರಾ ನಿಲ್ದಾಣದ ಹೆಸರು ಫರಾ ಪಟ್ಟಣ ಎಂದೂ ಇನ್ನೊಂದರದ್ದು ಮೊಘಲ್‌ಸರಾಯ್ ಎಂದು ಇತ್ತು. ಮುಸ್ಲಿಮರಿಗೆ ಸಂಬಂಧಿಸಿದ ಎಲ್ಲವನ್ನೂ ದ್ವೇಷಿಸುವ ಈಗಿನ ಬಲಪಂಥೀಯ ಮತ್ತು ಜನಾಂಗ ಶ್ರೇಷ್ಠತೆಯ ವ್ಯಸನದ ಸರ್ಕಾರವು ಈ ಹೆಸರು ಬದಲಾವಣೆ ಮಾಡಿದೆ.

ಗುಡಗಾಂವ್ ಹೆಸರನ್ನು ಗುರುಗ್ರಾಮ (ದ್ರೋಣಾಚಾರ್ಯರ ನೆನಪಿಗೆ) ಎಂದು ಬದಲಾಯಿಸಿರುವುದು ಈ ದೇಶದ ಆದಿವಾಸಿಗಳು, ದಲಿತರು ಮತ್ತು ಶೋಷಿತರಿಗೆ ಜಾತಿವಾದದ ಸ್ಪಷ್ಟ ಸಂದೇಶವನ್ನು ಕಳುಹಿಸಿದೆ. ಬಿಲ್ವಿದ್ಯೆಯಲ್ಲಿ ಅತ್ಯಂತ ಕುಶಲಿಯಾಗಿದ್ದ ಏಕಲವ್ಯ ಎಂಬ 'ಶಿಷ್ಯ'ನ ಹೆಬ್ಬೆರಳನ್ನು ದ್ರೋಣಾಚಾರ್ಯ ಗುರುದಕ್ಷಿಣೆಯಾಗಿ ಪಡೆದು ಆತನನ್ನು ಅಂಗವಿಕಲನನ್ನಾಗಿ ಮಾಡುತ್ತಾರೆ. ಮೇಲ್ಜಾತಿಗೆ ಸೇರಿದ ಅರ್ಜುನನನ್ನು ಅತ್ಯುತ್ತಮ ಬಿಲ್ಲುಗಾರ ಎಂದು ಘೋಷಿಸುವುದು ಇದರ ಉದ್ದೇಶವಾಗಿತ್ತು. ತಳವರ್ಗಗಳ ಆಕ್ರೋಶ ಮತ್ತು ಅಸ್ಮಿತೆಯ ಹರಳುಗಟ್ಟುವಿಕೆಯ ಹಿಂದೆ ಇಂತಹುದೇ ಅಂಶಗಳಿವೆ. ವಿಶೇಷವಾಗಿ, ಪ್ರಾದೇಶಿಕ, ಭಾಷಿಕ ಮತ್ತು ಇತರ ವೈವಿಧ್ಯಗಳನ್ನು ಇರಿಸಿಕೊಂಡು ಯೋಚಿಸುವುದಾದರೆ, ಹೆಸರಿಸುವ ಮತ್ತು ಹೆಸರು ಬದಲಿಸುವ ರಾಜಕಾರಣದ ಹಿಂದೆ ಇರುವ ರಾಜಕಾರಣದ ಬಗ್ಗೆ ಸ್ವತಂತ್ರ ಭಾರತವು ಬಹಳಷ್ಟು ಚಿಂತನೆ ನಡೆಸಬೇಕಿದೆ.

ಮರುನಾಮಕರಣ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಒಂದು ಹೆಸರು ಏನನ್ನು ಧ್ವನಿಸುತ್ತದೆ? ಹೆಮ್ಮೆ? ನೋವಿನ ನೆನಪುಗಳು? ಅನ್ಯಾಯ? ಸಂಕುಚಿತ ಮತ್ತು ಜನಾಂಗೀಯ ಶ್ರೇಷ್ಠತೆಯ ಹಿಂದುತ್ವ ದೃಷ್ಟಿಕೋನದ ಉತ್ತರವು ಒಂದು ಬಣ್ಣವನ್ನಷ್ಟೇ ಹೊಂದಿರಲು ಸಾಧ್ಯ. ಆದರೆ, ಒಟ್ಟು ಚಿತ್ರಣವು ಸಂಕೀರ್ಣವಾಗಿದೆ; ಹೆಸರು ಬದಲಿಸುವಿಕೆಯ ಇಡೀ ವ್ಯವಹಾರದಲ್ಲಿ ಭಾರತದ 'ಕುಲೀನ' ರಾಜಕಾರಣಿಗಳ ಪ್ರಾಬಲ್ಯವನ್ನು ಗಮನಿಸಿದರೆ, ಈ ವಿಚಾರದಲ್ಲಿ ಹೆಚ್ಚು ವ್ಯಾಪಕವಾದ ಪರಿಗಣನೆಯ ಅಗತ್ಯ ಇದೆ.

ತ್ರಿಪುರಾದಲ್ಲಿ ಇದ್ದ ವ್ಲಾಡಿಮಿರ್ ಲೆನಿನ್ ಅವರ ಪ್ರತಿಮೆಯನ್ನು ಕಡುಬಲಪಂಥೀಯ ಪಕ್ಷವೊಂದು 2018ರ ಮಾರ್ಚ್‌ನಲ್ಲಿ ಅಧಿಕಾರಕ್ಕೆ ಬಂದ ಬಳಿಕ ಕೆಡವಿದ್ದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ, ಅಸಮಾನತೆಯ ಧರ್ಮಗ್ರಂಥವೇ ಆಗಿರುವ ಮನುಸ್ಮೃತಿಯನ್ನು ಕೈಯಲ್ಲಿ ಹಿಡಿದುಕೊಂಡಿರುವ ಮನುವಿನ ಪ್ರತಿಮೆಯನ್ನು ತನ್ನ ಆವರಣದಲ್ಲಿಯೇ ಸ್ಥಾಪಿಸಲು ಅವಕಾಶ ಕೊಟ್ಟ ರಾಜಸ್ಥಾನ ಹೈಕೋರ್ಟ್‌ನ ನಿಲುವು ಮಾತ್ರ ಗ್ರಹಿಕೆಗೇ ನಿಲುಕುವುದಿಲ್ಲ. ಜಾತಿ ಮತ್ತು ಲಿಂಗ ಬಹಿಷ್ಕಾರ, ಕ್ರೌರ್ಯ ಮತ್ತು ಅಸಮಾನತೆಗೆ ಮಾನ್ಯತೆ ಕೊಟ್ಟ 'ಕಾನೂನು'ಗಳ ಸಂಗ್ರಹವಾದ ಮನುಸ್ಮೃತಿಯನ್ನು ಡಾ. ಅಂಬೇಡ್ಕರ್ ಅವರು 1927ರ ಡಿಸೆಂಬರ್ 25ರಂದು ಸುಟ್ಟು ಹಾಕಿದ್ದರು. (ಬಿಜೆಪಿ–ಜೆಡಿ ಮೈತ್ರಿಕೂಟವು ಎರಡನೇ ಅವಧಿಗೆ ಅಧಿಕಾರಕ್ಕೆ ಬಂದ ವರ್ಷವೇ ಹೈಕೋರ್ಟ್ ಮುಂದೆ ಪ್ರತಿಮೆ ಸ್ಥಾಪನೆ ಆಗಿತ್ತು. ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಸಂವಿಧಾನವನ್ನೇ ಅಣಕಿಸಿ, ಪ್ರತಿಮೆ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟದ್ದೇ ಭಾರತದ ನ್ಯಾಯಾಂಗ ವ್ಯವಸ್ಥೆಯೊಳಗೆ ಇರುವ ಸಾಂವಿಧಾನಿಕತೆಯ ಸಂಸ್ಕೃತಿ ಎಂಥಹುದು ಎಂಬುದನ್ನು ತೋರಿಸಿಕೊಡುತ್ತದೆ).

2014ರ ನಂತರದ ಹೆಸರು ಬದಲಿಸುವಿಕೆಯ ಅತ್ಯುತ್ಸಾಹದ ಹಿಂದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ (ಐಎನ್‌ಸಿ) ಕೆಲವು ನಾಯಕರು ಅದರಲ್ಲೂ ವಿಶೇಷವಾಗಿ ನೆಹರೂ–ಗಾಂಧಿ ಕುಟುಂಬದ ಸದಸ್ಯರ ಗಣನೀಯ ಅಸ್ತಿತ್ವವನ್ನು ವಿಸ್ಮೃತಿಗೆ ಕಳುಹಿಸುವ ಉದ್ದೇಶವಿದೆ. ಭಾರತದ ಸಾರ್ವಜನಿಕ ಸ್ಥಳಗಳು ಮತ್ತು ಜೀವನದಲ್ಲಿ ಇವರ ಉಪಸ್ಥಿತಿಯು ಅತಿಯಾಗಿದೆ ಎಂದೂ ಕೆಲವರು ಹೇಳುತ್ತಿದ್ದಾರೆ. ಇತಿಹಾಸ ಮತ್ತು ಸ್ಮರಣೆಯಲ್ಲಿ ಪ್ರಜಾಸತ್ತಾತ್ಮಕವಾದ ಪಾಲು ಮತ್ತು ಅವಕಾಶದ ಬಗ್ಗೆ ಕಾಳಜಿ ಹೊಂದಿರುವವರಿಗೆ ಇತರ ಪ್ರಶ್ನೆಗಳೂ ಪ್ರಸ್ತುತ ಅನಿಸುತ್ತವೆ.

ವಿಚಾರವಾದ, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಇನ್ನಷ್ಟು ಗಟ್ಟಿಗೊಳಿಸಲು ಹೋರಾಡಿದ ಎಲ್ಲ ವರ್ಗಗಳಿಗೆ ಸೇರಿದ ಎಲ್ಲ ನಾಯಕಿಯರು ಮತ್ತು ನಾಯಕರನ್ನು ಗುರುತಿಸುವ ಕೆಲಸವನ್ನು ಭಾರತವು ನಿಜವಾಗಿಯೂ ಮಾಡುತ್ತಿದೆಯೇ? ನಮ್ಮ ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳು, ರಸ್ತೆಗಳು, ಉದ್ಯಾನಗಳು ಹಾಗೂ ವಸ್ತುಸಂಗ್ರಹಾಲಯಗಳ ಹೆಸರುಗಳು ಈ ವಾಸ್ತವವನ್ನು ಗುರುತಿಸುವಂತೆ ಇವೆಯೇ? ಅಥವಾ, ಭಾರತದ ಸಾರ್ವಜನಿಕ ಮತ್ತು ರಾಜಕೀಯ ಜೀವನವು ನಿರಾಕರಣೆ ಮತ್ತು ಅಸಮಾನತೆಯ ಸೋಂಕಿನಲ್ಲಿಯೇ ಇದೆಯೇ?

ಎರಡು ಉದಾಹರಣೆಗಳನ್ನು ಕೊಡುತ್ತೇನೆ– ಮಹಿಳೆಯರು ಶಿಕ್ಷಣ ಪಡೆಯುವುದಕ್ಕಾಗಿ ಹೋರಾಡಿದ ಸಾವಿತ್ರಿಬಾಯಿ ಫುಲೆ ಮತ್ತು ಅವರ ಸಹವರ್ತಿ ಫಾತಿಮಾ ಶೇಖ್ ಅವರ ಹೆಸರನ್ನು ಮಹಿಳೆಯರ ಶಿಕ್ಷಣ ಸಂಸ್ಥೆಗಳಿಗೆ ಇರಿಸಲಾಗಿದೆಯೇ? ದ್ರಾವಿಡ ರಾಜ್ಯ ತಮಿಳುನಾಡಿನ ಹಾಗೆಯೇ ಪಶ್ಚಿಮ ಬಂಗಾಳ ಮತ್ತು ಬಿಹಾರವು ಸ್ವಲ್ಪಮಟ್ಟಿಗೆ ಪ್ರಜಾಸತ್ತಾತ್ಮಕವಾದ ತುಡಿತವನ್ನು ತೋರಿವೆ. ಭಾಗಲ್ಪುರ ವಿಶ್ವವಿದ್ಯಾಲಯದ ಹೆಸರನ್ನು ತಿಲಕಾ ಮಾಂಝಿ ಭಾಗಲ್ಪುರ ವಿಶ್ವವಿದ್ಯಾಲಯ ಎಂದು 1991ರಲ್ಲಿ ಮರುನಾಮಕರಣ ಮಾಡಲಾಯಿತು. ಬ್ರಿಟಿಷರ ವಿರುದ್ಧ ನಡೆದ ಸಂಥಾಲ ಪರಗಣ ಆದಿವಾಸಿ ಬಂಡಾಯದ ನಾಯಕನಾಗಿದ್ದ ತಿಲಕಾ ಮಾಂಝಿಯ ಪ್ರತಿರೋಧವು ಬ್ರಿಟಿಷರನ್ನು ಎಷ್ಟು ಬೆದರಿಸಿತ್ತೆಂದರೆ, ಆತನನ್ನು ಸೆರೆ ಹಿಡಿದು ಭಾಗಲ್ಪುರದಲ್ಲಿ ಮಾವಿನ ಮರಕ್ಕೆ ನೇತು ಹಾಕುತ್ತಾರೆ. ಹಾಗೆಯೇ, ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಜಮೀನ್ದಾರರು ಮತ್ತು ರೈತರ ಹೋರಾಟವನ್ನು ಸಂಘಟಿಸಿದ್ದ ತಿತುಮೀರ್ (ಸಯ್ಯದ್ ಮೀರ್ ನಿಸಾರ್ ಅಲಿ), ಪಶ್ಚಿಮ ಬಂಗಾಳದ 24 ಪರಗಣ, ಫರೀದ್‌ಪುರ, ನಾದಿಯಾ ಮತ್ತು ಇತರ ಪ್ರದೇಶಗಳನ್ನು ಸ್ವತಂತ್ರ ಎಂದು ಘೋಷಿಸಿದ್ದರು. ನಂತರ, ದಮನ ನಡೆಯಿತು. ಇಂದಿಗೂ ಪೂರ್ವ ಮತ್ತು ಪಶ್ಚಿಮ ಬಂಗಾಳಗಳೆರಡರಲ್ಲಿಯೂ ಮೀರ್ ಸ್ವಾತಂತ್ರ್ಯದ ಸಂಕೇತವಾಗಿ ಉಳಿದಿದ್ದಾರೆ. ಢಾಕಾದಲ್ಲಿ ಅವರ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯವೂ ಸ್ಥಾಪನೆಯಾಗಿದೆ.

ಜನಜೀವನದ ಮೇಲೆ ಗಾಢ ಪರಿಣಾಮ ಬೀರಿದ ವ್ಯಕ್ತಿಗಳ ಮೂಲಕ ಹೆಸರುಗಳು ಮತ್ತು ಸ್ಥಳಗಳು ಗುರುತಿಸಿಕೊಳ್ಳುತ್ತವೆ. ಒಬ್ಬ ವ್ಯಕ್ತಿಯಿಂದ ಎಷ್ಟು ಜನರ ಮೇಲೆ ಯಾವ ಮಟ್ಟದ ಪರಿಣಾಮ ಉಂಟಾಯಿತು ಮತ್ತು ಈ ದೇಶದ ವಿಭಜಿತ ಜನ ಸಮುದಾಯಗಳಲ್ಲಿ ಯಾವುದರ ಮೇಲೆ ಹೆಚ್ಚು ಪ್ರಭಾವ ಆಗಿದೆ ಎಂಬುದನ್ನು ಗುರುತಿಸುವವರು ಯಾರು?

ಲೇಖಕಿ: ನಾಗರಿಕ ಹಕ್ಕುಗಳ ಪರ ಹೋರಾಟಗಾರ್ತಿ, ವಕೀಲೆ ಮತ್ತು ಸಿಟಿಜನ್ಸ್ ಫಾರ್ ಜಸ್ಟಿಸ್ ಅಂಡ್ ಪೀಸ್‌ನ ಕಾರ್ಯದರ್ಶಿ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ವಿನಾಶಕ್ಕೆ ಹಾದಿ ಶತ್ರುತ್ವ

ಮನುಷ್ಯನ ಬದುಕೇ ಸಂಘರ್ಷದ ಬದುಕು ಅಂದುಕೊಳ್ಳುತ್ತೇವೆ. ಹಾಗೇ ನೋಡಿದರೆ, ಇಡೀ ಬ್ರಹ್ಮಾಂಡದಲ್ಲಿರುವ ಜೀವಿಗಳೆಲ್ಲ ಒಂದಕ್ಕೊಂದು ಸಂಘರ್ಷಿಸಿಕೊಂಡೇ ಬದುಕುತ್ತಿವೆ. ಜೀವಕಾಯಗಳಷ್ಟೇ ಅಲ್ಲ, ಆಕಾಶಕಾಯಗಳು ಸಹ ಪರಸ್ಪರ ಘರ್ಷಣೆಯಲ್ಲೆ ಚಲಿಸುತ್ತಿವೆ. ಒಂದರ ಉಳಿವು, ಇನ್ನೊಂದರ ಅಳಿವು ಈ ಜಗದ ನಿಯಮ. ಈ ಸಂಘರ್ಷ ಸಹ ಭಗವಂತನ ಮಾಯಾಜಾಲ. ಇಲ್ಲಿ ಅಳಿದಿದೆ ಎನ್ನುವುದು ಅಳಿದಿರುವುದಿಲ್ಲ. ಉಳಿದಿದೆ ಅನ್ನುವುದು ಉಳಿದಿರುವುದಿಲ್ಲ. ಉದಾಹರಣೆಗೆ, ಬಿಸಿಲಿನ ಸಂಘರ್ಷಕ್ಕೆ ನೀರು ಆವಿಯಾಗುವಾಗ ಅಳಿಯಿತು ಅನಿಸುತ್ತೆ. ಅದು ಮಳೆಯಾಗಿ ಸುರಿದಾಗ ಉಳಿದಂತೆ ಕಾಣುತ್ತೆ. ಇದೇ ಸೃಷ್ಟಿಯ ಚಮತ್ಕಾರ.

ನಾವು ಬದುಕಿನಲ್ಲಿ ಯಾವುದನ್ನು ಕಳೆದುಕೊಂಡೆವು ಮತ್ತು ಯಾವುದನ್ನು ಉಳಿಸಿಕೊಂಡೆವು ಅನ್ನುವುದು ಬಹಳ ಮುಖ್ಯ. ಒಳ್ಳೆಯದನ್ನು ಗಳಿಸಿ, ಕೆಟ್ಟದ್ದನ್ನು ಕಳೆದುಕೊಂಡೆವು ಅಂದಾಗ ನಮ್ಮ ಬದುಕು ಸಾರ್ಥಕ. ಅದೇ ಒಳ್ಳೆಯದನ್ನು ಕಳೆದುಕೊಂಡು, ಕೆಟ್ಟದ್ದನ್ನು ಪಡೆದೆವೆಂದರೆ ನಾವು ನೆಮ್ಮದಿಯನ್ನು ಕಳೆದುಕೊಂಡು, ಕಷ್ಟಗಳನ್ನು ಮೈಮೇಲೆ ಎಳೆದುಕೊಂಡೆವೆಂದೇ ಅರ್ಥ. ಮನುಷ್ಯ ಮೂರು ವಿಭಾಗಗಳಲ್ಲಿ ಸಂಘರ್ಷಿಸಬೇಕು. ಆ ನಿತ್ಯಕದನದಲ್ಲಿ ಗೆಲುವು ಮೂಡಿಸುತ್ತಾ ಹೋದಾಗಲೇ ನಮ್ಮ ಜೀವ-ಜೀವನ-ನೆಮ್ಮದಿ ಉಳಿದುಕೊಂಡಿರುತ್ತದೆ. ಆ ಮೂರು ಸಂಘರ್ಷದ ಭೂಮಿಕೆ ಯಾವುದೆಂದರೆ ದೇಹ-ಮನಸ್ಸು-ಬಾಹ್ಯಜಗತ್ತು.

ದೇಹದೊಳಗಿನ ಜೀವಾಣುಗಳೊಂದಿಗೆ ನಾನಾ ರೋಗಾಣುಗಳು ಸಂಘರ್ಷಿಸುತ್ತಿರುತ್ತವೆ. ಮನಸ್ಸಿನ ನಿಷ್ಕಲ್ಮಶ ತಿಳಿಗೊಳದಲ್ಲೂ ನಾನಾ ಭಾವಗಳು ಅಪ್ಪಳಿಸುತ್ತಿರುತ್ತವೆ. ಬಾಹ್ಯದ ಬದುಕಲ್ಲೂ ನಾನಾ ಜನ, ನಾನಾ ರೀತಿಯಲ್ಲಿ ಬರುತ್ತಿರುತ್ತಾರೆ. ಈ ಮೂರು ಲೋಕದಲ್ಲೂ ಮನುಷ್ಯ ಸಂಘರ್ಷಿಸುತ್ತಾ ತನ್ನ ಒಳ್ಳೆಯತನ ಉಳಿಸಿಕೊಂಡರೆ, ಜೀವ-ಜೀವನ-ನೆಮ್ಮದಿ ದೀರ್ಘಕಾಲ ಕಾಯ್ದುಕೊಳ್ಳುತ್ತದೆ. ರೋಗಾಣು-ದುರ್ಭಾವಗಳು-ಜನಗಳೊಂದಿಗೆ ನಿತ್ಯ ಕಾದುತ್ತಿದ್ದರೆ ನಮ್ಮ ಜೀವ-ಜೀವನ-ನೆಮ್ಮದಿ ಅಲ್ಪಕಾಲದಲ್ಲೇ ಅಳಿದು ಹೋಗುತ್ತದೆ. ದೇಹದೊಳಗೆ ಆಕಸ್ಮಿಕವಾಗಿ ನುಗ್ಗುವ ರೋಗಾಣುವನ್ನೂ ನಮ್ಮ ಜೀವಾಣುಗಳು ಸ್ನೇಹಭಾವದಿಂದ ನೋಡಿಕೊಂಡರೆ, ಅವು ಒಂದಷ್ಟು ದಿನ ಇದ್ದು ದೇಹದಿಂದ ಹೊರ ಹೋಗುತ್ತವೆ. ಹಾಗಾಗದೆ, ನಮ್ಮ ಜೀವಾಣುಗಳು ರೋಗಾಣುಗಳನ್ನೆ ಅನುಕರಿಸಿದರೆ ಅಪಾಯಕಾರಿ. ಹಾಗೇ, ನಮ್ಮ ಬದುಕಿನಲ್ಲೂ ಕೆಟ್ಟವರು ಬಂದು ಹೋಗುತ್ತಾರೆ. ನಾವು ಕೆಟ್ಟವರನ್ನು ಅನುಕರಿಸಬಾರದಷ್ಟೆ. ನಮ್ಮ ದೇಹದೊಳಗಿರುವ ಜೀವಾಣುಗಳಿಗೆ ಮತ್ತು ನಮ್ಮ ಮನಸ್ಸಿನ ಭಾವಗಳಿಗೆ ಕೆಟ್ಟದ್ಯಾವುದು ಒಳ್ಳೆಯದ್ಯಾವುದು ಅನ್ನೋ ಜಾಗೃತಪ್ರಜ್ಞೆ ಮೂಡಿಸುವುದು ಬಾಹ್ಯಜಗತ್ತು.

ದೇಹದೊಳಗಿರುವ ಜೀವಾಣುಗಳಿಗೆ ರೋಗಾಣುವಿನೊಂದಿಗೆ ಹೇಗೆ ವರ್ತಿಸಬೇಕು ಅನ್ನೋ ವಿವೇಕ ಹೇಳಿಕೊಡುವ ಗುರುವೇ ಮನಸ್ಸು. ಈ ಮನಸ್ಸಿಗೆ ಬುದ್ಧಿಕೌಶಲವನ್ನು ಕಲಿಸಿಕೊಡುವುದೇ ಬಾಹ್ಯಜಗತ್ತು. ದೇಹ-ಮನಸ್ಸು-ಬಾಹ್ಯ – ಈ ಮೂರು ಒಂದಕ್ಕೊಂದು ಸಂಬಂಧ ಬೆಸೆದುಕೊಂಡಿವೆ. ಒಂದಕ್ಕೊಂದು ಕೊಟ್ಟು-ತೆಗೆದುಕೊಳ್ಳುವ ಅನುಬಂಧಗಳಿವೆ. ಹೇಗೆಂದರೆ, ಮಗು ಹುಟ್ಟುವಾಗ ಅದು ಒಂದು ಜೀವಾಣುವಾಗಿರುತ್ತದೆ. ಮನಸ್ಸು ಬೆಳೆದಿರುವುದಿಲ್ಲ. ಆ ಮಗು ಬೆಳೆಯುತ್ತಾ ಹೋದಂತೆ ಬಾಹ್ಯ ಪರಿಸರದಿಂದ ಮನಸ್ಸು ಬೆಳೆಸಿಕೊಳ್ಳುತ್ತದೆ. ಆ ಮನಸ್ಸಿಗೆ ಒಳ್ಳೆಯ ಅಥವಾ ಕೆಟ್ಟ ಬುದ್ಧಿ ಬರುವುದು ಬಾಹ್ಯ ಪರಿಸರದಿಂದಲೇ. ಆದ್ದರಿಂದ ನಮ್ಮ ಸುತ್ತಲ ಪರಿಸರಕ್ಕೆ ಕೆಟ್ಟ ಮನುಷ್ಯರು ಬರದಂತೆ ನೋಡಿಕೊಂಡರೆ ಮಕ್ಕಳು ಒಳ್ಳೆಯ ಬುದ್ಧಿಯನ್ನೇ ಕಲಿಯುತ್ತಾರೆ.

ಕೆಟ್ಟ ದೇಹದಷ್ಟೇ, ಕೆಟ್ಟ ಮನಸ್ಸು ಅಪಾಯಕಾರಿ. ಇದಕ್ಕಾಗಿ ನಮ್ಮ ಮಕ್ಕಳಿಗೆ ಒಳ್ಳೆಯ ಮನಸ್ಸಿನ ಗುರುವಿನಿಂದ ಪಾಠ ಕಲಿಸಿ ಸ್ವಸ್ಥ ಮನಸ್ಸನ್ನು ಬೆಳೆಸಬೇಕು. ಇಲ್ಲವಾದರೆ, ಮಗುವಿನ ಮನಸ್ಸು ಗುರುವಿನಂತೆ ದ್ವೇಷಾಸೂಯೆ ಬೆಳೆಸಿಕೊಳ್ಳುತ್ತಾ, ಬದುಕಿನುದ್ದಕ್ಕೂ ಶತ್ರುತ್ವ ಸೃಷ್ಟಿಸುತ್ತಾ ವಿನಾಶದತ್ತ ಸಾಗುತ್ತದೆ. 'ಮಿತ್ರುತ್ವವೆ ಅಮೃತ, ಶತ್ರುತ್ವವೆ ವಿಷ' ಅನ್ನೋ ವಿವೇಕ ಕಲಿಸೋ ಗುರು ಸಮಾಜಕ್ಕೆ ಬೇಕು. ಇಂಥ 'ಸಚ್ಚಿದಾನಂದ'ಗುರುವೇ ಜಗತ್ತಿಗೆ ಮಾದರಿ.

ಖೇಲ್‌ರತ್ನ ಪ್ರಶಸ್ತಿ ಹೆಸರು: ತಪ್ಪೊಂದನ್ನು ಸರಿಪಡಿಸಿರುವುದು ಸ್ವಾಗತಾರ್ಹ

• ಪ್ರವೀಣ್ ಕುಮಾರ್, ಮಾವಿನಕಾಡು

ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ ಕೊಡುವ ಅತ್ಯುನ್ನತ ಗೌರವ 'ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ'ಯ ಹೆಸರು ಇದೀಗ ಬದಲಾಗಿದೆ. ಆ ಪ್ರಶಸ್ತಿಯು ಇನ್ನು ಮುಂದೆ ಹಾಕಿ ಮಾಂತ್ರಿಕ 'ಮೇಜರ್ ಧ್ಯಾನ್ ಚಂದ್' ಅವರ ಹೆಸರಿನೊಂದಿಗೆ ಗುರುತಿಸಿಕೊಳ್ಳಲಿದೆ. ಈ ಮರುನಾಮಕರಣಕ್ಕೆ ದೇಶದ ನಾಗರಿಕರಿಂದ ಮನವಿಗಳು ಬಂದಿರುವ ಕಾರಣ ಅವರ ಭಾವನೆಗಳನ್ನು ಗೌರವಿಸಿ, ಅದು ಈ ದೇಶದ ಕೋಟಿಗಟ್ಟಲೆ ಯುವಕರಿಗೆ ಸ್ಫೂರ್ತಿ ನೀಡುತ್ತದೆ ಎನ್ನುವ ವಿಶ್ವಾಸದೊಂದಿಗೆ ಕ್ರೀಡಾಕ್ಷೇತ್ರದ ಅತ್ಯುನ್ನತ ಪ್ರಶಸ್ತಿಗೆ ಅದೇ ಕ್ಷೇತ್ರದ ಒಬ್ಬ ಮಹೋನ್ನತ ಸಾಧಕನ ಹೆಸರನ್ನಿಟ್ಟಿರುವ ಬಗ್ಗೆ ಪ್ರಧಾನಿಯವರು ಟ್ವೀಟ್ ಕೂಡಾ ಮಾಡಿದ್ದಾರೆ.

ಇದರೊಂದಿಗೆ, ಮರುನಾಮಕರಣದ ವಿಚಾರವಾಗಿ ಚರ್ಚೆಗಳೂ ಪ್ರಾರಂಭವಾಗಿವೆ. ಕರ್ನಾಟಕದಲ್ಲೂ, ರಿಯಾಯಿತಿ ದರದಲ್ಲಿ ಆಹಾರ ಒದಗಿಸುವ ಕ್ಯಾಂಟೀನ್‌ಗಳಿಗೆ ಇಂದಿರಾ ಫಿರೋಜ್ ಗಾಂಧಿಯವರ ಸ್ಮರಣಾರ್ಥ ಇರಿಸಿರುವ 'ಇಂದಿರಾ ಕ್ಯಾಂಟೀನ್' ಎಂಬ ಹೆಸರು, ನಾಗರಹೊಳೆ ರಾಷ್ಟ್ರೀಯ ಉದ್ಯಾನಕ್ಕೆ ಇರಿಸಲಾಗಿರುವ ರಾಜೀವ್ ಗಾಂಧಿ ನ್ಯಾಷನಲ್ ಪಾರ್ಕ್ ಎಂಬ ಹೆಸರನ್ನೂ ಬದಲಿಸಬೇಕೆನ್ನುವ ಮನವಿಗಳು ಹರಿದುಬರುತ್ತಿವೆ.

ವ್ಯಕ್ತವಾಗುತ್ತಿರುವ ಮುಕ್ತ ಅಭಿಪ್ರಾಯಗಳು, ಮನವಿಗಳಿಗೆ ಸ್ಪಂದಿಸಬಲ್ಲ ಸರ್ಕಾರ, ಇವುಗಳೇ ಪ್ರಜಾಪ್ರಭುತ್ವದ ಸೌಂದರ್ಯವೆಂದರೆ ತಪ್ಪಾಗಲಾರದು. ಇಂತಹ ಚರ್ಚೆಗಳು ವಿಪರೀತಕ್ಕೆ ಹೋಗದಂತೆ, ನಾಮಕರಣ ಪ್ರಕ್ರಿಯೆಗಳು ಪೈಪೋಟಿಗೆ ಕಾರಣವಾಗದಂತೆ ಎಚ್ಚರ ವಹಿಸಿದರೆ ಖಂಡಿತವಾಗಿಯೂ ಇದನ್ನೊಂದು ಸಕಾರಾತ್ಮಕ ಬೆಳವಣಿಗೆ ಎಂದೇ ಭಾವಿಸಬಹುದು.

ರಾಜಕೀಯ ನಾಯಕರೊಬ್ಬರ ಹೆಸರಲ್ಲಿದ್ದ ಖೇಲ್ ರತ್ನ ಪ್ರಶಸ್ತಿಗೆ ಕ್ರೀಡಾ ಸಾಧಕರೊಬ್ಬರ ಹೆಸರು ಇರಿಸಿರುವುದು ಖಂಡಿತವಾಗಿಯೂ ಸ್ವಾಗತಾರ್ಹ ವಿಚಾರ. ಏಕೆಂದರೆ, ಕ್ರೀಡಾ ಕ್ಷೇತ್ರದ ಅತ್ಯುನ್ನತ ಗೌರವಕ್ಕೆ ರಾಜಕಾರಣಿಯೊಬ್ಬರ ಹೆಸರಿಟ್ಟದ್ದೇ ಮೊದಲ ತಪ್ಪು. ಸರ್ಕಾರ ನೀಡುವ ಪ್ರಶಸ್ತಿಗಳ ಹೆಸರಿನ ಗೌರವಕ್ಕೆ ಪಾತ್ರರಾಗಬಲ್ಲ ಸಾಕಷ್ಟು ಅರ್ಹರು ಖಂಡಿತವಾಗಿಯೂ ಈ ದೇಶದಲ್ಲಿ ಇದ್ದಾರೆ. ಅಂತಹ ಪ್ರಶಸ್ತಿಗಳಿಗೂ ರಾಜಕೀಯ ನಾಯಕರ ಹೆಸರನ್ನೇ ಇಡುವುದರಿಂದ ಆ ಅರ್ಹರೆಲ್ಲರೂ ತಮಗೆ ಸಿಗಬಹುದಾಗಿದ್ದ ಗೌರವಗಳಿಂದ ವಂಚಿತರಾಗುತ್ತಾರೆ.

ಮೊನ್ನೆ ನನಗೊಬ್ಬರು ನೆಹರೂ ಹಾಗೂ ಗಾಂಧಿ ಕುಟುಂಬದವರ ಹೆಸರಿನಲ್ಲಿರುವ ಸರ್ಕಾರಿ ಯೋಜನೆಗಳು, ಪ್ರಶಸ್ತಿಗಳು, ಸಂಸ್ಥೆಗಳು ಮತ್ತು ಕಟ್ಟಡಗಳ ಪಟ್ಟಿಯೊಂದನ್ನು ಕಳುಹಿಸಿ, ಒಂದನ್ನೂ ತಪ್ಪಿಸದೇ ಆ ಎಲ್ಲ ಹೆಸರುಗಳನ್ನೂ ಪೂರ್ತಿಯಾಗಿ ಓದುವಂತೆ ಸವಾಲು ಹಾಕಿದ್ದರು. ನೂರು-ನೂರಿಪ್ಪತ್ತು ಹೆಸರುಗಳನ್ನು ಕಷ್ಟಪಟ್ಟು ಓದಿದೆನಾದರೂ, ಅದೆಷ್ಟೇ ಬಾರಿ ಪ್ರಯತ್ನಪಟ್ಟರೂ ಆ ಪಟ್ಟಿಯನ್ನು ಪೂರ್ತಿಯಾಗಿ ಓದಿ ಲೆಕ್ಕ ಹಾಕಲು ಸಾಧ್ಯವೇ ಆಗಲಿಲ್ಲ. ಇದು ಹೆಮ್ಮೆಯೋ, ದುರಂತವೋ?

ನಾಯಕರೊಬ್ಬರ ಅನುಭವ, ಆಸಕ್ತಿ ಅಥವಾ ಅವರ ಗಣನೀಯ ಕೊಡುಗೆಯನ್ನು ಸ್ಮರಿಸುವ ಸಲುವಾಗಿ ಬೆರಳೆಣಿಕೆಯಷ್ಟು ಯೋಜನೆಗಳಿಗೆ ಅವರ ಹೆಸರಿಡುವುದನ್ನು ಒಪ್ಪಬಹುದಾದರೂ, ಎಲ್ಲ ಯೋಜನೆಗಳೂ ಅವರ ಹೆಸರಿನದ್ದೇ ಇರಬೇಕು, ಎಲ್ಲ ಕಟ್ಟಡಗಳ ಮೇಲೂ ಅವರ ಹೆಸರೇ ರಾರಾಜಿಸಬೇಕು ಎನ್ನುವ ಮನೋಭಾವ ತೀರಾ ಅಸಹನೀಯ ಎಂದೆನ್ನಿಸುವುದಿಲ್ಲವೇ?

ನಾಯಕರೊಬ್ಬರ ಅನುಭವ, ಆಸಕ್ತಿ ಅಥವಾ ಅವರ ಗಣನೀಯ ಕೊಡುಗೆಯನ್ನು ಸ್ಮರಿಸುವ ಸಲುವಾಗಿ ಬೆರಳೆಣಿಕೆಯಷ್ಟು ಯೋಜನೆಗಳಿಗೆ ಅವರ ಹೆಸರಿಡುವುದನ್ನು ಒಪ್ಪಬಹುದಾದರೂ, ಎಲ್ಲ ಯೋಜನೆಗಳೂ ಅವರ ಹೆಸರಿನದ್ದೇ ಇರಬೇಕು, ಎಲ್ಲ ಕಟ್ಟಡಗಳ ಮೇಲೂ ಅವರ ಹೆಸರೇ ರಾರಾಜಿಸಬೇಕು ಎನ್ನುವ ಮನೋಭಾವ ತೀರಾ ಅಸಹನೀಯ ಎಂದೆನ್ನಿಸುವುದಿಲ್ಲವೇ?

ಒಂದು ಪಕ್ಷದ ಅಧಿಕಾರವಿದ್ದಾಗ ಸರ್ಕಾರದ ಯೋಜನೆಗಳಿಗೆ ಆ ಪಕ್ಷದ ನಾಯಕರ ಹೆಸರನ್ನಿರಿಸುವುದು ಆ ಕ್ಷಣಕ್ಕೆ ಹಬ್ಬದ ವಾತಾವರಣ ನಿರ್ಮಿಸಿಬಿಡಬಹುದಾದರೂ, ಹಲವು ವರ್ಷಗಳ ನಂತರ ರಾಜಕೀಯ ಕಾರಣಗಳಿಂದಾಗಿ ಆ ಹೆಸರೇ ಆ ಯೋಜನೆಗಳಿಗೆ ಮುಳುವಾಗಿಬಿಡುವ ಸಾಧ್ಯತೆಯೂ ಇದೆ. ಹಾಗೆಯೇ ಆ ಪಕ್ಷದ ಪ್ರಮುಖ ನಾಯಕರು ಒಂದೊಮ್ಮೆ ಭ್ರಷ್ಟಾಚಾರ ಅಥವಾ ಇನ್ನಿತರ ಪ್ರಕರಣಗಳಲ್ಲಿ ಸಿಲುಕಿಕೊಂಡಾಗ ನಾಯಕನ ಹೆಸರಿನ ಆ ಪ್ರಶಸ್ತಿಯ ಮೌಲ್ಯಕ್ಕೂ ಕುಂದುಂಟಾಗಬಹುದು. ಜೊತೆಗೆ ಎಷ್ಟೋ ಬಾರಿ ಆ ಪಕ್ಷಕ್ಕೆ ಮತ ಹಾಕದ ವ್ಯಕ್ತಿಗಳು ಆ ಯೋಜನೆಯನ್ನು ಬಳಸಿಕೊಳ್ಳುವಲ್ಲಿ ಹಿಂಜರಿಯಬಹುದು ಅಥವಾ ಅದನ್ನು ಸ್ವೀಕರಿಸಲು ಮುಜುಗರಪಟ್ಟುಕೊಳ್ಳುವ ಸಾಧ್ಯತೆಯೂ ಇರಬಹುದು. ಹೀಗೆ ಸರ್ಕಾರಿ ಯೋಜನೆಗಳಿಗೆ ರಾಜಕೀಯ ನಾಯಕರ ಹೆಸರಿಡುವುದರಿಂದ ಹಲವಾರು ಅಡ್ಡಪರಿಣಾಮಗಳ ಸಾಧ್ಯತೆಗಳಿವೆ.

ಇದಕ್ಕೆ ಇತ್ತೀಚಿನ ಒಂದು ಉದಾಹರಣೆ ಕೊಡುವುದಾದರೆ; ಪ್ರಧಾನಿ ಮೋದಿಯವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ತಮ್ಮ ಟ್ವಿಟರ್ ಖಾತೆಯ ಮೂಲಕ ಅವರಿಗೆ ಅಭಿನಂದನೆ ಸಲ್ಲಿಸಿದ್ದರೆನ್ನುವ ಕಾರಣಕ್ಕಾಗಿ, ಇದೀಗ ತಾನೇ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದು ಇತಿಹಾಸ ಸೃಷ್ಟಿಸಿರುವ ನೀರಜ್ ಚೋಪ್ರಾ ಅವರನ್ನು ಕೆಲವು ಖ್ಯಾತನಾಮರುಗಳೇ ಅಭಿನಂದಿಸಲು ನಿರಾಕರಿಸಿದರು. ಅಷ್ಟೇ ಅಲ್ಲದೆ ಅದೇ ವಿಚಾರವಾಗಿ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಕಟುವಾಗಿ ನಿಂದಿಸಿದವರೂ ಇದ್ದಾರೆ. ಹೀಗಿರುವಾಗ ಮುಂದೊಮ್ಮೆ ಅದೇ ಪ್ರಶಸ್ತಿಯನ್ನು ಅದೇ ರಾಜೀವ್ ಗಾಂಧಿಯವರ ಹೆಸರಿನೊಂದಿಗೆ ನೀರಜ್ ಚೋಪ್ರಾ ಅವರಿಗೆ ಕೊಡಮಾಡಲ್ಪಟ್ಟರೆ ಅವರು ಇನ್ನೂ ಏನೆಲ್ಲಾ ಕೇಳಬೇಕಾಗಿ ಬರಬಹುದು?

ಹೆಸರು ನೆನಪಿನಲ್ಲಿ ಉಳಿಯಬೇಕಾದರೆ ಎಲ್ಲ ಯೋಜನೆಗಳಿಗೂ ಅವರ ಹೆಸರನ್ನಿಡುವುದೇ ಮಾರ್ಗವಲ್ಲ. ಮೊದಲ ಪ್ರಧಾನಿ ಎನ್ನುವ ಕಾರಣಕ್ಕಿರಬಹುದು, ತುರ್ತುಪರಿಸ್ಥಿತಿ ಹೇರಿದ್ದ ಕಾರಣಕ್ಕಿರಬಹುದು, ಕಂಪ್ಯೂಟರ್ ತಂದರೆನ್ನುವಕಾರಣಕ್ಕಿರಬಹುದು, ಮಣ್ಣಿನ ಮಗ ಎನ್ನುವುದಕ್ಕಿರಬಹುದು, 370ನೇ ವಿಧಿ ರದ್ದು ಮಾಡಿದರೆನ್ನುವುದಕ್ಕಿರಬಹುದು, ಒಟ್ಟಿನಲ್ಲಿ ಇದುವರೆಗಿನ ಮತ್ತು ಮುಂಬರುವ ಎಲ್ಲ ಪ್ರಧಾನಿಗಳನ್ನೂ ಹಲವಾರು ಕಾರಣಗಳಿಗಾಗಿ ಈ ದೇಶ ನೂರಾರು ವರ್ಷಗಳ ಕಾಲ ನೆನಪಿಟ್ಟುಕೊಂಡೇ ಇರುತ್ತದೆ.

ಆದ್ದರಿಂದ ಖೇಲ್ ರತ್ನ ಪ್ರಶಸ್ತಿಯ ಮರುನಾಮಕರಣ ಖಂಡಿತವಾಗಿಯೂ ಸರಿಯಾದ ಕ್ರಮವೇ ಆಗಿದೆ. ಆದರೆ ಸರ್ಕಾರ ಹೀಗೆ ಒಂದೊಂದೇ ಹೆಸರುಗಳನ್ನು ಬದಲಿಸುತ್ತಾ ಪದೇ ಪದೇ ವಿವಾದಗಳನ್ನೆದುರಿಸುವ ಬದಲು, ಯಾವುದೇ ಸರ್ಕಾರಿ ಯೋಜನೆಯಲ್ಲೂ ಮಾಜಿ ಪ್ರಧಾನಿಗಳ ಹೆಸರಿರಬಾರದೆನ್ನುವ ಶಿಷ್ಟಾಚಾರವೊಂದನ್ನು ಅನುಮೋದಿಸಿ, ಒಂದೇ ಬಾರಿಗೆ ಅಂತಹ ಎಲ್ಲ ಹೆಸರುಗಳನ್ನೂ ಮರುನಾಮಕರಣಗೊಳಿಸಿ, ಮುಂದೆಂದೂ ಅಂತಹ ಪ್ರಮಾದಗಳಾಗದಂತೆ, ವಿವಾದಗಳೇಳದಂತೆ ನೋಡಿಕೊಳ್ಳುವುದು ದೇಶದ ಹಿತದೃಷ್ಟಿಯಿಂದ ಸೂಕ್ತ ಕ್ರಮವಾಗಬಲ್ಲದು.

ಲೇಖಕ: ನವೋದ್ಯಮಿ, ಹವ್ಯಾಸಿ ಬರಹಗಾರ

ಪದಬಂಧ 4688

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಕೊನೆಗೆ ಜಯವಿದ್ದರೂ ಇದು ಸೋಲು! (4)
3.ಇನ್ನೊಬ್ಬರ ಪರವಾಗಿ ವಾದಿಸುವುದು (4)
5.ಸರ ಕೊನೆಗಿದ್ದರೆ ಈ ತಿಕ್ಕಾಟ! (3)
7.ಮಹಿಮಾವಂತನಿರುವ ಪೃಥ್ವಿ (2)
8.ತಿರುಗಿರುವ ದೇಹ! (2)
11.ಮಿತಿಗೆ ಒಳಪಟ್ಟಿದ್ದು (2)
13.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
14.ಸ್ಲೇಟಿನ ಮೇಲೆ ಬರೆಯುವ ಸಾಧನ (3)
16.ಆಹ್ವಾನ ಇಲ್ಲಿದೆ (4)
17.ಹಣ್ಣಿನಿಂದ ಮಾಡಿದ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಬೇರೆಯ ದೇಹವಿದು (4)
2. ಇಂದ್ರಿಯ ನಿಗ್ರಹ ಮಾಡುವವನು (2)
3.ಮದುವೆ ಗಂಡು (2)
4.ಉಪಾಯವಿಲ್ಲಿ ಉಲ್ಟಾ ಆಗಿ ಬಿಟ್ಟಿದೆ (3)
6.ಏಳು ದಿನ ನಡೆಯುವ ಉತ್ಸವ (3)
7.ಬಂಜರು ಭೂಮಿಯಿದು (4)
9.ಪದಾತಿ ಸೈನ್ಯ (4)
10.ಹೃದಯ ವೈಶಾಲ್ಯವಿದು (3)
12.ತಪಸ್ಸನ್ನೇ ಧನವಾಗಿ ಉಳ್ಳವನು (4)
13.ಉತ್ತರದವರ ಸ್ನಾನ (3)
14.ಪ್ರಾಣಿಪಕ್ಷಿಗಳನ್ನು ಸೆರೆಹಿಡಿಯಲು ಬಳಸುವ ಜಾಲ (2)
15.ವಿರೋಧದ ವಿರುದ್ಧ ಪದ (2)

4687ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಮಾಸ 5.ಪ್ರೋತ್ಸಾಹ
6.ಬಿಂಕ 7.ಪರಾಗ
9.ಮಂಡೂಕ
10.ಮರ್ಮಭೇದಕ
11.ಪ್ರಧಾನ 12.ರಿಕಾಪು
15.ವಜ್ರ 16.ಮದ್ದಳೆ
17.ದೆಗಾ

ಮೇಲಿಂದ ಕೆಳಕ್ಕೆ:
1.ಸಮಾರೋಪ
2.ಉತ್ಸಾಹ 3.ಆಕಸ್ಮಿಕ
8.ಗಮನ 9.ಮಂಕರಿ
11.ಪ್ರಭಾವಳಿ
13.ಪುಡಿಗಾಸು 14.ಹುದ್ದರಿ

ಸುಡೊಕು 5074

1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5073 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗುಂಡಣ್ಣ

ದಿನ ಭವಿಷ್ಯ

ಶನಿವಾರ ಆಗಸ್ಟ್ 14, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಷಷ್ಠೀ ಗಂ. 14-7 (ಹ. 11-53) ಶನಿವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 4-28 (ಬೆ. 8-02) ಶುಭ ನಾಮ ಯೋಗ ಗಂ. 17-8 ತೈತಲ ಕರಣ ಗಂ. 14-7 ವಿಷ ಗಂ. 17-36 ಅಮೃತ ಗಂ. 40-8 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-11 ಸೂರ್ಯಾಸ್ತ: 6-38 ಅದೃಷ್ಟ ಸಂಖ್ಯೆ 19

ಮೇಷ: ಚೋರ ಭಯ ನಿಮ್ಮನ್ನು ಕಾಡಬಹುದು. ಬೆಲೆಬಾಳುವ ವಸ್ತುಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮಿತ್ರರೊಂದಿಗೆ ಮನಸ್ತಾಪ ಉಂಟಾಗುವ ಸಾಧ್ಯತೆ. ಸಂಗಾತಿಯಿಂದ ವಿಶೇಷ ಕೊಡುಗೆ ಪ್ರಾಪ್ತಿ.

ವೃಷಭ: ಸ್ಥಿರಾಸ್ತಿ ಪ್ರಾಪ್ತವಾಗುವ ಸಾಧ್ಯತೆಯಿದ್ದು, ಭೂ ಖರೀದಿಗೆ ಯೋಗ್ಯ ದಿನವಾಗಿದೆ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆ. ಹೊಸ ಮನೆ, ಸಂತಾನ ಭಾಗ್ಯ ಮುಂತಾದವುಗಳು ದೊರಕಿ ಸಂತಸದ ವಾತಾವರಣ.

ಮಿಥುನ: ಸ್ವಯಂ ಉದ್ಯೋಗಿಗಳಿಗೆ ಉತ್ತಮ ಆದಾಯ. ಕೊಡುಕೊಳ್ಳುವಿಕೆಯಲ್ಲಿ ಎಚ್ಚರಿಕೆ ಅಗತ್ಯ. ಮೋಸಹೋಗುವ ಸಾಧ್ಯತೆ. ಉದ್ಯೋಗದಲ್ಲಿ ಬದಲಾವಣೆಗಳು ಸಂಭವಿಸಬಹುದು. ಮಕ್ಕಳ ಆರೋಗ್ಯದ ಬಗ್ಗೆ ಗಮನವಿರಲಿ.

ಕರ್ಕಾಟಕ: ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಿಗೆ ಬಂದೊದಗಲಿದೆ. ಹಿರಿಯರ ಆಶೀರ್ವಾದದಿಂದಾಗಿ ಆದಾಯದ ಮೂಲಗಳು ಗೋಚರವಾಗಿ ಸಂತೃಪ್ತಿ. ಮಿತ್ರರಿಂದ ಪ್ರಶಂಸೆಯ ಮಹಾಪೂರ.

ಸಿಂಹ: ನಿಮ್ಮ ಎಲ್ಲ ಕೆಲಸ ಕಾರ್ಯಗಳು ಸುಗಮವಾಗಲಿದೆ. ವಿದ್ಯಾರ್ಥಿಗಳ ಉನ್ನತ ವ್ಯಾಸಂಗದ ದಾರಿ ಸುಗಮವಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಕಂಕಣ ಭಾಗ್ಯ ಕೂಡಿಬರುವ ಸಾಧ್ಯತೆ.

ಕನ್ಯಾ: ಅಧಿಕಾರಿಗಳಿಂದ ಉಂಟಾಗಿದ್ದ ಭಯದ ನಿವಾರಣೆಯಾಗಿ ನಿರಾಳತೆ ಮೂಡಿಬರುವುದು. ವಿದ್ಯಾರ್ಥಿಗಳಿಗೆ ಯಶಸ್ಸಿನ ದಿನ. ದಿನಸಿ ವ್ಯಾಪಾರಿಗಳಿಗೆ ಸ್ವಲ್ಪಮಟ್ಟಿನ ನಷ್ಟ ಉಂಟಾಗುವ ಸಾಧ್ಯತೆ.

ತುಲಾ: ದಿನದ ಮಟ್ಟಿಗೆ ಎಲ್ಲ ವಿಧಗಳಲ್ಲೂ ಕಷ್ಟನಷ್ಟ ಅನುಭವಿಸುವ ಸಾಧ್ಯತೆಗಳು ಕಂಡುಬರುತ್ತಿದ್ದು ಜಾಗರೂಕರಾಗಿರುವುದು ಉತ್ತಮ. ಅಪಾಯಕಾರಿ ಕೆಲಸ ಮತ್ತು ವಾಹನಗಳಿಂದ ದೂರವಿರುವುದು ಶ್ರೇಯಸ್ಕರ.

ವೃಶ್ಚಿಕ: ಸ್ತ್ರೀ ವರ್ಗದವರಿಗೆ ಅತ್ಯಂತ ಸಂತೋಷಕರ ವಾತಾವರಣ ಮೂಡಲಿದೆ. ಮದುವೆ ಮುಂಜಿ ಸಮಾರಂಭಗಳಲ್ಲಿ ಭಾಗಿ. ಬಂಧು ಬಾಂಧವರ ಸಮಾಗಮ ಸಾಧ್ಯತೆ. ಮಕ್ಕಳ ವಿಷಯದಲ್ಲಿ ಗಮನವಿರಲಿ.

ಧನು: ಭೂ ವಿವಾದದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಅತಿಯಾದ ಕಾರ್ಯ ಒತ್ತಡದಿಂದಾಗಿ ಗೊಂದಲಮಯ ಪರಿಸ್ಥಿತಿ ನಿರ್ಮಾಣ. ಸಕಾಲಿಕ ಚಿಂತನೆಯಿಂದಾಗಿ ಮಾನಸಿಕ ಶಾಂತಿ. ಸಂಗಾತಿಯಿಂದ ಸಿಹಿ ಸುದ್ದಿ.

ಮಕರ: ಸಂದುನೋವು, ಬೆನ್ನು ನೋವಿನಿಂದ ಬಳಲುವ ಸಾಧ್ಯತೆ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ ಬರಲಿರುವ ಅವಘಡವನ್ನು ತಪ್ಪಿಸಿಕೊಳ್ಳಿ. ವಿವಾಹಾಕಾಂಕ್ಷಿಗಳಿಗೆ ಸ್ವಲ್ಪಮಟ್ಟಿನ ಹಿನ್ನಡೆ ಕಂಡುಬರುವುದು.

ಕುಂಭ: ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ಉತ್ತಮ ಫಲಿತಾಂಶ ನಿಮ್ಮದಾಗಲಿದೆ. ಹೊಸ ಮನೆ, ಜಮೀನು ಪ್ರಾಪ್ತವಾಗುವ ಯೋಗ. ಸಾಂಸಾರಿಕ ಸುಖ ಅನುಭವಿಸಲಿದ್ದೀರಿ.

ಮೀನ: ಭೂವ್ಯವಹಾರದಲ್ಲಿ ಅಧಿಕ ಲಾಭದ ನಿರೀಕ್ಷೆ. ರಾಜಕೀಯ ರಂಗದಲ್ಲಿರುವವರಿಗೆ ಉನ್ನತ ಹುದ್ದೆ ಪ್ರಾಪ್ತವಾಗುವ ಸಾಧ್ಯತೆ. ನೀಡಿದ ಸಾಲಗಳು ಮರುಪಾವತಿಯಾಗುವವು.

ನಿಮ್ಮ ಜನ್ಮದಿನ 14-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ವಿದ್ಯಾರ್ಥಿಗಳಿಗೆ ಈವರ್ಷ ಬಹಳ ಮಹತ್ವದ ವರ್ಷವಾಗಲಿದೆ. ನಿಮ್ಮ ನಡೆ ನುಡಿಗಳಿಂದ ಆಕರ್ಷಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಿರಿ. ಬಹುಮುಖ ಪ್ರತಿಭೆಯನ್ನು ಹೊಂದಿದವರಾದ್ದರಿಂದ ಒಂದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲಾರಿರಿ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿ ಪ್ರತಿಭಟನೆ

ಕೆಪಿಎಸ್‌ಸಿ ಅಧ್ಯಕ್ಷರ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ವಿಜಯಪುರ: ಕೆಪಿಎಸ್‌ಸಿ ಅಧ್ಯಕ್ಷರನ್ನು ವಜಾಗೊಳಿಸಲು ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿಯಿಂದ ಶುಕ್ರವಾರ ಪ್ರತಿಭಟನೆ ನಡೆಯಿತು.

ಸಮಿತಿಯ ರಾಜ್ಯ ಘಟಕದ ಕಾರ್ಯದರ್ಶಿ ಸಿದ್ಧಲಿಂಗ ಬಾಗೇವಾಡಿ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ಹಾಗೂ ಇನ್ನಿತರ ಹುದ್ದೆಗಳ ನೇಮಕಾತಿಗಾಗಿ ನಡೆಯುವ ಪರೀಕ್ಷೆಗಳಲ್ಲಿ ಅಕ್ರಮ, ಭ್ರಷ್ಟಾಚಾರ, ಸ್ವಜನಪಕ್ಷಪಾತ ತಪ್ಪಿಸಬೇಕು. ಎಲ್ಲ ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸಿದರು.

ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿಯಲ್ಲಿ ನಿಯಮ ಉಲ್ಲಂಘನೆ ಆಗಿರುವುದು 'ಪ್ರಜಾವಾಣಿ'ಯಲ್ಲಿ ಆ.12ರಂದು ವರದಿ ಪ್ರಕಟವಾದ ಮೇಲೆ ಗೊತ್ತಾಗಿದೆ. ಕೆಪಿಎಸ್‌ಸಿ ಬಗ್ಗೆ ಇದ್ದ ನಂಬಿಕೆಯೂ ಕುಸಿಯುತ್ತಿದೆ. ಈ ರೀತಿ ನಿಯಮ ಉಲ್ಲಂಘಿಸಿ ನೇಮಿಸಿರುವುದು ಮತ್ತಷ್ಟು ಅಕ್ರಮಗಳಿಗೆ ದಾರಿ ಮಾಡಿ ಕೊಟ್ಟಂತಾಗುತ್ತದೆ ಎಂದರು.

ಈಗಾಗಲೇ 2011ರಲ್ಲಿ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕದಲ್ಲಿ ಆಗಿರುವ ಅಕ್ರಮ, ಎಫ್.ಡಿ.ಸಿ ಮತ್ತು ಎಸ್.ಡಿ.ಸಿ ಪ್ರಶ್ನೆ ಪತ್ರಿಕೆ ಸೋರಿಕೆ, ಓಎಂಆರ್ ಪರೀಕ್ಷಾ ಕೇಂದ್ರದ 70 ಅಭ್ಯರ್ಥಿಗಳ ಆಯ್ಕೆ ಮುಂತಾದ ಅಕ್ರಮಗಳಿಂದಾಗಿ ಕೆಪಿಎಸ್‌ಸಿ ಬಗ್ಗೆ ಜನರಿಗೆ ವಿಶ್ವಾಸವೇ ಇಲ್ಲದಂತಾಗಿದೆ. ಈಗ ಇದೂ ಸೇರಿಕೊಂಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

'ಸರ್ಕಾರ ಕೂಡಲೇ ಕ್ರಮಕೈಗೊಂಡು ಹಾಲಿ ಅಧ್ಯಕ್ಷರ ಮೇಲಿನ ಆರೋಪದ ಕುರಿತು ಸಮಗ್ರ ತನಿಖೆ ನಡೆಸಿ, ನಿಯಮ ಉಲ್ಲಂಘನೆ ಸಾಬೀತಾದರೆ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕು ಮತ್ತು ಕೆಪಿಎಸ್‌ಸಿಯಲ್ಲಿನ ಎಲ್ಲ ರೀತಿಯ ಅಕ್ರಮಗಳನ್ನು ತಡೆಗಟ್ಟಬೇಕು' ಉದ್ಯೋಗಾಕಾಂಕ್ಷಿಗಳಾದ ಸೋಮು ಮಡ್ಡಿ ಒತ್ತಾಯಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ರಮೇಶ ಕಳಸದ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ನಿರುದ್ಯೋಗಿ ಯುವಜನರ ಹೋರಾಟ ಸಮಿತಿಯ ಪ್ರಮುಖರಾದ ಶೋಭಾ, ಶರಣಗೌಡ ಬಾಡಗಿ, ರವಿ ಬಿರಾದಾರ, ರವಿ ಹೊಸಮನಿ, ಆದಿತ್ಯ ಬಿರಾದಾರ, ಶ್ರುತಿ, ಲಾಯಪ್ಪ ಸುಣಗಾರ ಭಾಗವಹಿಸಿದ್ದರು.

ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಎದುರು ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿಯಿಂದ ಕೆಪಿಎಸ್‌ಸಿ ಅಧ್ಯಕ್ಷರನ್ನು ವಜಾಗೊಳಿಸಲು ಆಗ್ರಹಿಸಿ ಶುಕ್ರವಾರ ಪ್ರತಿಭಟನೆ ನಡೆಯಿತು

ರಾಯಚೂರು, ಕಲಬುರಗಿಯಲ್ಲೂ ಪ್ರತಿಭಟನೆ

ಕಲಬುರಗಿ/ರಾಯಚೂರು: 'ಕೆಪಿಎಸ್‌ಸಿ ನೂತನ ಅಧ್ಯಕ್ಷರನ್ನು ಕೂಡಲೇ ವಜಾಗೊಳಿಸಬೇಕು' ಎಂದು ಒತ್ತಾಯಿಸಿ ಕಲಬುರಗಿ ಮತ್ತು ರಾಯಚೂರು ಜಿಲ್ಲಾಧಿಕಾರಿ ಕಚೇರಿ ಎದುರು ಅಖಿಲ ಭಾರತ ನಿರುದ್ಯೋಗಿ ಯುವಜನ ಹೋರಾಟ ಸಮಿತಿಯವರು ಶುಕ್ರವಾರ ಪ್ರತಿಭಟನೆ ನಡೆಸಿದರು.

'ಕೆಪಿಎಸ್‌ಸಿ ನಡೆಸುವ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ, ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ಆರೋಪವಿದ್ದು, ಈಗ ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿಯಲ್ಲೂ ನಿಯಮ ಉಲ್ಲಂಘನೆಯಾಗಿದೆ' ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕಲಬುರಗಿಯಲ್ಲಿ ಸಮಿತಿಯ ಸಂಚಾಲಕರಾದ ಭೀಮಾಶಂಕರ ಪಾಣೇಗಾಂವ, ಜಗನ್ನಾಥ ಎಸ್.ಎಚ್., ಸಿದ್ದು ಚೌಧರಿ ಮತ್ತು ರಾಯಚೂರಿನಲ್ಲಿ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಶರಣಪ್ಪ ಉದ್ಬಾಳ್, ಉಪಾಧ್ಯಕ್ಷ ಚನ್ನಬಸವ ಜಾನೇಕಲ್, ಮುಖಂಡರಾದ ಡಾ. ಹನುಮಂತ ಕುರ್ಡಿ, ರಾಮಚಂದ್ರಪ್ಪ, ಕೃಷ್ಣ ಕುಲಕರ್ಣಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

'ಕೆಪಿಎಸ್‌ಸಿ ಸ್ವಚ್ಛಗೊಳಿಸಿ'

ಧಾರವಾಡ: ಅನರ್ಹ ಅಧ್ಯಕ್ಷರನ್ನು ವಜಾಗೊಳಿಸಿ ಕರ್ನಾಟಕ ಲೋಕ ಸೇವಾ ಆಯೋಗವನ್ನು ಸ್ವಚ್ಛಗೊಳಿಸಬೇಕು ಎಂದು ಆಗ್ರಹಿಸಿ ನಿರುದ್ಯೋಗಿ ಯುವಜನರ ಹೋರಾಟ ಸಮಿತಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದೆ.

'ಆಯೋಗದ ಬಗ್ಗೆ ಇದ್ದ ಅಲ್ಪಸ್ವಲ್ಪ ನಂಬಿಕೆಯೂ ಕುಸಿದು ಹೋಗಿದೆ' ಎಂದು ಸಮಿತಿ ಸದಸ್ಯರು ಬೇಸರ ವ್ಯಕ್ತಪಡಿಸಿದ್ದಾರೆ.

ಕೆಪಿಎಸ್‌ಸಿಯಲ್ಲಿನ ಅಕ್ರಮಗಳಿಂದಾಗಿ ಪ್ರಾಮಾಣಿಕರು, ಪ್ರತಿಭಾವಂತರು ನೇಮಕಾತಿಯಿಂದ ವಂಚಿತರಾಗುತ್ತಾರೆ

ಶ್ರೀಕಾಂತ ಕೊಂಡಗೂಳಿ
ನಿರುದ್ಯೋಗಿ ಯುವಜನರ ಹೋರಾಟ ಸಮಿತಿ

BANGALORE UNIVERSITY
Jnana Bharathi Campus, Bengaluru - 560 056.
No. EST-II/TP/Remaining BL(14)/Notification/2017-18 Date: 13/8/2021
Extension of date for submission of application to the Backlog Teaching Posts at Bangalore University
In view of **COVID-19 Pandemic** and in order to receive sufficient number of applications, the last date 30-07-2021 mentioned in the Backlog Notification No. EST-II/TP/Remaining/BL(14)/Notification/2017-18, dated: 14-06-2021 **for submission of application is extended up to 23rd August 2021.** The other contents in earlier Notification remains unchanged.
Sd/-, REGISTRAR

UNIVERSITY OF MYSORE
Centre for Proficiency Development and Placement Services (CPDPS)
Adjacent to Library Building, Manasagangothri Mysore - 570 006, India
Ph. 0091 + 821 + 2419337 Email: omegauom1@gmail.com
NO:UOM/CPDPS/School-of-Engg/83/2021-2022
Date: 12.08.2021
ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ನಿರ್ದೇಶಕರು, ಸಿಪಿಡಿಪಿಎಸ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು **Providing and Supplying Lab Equipments, All-in-One Systems and Telecommunication facilities to School of Engineering at University of Mysore, Manasagangotri, Mysuru** ಸಂಬಂಧ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ಅಧ್ಯಾಯ 2 of ನಿಯಮ 3(1)ರ ಅನ್ವಯ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ನೋಂದಾಯಿತ ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿ: 13.09.2021 ಸಂಜೆ 5:30ರ ವರೆಗೆ.**
ಟೆಂಡರ್ ಸಂಖ್ಯೆ: MU/CPDPS/SOE/EQUIP/2021-22/IND-804
ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ (http://eproc.karnataka.gov.in)ನಿಂದ ಅಥವಾ ದೂರವಾಣಿ ಸಂಖ್ಯೆ:0821-2419337ನ್ನು ಸಂಪರ್ಕಿಸಬಹುದಾಗಿದೆ.
DIPR/DDMYS/MCA/402/2021-22 **ಸಹಿ/- ನಿರ್ದೇಶಕರು**

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂಖ್ಯೆ 12/2021-22 ದಿನಾಂಕ: 12/08/2021.
... ವೆಬ್‌ಸೈಟ್ ವಿಳಾಸ : **http://eproc.karnataka.gov.in** ನಲ್ಲಿ ದಿನಾಂಕ : **13/08/2021** ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ : **21/08/2021** ಇರುವದು. ಯಾವುದೇ ವೇಳೆ ಹಾಗೂ ದಿನಾಂಕ ಬದಲಾವಣೆಗಳು ಹಾಗೂ ತಿದ್ದುಪಡಿ ಪ್ರಕಟಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್‌ನಲ್ಲಿ ನೋಡಿಕೊಳ್ಳತಕ್ಕದ್ದು, ವೆಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.
ವಾಸಾಸಂಇ/ಹಾವೇರಿ/ಎಂ.ಸಿ.ಎ/205/2021-22

ಕರ್ನಾಟಕ ಸರ್ಕಾರ
ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಚಿತ್ರದುರ್ಗ. ಜಿಲ್ಲಾ ಬಾಲಭವನದ ಆವರಣ, ಜಿಲ್ಲಾ ಕ್ರೀಡಾಂಗಣ ರಸ್ತೆ. ದೂ. 08194-235284/86. E-mail:- ddwocta@gamil.com
ಸಂ.ವಿಹಿನಾಸಇ/ಚಿದು/ಚ/ಜಿ.ಖ.ಪ್ರ./ಅ/ಯಂತ್ರವಾ/ಇ-ಟೆಂಡರ್/2021-22/409
ದಿನಾಂಕ: 10.08.2021
ಇ-ಟೆಂಡರ್ ಪ್ರಕಟಣೆ
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ 2021-22ನೇ ಸಾಲಿನ ಚಳ್ಳಕೆರೆ ತಾಲ್ಲೂಕಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನ ಅನುದಾನದಡಿ ತೀವ್ರತರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ (ರೆಟ್ರೋಫಿಟ್‌ಮೆಂಟ್ ಸಹಿತ)ಗಳ ಸರಬರಾಜಿಗಾಗಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 03.09.2021 ಸಂಜೆ 5 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.09.2021 ಬೆಳಿಗ್ಗೆ 11 ಗಂಟೆಗೆ. ಸ್ಥಳ:- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 09.09.2021 ಬೆಳಿಗ್ಗೆ 11 ಗಂಟೆಗೆ. ಸ್ಥಳ:- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಜಿಲ್ಲಾ ಬಾಲವಭವನ ಆವರಣ, ಓನಕೆ ಓಬವ್ವ ಸ್ಟೇಡಿಯಂ ರಸ್ತೆ, ಚಿತ್ರದುರ್ಗ, ಇಎಂಡಿ ಮೊತ್ತ, ಟೆಂಡರ್‌ನ ಷರತ್ತುಗಳು ಮತ್ತು ನಿಬಂಧನೆಗಳ ಪೂರ್ಣ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ:- https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಆಸಕ್ತರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಜಿಲ್ಲಾ ಬಾಲಭವನ ಆವರಣ, ಓನಕೆ ಓಬವ್ವ ಸ್ಟೇಡಿಯಂ ರಸ್ತೆ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆ ಸಂಪರ್ಕಿಸಬಹುದು. ಕಛೇರಿ ದೂ. ಸಂಖ್ಯೆ: 08194-235284/86
RO.No.356:DIPR/CTA/MCA/2021-22
ಸಹಿ/- ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು-560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080-25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : http://kspcb.gov.in
No.PCB/CNP/08/EPH/21/2157 Date:11/08/2021
ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಉದ್ದೇಶಿತ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯನ್ನು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು, ಸಿದ್ದಪುರ ಗ್ರಾಮ ಮತ್ತು ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕುಗಳ ಬರ ಪೀಡಿತ ಪ್ರದೇಶಗಳಿಗೆ ನೀರಾವರಿ ಒದಗಿಸಲು ಪ್ರಸ್ತಾಪಿಸಿದೆ. ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಬಳಿ ಕೃಷ್ಣಾ ನದಿಯಿಂದ 2.22 ಟಿ.ಎಂ.ಸಿ. ನೀರನ್ನು ಎತ್ತಿ ಸುಮಾರು 25 ಹಳ್ಳಿಗಳ 17,805 ಹೇ. ಒಣ ಭೂಮಿಗೆ ನೀರಾವರಿ ಪದ್ಧತಿ ಮುಖೇನ ನೀರೊದಗಿಸಲು ಈ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಪರಿಸರ ಸಭೆ ನಡೆಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.9.2006ರ (ತಿದ್ದುಪಡಿ ದಿನಾಂಕ 1.12.2009) ಪ್ರಕಾರ ರಾಜ್ಯಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಾಗಿರುತ್ತದೆ. ರಾಜ್ಯಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಇವರ Terms of Reference ಪತ್ರ ಸಂಖ್ಯೆ: SEIAA 25 IND 2019 ದಿನಾಂಕ 16.09.2019 ರಂತೆ ಮತ್ತು ಉದ್ದಿಮೆದಾರರ ಪತ್ರ ದಿನಾಂಕ 22.06.2021 ರ ನಿವೇದನೆಯ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿಯವತಿಯಿಂದ ನಡೆಸಲಾಗುತ್ತಿದೆ.
ಯೋಜನೆಯ ವಿವರಗಳು ಕೆಳಕಂಡಂತಿವೆ.
1. **ಕಂಪನಿಯ ಹೆಸರು ಮತ್ತು ವಿಳಾಸ :** ಮುಖ್ಯ ಅಭಿಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, O & M Zone, ನಾರಾಯಣಪುರ - 585 219, ತಾಲ್ಲೂಕು : ಸುರಪುರ, ಜಿಲ್ಲೆ : ಯಾದಗಿರಿ.
2. **ಉದ್ದೇಶಿತ ಯೋಜನೆಯ ಸ್ಥಳ :** ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯನ್ನು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು ಮತ್ತು ಯಾದಗಿರಿ ಜಿಲ್ಲೆಯ ಶಹಾಪುರ ಮತ್ತು ಸುರಪುರ ತಾಲ್ಲೂಕುಗಳ ಬರ ಪೀಡಿತ ಪ್ರದೇಶಗಳಿಗೆ ನೀರಾವರಿ ಒದಗಿಸಲು ಪ್ರಸ್ತಾಪಿಸಿದೆ. ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಬಳಿ ಕೃಷ್ಣಾ ನದಿಯಿಂದ 2.22 ಟಿ.ಎಂ.ಸಿ. ನೀರನ್ನು ಎತ್ತಿ ಸುಮಾರು 25 ಹಳ್ಳಿಗಳ 17,805 ಹೇ. ಒಣ ಭೂಮಿಗೆ ನೀರಾವರಿ ಪದ್ಧತಿ ಮುಖೇನ ನೀರೊದಗಿಸಲು ಈ ಯೋಜನೆಯನ್ನು ರೂಪಿಸಿದೆ.
3. **ಯೋಜನೆಯ ಕಾರ್ಯಚಟುವಟಿಕೆ:** ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ವಿಸ್ತರಣೆಯು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸಿದ್ದಾಪುರ ಗ್ರಾಮದ ಬಳಿ ಕೃಷ್ಣಾ ನದಿಯಿಂದ 2.22 ಟಿ.ಎಂ.ಸಿ. ನೀರನ್ನು ಎತ್ತಿ ಸುಮಾರು 25 ಹಳ್ಳಿಗಳ 17,805 ಹೇ. ಒಣ ಭೂಮಿಗೆ ನೀರಾವರಿ ಪದ್ಧತಿ ಮುಖೇನ ನೀರೊದಗಿಸಲು ಈ ಯೋಜನೆಯನ್ನು ರೂಪಿಸಿದೆ.
4 **ಯೋಜನಾ ವೆಚ್ಚ :** ರೂ.549.70 ಕೋಟಿಗಳು.
5 **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ.** 14.09.2021 (ಮಂಗಳವಾರ) ಬೆಳಿಗ್ಗೆ 11.00 ಗಂಟೆಗೆ. ಸಿದ್ದಪುರ ಗ್ರಾಮ (ವೀರೇಶ್ ನಗರ), ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ.
6. **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಇಡುವ ಸ್ಥಳ** (ಅ) ಜಿಲ್ಲಾಧಿಕಾರಿಗಳ ಕಛೇರಿ, ವಿಜಯಪುರ ಜಿಲ್ಲೆ, ವಿಜಯಪುರ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ ಜಿಲ್ಲೆ. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ವಿಜಯಪುರ ಜಿಲ್ಲೆ. (ಈ) ನಗರಸಭೆ, ವಿಜಯಪುರ ಜಿಲ್ಲೆ. (ಉ) ತಹಶೀಲ್ದಾರ್‌ರವರ ಕಛೇರಿ, ಮುದ್ದೇಬಿಹಾಳ ತಾಲ್ಲೂಕು. (ಊ) ಗ್ರಾಮ ಪಂಚಾಯ್ತಿ, ಸಿದ್ದಪುರ (ವೀರೇಶ್ ನಗರ) ಗ್ರಾಮ. (ಋ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ಲಾಟ್ ನಂ. 86, ಹರಕರಿ ಬಡಾವಣೆ, ವಜ್ರಹನುಮಾನ ನಗರ, ಬಾಗಲಕೋಟೆ ರಸ್ತೆ, ವಿಜಯಪುರ-586 109. (ಎ) ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ. ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. (ಏ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.
ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (**ಜಿಲಾಧಿಕಾರಿಗಳು, ವಿಜಯಪುರ ಜಿಲ್ಲೆ**) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : http://kspcb.gov.in ನಲ್ಲಿ ಪಡೆಯಬಹುದು.**
ಸಹಿ/-
ಸದಸ್ಯ ಕಾರ್ಯದರ್ಶಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 1)2021-22 ನೇ ಸಾಲಿನ ತಿಪಟೂರು ವಿಧಾನಸಭಾಕ್ಷೇತ್ರಕ್ಕೆ ಸಂಬಂಧಿಸಿದ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಕಾಮಗಾರಿ 2)2019-20ನೇ ಸಾಲಿನ ತಿಪಟೂರು ವಿಧಾನಸಭಾಕ್ಷೇತ್ರಕ್ಕೆ ಸಂಬಂಧಿಸಿದ 2ನೇ ಕರೆಯ ಎಸ್.ಸಿ.ಪಿ ಕಾಮಗಾರಿ 3) ಎತ್ತಿನಹೊಳೆ ಯೋಜನೆಯ ಕಾಮಗಾರಿಯಲ್ಲಿ ಬರುವ ರೋಡ್ ಬ್ರಿಡ್ಜ್ ನಿರ್ಮಾಣ ಕಾಮಗಾರಿಗಳಿಗೆ "ಶೇಕಡಾವಾರು ದರಗಳಲ್ಲಿ" ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರರಿಂದ, ಟೆಂಡರ್ ಗಿಟ್ಟ ಮೊತ್ತ ರೂ.17.00ಲಕ್ಷಗಳಿಂದ ರೂ.1182.00ಲಕ್ಷಗಳ ವರೆಗೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ https://eproc.karnataka.gov.in ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ಕ್ರಸಂ-1ರ ಕಾಮಗಾರಿಗಳಿಗೆ ದಿನಾಂಕ:**16.08.2021** ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **24.08.2021** ರಂದು ಘಂಟೆ 17:00ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹಾಗೂ ಕ್ರಸಂ-2 ಮತ್ತು 3 ರ ಕಾಮಗಾರಿಗಳನ್ನು ದಿನಾಂಕ: **16.08.2021** ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **31.08.2021** ರಂದು ಘಂಟೆ 17:00ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಟೆಂಡರ್‌ನ ಅಂದಾಜು ಮೊತ್ತ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ/ಪ್ರೀ ಬಿಡ್ ಸಭೆ/ ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ ಇತ್ಯಾದಿ ವಿವರಗಳಿಗೆ https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ:**31.08.2021** ರಂದು ಘಂಟೆ 15:00ರವರೆಗೆ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದ್ದಲ್ಲಿ ಇ-ಪೋರ್ಟಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816-2201844, ಇಮೇಲ್ ವಿಳಾಸ- eeypd2tmk@gmail.com

ಕರ್ನಾಟಕ ಸರ್ಕಾರ Government of Karnataka
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಕಂಟೋನ್ಮೆಂಟ್, ಬಳ್ಳಾರಿ-583 104
Fax:(08392)-235251/52 Email: directorvimsballari@gmail.com
ಸಂಖ್ಯೆ: ವಿಮ್ಸ್/ವೈಮವಿಆ/ಟೆಂಡರ್/ಘತ್ಯಾ/02/2021-22, ದಿನಾಂಕ:13/08/2021
ಇ-ಮರು ಟೆಂಡರ್ ಅಧಿಸೂಚನೆ
ವಿಜಯನಗರ ವೈದ್ಯಕೀಯ ವಿಜ್ಞಾಗಳ ಸಂಸ್ಥೆ, ಬಳ್ಳಾರಿಯ ಅಧೀನದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ, ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ಸರ್ಕಾರಿ ವೆಲ್ಲೆಸ್ಲಿ ಕ್ಷಯ ಮತ್ತು ಎದೆ ರೋಗಗಳ ಆಸ್ಪತ್ರೆ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಶುಶ್ರೂಷ ಮಹಾವಿದ್ಯಾಲಯ ಮತ್ತು ನಗರ ಆರೋಗ್ಯ ತರಬೇತಿ ಕೇಂದ್ರಗಳ 2021-22 ಮತ್ತು 2022-23 ನೇ ಸಾಲಿಗೆ ಘನತ್ಯಾಜ್ಯ ವಸ್ತು ಮತ್ತು ಕಸವನ್ನು ವಿಲೇವಾರಿ ಮಾಡುವ ಸೇವೆಗಾಗಿ ಗುತ್ತಿಗೆ ನೀಡಲು ದ್ವಿ-ಟೆಂಡರ್ ಪದ್ಧತಿಯಲ್ಲಿ ಕೆ.ಟಿ.ಪಿ.ಪಿ ಕಾಯಿದೆ 1999 ಮತ್ತು ನಿಯಮಗಳು 2000ರ ಪ್ರಕಾರ ಇ-ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ರ ಮೂಲಕ ಟೆಂಡರ್ ಸಲ್ಲಿಸಲು ಕೋರಿದೆ. ಸದರಿ ಟೆಂಡರಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ಹಾಗು ಈ ಕೆಳಗೆ ಸಹಿಮಾಡಿದ ಅಧಿಕಾರಿಗಳ ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಬಹುದಾಗಿದೆ.
1. ಟೆಂಡರ್ ನಮೂನೆಯನ್ನು ಇ-ಪೋರ್ಟಲ್‌ನಲ್ಲಿ ಡೌನ್ ಲೋಡ್‌ಮಾಡಿಕೊಳ್ಳಲು ಪ್ರಾರಂಭದ ದಿನಾಂಕ: **16.08.2021**. 2. ಟೆಂಡರಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **21.08.2021 ರ ಸಂಜೆ 4.30.** 3. ಟೆಂಡರನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **31.08.2021 ರ ಸಂಜೆ 4.30.** 4. ಟೆಂಡರಿನ ಟೆಕ್ನೋ-ಕಮರ್ಷಿಯಲ್ ಬಿಡ್(ಮೊದಲ ಟೆಂಡರ್) ಅನ್ನು ತರೆಯುವ ದಿನಾಂಕ ಮತ್ತು ಸಮಯ: **01.09.2021 ರ ಸಂಜೆ 5:00.** 5. ಟೆಂಡರುಗಳನ್ನು ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: **ನಿರ್ದೇಶಕರ ಕಾರ್ಯಾಲಯ, ವಿಮ್ಸ್, ಕಂಟೋನ್ಮೆಂಟ್, ಬಳ್ಳಾರಿ-583 104.** 6. ಟೆಂಡರ್ ನ ಅಂದಾಜು ಮೊತ್ತ: **ರೂ.40.00 ಲಕ್ಷಗಳು.** 7. ಇ.ಎಂ.ಡಿ ಮೊತ್ತ: **ಸರ್ಕಾರದ ಆದೇಶದಂತೆ ಇ.ಎಂ.ಡಿ ಸಲ್ಲಿಸಲು ವಿನಾಯಿತಿಗಾಗಿ ಡಿಕ್ಲೇರೇಷನ್ ಸಲ್ಲಿಸುವುದು.**
ಸಹಿ/- ವೈದ್ಯಕೀಯ ಅಧೀಕ್ಷಕರು, ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ವಿಮ್ಸ್, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/276/ಎಂಸಿಎ/2021-22

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
AMBEDKAR DEVELOPMENT CORPORATION
9ನೇ ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001.
ದೂರವಾಣಿ:080-22865661/22865747/22860509, ಇ-ಮೇಲ್:mdadcl2011@gmail.com
2021-22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು :
- ಸ್ವಯಂ ಉದ್ಯೋಗ ಕಾರ್ಯಕ್ರಮಗಳು
  - ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
  - ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
- ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ-ಸಹಾಯ ಮಹಿಳಾ ಸಂಘದವರಿಗೆ)
- ಭೂ ಒಡೆತನ ಯೋಜನೆ
- ಸಮಗ್ರ ಗಂಗಾ ಕಲ್ಯಾಣ ಯೋಜನೆ

ಪರಿಶಿಷ್ಟ ಜಾತಿ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳ ಅಭಿವೃದ್ಧಿ ಕೋಶದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು:
- ಸ್ವಯಂ ಉದ್ಯೋಗ ಕಾರ್ಯಕ್ರಮಗಳು
  - ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
  - ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ
- ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್) ಯೋಜನೆ (ನೋಂದಾಯಿತ ಸ್ವ-ಸಹಾಯ ಮಹಿಳಾ ಸಂಘದವರಿಗೆ)
- ಭೂ ಒಡೆತನ ಯೋಜನೆ
- ಸಮಗ್ರ ಗಂಗಾ ಕಲ್ಯಾಣ ಯೋಜನೆ

ಅರ್ಜಿ ಸಲ್ಲಿಸಲು ಪ್ರಾರಂಭಿಸಿದ ದಿನಾಂಕ: 02.08.2021
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.09.2021
ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ **www.adcl.karnataka.gov.in** ಮೂಲಕ ಸಲ್ಲಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯಲ್ಲಿನ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿಯನ್ನು ಸಂಪಕಿಸಬಹುದು.
ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂನ/ಜಿಎ/1179/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಕಾರ ಇಲಾಖೆ
ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಯವರ ಕಛೇರಿ,
ಕೊಠಡಿ ಸಂಖ್ಯೆ. 611, 6ನೇ ಮಹಡಿ, ಬಹುಮಹಡಿಯ ಕಟ್ಟಡ, ಬೆಂಗಳೂರು
ಸಂಖ್ಯೆ: ಸಿಒ/77/ಸಿಇಎಂ/2019 ದಿನಾಂಕ: 12-08-2021
ಇ-ಟೆಂಡರ್
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದಲ್ಲಿ ಮಾನವ ಸಂಪನ್ಮೂಲಗಳಿಂದ ಸಿಬ್ಬಂದಿ ಸೇವೆಯನ್ನು ಬಾಹ್ಯಮೂಲಗಳಿಂದ ಅರ್ಹ ಏಜೆನ್ಸಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಇ-ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
1) Date of publishing tender documentation the e-Procurement Website: **http://eproc.karnataka.gov.in on 16-08-2021. 2)** Pre-Bid Meeting on **23-08-2021 at 11.00 AM. 3)** Bid due date for Submission of bids in the e-Procurement website on **15-09-2021 upto 4.00 PM. 4)** Date and Time for Opening of the Technical Bid on **20-09-2021 at 11.00 AM. 5)** Date and Time for Opening of the Financial Bid on **24-09-2021 at 11.00 AM.**
ಸರಬರಾಜುದಾರರು ಎಲ್ಲಾ ಮೂಲ ದಾಖಲಾತಿಗಳನ್ನು ತಾಂತ್ರಿಕ ಬಿಡ್ ತೆರೆಯುವ ಸಮಯದಲ್ಲಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೇಲೆ ತಿಳಿಸಿರುವ ವಿಳಾಸದಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು ಹಾಗೂ ವೆಬ್‌ಸೈಟ್: **https://sahakaradarpana.kar.nic.in** ನಲ್ಲಿ ಮಾಹಿತಿ ಪಡೆಯುವುದು. ಅರ್ಜಿಗಳನ್ನು **https://eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿ ಪಡೆದುಕೊಳ್ಳುವುದು.
ಸಹಿ/- ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು
(ಆಡಳಿತ ಮತ್ತು ಸಿಬ್ಬಂದಿ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ.
ವಾಸಾಸಂಇ/ಬೆಂ.ನ/ಅಡ್ವಟೋರ್/1173/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001
ದೂ: 080-2558 6520/ 2558 9112 ಫ್ಯಾಕ್ಸ್: 080-2588 6321
ಇಮೇಲ್: ho@kspcb.gov.in ವೆಬ್‌ಸೈಟ್: www.kspcb.gov.in
ಸಂಖ್ಯೆ: ಕರಾಮಾನಿಮಂ/167/ಹಿಪಅ/ಗಣಿ/ಪಸಾಸ/2021-22/2038 ದಿನಾಂಕ: 06.08.2021
ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ
ಶ್ರೀ. ಅಶೋಕ್ ಆರ್. ಕೆ. ಇವರು ಹಗಾರಿ ನದಿ ತೀರದಲ್ಲಿರುವ ಮರಳು ಗಣಿಗಾರಿಕೆ ವಲಯ BLY-OSB-14 ರಲ್ಲಿ ಸರ್ವೆ ನಂ. 167(ಭಾಗ), ಬಾಣಾಪುರ ಗ್ರಾಮ, ಸರ್ವೆ ನಂ. 265(ಭಾಗ), ಬೆಣಕಲ್ಲು ಗ್ರಾಮ, ಸರ್ವೆ ನಂ. 260(ಭಾಗ), ಸಿಂಧವಾಳ ಗ್ರಾಮ ಮತ್ತು ಸರ್ವೆ ನಂ. 190(ಭಾಗ), ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 25.00 ಎಕರೆ (10.12 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 45,817 ಟನ್‌ಗಳಷ್ಟು ನದಿ ಮರಳು ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 796 MIN 2019 ದಿನಾಂಕ: 14.05.2020 ಮತ್ತು ದಿನಾಂಕ: 18.02.2021 ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.
ಯೋಜನೆಯ ವಿವರಗಳು ಕಳಕಂಡಂತಿವೆ:

1.	**ಕಂಪನಿಯ ಹೆಸರು ಮತ್ತು ವಿಳಾಸ: ಶ್ರೀ. ಅಶೋಕ ಆರ್. ಕೆ.** ಪಿ. ಬಿ. ರೋಡ್, ಎಸ್. ಬಿ. ಐ. ಬ್ಯಾಂಕ್ ಹತ್ತಿರ, ಕುಮಾರಪಟ್ಟಣಂ, ರಾಣಿಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ - 581 123
2.	**ಉದ್ದೇಶಿತ ಯೋಜನೆಯ ಸ್ಥಳ: ಹಗಾರಿ ನದಿ ತೀರದಲ್ಲಿರುವ ಮರಳು ಗಣಿಗಾರಿಕೆ ವಲಯ BLY-OSB-14 ರಲ್ಲಿ ಸರ್ವೆ ನಂ. 167(ಭಾಗ), ಬಾಣಾಪುರ ಗ್ರಾಮ, ಸರ್ವೆ ನಂ. 265(ಭಾಗ), ಬೆಣಕಲ್ಲು ಗ್ರಾಮ, ಸರ್ವೆ ನಂ. 260(ಭಾಗ), ಸಿಂಧವಾಳ ಗ್ರಾಮ ಮತ್ತು ಸರ್ವೆ ನಂ. 190(ಭಾಗ), ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ**
3.	**ಉದ್ದೇಸಿದ ಯೋಜನೆಯ ಕಾರ್ಯ ಚಟುವಟಿಕೆ:** ವರ್ಷಕ್ಕೆ 45,817 ಟನ್‌ಗಳಷ್ಟು ನದಿ ಮರಳು ಗಣಿಗಾರಿಕೆ.
4.	**ಮಾಲಿನ್ಯ ನಿಯಂತ್ರಣ ಕ್ರಮಗಳು:** ಸಿಬ್ಬಂದಿ ಕಛೇರಿಯಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ರಾಸಾಯನಿಕ ಶೌಚಾಲಯಕ್ಕೆ ಬಿಡಲಾಗುವುದು. ಮಳೆಗಾಲದಲ್ಲಿ ಗಣಿ ಹೊಂಡಗಳಲ್ಲಿ ಸಂಗ್ರಹವಾದ ಮಳೆನೀರನ್ನು ಧೂಳು ನಿಗ್ರಹಕ್ಕೆ ಮತ್ತು ತೋಟಗಾರಿಕೆಗೆ ಬಳಸಲಾಗುತ್ತದೆ. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಗಡಿ ಅಂದರೆ, 7.5ಮೀ. ಸುರಕ್ಷತಾ ವಲಯದ ಉದ್ದಕ್ಕೂ ಮತ್ತು ಇಡೀ ಪ್ರದೇಶದಲ್ಲಿರುವ ಹೊಂಡಗಳ, ಡಂಪ್‌ಗಳ ಹಾಗೂ ಸ್ಟಾಕ್‌ಗಳ ಪರಧಿಯ ಉದ್ದಕ್ಕೂ ದಟ್ಟವಾದ ಹಸಿರು ಪಟ್ಟಿಯನ್ನು ಒದಗಿಸಲಾಗಿದೆ
5.	**ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಉದ್ದೇಶಿತ ಯೋಜನಾ ಸ್ಥಳ, ಹಗಾರಿ ನದಿ ತೀರದಲ್ಲಿರುವ ಮರಳು ಗಣಿಗಾರಿಕೆ ವಲಯ BLY-OSB-14 ರಲ್ಲಿ ಸರ್ವೆ ನಂ. 167(ಭಾಗ), ಬಾಣಾಪುರ ಗ್ರಾಮ, ಸರ್ವೆ ನಂ. 265(ಭಾಗ), ಬೆಣಕಲ್ಲು ಗ್ರಾಮ, ಸರ್ವೆ ನಂ. 260(ಭಾಗ), ಸಿಂಧವಾಳ ಗ್ರಾಮ ಮತ್ತು ಸರ್ವೆ ನಂ. 190(ಭಾಗ), ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆ ದಿನಾಂಕ: 14.09.2021 (ಮಂಗಳವಾರ) ರಂದು ಪೂರ್ವಾಹ್ನ 11:00 ಗಂಟೆಗೆ**
6.	**ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಷೆಗೆ ಲಭ್ಯವಿರುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಈ) ತಾಲ್ಲೂಕು ಪಂಚಾಯಿತಿ, ಬಳ್ಳಾರಿ ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಹೊಸ ಯರಗುಡಿ, ಸಿಂಧವಾಳ ಮತ್ತು ವಣೇನೂರು ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ ಋ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001 ಋ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ / ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: http://kspcb.karnataka.gov.in** ನಲ್ಲಿ ಪಡೆಯಬಹುದು.
ಸಹಿ/-
ಸದಸ್ಯ ಕಾರ್ಯದರ್ಶಿ
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರ ಕಚೇರಿ (ಲೆ.ಪ)-1.6 ಸರಕು ಮತ್ತು ಸೇವಾ ತೆರಿಗೆ ವಿಭಾಗ-1, 5ನೇ ಮಹಡಿ, ಟಿಟಿಎಂಸಿ, ಬಿಎಂಟಿಸಿ ಕಟ್ಟಡ, ಯಶವಂತಪುರ, ಬೆಂಗಳೂರು-560 022.
ದೂ: 080-23476659 ಇ-ಮೇಲ್: acct-audit1.6@ka.gov.in
ಪ್ರಕಟಣೆ

ಈ ಭಾವಚಿತ್ರದಲ್ಲಿ ಕಂಡುಬರುತ್ತಿರುವ ವ್ಯಕ್ತಿಯಾದ ಶ್ರೀ ಮಹಮದ್ ಅಬ್ದುಲ್ ಬಿನ್ ಮಹಮದ್ ಅಲ್ತಾಫ್ ಪಾಷಾ, ಸುಮಾರು 36 ವರ್ಷ ವಯಸ್ಸಿನ ಮಾಲೀಕರು, ಮೆ: ಸಿದ್ದಿಕ್ ಪ್ಲೈವುಡ್ ಸೆಂಟರ್, ನಂ.36/1, ಸುಲ್ತಾನ್‌ಜಿಗುಂಟಾ ರಸ್ತೆ, ಶಿವಾಜಿನಗರ, ಬೆಂಗಳೂರು-560051 ಮನೆ ವಿಳಾಸ: ನಂ.5, ರಸೆಲ್ ಮಾರ್ಕೆಟ್, ಶಿವಾಜಿನಗರ, ಬೆಂಗಳೂರು-560051 ಇವರು ವಾಣಿಜ್ಯ ತೆರಿಗೆ ಇಲಾಖೆಯ ಕೆಳಕಂಡ ಕಛೇರಿಗೆ ರೂ.2,05,217/- ಬಾಕಿ ಉಳಿಸಿಕೊಂಡಿದ್ದು, ತಲೆಮರೆಸಿಕೊಂಡಿರುತ್ತಾರೆ. ಸದರಿಯವರ ಮಾಹಿತಿ ದೊರಕಿದಲ್ಲಿ ಕೆಳಗೆ ನಮೂದಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಲು/ ಸಂಪರ್ಕಿಸಲು ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಕೋರಲಾಗಿದೆ.
ಸಹಿ/- ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಲೆಕ್ಕಪರಿಶೋಧನೆ)-1.6

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,ಧಾರವಾಡ
ಫೋ:-(0836)2213838 Email: eedharwad@gmail.com
ನಂ.ಎಚ್.ಡಿಎಂಸಿ/67/07/2020-21 ದಿನಾಂಕ: 13-08-2021
ಇ-ಟೆಂಡರ ಅಧಿಸೂಚನೆ
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅನುದಾನದಡಿಯಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/CPWD/HDMC/ ಇತರೆ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ **1ನೇ, 2ನೇ ಹಾಗೂ 3ನೇ ದರ್ಜೆ** ಮೇಲ್ಪಟ್ಟ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರನಲ್ಲಿ ಭಾಗವಹಿಸಬಹುದು. **ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿಟ್ಟ ಕಾಮಗಾರಿಗಳು ಇ.ನಂ 117569, 109896, 114916, 113794, 110223, 114984, 114528, 115004, 114533, 115102, 114920, 115097, 114526, 114535, 114930, 114932. ಒಟ್ಟು 16 ಕಾಮಗಾರಿಗಳು ಮೊತ್ತ ರೂ. 1026.46 ಲಕ್ಷಗಳಿಗೆ** ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಇ-ಪ್ರೊಕ್ಯುರಮೆಂಟ ಮೂಲಕ ದಿ. **14-08-2021** ರಿಂದ ಪಡೆಯಬಹುದಾಗಿದೆ. **ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರ ಟೆಂಡರ್‌ನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.**
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: 0836-2213838 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದು.
ಮೇಲೆ ನಮೂದಿಸಿದ ಕಾಮಗಾರಿಗಳಿಗೆ
1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕಃ 31-08-2021 ಸಂಜೆ 4.00 ಗಂಟೆಯವರೆಗೆ
2) ಟೆಂಡರ ತೆರೆಯುವ ದಿನಾಂಕಃ 01-09-2021 ಸಂಜೆ 4.30 ಗಂಟೆ.
3) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕಃ 06-09-2021 ಸಂಜೆ 4.35 ಗಂಟೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಘವನಿ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾ.ಸಾ.ಇ/ಧಾ/415/2021-22/ದೇಶಪಾಂಡೆಪಬ್ಲಿಸಿಟಿ

ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು - 560 023. ದೂರವಾಣಿ : 080-2955 7023
ಇಮೇಲ್ : cekhsdrp@gmail.com & cekhsdrp-hfws@karnataka.gov.in
ಸಂ.: ಆಕುಕಇ/ಇಂ.ಘ/ಮು.ಇಂ/ತಾ.ಸ-1,2&3/ಸ.ಇಂ-6/Infra-DH ಟೆಂಡರ್/21-22/925 ದಿ: 13-08-2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರು ರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಗುತ್ತಿಗೆದಾರರಿಂದ 18 ಜಿಲ್ಲಾ ಆಸ್ಪತ್ರೆಗಳಲ್ಲಿ (4 ಪ್ಯಾಕೇಜ್ ಕಾಮಗಾರಿಗಳು) ಹೆಚ್ಚುವರಿ ICU ಬೆಡ್‌ಗಳನ್ನು ನಿರ್ಮಿಸುವುದು, ಮೆಡಿಕಲ್‌ಗ್ಯಾಸ್ ಪೈಪ್‌ಲೈನ್ ಸಿಸ್ಟಮ್ ವಿಸ್ತರಣೆ, ಆಂತರಿಕ ಮತ್ತು ಬಾಹ್ಯವಿದ್ಯುದ್ದೀಕರಣದ ಇತರೆ ಹೆಚ್ಚುವರಿ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳಿಗಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ **(ಇ-ಪ್ರೊಕ್ಯೂರ್‌ಮೆಂಟ್)** ಮೂಲಕ ದ್ವಿ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. **ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. 2400.00 ಲಕ್ಷಗಳು, ಟೆಂಡರ್ ಕಾಲಾವಧಿ 2 ತಿಂಗಳುಗಳು ಮಳೆಗಾಲ ಸೇರಿದಂತೆ.** ಹೆಚ್ಚಿನ ವಿವರಗಳಿಗೆ ಇ-ಪೋರ್ಟಲ್‌ನಲ್ಲಿ ನೋಡುವುದು.
ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು :
1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **25-08-2021 ರಂದು 16.00 ಗಂಟೆಯವರೆಗೆ.**
2) ಟೆಂಡರ್‌ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **26-08-2021 ರಂದು 16.00 ಗಂಟೆಗೆ.**
ಟೆಂಡರ್‌ಗಳ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್‌ಗಳ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ.ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.
ಟಿಪ್ಪಣಿ : 1) ಸರ್ಕಾರದ ಆದೇಶದಂತೆ ಇಎಂಡಿ ಗೆ ಬದಲಾಗಿ ಇ.ಎಂ.ಡಿ. Declaration ನಮೂನೆಯನ್ನು ಭರ್ತಿ ಮಾಡಿ ಟೆಂಡರ್‌ಗಳೊಂದಿಗೆ ಲಗತ್ತಿಸುವುದು.
2) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
3) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/-
ಮುಖ್ಯ ಇಂಜಿನಿಯರ್,
ಆ&ಕು.ಕ.ಇ., ಇಂಜಿನಿಯರಿಂಗ್ ಘಟಕ, ಬೆಂಗಳೂರು.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಅಂಗಾಂಗ ದಾನ: ಸಿ.ಎಂ ವಾಗ್ದಾನ

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಉಡುಪಿ: 'ವಿಶ್ವ ಅಂಗಾಂಗ ದಾನದ ದಿನದಂದು ಅಂಗಾಂಗ ದಾನ ಮಾಡುವ ಸಂಕಲ್ಪ ಮಾಡೋಣ, ನಾನು ಕೂಡಾ ಅಂಗಾಂಗ ದಾನಕ್ಕೆ ಸಹಿ ಮಾಡುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ಶುಕ್ರವಾರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, 'ಹೃದಯ, ಯಕೃತ್ತು, ಮೂತ್ರಪಿಂಡ ಸೇರಿದಂತೆ ದೇಹದ ವಿವಿಧ ಅಂಗಾಂಗಗಳನ್ನು ಯಶಸ್ವಿಯಾಗಿ ಕಸಿ ಮಾಡಲಾಗುತ್ತಿದೆ. ಮರಣಾ ನಂತರ ದೇಹವನ್ನು ಮಣ್ಣಾಗಿಸದೆ, ಅಂಗಾಂಗ ದಾನದ ಮೂಲಕ ಮತ್ತೊಬ್ಬರ ಬಾಳಿಗೆ ಬೆಳಕಾಗೋಣ' ಎಂದು ಅವರು ಹೇಳಿದರು.

ರಾಜ್ಯದಲ್ಲಿ ಶಾಲೆಗಳನ್ನು ಆರಂಭಿಸುವ ಕುರಿತು ತಜ್ಞರ ಸಮಿತಿಯ ವರದಿ ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಚಿನ್ನದ ಬೆಲೆ ₹ 222 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ಬೆಲೆಯು ಪ್ರತಿ 10 ಗ್ರಾಂಗೆ ₹ 222ರಷ್ಟು ಏರಿಕೆ ಆಗಿದೆ. 10 ಗ್ರಾಂ ಚಿನ್ನವು ₹ 45,586ರಂತೆ ಮಾರಾಟವಾಗಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 100ರಂತೆ ಹೆಚ್ಚಾಗಿ, ₹ 61,045ಕ್ಕೆ ಮಾರಾಟವಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,364
ಇಂದಿನ ಅಂತ್ಯ	16,529
▲	164
ದಿನದ ಗರಿಷ್ಠ	16,543

ವಿನಿಮಯ ದರ

$ ಡಾಲರ್	74.24
£ ಪೌಂಡ್	102.5
€ ಯುರೊ	87.25
¥ ಯೆನ್ (100ಕ್ಕೆ)	67.47

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹410
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹410

ಹುದ್ದೆ ತ್ಯಜಿಸಲಿರುವ ಆದಿ ಗೋದ್ರೆಜ್

ನವದೆಹಲಿ (ಪಿಟಿಐ): ಗೋದ್ರೆಜ್ ಇಂಡಸ್ಟ್ರೀಸ್ ಲಿಮಿಟೆಡ್‌ನ (ಜಿಐಎಲ್) ಅಧ್ಯಕ್ಷ ಸ್ಥಾನ ಹಾಗೂ ಆಡಳಿತ ಮಂಡಳಿಯಲ್ಲಿನ ಸ್ಥಾನವನ್ನು ಆದಿ ಗೋದ್ರೆಜ್ ಅವರು ತ್ಯಜಿಸಲಿದ್ದಾರೆ. ಅಕ್ಟೋಬರ್ 1ರಿಂದ ಅನ್ವಯವಾಗುವಂತೆ ಈ ಸ್ಥಾನಗಳನ್ನು ಅವರು ತಮ್ಮ ಕಿರಿಯ ಸಹೋದರ ನಾದಿರ್ ಗೋದ್ರೆಜ್ ಅವರಿಗೆ ಹಸ್ತಾಂತರ ಮಾಡಲಿದ್ದಾರೆ.

79 ವರ್ಷ ವಯಸ್ಸಿನ ಆದಿ ಗೋದ್ರೆಜ್ ಅವರು ಗೋದ್ರೆಜ್ ಸಮೂಹದ ಅಧ್ಯಕ್ಷರಾಗಿ, ಜಿಐಎಲ್‌ನ ಗೌರವಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ನಾದಿರ್ ಗೋದ್ರೆಜ್ ಅವರು ಈಗ ಜಿಐಎಲ್‌ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಆದಿ ಗೋದ್ರೆಜ್ ಅವರು ನಾಲ್ಕು ದಶಕಗಳಿಂದ ಜಿಐಎಲ್‌ನಲ್ಲಿ ಕರ್ತವ್ಯ ನಿಭಾಯಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-45000
ಹಳತು	42500-52000

ಕುಂದಾಪುರ

ಹೊಸಚಾಲಿ	36000-46000

ಪುತ್ತೂರು

ಕೋಕ	10,500-26000
ಹೊಸತು	3100-45000

ಹೊಸನಗರ

ಬಿಳಿಗೋಟು	24699-28202
ಚಾಲಿ	38599-38899
ಕೆಂಪುಗೋಟು	32999-36399
ರಾಶಿ	39199-44499
ಸಿಪ್ಪೆಗೋಟು	21269- 21269

ಶಿವಮೊಗ್ಗ

ಬೆಟ್ಟೆ	40000-47422
ಗೊರಬಲು	15009-36069
ರಾಶಿ	38119-44199
ಸರಕು	47109-76020

ಸಿದ್ದಾಪುರ

ಬಿಳಿಗೋಟು	27480-35599
ಚಾಲಿ	35299-40599
ಕೋಕ	20119-33899
ಕೆಂಪುಗೋಟು	30400-31600
ರಾಶಿ	39019-42409
ತಟ್ಟಿಬೆಟ್ಟೆ	33009-38077

ಯಲ್ಲಾಪುರ

ಬಿಳಿಗೋಟು	33899-34899
ಚಾಲಿ	36609-40839
ಕೆಂಪುಗೋಟು	30699-30699
ರಾಶಿ	41550-43909
ತಟ್ಟಿಬೆಟ್ಟೆ	37770-40290

ರೇಷ್ಮೆಗೂಡು ಮಾರುಕಟ್ಟೆ

ರಾಮನಗರ

ಮಿಶ್ರ ತಳಿ: 299-445

ದ್ವಿತಳಿ; 302-539

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14100	13,000	12,650	186.55ಸೆಂಟ್ಸ್
ಎಸಿ	6,150	4,800	5100	
ಆರ್‌ಪಿ	6200	5,950	6100	ಲಂಡನ್
ಆರ್‌ಸಿ	3405	3,400	3475	1849ಡಾಲರ್ಸ್

ಕೊಬ್ಬರಿ ಧಾರಣೆ

ಅರಸೀಕೆರೆ	₹15000-16608
ತುರುವೇಕೆರೆ	₹16600-16700

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1590)
ಸೋಯಾ (ರಿಫೈನ್ಡ್)	₹1400(1390)
ಸೂರ್ಯಕಾಂತಿ (ರಿಫೈನ್ಡ್)	₹1480 (1460)
ಪಾಮೋಲಿನ್	₹1276 (1275)

ಮುಂಬೈ ಧಾರಣೆ

ಶೇಂಗಾ

13-8-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9650-9700
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1500)
ಒಂದು ವಾರದ ಡೆಲಿವರಿ	1525 (1595)
ಸೋಯಾ ಕಚ್ಚಾ	1365 (1355)
ಪಾಮ್ ವಾರದ ಡೆಲಿವರಿ	1274(1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

46,600 (46,400)

ಬೆಳ್ಳಿ ಕೆ.ಜಿ

62,650 (62,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಫ್ತು ವಹಿವಾಟು ಶೇ 49ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಜುಲೈ ತಿಂಗಳಿನಲ್ಲಿ ದೇಶದ ರಫ್ತು ವಹಿವಾಟು ಶೇಕಡ 49.85ರಷ್ಟು ಹೆಚ್ಚಾಗಿದ್ದು, ₹ 2.63 ಲಕ್ಷ ಕೋಟಿಗೆ ತಲುಪಿದೆ. ಪೆಟ್ರೋಲಿಯಂ, ಎಂಜಿನಿಯರಿಂಗ್, ಮುತ್ತು ಹಾಗೂ ಆಭರಣ ರಫ್ತು ಹೆಚ್ಚಳ ಆಗಿದ್ದು ಇದಕ್ಕೆ ಕಾರಣ.

ಜುಲೈನಲ್ಲಿ ದೇಶದ ವ್ಯಾಪಾರ ಕೊರತೆಯು ₹ 81 ಸಾವಿರ ಕೋಟಿಗೆ ತಲುಪಿದೆ. ಜುಲೈನಲ್ಲಿ ಆಮದು ಮಾಡಿಕೊಂಡು ಸರಕುಗಳ ಮೌಲ್ಯವು ಶೇ 63ರಷ್ಟು ಜಾಸ್ತಿ ಆಗಿದ್ದು, ₹ 3.44 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಶ್ರದ್ಧಾಂಜಲಿ

ಎಚ್.ಕೆ. ಮನೋಹರ ರೆಡ್ಡಿ (ಬಾಬು)
ಜನನ: 18-11-1956 – ಮರಣ: 13-08-2021
ಬಿನ್ ಹೆಚ್.ಎಮ್. ಕೊದಂಡರಾಮ ರೆಡ್ಡಿ
ಚಿನ್ನಪ್ಪನಹಳ್ಳಿ
ದುಃಖತಪ್ತರು: ಕುಟುಂಬವರ್ಗದವರು.

LOOKING FOR JOB OPPORTUNITY
Refer Classifieds on Wednesday

55 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ/ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ (ಬಿಎಸ್‌ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಇದೇ ಮೊದಲ ಬಾರಿಗೆ 55 ಸಾವಿರದ ಗಡಿ ದಾಟಿ ವಹಿವಾಟು ಪೂರ್ಣಗೊಳಿಸಿದೆ. ಗುರುವಾರ ಮತ್ತು ಶುಕ್ರವಾರದ ವಹಿವಾಟಿನಲ್ಲಿ ಸೂಚ್ಯಂಕದ ಏರಿಕೆಯಿಂದಾಗಿ ಹೂಡಿಕೆದಾರರ ಸಂಪತ್ತು ₹ 3.48 ಲಕ್ಷ ಕೋಟಿಯಷ್ಟು ಹೆಚ್ಚಳವಾಗಿದೆ.

ಶುಕ್ರವಾರ ಸೆನ್ಸೆಕ್ಸ್ 593 ಅಂಶ ಏರಿಕೆ ಕಂಡಿತು. ದಿನದ ಅಂತ್ಯಕ್ಕೆ 55,437 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ದಿನದ ನಡುವಿನಲ್ಲಿ ಸೂಚ್ಯಂಕವು 643 ಅಂಶ ಏರಿಕೆ ಕಂಡಿತ್ತು. ಗುರುವಾರದ ವಹಿವಾಟಿನಲ್ಲಿ ಸೂಚ್ಯಂಕವು 318 ಅಂಶ ಏರಿಕೆ ದಾಖಲಿಸಿತ್ತು.

ಈಗ ಬಿಎಸ್‌ಇಯಲ್ಲಿ ನೋಂದಾಯಿತ ಆಗಿರುವ ಎಲ್ಲ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳವು ₹ 240 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟ. 'ಸಣ್ಣ ಹೂಡಿಕೆದಾರರು ಬಹಳ ಉತ್ಸಾಹದಿಂದ ಮಾರುಕಟ್ಟೆಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಷೇರುಪೇಟೆಯಲ್ಲಿ ಏರಿಕೆಗೆ ಕಾರಣವಾಗಿದೆ. ಅಲ್ಲದೆ, ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದಿರುವ ಉತ್ತಮ ವಹಿವಾಟು ಕೂಡ ಈ ಏರಿಕೆಗೆ ಕಾರಣವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಟಿಸಿಎಸ್, ಆರ್‌ಐಎಲ್, ಇನ್ಫೊಸಿಸ್ ಮತ್ತು ಎಚ್‌ಡಿಎಫ್‌ಸಿ ಷೇರುಗಳ ಖರೀದಿ ಜೋರಾಗಿ ನಡೆಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 164 ಅಂಶ ಏರಿಕೆ ಕಂಡು, 16,529 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. 'ಜುಲೈ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಇಳಿಕೆ ಕಂಡಿದ್ದು ಕೂಡ ಸಣ್ಣ ಹೂಡಿಕೆದಾರರ ಉತ್ಸಾಹವನ್ನು ಹೆಚ್ಚಿಸಿತು' ಎಂದು ಜಿಯೋಜಿತ್ ಕಂಪನಿಯ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
Others

ಸ್ವತಂತ್ರ ದಿನಾಚರಣೆಗೆ ಕೊಡುಗೆಗಳೊಂದಿಗೆ ವರಮಹಾಲಕ್ಷ್ಮಿಯನ್ನು ಬರಮಾಡಿಕೊಳ್ಳಿ

INTRA V30 1300 Kg payload
4.99%* ಬಡ್ಡಿದರ
₹55 000/-* ದವರೆಗೆ ಉಳಿತಾಯ
ಕೊಡುಗೆಗಳು ₹25 000/-* ದವರೆಗೆ
ಎಕ್ಸ್‌ಚೇಂಜ್ ₹15 000/-* ದವರೆಗೆ
ನಿಮ್ಮ Super ACE, Mega ಅಥವಾ ACE XL ಅನ್ನು ಎಕ್ಸ್‌ಚೇಂಜ್ ಮಾಡಿ ವಿಶೇಷ ಬೋನಸ್‌ನ ಲಾಭ ಪಡೆಯಿರಿ
Bangalore/Mysore 95389 35533
Bangalore 7259784441
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 98950 23373
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 80952 02223
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ವ್ಯಾಪಾರ
Business to Business
Finance

ಸಾಲ ಸೌಲಭ್ಯ. ಕೃಷಿ ಸಾಲ ವ್ಯವಹಾರ ಸಾಲ ವೈಯಕ್ತಿಕ ಸಾಲ ಸ್ಥಿರಾಸ್ತಿ ಸಾಲ ವಿದ್ಯಾ ಸಾಲ ಮಾರ್ಟ್ ಗೇಜ್ ಸಾಲ ವಾರ್ಷಿಕ ಬಡ್ಡಿ ದರ 4% ಸಬ್ಸಿಡಿ 10 ರಿಂದ 30%. ಸಂಪರ್ಕಿಸಿರಿ 8421876983/ 7219699215

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಉದ್ಯೋಗಾವಕಾಶ
General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

✓ ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/- ದವರೆಗೆ.9538250222, 9538191333

✓ TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000- 56,000/- ವಸತಿಯೂಟವಿದೆ. 7204853296, 7204396011

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

WANTED RESPECTABLE Hindu Female cook for family of 5 Good salary accommodation and food Police Verification will be done Contact 9741900909

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಜಿಲ್ಲಾ ತಾಲ್ಲೂಕು,ಸರ್ಕಾರಿ ಕಛೇರಿಗಳಿಗೆ ಏಜೆನ್ಸಿ ಗುತ್ತಿಗೆ ಮುಖಾಂತರ ಶೀಘ್ರಲಿಪಿಗಾರರು/ ಬೆರಳಚ್ಚುಗಾರರು ಬೇಕಾಗಿದ್ದಾರೆ.ವಿದ್ಯಾರ್ಹತೆ ಪಿಯುಸಿ+ಕನ್ನಡ ಇಂಗ್ಲೀಷ ಶೀಘ್ರಲಿಪಿಗಾರ/ಬೆರಳಚ್ಚುಗಾರ, ಪ್ರಥಮ ದರ್ಜೆ ತೇರ್ಗಡೆ ಪ್ರಮಾಣ ಪತ್ರ ಹೊಂದಿರಬೇಕು.ರೋಹನ್ ಗೌಡ: 8073974842

Wanted

ಶ್ರೀ ಶಕ್ತಿ ಹೆಲ್ತ್ ಕೇರ್ ನಲ್ಲಿ ಕರ್ನಾಟಕದಾದ್ಯಂತ ಪ್ರಾರಂಭಗೊಳ್ಳುತ್ತಿರುವ ನಮ್ಮ 20ಬ್ರಾಂಚ್‌ಗಳಿಗೆ ಬ್ಯುಸಿನೆಸ್ ಪಾರ್ಟನರ್ ಗಳು ಮತ್ತು ಹೆಲ್ಪರ್ ಯುವಕ ಯುವತಿಯರಿಗೆ ಕೆಲಸ ಖಾಲಿ ಇದೆ.ತಿಂಗಳಿಗೆ ವೇತನ: 25,000 ದಿಂದ 30,000 ರ ವರೆಗೆ ಶೇಷಾದ್ರಿಪುರಂ, ಬೆಂಗಳೂರು.ಮೊಬೈಲ್ ನಂ: 9019626612

ನೇರನೇಮಕಾತಿ ಎಲ್ಲಾಜಿಲ್ಲೆಗಳಲ್ಲಿ ಪ್ರಾರಂಭವಾಗಿರುವ ಕಂಪನಿಗಳಿಗೆ, ಆಫೀಸ್‌ಗಳಿಗೆ 7th,ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಗ್ರಿ B.Com (ವಿದ್ಯಾರ್ಹತೆಯಿಲದಲ್ಲದವರಿಗೂ) ವಸತಿಯೂಟದೊಂದಿಗೆ 16,700/-56,000/- 8884412622, 9986083666

Part-Time Jobs

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಬಿಲ್ಡರ್ ಎಸೆನ್ಷಿಯಲ್
Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ
Astrology

★॥ಶ್ರೀಲಕ್ಷ್ಮಿ ನರಸಿಂಹಸ್ವಾಮಿ ಜ್ಯೋತಿಷ್ಯರು॥★ ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ,ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಶಾಶ್ವತ ಪರಿಹಾರ. ರಾಘವೇಂದ್ರ ಗುರೂಜಿ. 7337678002

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಉಚಿತ ಭವಿಷ್ಯ★ಖಚಿತ ಪರಿಹಾರ:ನಿಮ್ಮ ಸಮಸ್ಯೆಗಳು ಯಾವುದೇ ಇರಲಿ ಸ್ತ್ರೀವಶೀಕರಣ, ಪುರುಷವಶೀಕರಣ ಲೈಂಗಿಕ ಸಮಸ್ಯೆ,ನಿಮ್ಮ ಯಾವುದೇ ಸಮಸ್ಯೆಗಳಿದ್ದರು 100% ಶಾಶ್ವತ ಪರಿಹಾರ.ಮಂತ್ರಾಲಯ. ಪಂಡಿತ್.ಸಾಗರ್ ಶರ್ಮ.8217374106

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ವಾಹನ ಗುಜರಿ ನೀತಿಗೆ ಪ್ರಧಾನಿ ಚಾಲನೆ

ಗಾಂಧಿನಗರ (ಪಿಟಿಐ): ರಾಷ್ಟ್ರೀಯ ವಾಹನ ಗುಜರಿ ನೀತಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಚಾಲನೆ ನೀಡಿದರು. ಈ ನೀತಿಯು ಆರ್ಥಿಕ ಬೆಳವಣಿಗೆ ಪ್ರಕ್ರಿಯೆಯನ್ನು ಹೆಚ್ಚು ಸುಸ್ಥಿರಗೊಳಿಸುತ್ತದೆ, ಪರಿಸರಸ್ನೇಹಿ ಆಗಿಸುತ್ತದೆ ಎಂದು ಹೇಳಿದರು.

ಗುಜರಾತಿನ ಗಾಂಧಿನಗರದಲ್ಲಿ ಆಯೋಜಿಸಿರುವ ಹೂಡಿಕೆದಾರರ ಸಮಾವೇಶವನ್ನು ವರ್ಚುವಲ್ ಆಗಿ ಉದ್ಘಾಟಿಸಿ ಪ್ರಧಾನಿಯವರು ಈ ಘೋಷಣೆ ಮಾಡಿದರು. ಈ ನೀತಿಯು ದೇಶದ ಆಟೊಮೊಬೈಲ್ ವಲಯಕ್ಕೆ ಹೊಸ ಅಸ್ಮಿತೆಯೊಂದನ್ನು ನೀಡುತ್ತದೆ ಎಂದು ಹೇಳಿದರು. ವಾಹನ ಗುಜರಿ ಮೂಲಸೌಕರ್ಯ ಅಭಿವೃದ್ಧಿಗೆ ಹೂಡಿಕೆ ಆಕರ್ಷಿಸುವ ಉದ್ದೇಶದೊಂದಿಗೆ ಈ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಅನರ್ಹ ವಾಹನಗಳನ್ನು ನಮ್ಮ ರಸ್ತೆಗಳಿಂದ ವೈಜ್ಞಾನಿಕ ರೀತಿಯಲ್ಲಿ ತೆರವುಗೊಳಿಸುವಲ್ಲಿ ಈ ನೀತಿಯು ಪ್ರಮುಖ ಪಾತ್ರ ವಹಿಸಲಿದೆ' ಎಂದು ಅವರು ಹೇಳಿದರು. ಹೊಸ ನೀತಿಯು ದೇಶದ ನಗರಗಳಲ್ಲಿ ಮಾಲಿನ್ಯ ತಗ್ಗುವಂತೆ ಮಾಡುವಲ್ಲಿ ನೆರವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಹೊಸ ನೀತಿಯ ಅಡಿಯಲ್ಲಿ, ಹಳೆಯ ವಾಹನವನ್ನು ಗುಜರಿಗೆ ಹಾಕುವವರಿಗೆ ಸರ್ಕಾರದ ಕಡೆಯಿಂದ ಪ್ರಮಾಣಪತ್ರವೊಂದು ಸಿಗುತ್ತದೆ. ಈ ಪ್ರಮಾಣಪತ್ರ ಹೊಂದಿರುವವರು ಹೊಸ ವಾಹನ ಖರೀದಿಸಿದಾಗ ಅವರಿಗೆ ನೋಂದಣಿ ಶುಲ್ಕ ವಿಧಿಸುವುದಿಲ್ಲ ಎಂದು ಪ್ರಧಾನಿ ತಿಳಿಸಿದರು. ಅವರು ಹೊಸ ವಾಹನ ಖರೀದಿಸಿದಾಗ ರಸ್ತೆ ತೆರಿಗೆ ಮೊತ್ತದಲ್ಲಿಯೂ ಕೆಲವು ವಿನಾಯಿತಿಗಳು ಸಿಗಲಿವೆ ಎಂದರು.

ವಾಹನ ಕ್ಷಮತೆ ಯಾವ ಮಟ್ಟದಲ್ಲಿ ಇದೆ ಎಂಬುದನ್ನು ಆಧರಿಸಿ, ಆ ವಾಹನವನ್ನು ಗುಜರಿಗೆ ಹಾಕಬೇಕೋ ಬೇಡವೋ ಎಂಬುದನ್ನು ತೀರ್ಮಾನಿಸಲಾಗುತ್ತದೆ. ಹೊಸ ನೀತಿಯು ₹ 10 ಸಾವಿರ ಕೋಟಿ ಬಂಡವಾಳ ಆಕರ್ಷಿಸಲಿದೆ. ಸಹಸ್ರಾರು ಸಂಖ್ಯೆಯಲ್ಲಿ ಹೊಸ ಉದ್ಯೋಗ ಸೃಷ್ಟಿಸಲಿದೆ ಎಂದರು.

ಕವಟಗಿಮಠ ಪರಿಷತ್ ಮುಖ್ಯಸಚೇತಕ



ಬೆಂಗಳೂರು: ವಿಧಾನ ಪರಿಷತ್ ಆಡಳಿತ ಪಕ್ಷದ ಮುಖ್ಯಸಚೇತಕರನ್ನಾಗಿ ಮಹಾಂತೇಶ ಕವಟಗಿಮಠ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ವಿರೋಧಪಕ್ಷದ ಮುಖ್ಯ ಸಚೇತಕರಾಗಿದ್ದರು. ಆ ಬಳಿಕ ಯಡಿಯೂರಪ್ಪ ಅವಧಿಯಲ್ಲಿ ಪರಿಷತ್‌ನ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿತ್ತು. ಇದೀಗ ಮತ್ತೆ ಅವರನ್ನೇ ಮುಖ್ಯ ಸಚೇತಕರನ್ನಾಗಿ ನೇಮಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.85	3,896	5,482
ಹಾರಂಗಿ	2,859	2,855.74	2,940	2,395
ಕಬಿನಿ	2284.00	2,282.46	4,491	700
ಹೇಮಾವತಿ	2,922	2,920.32	3,257	4,205
ಲಿಂಗನಮಕ್ಕಿ	1,819	1,812	9,515	-
ಸೂಪಾ (ಮೀ)	564	554.52	5,562	4,705
ಮಾಣಿ	594.36	584.94	1,500	-
ತುಂಗಭದ್ರಾ	1,633	1,632.76	26,741	20,153
ಮಲಪ್ರಭಾ	2079.50	2,077.00	1,544	1,544
ಘಟಪ್ರಭಾ	2,175	2,174.20	7,485	2,682
ಭದ್ರಾ	186	184.6	6,586	4,491
ಆಲಮಟ್ಟಿ (ಮೀ)	519.60	519.45	25,888	2428
ನಾರಾಯಣಪುರ (ಮೀ)	492.25	491.45	-	9.200

* ನೆಲಮಟ್ಟದಿಂದ

ಮೇಕೆದಾಟು ಸಂಬಂಧ ಸಿ.ಎಂ ಜೊತೆ ಶೀಘ್ರ ಚರ್ಚೆ: ಎಚ್‌ಡಿಕೆ

ರಾಮನಗರ: ಮೇಕೆದಾಟು ವಿಚಾರದಲ್ಲಿ ಸದ್ಯದಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸುತ್ತೇನೆ' ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಮೇಕೆದಾಟು ಯೋಜನೆ ಕಾರ್ಯಾರಂಭಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ ಎಂದು ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರು ಹೇಳಿರುವುದನ್ನು ಮಾಧ್ಯಮಗಳ ಮೂಲಕ ಗಮನಿಸಿದ್ದೇನೆ. ಆದರೆ, ಆ ಮಾತುಗಳು ಕಾರ್ಯರೂಪಕ್ಕೆ ಬರಬೇಕು. ಈಗಾಗಲೇ, ಸಾಕಷ್ಟು ಸಮಯ ವ್ಯರ್ಥ ಆಗಿದೆ' ಎಂದರು.

'ನಾನು ಮುಖ್ಯಮಂತ್ರಿ ಆಗಿದ್ದಾಗ ಯೋಜನೆ ಕುರಿತು ಕೇಂದ್ರಕ್ಕೆ ಡಿಪಿಆರ್ ಸಲ್ಲಿಸಲಾಗಿತ್ತು. ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ದ್ರೋಹ ಬಗೆಯುವ ಕೆಲಸ ಮಾಡುತ್ತಲೇ ಬಂದಿದೆ' ಎಂದು ಟೀಕಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿಕೆ ಕುರಿತಂತೆ, 'ರವಿ ತಾವು ಕನ್ನಡಿಗರು ಎಂಬುದನ್ನು ಮರೆತು ಭಾರತೀಯರಾಗಿದ್ದಾರೆ. ಆದರೆ, ಕನ್ನಡ ತಾಯಿ ಉಳಿಸಿಕೊಂಡಾಗ ಮಾತ್ರ ಭಾರತ ತಾಯಿಉಳಿಸಲು ಸಾಧ್ಯ' ಎಂದರು.

ಬಿಜೆಪಿಯವರಿಗೆ ಎರಡು ನಾಲಿಗೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ವಿಚಾರದಲ್ಲಿ ಬಿಜೆಪಿ ಎರಡು ನಾಲಿಗೆಗಳಿಂದ ಮಾತನಾಡುತ್ತಿದೆ. ರಾಜ್ಯ ಸರ್ಕಾರದ ನಿಲುವು ಏನು ಎಂಬುದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಪಷ್ಟಪಡಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಮೇಕೆದಾಟು ವಿಚಾರದಲ್ಲಿ ಮುಖ್ಯಮಂತ್ರಿಯವರು ತಳೆದಿರುವ ಗಟ್ಟಿ ನಿಲುವಿಗೆ ನಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆ. ಆದರೆ, ಬಿಜೆಪಿ ತಮಿಳುನಾಡು ಘಟಕ ಯೋಜನೆ ವಿರೋಧಿಸುತ್ತಿದೆ. ಆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಬಿಜೆಪಿ ತಮಿಳುನಾಡು ಘಟಕ ಬೆಂಬಲಿಸುತ್ತಿದ್ದಾರೆ. ಈ ದ್ವಂದ್ವ ನೀತಿ ಯಾಕೆ' ಎಂದು ಪ್ರಶ್ನಿಸಿದ್ದಾರೆ.

'ಸಡಿಲ ನಾಲಿಗೆಯ ಮೂಲಕ ವಿವಾದ ಸೃಷ್ಟಿಸುವ ಸಿ.ಟಿ.ರವಿ ಅವರಂತಹ ಕೂಗುಮಾರಿಗಳ ಬಾಯಿ ಮುಚ್ಚಿಸದಿದ್ದರೆ ನಾವೇ ಕಚ್ಚಾಡುವಂತಹ ವಾತಾವರಣ ನಿರ್ಮಾಣ ಆಗಬಹುದು' ಎಂದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗೆ ಎಚ್ಚರಿಕೆ ನೀಡಿದ್ದಾರೆ.

ಮೇಕೆದಾಟು ವಿಚಾರದಲ್ಲಿ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಮತ್ತು ಬಿಜೆಪಿಯೊಳಗಿನ ಒಡಕು ಬಾಯಿಗಳನ್ನು ಮುಚ್ಚಿಸಬೇಕು ಎಂದು ಆಗ್ರಹಿಸಿದ್ದಾರೆ.

'ಅಣೆಕಟ್ಟೆ ನಿರ್ಮಾಣಕ್ಕೆ ಸರ್ಕಾರ ಬದ್ಧ'

ರಾಮನಗರ: 'ಮೇಕೆದಾಟು ಯೋಜನೆ ಕುರಿತು ಬಿಜೆಪಿ ತನ್ನ ನಿಲುವಿಗೆ ಬದ್ಧವಾಗಿದ್ದು, ಅಣೆಕಟ್ಟೆ ನಿರ್ಮಾಣಕ್ಕೆ ಎಲ್ಲ ಅಗತ್ಯ ಕ್ರಮವನ್ನು ಸರ್ಕಾರ ಮಾಡಲಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಶಾಸಕ ಸಿ.ಟಿ.ರವಿ ಹೇಳಿಕೆ ಕುರಿತು ಶುಕ್ರವಾರ ನಗರದಲ್ಲಿ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು.

'ಕಾವೇರಿ ಜಲವಿವಾದ ನ್ಯಾಯಮಂಡಳಿಯು ನಮಗೆ ಕಾವೇರಿ ನದಿ ನೀರಿನ ಮೇಲೆ ಎಷ್ಟು ಹಕ್ಕು ನೀಡಿದೆಯೋ ಅದನ್ನು ಕಾನೂನಾತ್ಮಕವಾಗಿ ಪಡೆದುಕೊಳ್ಳುವ ನಿರ್ಧಾರ ಮಾಡಿದ್ದೇವೆ. ಸಿ.ಟಿ.ರವಿ ಹೇಳಿಕೆ ಬಗ್ಗೆ ಹೆಚ್ಚೇನೂ ಹೇಳಲಾರೆ' ಎಂದರು.

ಪ್ರಜಾವಾಣಿ ಶನಿವಾರ, 14 ಆಗಸ್ಟ್ 2021

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಅಡುಗೆಮನೆಯಲ್ಲಿ ಕುದಿಯುವ ಒತ್ತಡ!

ಸುನಿಧಿ ಆರ್.ಎಸ್.

ಈಗಿನ್ನೂ 32ರ ಹರೆಯದ ಮುಕ್ತಾಗೆ ಅಡುಗೆ ಮನೆ ಪ್ರವೇಶಿಸುವುದೆಂದರೆ ಕೋಪವೇ ಬಂದು ಬಿಡುತ್ತದೆ. ಒಂದು ದಿನವಂತೂ ಪಾತ್ರೆಗಳನ್ನೆಲ್ಲ ಗೋಡೆಗೆ ಎಸೆದು ಸಿಟ್ಟು ತೀರಿಸಿಕೊಂಡಾಗ ಮನೆಯವರೆಲ್ಲ ಆತಂಕದಿಂದ ಆಕೆಯ ಆರೋಗ್ಯವನ್ನು ವಿಚಾರಿಸಿಕೊಂಡಿದ್ದರು.

'ಕಚೇರಿಗೆ ಹೋಗುವಾಗ ಕೂಡ ಬೆಳಗಿನ ಉಪಾಹಾರ, ನನಗೆ, ಪತಿಗೆ ಹಾಗೂ ಮಕ್ಕಳ ಡಬ್ಬಿ ತುಂಬಿಸಲು ಅಡುಗೆ ಮಾಡಬೇಕಿತ್ತು. ಆದರೂ ಒತ್ತಡ ಎನಿಸಿರಲಿಲ್ಲ. ಕಳೆದ ಒಂದೂವರೆ ವರ್ಷದಿಂದ ಮನೆಯಿಂದಲೇ ಕಚೇರಿ ಕೆಲಸ. ಆರಾಮವಾಗಿ ಎಲ್ಲವನ್ನೂ ಮಾಡಬಹುದು ಎಂದುಕೊಂಡರೆ ಎಲ್ಲಾ ಉಲ್ಟಾ ಆಗಿದೆ. ಕೆಲಸದ ಮಧ್ಯೆ ಗಡಿಬಿಡಿಯಲ್ಲಿ ಮಾಡಬೇಕು, ಆದರೂ ಮುಗಿಯುವುದೇ ಇಲ್ಲ. ಸಾಕಾಗಿಬಿಟ್ಟಿದೆ' ಎನ್ನುವ ಮುಕ್ತಾ, 'ಈ ಒತ್ತಡದಿಂದ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಖಾಲಿಯಾಗಿಬಿಟ್ಟಿದ್ದೇನೆ. ಈ ''ಬರ್ನ್‌ಔಟ್'' ನಿಂದಾದ ಬಳಲಿಕೆಗೆ ಆಪ್ತ ಸಮಾಲೋಚಕರ ಸಲಹೆಗೆ ಮೊರೆ ಹೋಗಿದ್ದೇನೆ' ಎಂದು ಅಳಲು ತೋಡಿಕೊಳ್ಳುತ್ತಾರೆ.

> ಬದುಕಲು ಅವಶ್ಯಕವಾದ ಊಟ– ತಿಂಡಿ ತಯಾರಿಸಲು ಮಾಡುವ ಅಡುಗೆ ಈ ಕೋವಿಡ್ ಸಂದರ್ಭದಲ್ಲಿ ಹಲವರಿಗೆ ಮಾನಸಿಕವಾಗಿ, ದೈಹಿಕವಾಗಿ ಬಳಲಿಕೆ (ಬರ್ನ್‌ಔಟ್)ಗೆ ಕಾರಣವಾಗಿದೆ. ಹಾಗಂತ ಅಡುಗೆ ಮಾಡುವುದನ್ನೇ ದೂರುವುದು ಹಾಸ್ಯಾಸ್ಪದ. ಹಾಗಾದರೆ ಈ ಅಡುಗೆಯಲ್ಲಿ ಖುಷಿ ಕಾಣುವುದು ಹೇಗೆ?

ಟಿವಿ ಚಾನೆಲ್, ಡಿಜಿಟಲ್ ಮಾಧ್ಯಮದಲ್ಲಿ ಕೆಲಸ ಮಾಡಿರುವ ಮುಕ್ತಾಗೆ ಈ ತರಹದ ಒತ್ತಡ, ಅದರಿಂದಾಗುವ ಖಾಲಿತನ ಹೊಸದೇನಲ್ಲ. ಆದರೆ ಕೋವಿಡ್–19, ಅದರಿಂದಾದ ಹತ್ತಾರು ಸಮಸ್ಯೆಗಳು.. ಇವಕ್ಕೆಲ್ಲ ಪರಿಹಾರವೇ ಇಲ್ಲವೇ ಎನ್ನುವಷ್ಟು ಹತಾಶೆ ಮೂಡಿಸುವಂಥದ್ದು. ಹೀಗಾಗಿ ಸಣ್ಣಪುಟ್ಟ ಕೆಲಸಗಳೂ ಕಿರಿಕಿರಿ ಉಂಟು ಮಾಡುತ್ತವೆ. ಅದರಲ್ಲೂ ಅಡುಗೆ ಮನೆ ಹೊಕ್ಕರೆ ಹಲವು ಮಹಿಳೆಯರಿಗೆ ಇಂತಹ ಕೋಪ ಮತ್ತು ಹತಾಶೆ ನಿಯಂತ್ರಿಸಲಾಗದಷ್ಟು ಮಿತಿಮೀರಿ, ತಾಳ್ಮೆ ಕಳೆದುಕೊಂಡು ಕುಟುಂಬದ ಇತರ ಸದಸ್ಯರೂ ನೆಮ್ಮದಿ ಕಳೆದುಕೊಳ್ಳುವಂತೆ ಮಾಡುತ್ತಿದ್ದಾರೆ ಎನ್ನುತ್ತದೆ ಭಾರತವೂ ಸೇರಿದಂತೆ ಹಲವು ದೇಶಗಳಲ್ಲಿ ಯುನೆಸ್ಕೊ ನಡೆಸಿದ ಸಮೀಕ್ಷೆಯ ವರದಿ.

'ಮೊದಲೆಲ್ಲ ಅಡುಗೆ ಮನೆಯೆಂದರೆ ಒತ್ತಡ ಕಡಿಮೆ ಮಾಡಿಕೊಳ್ಳುವ ಜಾಗವಾಗಿತ್ತು. ಇಷ್ಟವಾದ ಅಡುಗೆ ಮಾಡುತ್ತ ಖುಷಿಪಡುತ್ತಿದ್ದೆ. ಆದರೆ ಈಗ ಅಡುಗೆ ಬಗ್ಗೆ ಯೋಚಿಸಿದರೇ ಸಿಟ್ಟು ಬಂದು ಬಿಡುತ್ತದೆ. ಎಷ್ಟೋ ಸಲ ಸಮೀಪದ ಹೋಟೆಲ್‌ನಿಂದ ಪಾರ್ಸೆಲ್ ತಂದು ತಿಂದಿದ್ದೇವೆ. ಝೊಮ್ಯಾಟೊ, ಸ್ವಿಗ್ಗಿಯಿಂದ ತರಿಸಿದ್ದೇನೆ. ಕೆಲವು ಸಲ ಇವೆಲ್ಲ ದಿನಾ ತಿಂದರೆ ಆರೋಗ್ಯ ಹಾಳಾಗುತ್ತದೆ ಎಂಬ ಆಲೋಚನೆ ಬಂದು ಅಸಹಾಯಕತೆಯಿಂದ ನನ್ನ ಮೇಲೆ ನನಗೇ ಬೇಸರ ಬಂದುಬಿಡುತ್ತದೆ' ಎನ್ನುತ್ತಾಳೆ ಬೆಂಗಳೂರಿನ ಮ್ಯಾನೇಜ್‌ಮೆಂಟ್ ಏಜೆನ್ಸಿಯೊಂದರಲ್ಲಿ ಕೆಲಸ ಮಾಡುತ್ತಿರುವ ಕೋಯಲ್ ಕಾಮತ್.

ಅಡುಗೆಯೆಂದರೆ ಒತ್ತಡವೂ ಕೊತಕೊತ!

ಹೆಚ್ಚಿನ ಉದ್ಯೋಗಸ್ಥ ಮಹಿಳೆಯರಿಗೆ ಊಟ, ತಿಂಡಿ, ಅಡುಗೆ ವಿಷಯ ಬಂದ ಕೂಡಲೇ ತಾಳ್ಮೆ ಕಳೆದುಕೊಂಡಂತಾಗಿಬಿಡುತ್ತದಂತೆ. ಏನು ತಯಾರಿಸಬೇಕು, ಅದಕ್ಕೆ ಎಲ್ಲಿಂದ ತರಕಾರಿ, ಇತರ ಸಾಮಗ್ರಿಗಳನ್ನು ತರಬೇಕು ಎಂಬ ವಿಷಯದಿಂದ ಹಿಡಿದು, ಸೊಪ್ಪು, ಮಾಂಸವಾದರೆ ಶುಚಿಗೊಳಿಸುತ್ತ ಸಮಯ ವ್ಯರ್ಥ ಮಾಡಬೇಕಲ್ಲ ಎಂಬಲ್ಲಿವರೆಗಿನ ಆಲೋಚನೆಗಳು ಮಾನಸಿಕ ಒತ್ತಡ ಸೃಷ್ಟಿಸಿಬಿಡುತ್ತವೆ. ಜೊತೆಗೆ ಕೋವಿಡ್ ಭಯದಿಂದ ತರಕಾರಿ, ಮಾಂಸ– ಮೀನು ಎಲ್ಲವನ್ನೂ ಉಪ್ಪು ನೀರು ಹಾಕಿ ಶುಚಿಗೊಳಿಸುವ ಹೆಚ್ಚುವರಿ ಕೆಲಸ ಬೇರೆ.

'ಮನೆಯಲ್ಲಿ ವಯಸ್ಸಾದ ಅತ್ತೆ ಇದ್ದಾರೆ. ಪತಿ, ಇಬ್ಬರು ಮಕ್ಕಳ ಜೊತೆ ನನ್ನ ಅಕ್ಕನ ಮಗನೂ ನಮ್ಮ ಮನೆಯಲ್ಲೇ ಇರುವುದು. ಇಷ್ಟು ಮಂದಿಗೆ ಅಡುಗೆ ಮಾಡುವುದು, ಮಧ್ಯೆ ನನ್ನ ಕಚೇರಿ ಕೆಲಸ ಎಂದೆಲ್ಲ ಸುಸ್ತಾಗಿಬಿಡುತ್ತದೆ. ಇದು ಹೀಗೇ ಮುಂದುವರಿದರೆ ಖಂಡಿತ ಮನಶ್ಶಾಸ್ತ್ರಜ್ಞರ ಬಳಿಗೆ ಹೋಗ ಬೇಕಷ್ಟೆ' ಎಂದು ಅಲವತ್ತುಕೊಳ್ಳುವ ಸ್ನೇಹಿತೆ ರುಚಿತಾ ಜತ್ಕರ್, 'ಈ ಕೋವಿಡ್ ಎಂಬ ಜಾಗತಿಕ ಪಿಡುಗಿನಿಂದ ಅಡುಗೆ, ಆಹಾರ, ತಿನ್ನುವುದು... ಇವೆಲ್ಲ ಶಬ್ದಗಳು ಕಿರಿಕಿರಿ ಹುಟ್ಟಿಸುವಂತಾಗಿಬಿಟ್ಟಿವೆ' ಎಂದು ಬೇಸರದಿಂದ ಮುಖ ಹಿಂಡುತ್ತಾಳೆ.

ಮಕ್ಕಳು ತಿಂಡಿ ಬೇಕೆಂದರೆ ಸಿಟ್ಟಾಗಿ ಅವರ ಮೇಲೆ ರೇಗುವುದು, ಅಡುಗೆ ಮಾಡಲು ಹೋದಾಗ ಯಾವುದೋ ಬೇಳೆ, ಮಸಾಲೆ ಅಥವಾ ಒಗ್ಗರಣೆಗೆ ಕರಿಬೇವು ಸಿಗದಿದ್ದರೂ ಸಾಕು ಕೋಪದಿಂದ ಕೂಗಾಡುವುದು, ಹೆಚ್ಚು ಶುಚಿ ಮಾಡಬೇಕಾದ ಸೊಪ್ಪಿನಂತಹ ತರಕಾರಿ ಅಥವಾ ಕತ್ತರಿಸಲು ಹೆಚ್ಚು ಸಮಯ ಬೇಡುವಂತಹ ಬೆಂಡೆಕಾಯಿಯಂತಹ ತರಕಾರಿ ತಂದರೂ ಕೂಡ ತಾಳ್ಮೆಗೆಟ್ಟಂತೆ ವರ್ತಿಸುವುದು... ಇವೆಲ್ಲ ಈ ಅಡುಗೆಯಿಂದ ಸೃಷ್ಟಿಯಾದ ಬಳಲಿಕೆ ಅಥವಾ ಬರ್ನ್‌ಔಟ್ ಎನ್ನುತ್ತಾರೆ ತಜ್ಞರು.

ಒತ್ತಡದ ಜೊತೆ ಬಳಲಿಕೆಯೂ ಉಚಿತ

'ಜಾಸ್ತಿ ಕೆಲಸದಿಂದ ಉಂಟಾಗುವ ಒತ್ತಡದಿಂದ ಇಂತಹ ಬರ್ನ್‌ಔಟ್ ಅಥವಾ ಸಾಮಾನ್ಯವಾಗಿ ಹೇಳುವುದಾದರೆ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಬಳಲಿಕೆ ತಲೆದೋರುತ್ತದೆ. ಮುಂಚೆ ಇದಕ್ಕೆಲ್ಲ ಸಿಟ್ಟು ಎನ್ನುವುದು ರೂಢಿಯಲ್ಲಿತ್ತು. ಆದರೆ ಇದೊಂದು ಸಮಸ್ಯೆ, ಅದೂ ಆಧುನಿಕ ಜೀವನಶೈಲಿಯಿಂದ ತಲೆದೋರುವ ಒತ್ತಡವನ್ನು ಸರಿಯಾಗಿ ನಿರ್ವಹಣೆ ಮಾಡಲು ಸಾಧ್ಯವಾಗದಿದ್ದರೆ ಕ್ರಮೇಣ ಹೆಚ್ಚಾಗುವ ತೀವ್ರತರದ ತೊಂದರೆ ಎಂದು ಪರಿಗಣಿಸಲಾಗಿದೆ' ಎನ್ನುತ್ತಾರೆ ಮನಶ್ಶಾಸ್ತ್ರಜ್ಞೆ ಡಾ. ಪ್ರೇಮಾ ಸುಜಯ್.

ಅವರ ಪ್ರಕಾರ ಈ ಬಳಲಿಕೆ ಸಾಮಾನ್ಯವಾಗಿ ಉದ್ಯೋಗದಿಂದ ತಲೆದೋರುವಂಥದ್ದು. ಆದರೆ ಕೋವಿಡ್, ಲಾಕ್‌ಡೌನ್ ಸಂದರ್ಭದಲ್ಲಿ ನಾವು ಬದುಕಬೇಕಾದ ರೀತಿ ಕೂಡ ಈ ಸಮಸ್ಯೆಯನ್ನು ಹೆಚ್ಚು ಮಾಡುತ್ತಿದೆ. ಬೇರೆ ದಿನಗಳಲ್ಲಿ ನಿತ್ಯದ ಬರ್ನ್‌ಔಟ್ ಎಂಬ ಕೆಲಸದ ಸುಸ್ತು ಸಂಜೆ ಕಚೇರಿಯಿಂದ ಹೊರಟ ಕೂಡಲೇ ಕಡಿಮೆಯಾಗುತ್ತಿತ್ತು. ಆದರೆ ಈಗ ಮನೆಯಿಂದಲೇ ಕಚೇರಿ ಕೆಲಸ ಮಾಡುವುದರಿಂದ ಈ ರೀತಿಯ ಬಳಲಿಕೆ ಹೆಚ್ಚಾಗಿದ್ದು, ಬಹುತೇಕ ಮಹಿಳೆಯರಿಗೆ ತಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ.

ಇದಕ್ಕೆ ಪರಿಹಾರವೇನು?

- ದಿನದ ಕೆಲವು ಸಮಯವನ್ನು ನಿಮಗೆ ಬೇಕಾದಂತೆ ಕಳೆಯಲು ಮೀಸಲಿಡಿ.
- ಕೊಂಚ ಸವಾಲೆನಿಸುವಂತಹ, ಮಾಡಿದ ಮೇಲೆ ಉತ್ಪಾದಕತೆ ಇದೆ ಎಂದೆನಿಸುವಂತಹ ಚಟುವಟಿಕೆ ಮಾಡಿ.
- ನಿತ್ಯ ಒಂದೇ ತರಹದ ಅಡುಗೆಗಿಂತ ಹೊಸರುಚಿಯ ಪ್ರಯೋಗ ಮಾಡಿ.
- ಮನೆಯ ಇತರ ಸದಸ್ಯರಿಗೆ ನೆರವಾಗುವಂತೆ ಹೇಳಿ.

ಕಾರಣಗಳು ಹತ್ತಾರು

ಹೀಗಾಗಿ ಈ ಹಿಂದೆ ಖುಷಿಪಡುತ್ತಿದ್ದ ಕೆಲಸಗಳೂ ಕೂಡ ನಕಾರಾತ್ಮಕ ಪರಿಣಾಮ ಬೀರುತ್ತಿವೆ ಎಂಬುದು ಡಾ. ಪ್ರೇಮಾ ಅವರ ಅಭಿಮತ. ನಾವು ಕೆಲಸದಿಂದ ದೂರ ಸರಿಯುವಂತಹ ಮನೋಭಾವ ಬೆಳೆಸಿಕೊಂಡಿದ್ದೇವೆ. ಅದರಲ್ಲಿ ಆಸಕ್ತಿ ಕಳೆದುಕೊಂಡಿದ್ದು, ನಮಗೆ ನಾವೇ ಪ್ರೇರೇಪಣೆ ಮಾಡಿಕೊಳ್ಳುವುದು ಕಷ್ಟವೆನಿಸುತ್ತದೆ. ಅಡುಗೆ ವಿಷಯವನ್ನೇ ತೆಗೆದುಕೊಂಡರೆ, ಕಡಿಮೆ ಕೆಲಸವಿದ್ದರೂ ಹೆಚ್ಚು ಸುಸ್ತು ಎನಿಸುತ್ತದೆ. ಇದರಿಂದ ಆ ಕೆಲಸವನ್ನು ತಿರಸ್ಕಾರ ಮಾಡುತ್ತ ಹೋಗುತ್ತೇವೆ. ಅದನ್ನು ಮಾಡುವುದನ್ನು ತಪ್ಪಿಸಿಕೊಳ್ಳುತ್ತೇವೆ. ಅನಿವಾರ್ಯವಾದಾಗ ಹೆಚ್ಚು ಪ್ರಯತ್ನ ಹಾಕದೇ ಅಸಮಾಧಾನ ಹೊರಹಾಕುತ್ತೇವೆ.

ಇನ್ನೊಂದು ಕಾರಣವೆಂದರೆ ಪದೇ ಪದೇ ಕೋವಿಡ್ ಮುಂಚಿನ ದಿನಗಳನ್ನು ನೆನಪು ಮಾಡಿಕೊಳ್ಳುವುದು. ಆಗ ಕಾಫಿ ಶಾಪ್, ಕಚೇರಿಯ ಕೆಫೆಟೇರಿಯ, ಸ್ನೇಹಿತರ ಜೊತೆ ಆಗಾಗ ಹೋಟೆಲ್‌ನಲ್ಲಿ ಊಟ.. ಎಂದೆಲ್ಲ ನೆನೆಸಿಕೊಂಡು ಸದ್ಯದ ಸಂದರ್ಭಕ್ಕೆ ತಾಳೆ ಹಾಕಿ ನೊಂದುಕೊಳ್ಳುವುದು, ದಿನಕ್ಕೆ ಹಲವಾರು ಬಾರಿ ಅಡುಗೆ ಮಾಡಬೇಕಾದ ಅನಿವಾರ್ಯತೆಯಿಂದ ಒಳಗಿನ ಸಿಟ್ಟನ್ನು ತೋರಿಸುವುದು.

'ನಿತ್ಯ ಹಲವಾರು ಸಲ ಅಡುಗೆ ಮನೆಯಲ್ಲಿ ಊಟ– ತಿಂಡಿ ತಯಾರಿಸುವುದರಿಂದ, ವೈವಿಧ್ಯತೆ, ಆಯ್ಕೆ ಕಮ್ಮಿಯಾಗಿ ಹಲವರಿಗೆ ಈ ಬರ್ನ್‌ಔಟ್ ಅನುಭವವಾಗುತ್ತಿದೆ. ಜೊತೆಗೆ 'ಅಡುಗೆ ಮಾಡುತ್ತ ಮಾಡುತ್ತ ಕಳೆದು ಹೋಗುತ್ತಿದ್ದೇವೆ. ಇದರಿಂದೇನೂ ಲಾಭವಿಲ್ಲ' ಎಂದು ಹಲವರು ಹೇಳುವುದನ್ನು ಕೇಳಿರಬಹುದು' ಎಂದು ವಾಸ್ತವ ಬಿಚ್ಚಿಡುತ್ತಾರೆ ಡಾ. ಪ್ರೇಮಾ.

ಹಾಗೆಯೇ ಲಾಕ್‌ಡೌನ್ ಸಂದರ್ಭದಲ್ಲಿ ಬೇಳೆಕಾಳು, ಇನ್ನಿತರ ಸಾಮಗ್ರಿಗಳ ಕೊರತೆ ಈ ಒತ್ತಡವನ್ನು ಜಾಸ್ತಿ ಮಾಡಿದೆ. ಮತ್ತೊಂದು ಕಾರಣ ಮನೆಯಲ್ಲಿ ಒಬ್ಬೊಬ್ಬರದೂ ಒಂದೊಂದು ರೀತಿಯ ಬಾಯಿರುಚಿ. ರುಚಿ ಇಲ್ಲ, ಹಾಗಾಗಿದೆ, ಹೀಗಾಗಿದೆ ಎಂಬ ಟೀಕೆ ಬೇರೆ.

ಎಲ್ಲವೂ ಸೇರಿ ಅಡುಗೆ ಮಾಡುವುದೆಂದರೆ ಎಷ್ಟೋ ಮಂದಿಗೆ ಹೇವರಿಕೆ ಹುಟ್ಟಿಬಿಟ್ಟಿದೆ. ಕುಕರ್‌ನಲ್ಲಿ ಆವಿಯ ಒತ್ತಡ ಜಾಸ್ತಿಯಾಗುವಂತೆ ಅಡುಗೆ ಮಾಡುವ ಹೆಂಗಳೆಯರಲ್ಲೂ ಒತ್ತಡ ಜಾಸ್ತಿಯಾಗುವುದು ಸಹಜ. ❖

ಬೇಯಿಸಿದ ಮೊಟ್ಟೆ ಬುರ್ಜಿ, ಮಸಾಲೆ ಕರಿ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ರೇಖಾ ಎಂ.

ಎಗ್ ಫ್ರೈಡ್ ರೈಸ್

ಬೇಕಾಗುವ ಸಾಮಗ್ರಿಗಳು: ಅನ್ನ – 2 ಕಪ್, ಎಲೆಕೋಸು – ಅರ್ಧ ಕಪ್, ಕ್ಯಾರೆಟ್(ತುರಿದಿದ್ದು) – ಕಾಲು ಕಪ್, ಈರುಳ್ಳಿ – 2 (ಕತ್ತರಿಸಿದ್ದು), ಕೊತ್ತಂಬರಿ ಸೊಪ್ಪು – 1/2 ಕಪ್, ಶುಂಠಿ-ಬೆಳ್ಳುಳ್ಳಿ ಪೇಸ್ಟ್ – 1 ಟೇಬಲ್ ಚಮಚ, ಹಸಿಮೆಣಸು –1, ಉಪ್ಪು– ರುಚಿಗೆ, ಖಾರದಪುಡಿ – ಅರ್ಧ ಚಮಚ, ಗರಂಮಸಾಲೆ – 1 ಟೇಬಲ್ ಚಮಚ, ವಿನೆಗರ್ – 1 ಟೇಬಲ್ ಚಮಚ, ಕಾಳುಮೆಣಸಿನ ಪುಡಿ – 1 ಟೇಬಲ್ ಚಮಚ, ಟೊಮೆಟೊ ಸಾಸ್ – 1 ಟೇಬಲ್ ಚಮಚ, ಗ್ರೀನ್‌ಚಿಲ್ಲಿ ಸಾಸ್ – 1 ಟೇಬಲ್ ಚಮಚ, ಸೋಯಾ ಸಾಸ್ – 1 ಟೇಬಲ್, ಮೊಟ್ಟೆ – 3, ಎಣ್ಣೆ – ಸ್ವಲ್ಪ

ತಯಾರಿಸುವ ವಿಧಾನ: ಪಾತ್ರೆಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಈರುಳ್ಳಿ, ಎಲೆಕೋಸು ಹಾಕಿ ಹುರಿದುಕೊಳ್ಳಿ. ಹುರಿದುಕೊಂಡಿದ್ದನ್ನು ಒಂದು ಬದಿಗೆ ಸರಿಸಿಕೊಂಡು ಇನ್ನೊಂದು ಭಾಗಕ್ಕೆ ಒಡೆದ ಮೊಟ್ಟೆ ಹಾಕಿ. ಮೊಟ್ಟೆಯನ್ನು ಆಮ್ಲೆಟ್‌ಗೆ ಬೇಯಿಸುವಂತೆ ಅರ್ಧ ಬೇಯಿಸಿಕೊಳ್ಳಿ. ಅದೇ ಎಣ್ಣೆಗೆ ಕ್ಯಾರೆಟ್, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಹಸಿಮೆಣಸು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ವಿನೆಗರ್, ಸೋಯಾ ಸಾಸ್, ಚಿಲ್ಲಿ ಸಾಸ್, ಟೊಮೆಟೊ ಸಾಸ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಅನ್ನ ಹಾಗೂ ಮೇಲೆ ತಿಳಿಸಿದ ಎಲ್ಲಾ ಮಸಾಲೆ, ಉಪ್ಪು ಹಾಕಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಕೊನೆಯಲ್ಲಿ ಕೊತ್ತಂಬರಿ ಸೊಪ್ಪು ಮೇಲೆ ಉದುರಿಸಿ.

ಮೊಟ್ಟೆ ಮಸಾಲೆ ಕರಿ

ನಳಪಾಕ

ಬೇಕಾಗುವ ಸಾಮಗ್ರಿಗಳು: ಬೇಯಿಸಿದ ಮೊಟ್ಟೆ – 6, ಈರುಳ್ಳಿ – 3 (ಹೆಚ್ಚಿದ್ದು), ಹುಣಸೆಹಣ್ಣು – 30 ಗ್ರಾಂ (ನೆನೆಸಿದ್ದು), ಟೊಮೆಟೊ – 2, ಸಾಸಿವೆ – ಸ್ವಲ್ಪ, ಕೊತ್ತಂಬರಿ ಸೊಪ್ಪು – ಸ್ವಲ್ಪ, ಕರಿಬೇವು – ಸ್ವಲ್ಪ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – ಅರ್ಧ ಚಮಚ, ಗರಂ ಮಸಾಲೆ– ಅರ್ಧ ಚಮಚ, ಹಸಿಮೆಣಸು – 3, ಅರಿಸಿನ ಪುಡಿ – ಅರ್ಧ ಚಮಚ, ಖಾರದಪುಡಿ – 2 ಟೇಬಲ್ ಚಮಚ, ಕೊತ್ತಂಬರಿ ಪುಡಿ – 1 ಟೇಬಲ್ ಚಮಚ, ಎಣ್ಣೆ – ಸ್ವಲ್ಪ

ತಯಾರಿಸುವ ವಿಧಾನ: ಬಾಣಲೆಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಅರಿಸಿನ ಹಾಕಿ ಮಿಶ್ರಣ ಮಾಡಿ. ಮೊಟ್ಟೆಗೆ ನಾಲ್ಕು ಕಡೆ ಗೀರಿಕೊಂಡು ಮೊಟ್ಟೆಯನ್ನು ಅರಿಸಿನ ಮಿಶ್ರಣಕ್ಕೆ ಹಾಕಿ ಹುರಿದುಕೊಂಡು ತೆಗೆದಿಟ್ಟುಕೊಳ್ಳಿ. ಅದೇ ಎಣ್ಣೆಗೆ ಸಾಸಿವೆ, ಈರುಳ್ಳಿ, ಹಸಿಮೆಣಸು, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಹಾಕಿ ಮಿಶ್ರಣ ಮಾಡಿ ಸ್ವಲ್ಪ ಹೊತ್ತು ಹುರಿದುಕೊಳ್ಳಿ. ಅದಕ್ಕೆ ಟೊಮೆಟೊ, ಅರಿಸಿನ ಪುಡಿ, ಕೊತ್ತಂಬರಿ ಪುಡಿ, ಖಾರದಪುಡಿ, ಗರಂಮಸಾಲೆ ಸೇರಿಸಿ ಚೆನ್ನಾಗಿ ಹುರಿದುಕೊಳ್ಳಿ. ಟೊಮೆಟೊ ಮ್ಯಾಶ್ ಆಗುವವರೆಗೂ ಹುರಿದುಕೊಳ್ಳಿ, ಅದಕ್ಕೆ ಕರಿಬೇವು ಸೇರಿಸಿ. ಸ್ವಲ್ಪ ನೀರು ಸೇರಿಸಿ ಎಣ್ಣೆ ಬಿಡುವವರೆಗೂ ಕುದಿಸಿ. ಅದಕ್ಕೆ ಹುಣಸೆರಸ, ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಕುದಿಸಿ. ಬೇಕಾದರೆ ಸ್ವಲ್ಪ ನೀರು ಸೇರಿಸಿ ಕುದಿಸಬಹುದು. ಇದನ್ನು ಮೂರು ನಿಮಿಷಗಳ ಕಾಲ ಕುದಿಸಬೇಕು. ಅದಕ್ಕೆ ಮೊದಲೇ ಬೇಯಿಸಿ ಹುರಿದುಕೊಂಡ ಮೊಟ್ಟೆ ಹಾಕಿ. ಮೊಟ್ಟೆ ಹಾಕಿದ ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿ ಮತ್ತೆ ಚೆನ್ನಾಗಿ ಕುದಿಸಿ.

ಬೇಯಿಸಿದ ಮೊಟ್ಟೆ ಬುರ್ಜಿ

ಬೇಕಾಗುವ ಸಾಮಗ್ರಿಗಳು: ಬೇಯಿಸಿದ ಮೊಟ್ಟೆ – 4, ಈರುಳ್ಳಿ – 3 (ಹೆಚ್ಚಿದ್ದು), ಕೊತ್ತಂಬರಿ ಸೊಪ್ಪು – ಅರ್ಧ ಕಪ್, ಮೊಟ್ಟೆ ಮಸಾಲೆ ಪುಡಿ – ಅರ್ಧ ಚಮಚ, ಕೊತ್ತಂಬರಿ ಪುಡಿ – ಅರ್ಧ ಚಮಚ, ಖಾರದಪುಡಿ – ಅರ್ಧ ಚಮಚ, ಅರಿಸಿನ – ಅರ್ಧ ಚಮಚ, ಕಾಳುಮೆಣಸಿನ ಪುಡಿ – ಕಾಲು ಚಮಚ, ಉಪ್ಪು – ರುಚಿಗೆ, ಎಣ್ಣೆ – ಸ್ವಲ್ಪ

ತಯಾರಿಸುವ ವಿಧಾನ: ಬೇಯಿಸಿದ ಮೊಟ್ಟೆಯನ್ನು ನಾಲ್ಕು ಭಾಗ ಮಾಡಿಕೊಳ್ಳಿ. ಪಾತ್ರೆಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಈರುಳ್ಳಿ ಹಾಕಿ ಹುರಿದುಕೊಳ್ಳಿ. ಅದಕ್ಕೆ ಮೊಟ್ಟೆ ಮಸಾಲೆ, ಕೊತ್ತಂಬರಿ ಪುಡಿ, ಖಾರದಪುಡಿ, ಅರಿಸಿನ ಪುಡಿ, ಕಾಳಮೆಣಸಿನ ಪುಡಿ, ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಅದಕ್ಕೆ ಬೇಯಿಸಿ ಕತ್ತರಿಸಿದ ಮೊಟ್ಟೆ ಸೇರಿಸಿ, ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಈಗ ನಿಮ್ಮ ಮುಂದೆ ರುಚಿಯಾದ ಬೇಯಿಸಿದ ಮೊಟ್ಟೆಯ ಎಗ್ ಬುರ್ಜಿ ರೆಡಿ.

(ಲೇಖಕಿ: 'ರೇಖಾ ಅಡುಗೆ' ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಗರ್ಭಧಾರಣೆಗೆ ಯಾವ ಸಮಯದಲ್ಲಿ ಲೈಂಗಿಕ ಸಂಪರ್ಕ ಸೂಕ್ತ?

ಸ್ಪಂದನ

ಡಾ. ವೀಣಾ ಎಸ್. ಭಟ್

• ಯಾವ ಸಮಯದಲ್ಲಿ ಲೈಂಗಿಕ ಸಂಪರ್ಕ ಮಾಡಿದರೆ ಗರ್ಭಧಾರಣೆ ಆಗುವುದು ಹೇಳಿ ಮೇಡಂ?

– ಕೃಷ್ಣ, ಊರು ತಿಳಿಸಿಲ್ಲ

ಗರ್ಭಧಾರಣೆಯಾಗಬೇಕಾದರೆ ಮಹಿಳೆಯರಲ್ಲಿ ಅಂಡಾಣು ಬಿಡುಗಡೆಯಾಗುವ ಸಮಯದಲ್ಲಿ ಲೈಂಗಿಕ ಸಂಪರ್ಕ ಮಾಡುವುದು ಸೂಕ್ತ ಕಾಲ. ಪತ್ನಿಯ ಅಂಡಾಣು ಪತಿಯ ವೀರ್ಯಾಣುವಿನ ಜೊತೆ ಸಮಾಗಮವಾಗಿ ಗರ್ಭ ಫಲಿಸಬೇಕಾದರೆ ಅಂಡಾಣು ಬಿಡುಗಡೆಯಾದ 12ರಿಂದ 24 ತಾಸಿನೊಳಗಾಗಿ ಲೈಂಗಿಕ ಸಂಪರ್ಕ ಆಗಬೇಕು. ಯಾವುದೇ ಗರ್ಭನಿರೋಧಕಗಳನ್ನು ಬಳಸದೇ ಇದ್ದಾಗ ಅಂಡಾಣು ವೀರ್ಯಾಣು ಜೊತೆ ಫಲಿತವಾಗುತ್ತದೆ. ಲೈಂಗಿಕ ಸಂಪರ್ಕದಿಂದ ಹೆಣ್ಣಿನ ಗರ್ಭದೊಳಗೆ ಸೇರಿದ ವೀರ್ಯಾಣು 3-4 ದಿನ ಜೀವಂತವಾಗಿರುತ್ತದೆ. ಅಂಡಾಣು ಬಿಡುಗಡೆಯನ್ನು ಹೆಣ್ಣಿನಲ್ಲಿ ಹೇಗೆ ಗುರುತಿಸಬೇಕೆಂಬುದು ನಿಮ್ಮ ಮುಂದಿನ ಪ್ರಶ್ನೆ ಇರಬಹುದಲ್ಲವೇ? ಪ್ರತಿ ಮಹಿಳೆಗೂ ತಿಂಗಳ ಮುಟ್ಟು ಆರಂಭವಾಗುವ 14 ದಿನದ ಮೊದಲು ಅಂಡಾಣು ಬಿಡುಗಡೆಯಾಗುತ್ತದೆ ಉದಾಹರಣೆಗೆ: ಹೆಣ್ಣಿನ ಋತುಚಕ್ರ 30 ದಿನಕ್ಕೊಮ್ಮೆ ಆಗುತ್ತಿದ್ದರೆ ಅಂಡಾಣು ಬಿಡುಗಡೆ 16ನೇ ದಿನ ಆಗುತ್ತದೆ. 24 ದಿನದ ಋತುಚಕ್ರ ಆದರೆ 10ನೇ ದಿನಕ್ಕೆ ಅಂಡೋತ್ಪತ್ತಿ ಆಗುವುದು. ಅಂಡಾಣು ಬಿಡುಗಡೆ ಒಂದೆರಡು ದಿನ ಮೊದಲೇ ಇಲ್ಲವೇ ಅಂಡಾಣೋತ್ಪತ್ತಿಯ ದಿನದಂದೇ ಲೈಂಗಿಕ ಸಂಪರ್ಕವಾದಾಗ ಗರ್ಭನಿಲ್ಲುತ್ತದೆ (ಗರ್ಭನಾಳ ಸರಿಯಾಗಿದ್ದು ಗರ್ಭಕೋಶದಲ್ಲಿನ ವಾತಾವರಣ, ವೀರ್ಯಾಣು ಸಂಖ್ಯೆ ಹಾಗೂ ವೀರ್ಯಾಣುಗಳ ಗುಣಮಟ್ಟ ಎಲ್ಲವೂ ಸರಿಯಾಗಿದ್ದರೆ ಮಾತ್ರ). ಕೆಲವು ಮಹಿಳೆಯರಿಗೆ ಅಂಡಾಣು ಬಿಡುಗಡೆ ಆಗುವಾಗ ಸಣ್ಣದಾಗಿ ಹೊಟ್ಟೆನೋವು, ಸ್ವಲ್ಪಲೋಳೆಯಂತಹ ಯೋನಿಸ್ರಾವ ಉಂಟಾಗುತ್ತದೆ. ಈಗ ಅಂಡಾಣು ಬಿಡುಗಡೆ ತಿಳಿಸುವ ಕಿಟ್ ಕೂಡಾ ಲಭ್ಯವಿದೆ. ಅಂತರ್ಜಾಲದಲ್ಲಿ ಅಂಡೋತ್ಪತ್ತಿ ಕ್ಯಾಲೆಂಡರ್ ಕೂಡ ಲಭ್ಯವಿದೆ. ಜೊತೆಗೆ ನಿಮ್ಮಲ್ಲಿ ವೀರ್ಯಾಣುಗಳ ಸಂಖ್ಯೆ, ಗುಣಮಟ್ಟ ಸರಿಯಾಗಿರಬೇಕಾದರೆ ನೀವು ದುಶ್ಚಟಗಳಿಂದ ದೂರವಿದ್ದು ಸಮತೋಲಿತ ಪೌಷ್ಟಿಕ ಆಹಾರ ಸೇವನೆ ಮಾಡಿ.

• ವಯಸ್ಸು 22, ವಿದ್ಯಾರ್ಥಿನಿ. ನನಗೆ ಹೈಪರ್‌ಥೈರಾಯಿಡ್ ಸಮಸ್ಯೆ ಇದೆ ಎಂದು ಡಾಕ್ಟರ್ ತಿಳಿಸಿ 2 ವರ್ಷವಾಯಿತು. ಇದಕ್ಕೆ ಪರಿಹಾರವೇನು? ಆಯುರ್ವೇದ ಚಿಕಿತ್ಸೆಯಿಂದ ಹೈಪರ್‌ಥೈರಾಯಿಡ್ ವಾಸಿಯಾಗುತ್ತದೆಯೇ? ಇದರಿಂದ ತೂಕ ಬಹಳ ಕಡಿಮೆ ಆಗಿದೆ. ವೈದ್ಯರು ಈ ಹಾರ್ಮೋನ್ ಅಸಮತೋಲನ ಜೀವನ ಪರ್ಯಂತ ಇರುತ್ತದೆ ಎಂದು ಹೇಳಿದ್ದಾರೆ. ಇದು ನಿಜವೇ? ಇಷ್ಟು ಚಿಕ್ಕವಯಸ್ಸಿಗೆ ಹೀಗೆ ಆಯಿತಲ್ಲ ಎಂದು ಬೇಸರವಾಗುತ್ತದೆ.

– ಹೆಸರು, ಊರು ತಿಳಿಸಿಲ್ಲ.

ನಿಮಗೆ ಹೈಪರ್‌ಥೈರಾಡಿಸಂ ಇದೆ ಎಂದರೆ ನಿಮ್ಮ ಥೈರಾಯಿಡ್ ಗ್ರಂಥಿಕಾರ್ಯ ಹೆಚ್ಚಾಗಿ ಥೈರಾಯಿಡ್ ಹಾರ್ಮೋನು ಹೆಚ್ಚಾಗಿ ಸ್ರವಿಸಲ್ಪಡುತ್ತಿದೆ ಎಂದರ್ಥ. ಇದಕ್ಕೆ ಕಾರಣ ಥೈರಾಯಿಡ್‌ಗ್ರಂಥಿಯ ಸಮಸ್ಯೆಯಾಗಿರಬಹುದು, ಕೆಲವು ಹೃದ್ರೋಗದಲ್ಲಿ ಉಪಯೋಗಿಸುವ ಅಮಿಡೆರೋನ್, ಮಾನಸಿಕ ಕಾಯಿಲೆಯಲ್ಲಿ ಉಪಯೋಗಿಸುವ ಲಿಥಿಯಂ ಇತ್ಯಾದಿ ಮಾತ್ರೆಗಳು ಥೈರಾಯಿಡ್ ಸ್ರಾವ ಹೆಚ್ಚಿಸಬಹುದು. ಥೈರಾಕ್ಸಿನ್‌ಗ್ರಂಥಿಯ ಸ್ರಾವ ನಿಯಂತ್ರಿಸುವ ಪಿಟ್ಯೂಟರಿ ಗ್ರಂಥಿಯ ಟ್ಯೂಮರ್ ಕೂಡಾ ಥೈರಾಕ್ಸಿನ ಸ್ರಾವ ಹೆಚ್ಚಿಸಬಹುದು. ಹೈಪರ್‌ಥೈರಾಯಿಡ್ ಯಿಸಂನಲ್ಲಿ ಚಯಾಪಚಯ ಕ್ರಿಯೆಗಳ ದರ ಹೆಚ್ಚಾಗಿ ತೂಕ ಕಡಿಮೆ, ನಿದ್ರಾಹೀನತೆ, ಎದೆಬಡಿತ, ಕೈಬೆರಳುಗಳ ನಡುಕ, ಆತಂಕ, ಪದೇಪದೇ ಭೇದಿ, ಉಷ್ಣತೆ ತಡೆಯಲು ಸಾಧ್ಯವಾಗದೇ ಇರುವುದು, ಮಾಂಸಖಂಡಗಳ ಕ್ಷೀಣಿಸುವಿಕೆ ಇತ್ಯಾದಿ ಲಕ್ಷಣಗಳು ಕಾಣಿಸುತ್ತವೆ. ನಿಮಗೆ ತೂಕ ಕಡಿಮೆ ಆಗಿ ಮುಟ್ಟಿನ ತೊಂದರೆ ಆಗಿರುವುದು ಹೈಪರ್‌ಥೈರಾಡಿಸಂನ ಕಾರಣಕ್ಕೆ ಇರಬಹುದು. ಯಾವುದಕ್ಕೂ ನೀವು ತಜ್ಞವೈದ್ಯರ ಸಲಹೆ ಪ್ರಕಾರ ಸರಿಯಾಗಿ ಚಿಕಿತ್ಸೆ ಪಡೆಯಿರಿ ಹೈಪರ್‌ಥೈರಾಯಿಡಸಂನ ಕಾರಣ ತಿಳಿದು ಚಿಕಿತ್ಸೆ ಕೊಟ್ಟರೆ ಕಾಯಿಲೆ ನಿಯಂತ್ರಣಕ್ಕೆ ಬಂದು ಸಹಜ ಜೀವನ ನಡೆಸುವ ಹಾಗಾಗುತ್ತದೆ. ನನಗೆ ಆಯುರ್ವೇದ ಚಿಕಿತ್ಸೆಯ ಬಗ್ಗೆ ಪರಿಣತಿ / ಅನುಭವವಿಲ್ಲ. ಆದರೆ ಅಲೋಪಥಿಯಲ್ಲಿ ಮತ್ತಿಮರ್ಝೋಲ್ ಇತ್ಯಾದಿ ಮಾತ್ರೆಗಳು, ರೇಡಿಯೊ ಆಕ್ಟಿವ್ ಅಯೋಡಿನ್ ಥೆರಪಿ, ಅವಶ್ಯವಿದ್ದಾಗ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಉತ್ತಮ ಚಿಕಿತ್ಸಾ ವಿಧಾನಗಳು ಇವೆ. ನಿಮಗೆ ವಯಸ್ಸು ಚಿಕ್ಕದಿರಬಹುದು. ಆದರೆ ಯಾವ ವಯಸ್ಸಿನಲ್ಲಾದರೂ ಕಾಯಿಲೆ ಬಂದಾಗ ಧೈರ್ಯವಾಗಿ ಎದುರಿಸುವುದೇ ಜೀವನದಲ್ಲಿ ಬಹುಮುಖ್ಯ ಸಂಗತಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು.
ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಜಾಹೀರಾತು

ಅಡಿನಾಯ್ಡ್ಸ್ ಮತ್ತು ಟಾನ್ಸಿಲೈಟಿಸ್

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ನನ್ನ ಮಗನ ವಯಸ್ಸು 7 ವರ್ಷ. ಅವನು ಮೂರ್ನಾಲ್ಕು ವರ್ಷದವನಿದ್ದಾಗಲೇ ಪದೇಪದೇ ಶ್ವಾಸಕೋಶದ ತೊಂದರೆ ಗಂಟಲು ನೋವು ಹಾಗೂ ಶೀತದ ಸಮಸ್ಯೆ ಕಾಡಲಾರಂಭಿಸಿದೆ ಇದಕ್ಕೆ ಟಾನ್ಸಿಲೈಟಿಸ್ ಮತ್ತುಅಡಿನಾಯ್ಡ್ಸ್ ತೊಂದರೆ ಕಾರಣ ಎಂದು ವೈದ್ಯರು ಹೇಳಿದರು ಹಾಗೂ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಸೂಚಿಸಿದರು. ಇದಕ್ಕೆ ಬೇರೆ ಪರಿಹಾರವಿಲ್ಲವೇ? ಈ ಪ್ರಶ್ನೆಯೊಂದಿಗೆ ಒಬ್ಬ ಪೋಷಕರು ನಮ್ಮಲ್ಲಿ ಬಂದರು.ಅವರಂತೆಯೇ ಸಮಸ್ಯೆ ಹೊತ್ತು ಬರುವವರು ಅನೇಕರಿದ್ದಾರೆ.

ಮೂಗಿನ ಹಿಂದೆ ಇರುವ ಗಂಟಲಿನ ಹಿಂಭಾಗದಲ್ಲಿರುವ ಲಿಂಫ್ ಗ್ರಂಥಿಗಳೇ ಅಡಿನಾಯ್ಡ್ಸ್ ಸೋಂಕುಗಳ ವಿರುದ್ಧ ಹೋರಾಡುವ ರೋಗನಿರೋಧಕ ಶಕ್ತಿಗೆ ಸಹಾಯ ಮಾಡುವ ಲಿಂಫ್ ಟಿಕ್ ವ್ಯವಸ್ಥೆಯ ಭಾಗವಾದ ಈ ಗ್ರಂಥಿಗಳು ಉರಿಯೂತಕ್ಕೆ ಗುರಿಯಾಗುವುದರಿಂದ ಹೀಗಾಗುತ್ತದೆ ಇದುವೇ ಟಾನ್ಸಿಲೈಟಿಸ್ ಮತ್ತು ಅಡಿನಾಯ್ಡ್ಸ್ಎನ್ನುತ್ತಾರೆ ಹೋಮಿಯೋಕೇರ್ ಇಂಟರ್ ನ್ಯಾಷನಲ್ ಸಂಸ್ಥೆಯ ತಜ್ಞರು.

ಅಡಿನಾಯ್ಡ್ಸ್ ಅನುವಂಶಿಕವಾಗಿದ್ದು ಗಂಟಲಿನ ಹಿಂಭಾಗದಲ್ಲಿ ಎರಡು ಗುಳ್ಳೆಗಳ ತರಹದ ರಚನೆ ಇರುತ್ತವೆ, ಇವು ರೋಗಾಣುಗಳನ್ನು ತಡೆಯುತ್ತವೆ.

ಕಾರಣಗಳು:

ರೋಗವನ್ನು ಹರಡಿಸುವ ರೋಗಾಣುಗಳನ್ನು ಎದುರಿಸುವುದರಿಂದ ಈ ಗ್ರಂಥಿಯು ಉರಿಯೂತಕ್ಕೆ ಗುರಿಯಾಗುತ್ತದೆ. ಈ ಟಾನ್ಸಿಲಗಳು ಶ್ವಾಸನಾಳದಲ್ಲಿ ಸೋಂಕು ಉಂಟು ಮಾಡುವುದರಿಂದ ಬೇರೆಲ್ಲ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಟಾನ್ಸಿಲೈಟಿಸ್ ಸಮಸ್ಯೆಯು ಶೇ .85 ರಷ್ಟು ವೈರಸ್ ನಿಂದ ಹಾಗೂ ಶೇ. 15–30 ರಷ್ಟು ಬ್ಯಾಕ್ಟೀರಿಯಾದಿಂದ ಬರುತ್ತವೆ

ಹವಾಮಾನ ಬದಲಾವಣೆ

ಅನುವಂಶಿಕ ಕಾರಣಗಳು ಇರಬಹುದು.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಲಕ್ಷಣಗಳು:

ಗಂಟಲು ನೋವು, ಟಾನ್ಸಿಲ್ಸ್ ಕೆಂಪಾಗುವುದು,

ಟಾನ್ಸಿಲನ ಮೇಲೆ ಹಳದಿ ಹಾಗೂ ಬಿಳಿ ಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುವುದು.

ದವಡೆಯಲ್ಲಿ ಊತ,ಗಂಟಲು ಕಿರಿಕಿರಿ, ಬಾಯಿ ವಾಸನೆ,ತಲೆನೋವು, ಹಸಿವು ಇಲ್ಲದಿರುವುದು. ಕಿವಿನೋವು ಚಳಿ ಮತ್ತು ಜ್ವರ ಧ್ವನಿ ವ್ಯತ್ಯಾಸ ಉಂಟಾಗುವುದಕ್ಕೆ ಕಾರಣ ಅಡಿನಾಯ್ಡ್ಸ್ .

ಮೂಗು ಕಟ್ಟುವುದು ಇದರಿಂದ ಮಕ್ಕಳು ಬಾಯಿಯಿಂದ ಉಸಿರಾಡುವಂತಾಗುತ್ತದೆ.

ಮೂಗು ವಾಸನೆ, ತುಟಿಗಳು ಒಡೆಯುವುದು, ಬಾಯಿ ಒಣಗುವಿಕೆ.

ಶೀತ ಮತ್ತು ಉಸಿರಾಟದ ತೊಂದರೆಗಳು ಕಾಣಿಸಿಕೊಳ್ಳಬಹುದು ಮಲಗುವ ಸಮಯದಲ್ಲಿ ಚಡಪಡಿಕೆ, ಗೊರಕೆ, ನಿದ್ರೆಯಲ್ಲಿ ಉಸಿರಾಟಕ್ಕೆ ಕಷ್ಟ ಆಗುವಂತಹ ಹಲುವು ತೊಂದರೆಗಳನ್ನು ಕೊಡುತ್ತದೆ.

ಹೋಮಿಯೋಕೇರ್ ಚಿಕಿತ್ಸೆ :

ಹೋಮಿಯೋಕೇರ್ ಇಂಟರ್ ನ್ಯಾಷನಲ್ ನಲ್ಲಿ ಅನುವಂಶಿಕ(ಜೆನೆಟಿಕ್) ಸಾಂವಿಧಾನಿಕ (ಕಾನ್ಸ್ಟಿಟ್ಯೂಷನಲ್) ಚಿಕಿತ್ಸೆ ನೀಡುವ ಅವಕಾಶವಿರುತ್ತದೆ. ರೋಗಿಯ ಮಾನಸಿಕ ಮತ್ತು ಶಾರರೀಕ ಲಕ್ಷಣಗಳ ಮೇಲೆ ಸೂಕ್ತ ಚಿಕಿತ್ಸೆ ನೀಡಲಾಗುವುದು ಹೀಗಾಗಿ ಇದು ಹೆಚ್ಚು ಪರಿಣಾಮಕಾರಿ,ವ್ಯಕ್ತಿಯ ಶರೀರದಲ್ಲಿ ರೋಗನಿರೋಧಕ ಶಕ್ತಿಯು ಬಲಗೊಳ್ಳುವಂತೆ ಮಾಡಲಾಗುವುದು. ಮೇಲೆ ಹೇಳಿದಂತೆ ಮಕ್ಕಳಲ್ಲಿ ಕಂಡು ಬರುವ ಸಮಸ್ಯೆಯನ್ನು ಶಸ್ತ್ರ ಚಿಕಿತ್ಸೆ ಇಲ್ಲದೆ ಪರಿಹರಿಸಲಾಗುವುದು

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಇಂಧನ, ರಸಗೊಬ್ಬರ ರಾಜ್ಯಕ್ಕೆ ಆದ್ಯತೆ: ಖೂಬಾ

ಭಗವಂತ ಖೂಬಾ

ಬೆಂಗಳೂರು: ಇಂಧನ ಮತ್ತು ರಸಗೊಬ್ಬರ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಕೇಂದ್ರ ನವೀಕರಿಸಬಹುದಾದ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದರು.

ರಾಜ್ಯ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವೇ ತಿಂಗಳಲ್ಲಿ ಹೊಸ ರಸಗೊಬ್ಬರ ಕಾರ್ಖಾನೆಗಳು ಕಾರ್ಯಾರಂಭ ಮಾಡಲಿವೆ. ಯೂರಿಯಾ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಸಾಧಿಸಲಿದೆ ಎಂದರು.

ಇಫ್ಕೋ ಕಂಪನಿಯು ಕರ್ನಾಟಕದಲ್ಲಿ ನ್ಯಾನೊ ಯೂರಿಯಾ ಉತ್ಪಾದನಾ ಘಟಕ ಆರಂಭಿಸಲು ಈಗಾಗಲೇ ಪ್ರಸ್ತಾವನೆ ಸಲ್ಲಿಸಿದೆ. ಇದಕ್ಕೆ ರಾಜ್ಯ ಸರ್ಕಾರ ಮೂಲಸೌಕರ್ಯ ನೀಡಿದ ಬಳಿಕ ಕಾರ್ಯಾರಂಭ ಮಾಡಲಿದೆ ಎಂದು ತಿಳಿಸಿದರು.

ಶಶಿಕಲಾ ಲಂಚ ಪ್ರಕರಣ: ವರದಿ ಕೇಳಿದ ಹೈಕೋರ್ಟ್


ವಿ.ಕೆ. ಶಶಿಕಲಾ

ಬೆಂಗಳೂರು: ತಮಿಳುನಾಡಿನ ಎಐಎಡಿಎಂಕೆ ನಾಯಕಿ ವಿ.ಕೆ. ಶಶಿಕಲಾ ಅವರು ಪರಪ್ಪನ ಅಗ್ರಹಾರ ಜೈಲಿನಲ್ಲಿ ಲಂಚ ನೀಡಿ ವಿಶೇಷ ಸವಲತ್ತು ಪಡೆಯುತ್ತಿದ್ದರು ಎಂಬ ಆರೋಪ ಪ್ರಕರಣದ ತನಿಖೆಯ ಸ್ಥಿತಿಗತಿ ಬಗ್ಗೆ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸುವಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ(ಎಸಿಬಿ) ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಪ್ರಕರಣದಲ್ಲಿ ಎಸಿಬಿ ಯಾವುದೇ ತನಿಖೆ ನಡೆಸಿಲ್ಲ ಎಂದು ಅರ್ಜಿದಾರರ ಪರ ವಕೀಲರು ನ್ಯಾಯಾಲಯದ ಗಮನ ಸೆಳೆದ ಬಳಿಕ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

‘ಎರಡು ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಬೇಕು’ ಎಂದು ತಿಳಿಸಿದ ಪೀಠ, ಈ ಸಂಬಂಧ ಚೆನ್ನೈನ ಕೆ.ಎಸ್.ಗೀತಾ ಸಲ್ಲಿಸಿದ್ದ ಅರ್ಜಿ ವಿಲೇವಾರಿ ಮಾಡಿತು. ವಿಚಾರಣೆಯನ್ನು ಆ.25ಕ್ಕೆ ಮುಂದೂಡಿತು.

ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ರಕ್ಷಾ ರಾಮಯ್ಯ ಪದಗ್ರಹಣ ಸಮಾರಂಭದಲ್ಲಿ ಸಿದ್ದರಾಮಯ್ಯ

ಮೋದಿ ಎಂದು ಕೂಗುತ್ತಿದ್ದವರು ಈಗೆಲ್ಲಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಹೋದ ಕಡೆಯಲ್ಲೆಲ್ಲಾ ಮೋದಿ, ಮೋದಿ ಎಂದು ಕೂಗುತ್ತಿದ್ದವರೆಲ್ಲಾ ಎಲ್ಲಿ ಹೋದರು, ಏನಾಯಿತು ಅವರ ಕತೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮೋದಿ.. ಮೋದಿ ಎಂದು ಕುಣಿಯುತ್ತಿದ್ದ ಯುವ ಜನರು ಅವರ ಆಡಳಿತ ನೋಡಿ ಭ್ರಮನಿರಸನಗೊಂಡಿದ್ದಾರೆ’ ಎಂದರು.

‘ರಕ್ಷಾ ರಾಮಯ್ಯ ಸಜ್ಜನ, ಸಂಭಾವಿತ ಯುವ ನಾಯಕ. ಕೋಮುವಾದಿಗಳನ್ನು ಖಂಡಿಸುವಾಗ ಆಕ್ರಮಣಕಾರಿಯಾಗಿರಬೇಕು. ಮೋದಿಯಷ್ಟು ಸುಳ್ಳು ಹೇಳುವ, ಜನರನ್ನು ಮೋಸ ಮಾಡುವವರು ಭಾರತದ ರಾಜಕಾರಣದಲ್ಲಿ ಬೇರೆ ಯಾರೂ ಇಲ್ಲ’ ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಇತಿಹಾಸ ಓದಿಲ್ಲ. ಇತಿಹಾಸದ ಕನಿಷ್ಠ ಜ್ಞಾನ ಇದ್ದರೆ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತವರ ಬಗ್ಗೆ ಹಗುರವಾಗಿ ಮಾತನಾಡುತ್ತಿರಲಿಲ್ಲ. ಕೆ.ಎಸ್. ಈಶ್ವರಪ್ಪ ಅಂತಹವರನ್ನು ಪಕ್ಷದಲ್ಲಿ ಇಟ್ಟುಕೊಂಡು ಬಿಜೆಪಿಯವರು ಸಂಭಾವಿತರು, ಸುಸಂಸ್ಕೃತರು ಎಂದು ಹೇಳುತ್ತಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದವರು ಕಾಂಗ್ರೆಸ್ ಪಕ್ಷದವರು ಮಾತ್ರ. ಕಾಂಗ್ರೆಸಿಗ ಎಂಬುದೇ ಹೆಮ್ಮೆಪಡುವ ಸಂಗತಿ ಎಂದರು.

‘ನಮಗೆ ದೇಶಪ್ರೇಮದ ಪಾಠ ಮಾಡುವ ಬಿಜೆಪಿಯವರು ಎಂದಾದರೂ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರತಿಭಟಿಸಿದ್ದಾರೆಯೇ? ಮೊಘಲರು, ಬ್ರಿಟಿಷರ ಆಸ್ಥಾನದಲ್ಲಿ ಪ್ರಮುಖ ಹುದ್ದೆಯಲ್ಲಿ ಇದ್ದವರು ಇದೇ ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ಹಿಂದಿನ ತಲೆಮಾರಿನವರು. ಟಿಪ್ಪು ಆಸ್ಥಾನದಲ್ಲಿ ಪೂರ್ಣಯ್ಯ ದಿವಾನರಾಗಿದ್ದರು. ಟಿಪ್ಪು ಜಯಂತಿ ವಿರೋಧ ಮಾಡುವವರು ಪೂರ್ಣಯ್ಯ ಮತ್ತು ಕೃಷ್ಣಸ್ವಾಮಿ ಅವರನ್ನು ಏಕೆ ವಿರೋಧಿಸುವುದಿಲ್ಲ. ನಾಚಿಕೆಯಾಗಬೇಕು ಬಿಜೆಪಿ ನಾಯಕರಿಗೆ’ ಎಂದರು.

‘ಯುವಕರು, ವಿದ್ಯಾರ್ಥಿಗಳು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು, ಆದಿವಾಸಿಗಳನ್ನು ಒಳಗೊಂಡ ಹೊಸ ಪಡೆ ಕಟ್ಟಬೇಕು’ ಎಂದು ರಕ್ಷಾ ರಾಮಯ್ಯ ಅವರಿಗೆ ತಿಳಿ ಹೇಳಿದರು.

ರಕ್ಷಾ ರಾಮಯ್ಯ ಅವರಿಗೆ ಕಾಂಗ್ರೆಸ್ ಬಾವುಟವನ್ನು ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) ಜಂಟಿ ಕಾರ್ಯದರ್ಶಿ ಕೃಷ್ಣ ಅಳ್ಳವರು ಹಸ್ತಾಂತರಿಸಿದರು. ಮಾಜಿ ಸಚಿವ ಎಂ.ಆರ್. ಸೀತಾರಾಂ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

‘ನೇರವಾಗಿ ವಿಧಾನಸೌಧ ನೋಡಬೇಡಿ’

‘ಯುವ ಮುಖಂಡರು ಬಂದ ಕೂಡಲೇ ವಿಧಾನಸೌಧವನ್ನೇ ನೋಡಬೇಡಿ. ಮೊದಲು ಜಿಲ್ಲಾ ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳ ಮೂಲಕ ರಾಜಕಾರಣ ಆರಂಭಿಸಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಯುವ ಮುಖಂಡರಿಗೆ ಕಿವಿಮಾತು ಹೇಳಿದರು. ‘ಜವಾಹರಲಾಲ್ ನೆಹರು ಅವರು ಮುನ್ಸಿಪಲ್ ಅಧ್ಯಕ್ಷರಾಗಿದ್ದರು. ಕೆಂಗಲ್ ಹನುಮಂತಯ್ಯ ಅವರು ಬೆಂಗಳೂರು ಮುನ್ಸಿಪಲ್ ಸದಸ್ಯರಾಗಿದ್ದರು. ರಾಮಲಿಂಗಾರೆಡ್ಡಿ ಅವರು ಪಾಲಿಕೆ ಸದಸ್ಯರಾಗಿದ್ದರು. ಹೀಗೆ ಕೆಳ ಹಂತದಿಂದ ಒಂದೊಂದೇ ಹೆಜ್ಜೆ ಮೇಲೆ ಬರಬೇಕು’ ಎಂದು ತಿಳಿಸಿದರು. ‘ಮನಮೋಹನ ಸಿಂಗ್ ಮತ್ತು ಸಿದ್ದರಾಮಯ್ಯ ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿಸಿದ್ದರೆ ಯಾವುದೇ ಕಾರಣಕ್ಕೂ ಚುನಾವಣೆಯಲ್ಲಿ ನಾವು ವಿಫಲರಾಗುತ್ತಿರಲಿಲ್ಲ. ಯುವ ನಾಯಕರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕು. ಹಳ್ಳಿ, ಕಾಲೇಜುಗಳಿಗೆ ಹೋಗಿ ನಾಯಕರನ್ನು ಬೆಳೆಸಿ’ ಎಂದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್ ಬೀದರ

No: _SSK/E1/Nalikali Green Board /Tender/2019-20 Dated:- 12.08.2021.

ಅಲ್ಪವಧಿ ಇ–ಟೆಂಡರ ಪ್ರಕಟಣೆ (2ನೇ ಕರೆ)

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕಲ್ಯಾಣ ಕರ್ನಾಟಕ ವಿಭಾಗದ ಅಭಿವೃದ್ಧಿ ಮಂಡಳಿಯವರ ಅನುದಾನದಲ್ಲಿ ಬೀದರ ಜಿಲ್ಲೆಯ 1078 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ನಲಿ–ಕಲಿ ಕೇಂದ್ರಗಳಿಗೆ 1254 ಸಿರಾಮೀಕ್ ಗ್ರೀನ ಬೋರ್ಡಗಳನ್ನು ಖರೀದಿ ಮಾಡುವ ಸಂಬಂಧ ಟೆಂಡರನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ address e-procurement portal viz https://eproc.karnataka.gov.in ಮೂಲಕ ಟೆಂಡರನಲ್ಲಿ ಭಾಗವಹಿಸಲು ಕೋರಲಾಗಿದೆ. ಅರ್ಜಿ ಲಭ್ಯವಾಗುವ ದಿನಾಂಕ: 16–08–2021, ಪ್ರಿ–ಬಿಡ್ ಸಭೆ (ಜಿಲ್ಲಾ ಪಂಚಾಯತ್ ಬೀದರ) ದಿನಾಂಕ: **23–08–2021,** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–08–2021, ಟೆಂಡರಿನ ಒಟ್ಟು ಮೊತ್ತ ರೂ. **106.93** ಲಕ್ಷಗಳು (ಪರಿಷ್ಕೃತ), ಇ.ಎಂ.ಡಿ. ಮೊತ್ತ ರೂ. 2.00 ಲಕ್ಷ.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಬೀದರ.

ವಾ.ಸಾ.ಸಂ.ಇ/ಬೀದರ/135/ಎಂಸಿ&ಎ/2021–22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105,
ಪೋ.ನಂ 08472–278634/256944 Email:eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22/972 ದಿನಾಂಕ : 11–08–2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : ಕಲಬುರಗಿ ತಾಲೂಕಿನ 01 (Indent No 29294 call-2), 2) ಟೆಂಡರಿಗಿಟ್ಟ ಮೊತ್ತ ಕನಿಷ್ಠ : 1,58,21,811/-, ಗರಿಷ್ಠ : 1,58,21,811/-, 3) ಲೆಕ್ಕ ಶಿರ್ಷಿಕೆ: Jal Jeevan Mission 2020-21, 4) ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: 11-08-2021 ರಿಂದ 18-08-2021, 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **18–08–2021** ಸಾಯಂಕಾಲ 4:00 ಗಂಟೆವರೆಗೆ, 8) ಪ್ರೀ ಬಿಡ್ಡ್ ಸಭೆ : **13–08–2021 ಬೆ.11.00 ಗಂಟೆಗೆ,** 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **19–08–2021 ಸಾಯಂಕಾಲ 4:01 ಗಂಟೆವರೆಗೆ,** 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **23–08–2021 ಬೆ. 11.00 ಗಂಟೆಯ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/536/ಎಂ.ಸಿ&ಎ/2021–22

Council of Scientific and Industrial Research
NATIONAL AEROSPACE LABORATORIES
PB No. 1779, HAL Airport Road, Kodihalli,
Bengaluru - 560017. India. Phone: 080-25086046
ISO:9001:2015 Certified

NOTICE INVITING TENDER FOR PROVIDING HOUSEKEEPING AND LAUNDRY SERVICES FOR MAINTENANCE OF GUEST HOUSE AT CSIR-NAL, BENGALURU

No.CSIR-NAL/GH/2021-23/S.VI **August 14, 2021**

CSIR-National Aerospace Laboratories(CSIR-NAL), Bengaluru, a constituent unit of CSIR, New Delhi, under the administrative control of Ministry of Science & Technology, Govt. of India is a premier R&D laboratory in the area of Aerospace. CSIR-NAL invites sealed tenders from Bengaluru based, renowned, experienced, well established and registered agencies/organizations for providing Housekeeping and Laundry Services for maintenance of Guest House at CSIR-NAL, Bengaluru.

For further details, the interested agencies are requested to visit our website **www.nal.res.in.** The tender documents completed in all respects may be dropped in the quotation box on or before 23.08.2021 till 10.00 AM. The technical bid shall be opened at 11.00 AM on 23.08.2021. The Price Bid of those agencies, who are declared as qualified will be opened on 26.08.2021 at 2.00 PM.

The Director, CSIR-NAL, Bengaluru reserves the right to accept or reject any or all the prospective tenders in full or part thereof without assigning any reason whatsoever and his decision on all matters in this regard shall be final and binding.

Sd/-
Controller of Administration

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದಡಿಯಲ್ಲಿನ ಸ್ವಾಯತ್ತ ಸಂಸ್ಥೆ.
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗ, ಭಾರತ ಸರ್ಕಾರ

ಅರ್ಹತೆಗಳು

- ಯಾವ ರಾಜ್ಯ/ಜಿಲ್ಲೆಯ ಜನವಿಯಲ್ಲಿ ಪ್ರವೇಶ ಪಡೆಯಲು ಬಯಸುವರೋ ಅದೇ ಜಿಲ್ಲೆಯ ಸರಕಾರಿ/ಸರಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿಯಲ್ಲಿ ಓದಿರಬೇಕು.
- ಜನ್ಮ ದಿನಾಂಕ 1 ಜೂನ್ 2003 ರಿಂದ 31 ಮೇ 2007ರ ಒಳಗಿರಬೇಕು. (ಎರಡೂ ದಿನಗಳು ಸೇರಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೂ ಸೇರಿದಂತೆ ಎಲ್ಲ ವರ್ಗಗಳ ಅಭ್ಯರ್ಥಿಗಳಿಗೂ ಇದು ಅನ್ವಯಿಸುತ್ತದೆ.

11ನೇ ತರಗತಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಇರುವ ಮಾನದಂಡಗಳು

ನೋಂದಣಿ ತೆರೆದಿದೆ | ಪ್ರವೇಶಕ್ಕಾಗಿ ಮಾನದಂಡ | ಕೊನೆಯ ದಿನಾಂಕ: 26–08–2021

2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳ ಆಧಾರದ ಮೇಲೆ 11ನೇ ತರಗತಿಯಲ್ಲಿ ಖಾಲಿ ಇರುವ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ಪ್ರವೇಶಾವಕಾಶವಿದೆ. ನವೋದಯ ವಿದ್ಯಾಲಯ ಸಮಿತಿಯ ಪ್ರವೇಶ ಮಾನದಂಡಗಳ ಪ್ರಕಾರ ಈ ಕೆಳಗಿನ ಹಂತಗಳಲ್ಲಿ ಆಯ್ಕೆ ನಡೆಯುವುದು:

ಎ) ಜಿಲ್ಲಾವಾರು ಮೆರಿಟ್ ಲಿಸ್ಟ್ ಸಿದ್ಧಪಡಿಸಿ, ಖಾಲಿ ಇರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.
ಬಿ) ಆಯಾ ಜಿಲ್ಲಾ ಮಟ್ಟದ ಖಾಲಿ ಇರುವ ಸ್ಥಾನಗಳಿಗೆ ಭರ್ತಿ ಮಾಡಿದ ನಂತರ, ರಾಜ್ಯ ಮಟ್ಟದಲ್ಲಿ ಒಂದು ಸಾಮಾನ್ಯ ಮೆರಿಟ್ ಲಿಸ್ಟ್‌ನ್ನು ಸಿದ್ಧಪಡಿಸಲಾಗುವುದು

ಗಮನಿಸಿ : ಎನ್‌ಸಿಸಿ, ಸ್ಕೌಟ್ ಮತ್ತು ಗೈಡ್ಸ್ ಹಾಗೂ ಕ್ರೀಡೆಗಳಿಗೆ ಹೆಚ್ಚುವರಿ ಆದ್ಯತೆಯಿದೆ.

ಲಭ್ಯವಿರುವ ಶಾಖೆಗಳು : ವಿಜ್ಞಾನ, ವಾಣಿಜ್ಯ, ವೃತ್ತಿಪರ ಮತ್ತು ಮಾನವಿಕ(ಕಲೆ)

ವಿಶೇಷ ಲಕ್ಷಣಗಳು

- ದೇಶದ ಎಲ್ಲ ಜಿಲ್ಲೆಗಳಲ್ಲಿ ವಸತಿಸಹಿತ ಸಹಶಿಕ್ಷಣ ಶಾಲೆಗಳು (ತಮಿಳುನಾಡನ್ನು ಹೊರತುಪಡಿಸಿ)
- ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್‌ಗಳು
- 10 ಮತ್ತು 12ನೇ ತರಗತಿಗಳಲ್ಲಿ ಅತ್ಯುತ್ತಮ ಫಲಿತಾಂಶ.

* ಉಚಿತ ಶಿಕ್ಷಣ, ಊಟ ಮತ್ತು ವಸತಿ
* ವಲಸೆ ನೀತಿಯ ಮುಖಾಂತರ ಸಾಂಸ್ಕೃತಿಕ ವಿನಿಮಯ
* ಕಂಪ್ಯೂಟರ್ : ವಿದ್ಯಾರ್ಥಿ ಪ್ರಮಾಣ – 1:8

ನವೋದಯ ವಿದ್ಯಾಲಯ ಸಮಿತಿಯಿಂದ ಪ್ರಕಟಣೆ

ಹೆಚ್ಚಿನ ವಿವರಗಳಿಗೆ: www.navodaya.gov.in

ಸರ್ಕಾರಿ ಶಾಲೆಗಳ ಗುಣಮಟ್ಟ ಕುರಿತು ಪೋಷಕರಲ್ಲಿ ನಂಬಿಕೆ ಮೂಡಿಸಬೇಕು–ಆತಿಶಿ ಮರ್ಲೆನಾ

‘ಶಾಲೆಗಳ ಮುಚ್ಚುವಿಕೆಯೇ ವ್ಯವಸ್ಥೆಗೆ ಕನ್ನಡಿ’

• ಮನೋಹರ್ ಎಂ.

ಪ್ರಜಾವಾಣಿ ಸಂದರ್ಶನ

ಆತಿಶಿ ಮರ್ಲೆನಾ, ದೆಹಲಿ ಶಾಸಕಿ

ಬೆಂಗಳೂರು: ‘ದೆಹಲಿ ಸರ್ಕಾರ ಹೊಸ ಸರ್ಕಾರಿ ಶಾಲೆಗಳನ್ನು ತೆರೆಯುತ್ತಿದೆ. ಕರ್ನಾಟಕದಲ್ಲಿ ಮುಚ್ಚುತ್ತಿರುವ ಸರ್ಕಾರಿ ಶಾಲೆಗಳ ಪಟ್ಟಿ ಹೆಚ್ಚುತ್ತಿದೆ. ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ.’

ದೆಹಲಿ ಮತ್ತು ಕರ್ನಾಟಕದ ಸರ್ಕಾರಿ ಶಾಲೆಗಳ ಬಗೆಗಿನ ವ್ಯತ್ಯಾಸದ ಬಗ್ಗೆ ಹೀಗೆ ಸ್ಪಷ್ಟ ಮಾತುಗಳಲ್ಲಿ ಹೇಳಿದವರು ದೆಹಲಿಯ ಶಿಕ್ಷಣ ಕ್ರಾಂತಿಯ ರೂವಾರಿಯೂ ಆಗಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕಿ ಅತಿಶಿ ಮರ್ಲೆನಾ. ಬೆಂಗಳೂರಿಗೆ ಬಂದಿದ್ದ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ, ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡಿದರು.

● ಕೋವಿಡ್ ಕಾಲದಲ್ಲಿ ದೆಹಲಿಯ ಶಿಕ್ಷಣ ವ್ಯವಸ್ಥೆ ಹೇಗಿತ್ತು? ಸರ್ಕಾರಿ ಶಾಲೆ ಮಕ್ಕಳಿಗಾಗಿ ಕೈಗೊಂಡ ಕ್ರಮಗಳು?

‘ದೆಹಲಿಯಲ್ಲಿ ಕೋವಿಡ್ ತೀವ್ರಗೊಂಡಿದ್ದಾಗ ಸರ್ಕಾರಿ ಶಾಲೆಯ ಮಕ್ಕಳಿಗಾಗಿ ಆನ್‌ಲೈನ್ ಶಿಕ್ಷಣ ವ್ಯವಸ್ಥೆ ಜಾರಿ ಮಾಡಿದೆವು. ಮಕ್ಕಳ ಕಲಿಕಾ ವರದಿಯನ್ನು ಪ್ರತಿ ವಾರ ತಾಳೆ ಹಾಕಲಾಯಿತು. ಮೊಬೈಲ್, ಸಂದೇಶಗಳ ಮೂಲಕ ಪೋಷಕರನ್ನು ತಲುಪಿ, ಮಕ್ಕಳಿಗೆ ಅಗತ್ಯ ಕಲಿಕೆಗೆ ಅವರ ಸಹಾಯವನ್ನೂ ಪಡೆದೆವು’.

● ಮೂರನೇ ಅಲೆಯ ಸಂಭವ ಇದೆ. ಶಾಲೆ ತೆರೆಯುವ ಬಗ್ಗೆ ನಿಮ್ಮ ಅಭಿಪ್ರಾಯ?

‘ಸೋಂಕಿನ ಮಧ್ಯೆ ಶಾಲೆ ತೆರೆಯುವುದು ದುಸ್ಸಾಹಸ. ಕೋವಿಡ್‌ನಿಂದಾಗಿ ಶಿಕ್ಷಣಕ್ಕೆ ಭೌತಿಕವಾದ ಬೀಗ ಬಿದ್ದಿದೆ. ವರ್ಷಕ್ಕೆ ಒಮ್ಮೆ ಬೇಸಿಗೆ ರಜೆ ಕಾಣುತ್ತಿದ್ದ ಮಕ್ಕಳು ದೀರ್ಘ ರಜೆಯಲ್ಲಿದ್ದಾರೆ. ಆನ್‌ಲೈನ್ ಶಿಕ್ಷಣದಿಂದ ಅವರು ಕಲಿತಿದ್ದು ಏನು? ಎಂಬುದನ್ನು ಶಾಲೆ ಬಾಗಿಲು ತೆರೆದ ನಂತರ ಮೊದಲು ದೃಢಪಡಿಸಿಕೊಳ್ಳಬೇಕು’.

● ‘ಬ್ರಿಡ್ಜ್ ಕೋರ್ಸ್’ನ ರೂಪುರೇಷೆಗಳೇನು?

‘ಶಾಲೆಗಳನ್ನು ಮರೆತಿರುವ ಮಕ್ಕಳನ್ನು ಶಾಲೆ ತೆರೆದು ಮುಂದಿನ ತರಗತಿಗಳಿಗೆ ದೂಡುವ ಮುನ್ನ, ಅವರ ಕಲಿಕಾ ಮಟ್ಟ ದೃಢಪಡಿಸಿಕೊಳ್ಳಲು ‘ಬ್ರಿಡ್ಜ್ ಕೋರ್ಸ್’ ಆರಂಭಿಸುವುದು ಸೂಕ್ತ. ಪ್ರತಿ ವಿಷಯದ ಮೂಲ ಅಂಶಗಳ ತರಬೇತಿ ನೀಡುವುದರಿಂದ ಅವರ ಕಲಿಕಾ ಗುಣಮಟ್ಟ ಯಾವ ಹಂತದಲ್ಲಿದೆ? ಎಂಬುದನ್ನು ತಿಳಿದುಕೊಳ್ಳಬಹುದು. ದೆಹಲಿಯಲ್ಲಿ ಇದೇ ಯೋಜನೆ ರೂಪಿಸಲಾಗಿದೆ’.

● ದೆಹಲಿ ಮತ್ತು ಕರ್ನಾಟಕದ ಶಿಕ್ಷಣ ವ್ಯವಸ್ಥೆಗಳಲ್ಲಿ ನೀವು ಕಂಡ ವ್ಯತ್ಯಾಸಗಳೇನು?

‘ಸರ್ಕಾರಿ ಶಾಲೆಗಳನ್ನೂ ಉತ್ತಮವಾಗಿ ನಡೆಸಬಹುದು ಎನ್ನುವುದನ್ನು ದೆಹಲಿ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ನಿರೂಪಿಸಿದೆ. ಫಲಿತಾಂಶಗಳಲ್ಲಿ ಖಾಸಗಿ ಶಾಲಾ ಮಕ್ಕಳನ್ನು ಸರ್ಕಾರಿ ಶಾಲೆ ಮಕ್ಕಳು ಹಿಂದಿಕ್ಕಿದ್ದಾರೆ. ಆದರೆ, ಕರ್ನಾಟಕದಲ್ಲಿ ಶೇ 64 ಶಾಲೆಗಳಲ್ಲಿ ಈಗಲೂ ಶೌಚಾಲಯದ ವ್ಯವಸ್ಥೆಯೇ ಇಲ್ಲ.

● ಸರ್ಕಾರಿ ಶಾಲೆಗಳ ಅಭಿವೃದ್ಧಿ ವಿಫಲಗೊಂಡಿರುವುದು ಎಲ್ಲಿ?

‘ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಕೋಟ್ಯಂತರ ಹಣ ಘೋಷಿಸಲಾಗುತ್ತಿದೆ. ಪ್ರತಿ ವರ್ಷ ಮೊತ್ತ ಏರುತ್ತಲೇ ಇದೆ. ಆದರೂ ಶಾಲೆಗಳಲ್ಲಿ ಸೌಕರ್ಯಗಳ ಕೊರತೆ ಎಂದರೆ ಹಣ ಎಲ್ಲಿ ತಲುಪಿದೆ? ಸೌಕರ್ಯಗಳಿಲ್ಲದ ಶಾಲೆಗೆ ಮಕ್ಕಳನ್ನು ಕಳುಹಿಸಲು ಪೋಷಕರು ಹಿಂಜರಿಯುವುದು ಸಹಜ. ಆದರೆ, ಮಕ್ಕಳ ಕೊರತೆಯಿಂದ ಶಾಲೆ ಮುಚ್ಚಿದೆ ಎನ್ನುವ ಸರ್ಕಾರದ ಉತ್ತರ ವಿಪರ್ಯಾಸ.’

● ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನಿಮ್ಮ ಸಲಹೆ?

‘ಬಹುತೇಕ ಸರ್ಕಾರಿ ಶಾಲೆಗಳು ವೆಂಟಿಲೇಟರ್‌ನಲ್ಲಿರುವ ರೋಗಿಗಳ ಸ್ಥಿತಿಯಲ್ಲಿವೆ. ಯಾವ ಸಮಯದಲ್ಲಾದರೂ ಜೀವ ಕಳೆದುಕೊಳ್ಳಬಹುದು. ಕರ್ನಾಟಕದಲ್ಲಿ ಶೇ 20ರಷ್ಟು ವಿದ್ಯಾರ್ಥಿಗಳು ಮಾತ್ರ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದರಿಂದ ಉತ್ತಮ ಶಿಕ್ಷಣ ಪಡೆಯುತ್ತಾರೆ ಎನ್ನುವ ಬಲವಾದ ನಂಬಿಕೆ ದೆಹಲಿ ಜನರಲ್ಲಿ ಮೂಡಿದೆ. ಇಲ್ಲಿರುವ ಪೋಷಕರಿಗೂ ಆ ನಂಬಿಕೆ ಮೂಡಲು ದೆಹಲಿ ಶೈಕ್ಷಣಿಕ ವ್ಯವಸ್ಥೆಯನ್ನು ಇಲ್ಲಿನ ಸರ್ಕಾರ ಅನುಸರಿಸಲಿ’.

ಕರ್ನಾಟಕ ಸರ್ಕಾರ
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
No. 4, 100 Ft. Ring Road, Banashankari 3rd Stage, Bengaluru - 560 085. Ph: 080- 26980100 Fax: 080-26422377
e-mail: dpl.dsert-ka@nic.in Website: https://dsert.kar.nic.in

No: ETC6/Edu/DsertHub.Tender/02/21-22 Date: 12.08.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು, ಇವರಿಂದ E-BID NOTIFICATION FOR OPERATION and COMPREHENSIVE ANNUAL MAINTENANCE CONTRACT (CAMC) OF BROADCASTING HUB AT DSERT ಸಂಬಂಧ ಅರ್ಹ ಬಿಡ್‌ದಾರರಿಂದ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 13.09.2021ರಂದು ಸಂಜೆ 5:30 ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://eproc.karnataka.gov.in ನೋಡಬಹುದು.

ಸಹಿ/–
ನಿರ್ದೇಶಕರು, ರಾಜ್ಯ ಶಿಕ್ಷಣ ತರಬೇತಿ ಮತ್ತು ಸಂಶೋಧನೆ ಇಲಾಖೆ, ಬೆಂಗಳೂರು.

ವಾಸಾಸಂಇ/ಬೆಂ.ನ/1180/MAA Comm/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರವರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ

ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2021–22/843 ದಿನಾಂಕ :– 02–08–2021

ಅಲ್ಪಾವಧಿ ಟೆಂಡರ ಪ್ರಕಟಣೆ - 2020-21 (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ ಇವರಿಂದ 2020–21 ನೇ ಸಾಲಿನ ಜೆ.ಜೆ.ಎಮ್. ಯೋಜನೆಯಡಿಯಲ್ಲಿ ಅಹ್ವಾನಿಸಲಾದ ಐಟಂವಾರು ಟೆಂಡರನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000 ಹಾಗೂ Standard Document ನಂತೆ KW- 1 & KW-2, KW-3, KW-4 ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.

ಉಲ್ಲೇಖ: 1. ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2020–21/1181 ದಿನಾಂಕ:21.12.2020
2.ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2020–21/1138ದಿನಾಂಕ:24.12.2020
3.ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ–ಟೆಂಡರ/2020–21/778ದಿನಾಂಕ:18.11.2020

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿಯ ಕಲಘಟಗಿ ತಾಲೂಕಿನ ಈ ಕೆಳಕಾಣಿಸಿದ ಕಾಮಗಾರಿಗೆ ಟೆಂಡರ ಕರೆಯಲಾಗಿದೆ. ವಿವರ ಈ ಕೆಳಗಿನಂತಿದೆ.

ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)
1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : **16.08.2021 ಸಾಯಂಕಾಲ 4.00 ಘಂಟೆಗೆ**
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **17.08.2021 ಸಾಯಂಕಾಲ 4.30 ಘಂಟೆಗೆ**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ **ಗುತ್ತಿಗೆದಾರರ ಅರ್ಹತೆ: ಅರ್ಹಗುತ್ತಿಗೆದಾರರಿಂದ ಇ–ಪೋರ್ಟಲ್‌ನಲ್ಲಿ ಇದ್ದಂತೆ**

ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ	ವರ್ಗ
1	**Indent No:** 29922 Providing FHTC's to 1982, Households in Mishrikoti habitation of Mishrikoti village in Kalaghatagi taluk, Dharwad district by Augmentation of SVS to Mishrikoti village in Dharwad district(40 LPCD)	407.00	180 ದಿನಗಳು	ಸಾಮಾನ್ಯ

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತೀಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು. ಟೆಂಡರ ಫಾರ್ಮುಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ, ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/– ಕಾರ್ಯನಿವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ.

ವಾ.ಸಾ.ಇ./ಧಾ/615/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಿಯು ಪರೀಕ್ಷೆಗೆ 18,414 ವಿದ್ಯಾರ್ಥಿಗಳು

ಬೆಂಗಳೂರು: ಆಗಸ್ಟ್ 19ರಿಂದ ಸೆಪ್ಟೆಂಬರ್ 3ರವರೆಗೆ ನಡೆಯುವ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ 18,414 ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಪೂರಕ ಪರೀಕ್ಷೆಯ ಸಿದ್ಧತೆ ಕುರಿತು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಮಾತನಾಡಿದ ಅವರು, ‘ಸರಾಸರಿ ಆಧಾರದಲ್ಲಿ ಪ್ರಕಟಿಸಿರುವ ಫಲಿತಾಂಶವನ್ನು ತಿರಸ್ಕರಿಸಿರುವ 900 ವಿದ್ಯಾರ್ಥಿಗಳು ಮತ್ತು 17,514 ಪುನರಾವರ್ತಿತ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ನಡೆಯಲಿದೆ’ ಎಂದರು.

5,546 ಕಾಲೇಜುಗಳ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಎದುರಿಸಲಿದ್ದಾರೆ. 187 ಪರೀಕ್ಷಾ ಕೇಂದ್ರಗಳನ್ನು ಸಜ್ಜುಗೊಳಿಸಲಾಗಿದೆ. ಇದೇ 17ಕ್ಕೂ ಮೊದಲು ಸಿದ್ಧತೆಗಳನ್ನೂ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಒಂದರಿಂದ ಎಂಟನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳನ್ನು ಎರಡು ಹಂತಗಳಲ್ಲಿ ಆರಂಭಿಸುವ ಚಿಂತನೆ ನಡೆದಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಪದವಿ ಪೂರ್ವ ಶಿಕ್ಷಣ ಮಂಡಳಿ ನಿರ್ದೇಶಕಿ ಆರ್. ಸ್ನೇಹಲ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ದಾಖಲಾತಿ ಅವಧಿ ವಿಸ್ತರಣೆ

ಬೆಂಗಳೂರು: ಪ್ರಸಕ್ತ ಸಾಲಿನ (2021–22) ದ್ವಿತೀಯ ಪಿಯು ದಾಖಲಾತಿ ದಿನಾಂಕವನ್ನು ಮತ್ತೆ ವಿಸ್ತರಿಸಲಾಗಿದೆ. ದಂಡ ಶುಲ್ಕವಿಲ್ಲದೆ ಇದೇ 28ರವರೆಗೆ ದಾಖಲಾತಿ ಮಾಡಿಕೊಳ್ಳಬಹುದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ತಿಳಿಸಿದೆ. ₹670 ದಂಡ ಶುಲ್ಕದೊಂದಿಗೆ ಆ.30ರಿಂದ ಸೆ.11ರವರೆಗೆ, ₹2,890 ವಿಶೇಷ ದಂಡ ಶುಲ್ಕದೊಂದಿಗೆ ಸೆ.13ರಿಂದ 25ರವರೆಗೆ ದಿನಾಂಕವನ್ನು ವಿಸ್ತರಿಸಲಾಗಿದೆ. ಈ ಮೊದಲು, ದಾಖಲಾತಿಗೆ ಆ.13 ಕೊನೆಯ ದಿನವಾಗಿತ್ತು.

ಸಂಕ್ಷಿಪ್ತ ಸುದ್ದಿ

ಮಂಗಳೂರಿನಲ್ಲಿ ಎನ್‌ಐಎ ಕಚೇರಿ?

ಮಂಗಳೂರು: ರಾಷ್ಟ್ರೀಯ ತನಿಖಾದಳ (ಎನ್‌ಐಎ) ಕಚೇರಿಯನ್ನು ಮಂಗಳೂರಿನಲ್ಲಿ ಸ್ಥಾಪಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುಳಿವು ನೀಡಿದರು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಭೇಟಿಯ ನಂತರ ಶುಕ್ರವಾರ ಬೆಂಗಳೂರಿಗೆ ಮರಳುವ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ‘ಗೃಹ ಸಚಿವರು ಸದ್ಯದಲ್ಲಿ ಮಂಗಳೂರಿಗೆ ಭೇಟಿ ನೀಡಿ, ಈ ಬಗ್ಗೆ ಪರಿಶೀಲಿಸುವರು’ ಎಂದರು.

ಈಗಾಗಲೇ ಎರಡು ಸಭೆ ನಡೆಸಿ, ವರದಿ ಪಡೆದಿದ್ದಾರೆ. ಮಂಗಳೂರು ಭೇಟಿ ಬಳಿಕ ತೀರ್ಮಾನಿಸಲಾಗುವುದು. ಸರ್ಕಾರ ಈಗಾಗಲೇ ಕೆಲವು ಹೆಜ್ಜೆಗಳನ್ನು ಇಟ್ಟಿದೆ. ಎಲ್ಲವನ್ನೂ ಬಹಿರಂಗಗೊಳಿಸಲು ಆಗದು’ ಎಂದು ಹೇಳಿದರು.

‘ನಾನು ಎಲ್ಲ ಕಾಂಗ್ರೆಸಿಗರಿಗೆ ಬೈದಿಲ್ಲ’

ಶಿವಮೊಗ್ಗ: ‘ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಅವರನ್ನು ಮಾತ್ರ ನಾನು ಬೈದಿದ್ದೇನೆ. ಇಡೀ ಕಾಂಗ್ರೆಸಿಗರಿಗೆ ಅಲ್ಲ. ಕಾಂಗ್ರೆಸ್‌ನವರು ಬೇಕು ಅಂತ ಇದನ್ನು ದೊಡ್ಡ ವಿಷಯ ಮಾಡುತ್ತಿದ್ದಾರೆ’ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೋದಿ ವಿರುದ್ಧ ಮಾತನಾಡಿದ್ದಕ್ಕೆ ಸಿಟ್ಟಿನಲ್ಲಿ ಆ ಪದ ಬಳಸಿದೆ. ತಕ್ಷಣವೇ ಕ್ಷಮೆ ಕೇಳಿದ್ದೇನೆ. ಬಿ.ಕೆ.ಹರಿಪ್ರಸಾದ್ ಅವರು ಸುಲಭ್ ಶೌಚಾಲಯಕ್ಕೆ ಮೋದಿ ಹೆಸರು ಇಡಬೇಕೆಂದು ವ್ಯಂಗ್ಯವಾಗಿ ಹೇಳಿರುವುದು ಎಷ್ಟು ಸರಿ? ಹರಿಪ್ರಸಾದ್ ವಿರುದ್ಧ ಕಾಂಗ್ರೆಸ್ ಏನು ಕ್ರಮ ಕೈಗೊಳ್ಳುತ್ತದೆ’ ಎಂ ದರು.

‘ನೆಹರೂ ಹುಕ್ಕಾ ಸೇದುತ್ತಿದ್ದು ತಪ್ಪೋ, ನಾನು ಹೇಳಿದ್ದು ತಪ್ಪೋ?’

ಚಿಕ್ಕಮಗಳೂರು: ‘ಹುಕ್ಕಾ ಬಾರ್ ಬಗ್ಗೆ ನಾನು ಮಾತನಾಡಿದ್ದಕ್ಕೆ ಕಾಂಗ್ರೆಸ್‌ನವರಿಗೆ ಉರಿ ಹತ್ತಿಕೊಂಡಿದೆ. ನೆಹರೂ ಹುಕ್ಕಾ ಸೇದುತ್ತಿದ್ದು ತಪ್ಪೋ, ಸಿ.ಟಿ.ರವಿ ಹೇಳಿದ್ದು ತಪ್ಪೋ? ನಾನು ಹೇಳಿದ್ದು ತಪ್ಪು ಎನ್ನುವುದಾದರೆ, ನೆಹರೂ ಸೇದಿದ್ದು ತಪ್ಪಲ್ಲವೇ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನೆಹರೂ, ಇಂದಿರಾಗಾಂಧಿ ಬಗ್ಗೆ ನಾನು ಮಾತನಾಡಿದ್ದನ್ನು ತಪ್ಪು ಎಂದು ಹೇಳಿರುವ ಸಿದ್ದರಾಮಯ್ಯ ಅವರು ಇಂದಿರಾಗಾಂಧಿ ಬಗ್ಗೆ ಮಾತನಾಡಿದ್ದ ಹಳೆಯ ಭಾಷಣಗಳ ಪ್ರತಿಗಳನ್ನು ಹಾಕಿಸ್ಲಾ? ಸಿ.ಎಂ.ಇಬ್ರಾಹಿಂ ಅವರು ಏನೆಂದು ಕರೆದಿದ್ದರು ಎಂದು ಹೇಳ್ಲಾ? ನಾನು ಆ ಮಟ್ಟಕ್ಕೆ ಇಳಿದಿಲ್ಲ’ ಎಂದು ಸಮರ್ಥಿಸಿಕೊಂಡರು.

‘ನಿಯತ್ತಿಲ್ಲದ ಶಾಸಕ ಎನ್. ಮಹೇಶ್’

ಮೈಸೂರು: ‘ಶಾಸಕ ಎನ್.ಮಹೇಶ್ ಅವರು ಬಿಎಸ್‌ಪಿಯಲ್ಲಿ ನಿಯತ್ತಿನಿಂದ ಇರಲಿಲ್ಲ. ಕನಿಷ್ಠ ಬಿಜೆಪಿಗಾದರೂ ನಿಯತ್ತು ತೋರಲಿ ಇರಲಿ’ ಎಂದು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ತಿಳಿಸಿದರು.

‘ಹೈಕಮಾಂಡ್ ಹೇಳಿದ ತಕ್ಷಣ ನಿಯತ್ತಿನಿಂದ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಿ.ಎಸ್. ಯಡಿಯೂರಪ್ಪ ಅವರನ್ನು ನೋಡಿಯಾದರೂ ಮಹೇಶ್ ಕಲಿಯಬೇಕು’ ಎಂದು ಅವರು ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಚಾಟಿ ಬೀಸಿದರು.

ಬೃಹತ್ ನಗರಗಳಾದ ಕಂದಹಾರ್, ಹೆರಾತ್ ನಿಯಂತ್ರಣಕ್ಕೆ ತೆಗೆದುಕೊಂಡ ತಾಲಿಬಾನ್: ಕಮಾಂಡರ್ ವಶ

ಕಾಬೂಲ್ ಸಮೀಪಿಸಿದ ತಾಲಿಬಾನ್ ಉಗ್ರರು

ಕಾಬೂಲ್(ರಾಯಿಟರ್ಸ್/ ಪಿಟಿಐ): ಅಫ್ಗಾನಿಸ್ತಾನದಲ್ಲಿ ಪ್ರಾಬಲ್ಯ ಸಾಧಿಸಿ ಹಲವು ನಗರಗಳನ್ನು ವಶಕ್ಕೆ ತೆಗೆದುಕೊಂಡಿರುವ ತಾಲಿಬಾನ್, ಈಗ ರಾಜಧಾನಿ ಕಾಬೂಲ್‌ನತ್ತ ಧಾವಿಸುತ್ತಿದೆ.

ಕಾಬೂಲ್‌ನಿಂದ ಕೇವಲ 50 ಕಿಲೋ ಮೀಟರ್ ದೂರದಲ್ಲಿರುವ ಲೋಗಾರ್ ಪ್ರಾಂತ್ಯವನ್ನು ವಶಪಡಿಸಿಕೊಳ್ಳುವ ಮೂಲಕ ದೇಶದ ಆಡಳಿತದ ಚುಕ್ಕಾಣಿ ಹಿಡಿಯುವ ಗುರಿ ಸಾಧಿಸುತ್ತಿದೆ. ಪ್ರಸ್ತುತ ಮೂರನೇ ಎರಡರಷ್ಟು ಹೆಚ್ಚು ಪ್ರದೇಶವನ್ನು ತಾಲಿಬಾನ್ ಆಕ್ರಮಿಸಿಕೊಂಡಿದೆ.

ದೇಶದ ಎರಡನೇ ಮತ್ತು ಮೂರನೇ ಬೃಹತ್ ನಗರಗಳಾದ ಹೆರಾತ್ ಮತ್ತು ಕಂದಾಹಾರ್ ವಶಪಡಿಸಿಕೊಂಡಿದೆ. ಜತೆಗೆ, ಹೆಲ್ಮಂಡ್, ಲಷ್ಕರ್ ಗಾಹ್, ಖಲಾತ್, ಫಿರೊಝ್ ಕೊಹ್, ಟಿರಿನ್ ಕಾಟ್, ಉರುಝ್ಗಾನ್ ಪ್ರಾಂತ್ಯಗಳ ರಾಜಧಾನಿಗಳನ್ನು ಸಹ ಶುಕ್ರವಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಇದರಿಂದ, ಅಫ್ಗನ್ ಸೇನೆ ತೀವ್ರ ಹಿನ್ನಡೆಯಾಗಿದೆ.

ಲಷ್ಕರ್ ಗಾಹ್ ಹೊರಗೆ ಇರುವ ಸೇನೆಯ ಮೂರು ನೆಲೆಗಳು ಮಾತ್ರ ಸರ್ಕಾರದ ನಿಯಂತ್ರಣದಲ್ಲಿವೆ ಎಂದು ಹೆಲ್ಮಂಡ್ ಪ್ರಾಂತ್ಯ ಮಂಡಳಿಯ ಮುಖ್ಯಸ್ಥ ಅತ್ತೌಲ್ಲಾ ಅಫ್ಗನ್ ತಿಳಿಸಿದ್ದಾರೆ.

ಇರಾನ್ ಗಡಿ ಸಮೀಪ ಇರುವ ಹೆರಾತ್ ನಗರ ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಇಲ್ಲಿನ ಹೆರಾತ್ ವಿಮಾನ ನಿಲ್ದಾಣದಿಂದ ವಾಪಸ್ ತೆರಳುವುದಾಗಿ ಸೇನಾ ಪಡೆಗಳೇ ಒಪ್ಪಿಕೊಂಡ ಬಳಿಕ ತಾಲಿಬಾನ್ ಅದನ್ನು ವಶಪಡಿಸಿಕೊಂಡಿದೆ.

ಶರಣಾಗತರಾಗುವ ಅಧಿಕಾರಿಗಳಿಗೆ ಯಾವುದೇ ರೀತಿಯ ಜೀವಹಾನಿ ಮಾಡುವುದಿಲ್ಲ ಎಂದು ತಾಲಿಬಾನ್ ತಿಳಿಸಿದೆ ಎಂದು ಹೆರಾತ್ ಪ್ರಾಂತ್ಯದ ಸ್ಥಳೀಯ ಮುಖಂಡರು ತಿಳಿಸಿದ್ದಾರೆ.

'ಹೆರಾತ್ ಈಗ ಯುದ್ಧ ಭೂಮಿ ರೀತಿಯಲ್ಲಿ ಕಾಣಿಸುತ್ತಿದೆ. ವಾಣಿಜ್ಯ ನಗರ ಬಿಕೋ ಎನ್ನುತ್ತಿದೆ. ಬಹುತೇಕ ಮಂದಿ ಮನೆಯಲ್ಲಿ ಅಡಗಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

ಪರಿಸ್ಥಿತಿ ದಿನೇ ದಿನೇ ತೀವ್ರ ಹದಗೆಡುತ್ತಿರುವುದರಿಂದ, ಕಾಬೂಲ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಸ್ಥಳಾಂತರಿಸಲು ತನ್ನ ಮೂರು ಸಾವಿರ ಯೋಧರನ್ನು ಅಫ್ಗಾನಿಸ್ತಾನಕ್ಕೆ ಕಳುಹಿಸಲು ಉದ್ದೇಶಿಸಿದೆ.

ಬ್ರಿಟನ್ ಮತ್ತು ಕೆನಡಾ ಸಹ ತಮ್ಮ ನಾಗರಿಕರಿಗೆ ನೆರವಾಗಲು ವಿಶೇಷ ಪಡೆಯ ಯೋಧರನ್ನು ಕಳುಹಿಸಲು ನಿರ್ಧರಿಸಿವೆ.

ಕಮಾಂಡರ್ ವಶಕ್ಕೆ: ಹೆರಾತ್‌ನ ಕಮಾಂಡರ್ ಇಸ್ಮಾಯಿಲ್ ಖಾನ್ ಅವರನ್ನು ತಾಲಿಬಾನ್ ವಶಕ್ಕೆ ತೆಗೆದುಕೊಂಡಿದೆ. ಉಗ್ರರ ವಶದಲ್ಲಿರುವ ಖಾನ್ ಅವರ ಚಿತ್ರ ಮತ್ತು ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಬಿಡುಗಡೆ ಮಾಡಲಾಗಿದೆ.

ಸೇನೆಯಲ್ಲಿ ಭ್ರಷ್ಟಾಚಾರ: 'ಮಿತಿಮೀರಿದ ಭ್ರಷ್ಟಾಚಾರ, ಆಡಳಿತ ವೈಫಲ್ಯ, ಶಸ್ತ್ರಾಸ್ತ್ರಗಳ ಕೊರತೆ ಮತ್ತು ಆಕ್ರಮಣಕಾರಿ ಹೋರಾಟ ನಡೆಸಲು ಪ್ರೇರಣೆ ನೀಡದಿರುವುದರಿಂದ ಅಫ್ಗನ್ ಸೇನೆ ತಾಲಿಬಾನ್ ಎದುರಿಸಲು ಸಾಧ್ಯವಾಗಿಲ್ಲ' ಎಂದು ಅಮೆರಿಕದ ಫೌಂಡೇಷನ್ ಫಾರ್ ಡಿಫೆನ್ಸ್ ಆಫ್ ಡೆಮಾಕ್ರಸಿಸ್‌ನ ಬಿಲ್ ರಾಗ್ಗಿಯೊ ಅಭಿಪ್ರಾಯಪಟ್ಟಿದ್ದಾರೆ.

- ಹೆರಾತ್‌ನಲ್ಲಿ ಭಾರತ ₹1,775 ಕೋಟಿ ವೆಚ್ಚದಲ್ಲಿ ನಿರ್ಮಿಸಿದ್ದ ಸಲ್ಮಾ ಅಣೆಕಟ್ಟು ತಾಲಿಬಾನ್ ನಿಯಂತ್ರಣಕ್ಕೆ
- ಕಂದಾಹಾರ್ ಕಾರಾಗೃಹದ ಮೇಲೆ ದಾಳಿ: ಕೈದಿಗಳ ಬಿಡುಗಡೆ ಮಾಡಿದ ತಾಲಿಬಾನ್ ಉಗ್ರರು
- ಕಂದಾಹಾರ್‌ನಲ್ಲಿ ರಾಜ್ಯಪಾಲರ ಕಚೇರಿ ಮತ್ತು ಸರ್ಕಾರಿ ಕಟ್ಟಡಗಳು ವಶಕ್ಕೆ, ರಾಜ್ಯಪಾಲರು ಮತ್ತು ಅಧಿಕಾರಿಗಳು ಕಾಬೂಲ್‌ಗೆ ಪರಾರಿ
- ತಕ್ಷಣವೇ ಅಫ್ಗಾನಿಸ್ತಾನ ತೊರೆಯುವಂತೆ ತನ್ನ ನಾಗರಿಕರಿಗೆ ಅಮೆರಿಕ ರಾಯಭಾರ ಕಚೇರಿ ಸೂಚನೆ
- ಮಝರ್–ಇ–ಷರೀಫ್ ನಗರ ಸದ್ಯ ಸರ್ಕಾರದ ನಿಯಂತ್ರಣದಲ್ಲಿ

ನಮ್ಮ ಕನಸುಗಳು ನಾಶವಾಗುತ್ತಿವೆ. ಅದೇ ರೀತಿ, ಇತಿಹಾಸ, ಭವಿಷ್ಯ, ಕಲೆ, ಸಂಸ್ಕೃತಿ, ಬದುಕು ಸೇರಿದಂತೆ ಎಲ್ಲವೂ ನಾಶವಾಗುತ್ತಿದೆ. ಯಾರಾದರೂ ಈ ನಾಶ ತಡೆಯಲು ಪ್ರಯತ್ನಿಸಿ

ರಾದಾ ಅಕ್ಬರ್, ಅಫ್ಗಾನಿಸ್ತಾನದ ಮಹಿಳೆ

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಮ್ಮ ಸೇನಾ ಪಡೆಗಳು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಟ ನಡೆಸುತ್ತಿವೆ

ಅಫ್ಗಾನಿಸ್ತಾನ ಸರ್ಕಾರದ ವಕ್ತಾರ

ಘರ್ಝ್ನಿ ನಗರದಲ್ಲಿ ಶರಣಾಗತ ಅಫ್ಗಾನಿಸ್ತಾನದ ಯೋಧರನ್ನು ಕಾವಲು ಕಾಯುತ್ತಿರುವ ತಾಲಿಬಾನಿಗಳು ಎಪಿ/ಪಿಟಿಐ ಚಿತ್ರ

ನಾಗರಿಕರಿಗೆ 'ಕ್ರೂರ' ಆಡಳಿತದ ಭೀತಿ

ತಾಲಿಬಾನ್ ಮತ್ತೊಮ್ಮೆ ಕ್ರೂರ ಮತ್ತು ದಮನಕಾರಿ ನೀತಿಯ ಆಡಳಿತ ನಡೆಸುವ ಭೀತಿಯಿಂದ ಅಫ್ಗಾನಿಸ್ತಾನದ ಹಲವೆಡೆ ಸಾವಿರಾರು ನಾಗರಿಕರು ತಮ್ಮ ಮನೆಗಳನ್ನು ತೊರೆದಿದ್ದಾರೆ.

ಮಹಿಳೆಯರ ಹಕ್ಕುಗಳನ್ನು ಕಸಿಯಲಿದ್ದಾರೆ ಮತ್ತು ಸಾರ್ವಜನಿಕವಾಗಿ ಗಲ್ಲಿಗೇರಿಸುವ ಶಿಕ್ಷೆಗಳನ್ನು ಜಾರಿಗೊಳಿಸುವ ಭೀತಿ ನಾಗರಿಕರನ್ನು ಕಾಡುತ್ತಿದೆ.

ಕಳೆದ ತಿಂಗಳು, ಕಂದಹಾರ್‌ನ ಅಝಿಜಿ ಬ್ಯಾಂಕ್‌ಗೆ ನುಗ್ಗಿದ ತಾಲಿಬಾನಿಗಳು, ಇನ್ನು ಮುಂದೆ ಕಾರ್ಯನಿರ್ವಹಿಸದಂತೆ ಒಂಬತ್ತು ಮಹಿಳೆಯರಿಗೆ ಆದೇಶ ನೀಡಿದ್ದರು. 1996ರಿಂದ 2001ರವರೆಗಿನ ತಾಲಿಬಾನ್ ಆಳಿತಾವಧಿಯಲ್ಲಿ ಮಹಿಳೆಯರು ಕೆಲಸಕ್ಕೆ ತೆರಳದಂತೆ ನಿರ್ಬಂಧ ವಿಧಿಸಲಾಗಿತ್ತು. ಬಾಲಕಿಯರಿಗೂ ಶಾಲೆಗೆ ಹೋಗಲು ಅವಕಾಶ ನೀಡಿರಲಿಲ್ಲ. ಮನೆಯಿಂದ ಹೊರಗೆ ಹೋಗುವಾಗ ತಮ್ಮ ಸಂಬಂಧಿಕ ಪುರುಷರ ಜತೆಗೆ ಮಾತ್ರ ತೆರಳಬೇಕಾಗಿತ್ತು.

'ಬಲಪ್ರಯೋಗದ ಸರ್ಕಾರಕ್ಕೆ ಮಾನ್ಯತೆ ಇಲ್ಲ'

ವಾಷಿಂಗ್ಟನ್ (ಪಿಟಿಐ): ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅಟ್ಟಹಾಸ ಹೆಚ್ಚುತ್ತಿರುವ ನಡುವೆಯೇ, ಬಲ ಪ್ರಯೋಗದ ಮೂಲಕ ರಚನೆಯಾಗುವ ಯಾವುದೇ ಸರ್ಕಾರಕ್ಕೆ ಮಾನ್ಯತೆ ನೀಡದಿರಲು ಭಾರತ, ಅಮೆರಿಕ ಹಾಗೂ ಚೀನಾ ಸೇರಿದಂತೆ 12 ರಾಷ್ಟ್ರಗಳು ನಿರ್ಧರಿಸಿವೆ.

ವಿಶ್ವಸಂಸ್ಥೆ ಹಾಗೂ ಐರೋಪ್ಯ ಒಕ್ಕೂಟ ಸಹ ಈ ನಿರ್ಧಾರಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಅಫ್ಗಾನಿಸ್ತಾನದಲ್ಲಿ ಶಾಂತಿ ನೆಲೆಸುವಂತೆ ಮಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಕತಾರ್‌ನ ದೋಹಾದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ರಾಷ್ಟ್ರಗಳು ಈ ಮಹತ್ವದ ನಿರ್ಧಾರಕ್ಕೆ ಬಂದಿವೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿದೆ.

ಉಜ್ಬೆಕಿಸ್ತಾನ, ಪಾಕಿಸ್ತಾನ, ಬ್ರಿಟನ್, ಜರ್ಮನಿ, ನಾರ್ವೆ, ತಜಕಿಸ್ತಾನ, ಟರ್ಕಿ ಹಾಗೂ ತುರ್ಕ್‌ಮೆನಿಸ್ತಾನ ರಾಷ್ಟ್ರಗಳ ಪ್ರತಿನಿಧಿಗಳು ಸಹ ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು. 'ಶಾಂತಿ ನೆಲೆಸುವಂತೆ ಮಾಡುವ ಪ್ರಯತ್ನಗಳಿಗೆ ವೇಗ ನೀಡಬೇಕು ಎಂಬುದಕ್ಕೆ ಎಲ್ಲ ದೇಶಗಳ ಪ್ರತಿನಿಧಿಗಳು ಸಹಮತ ವ್ಯಕ್ತಪಡಿಸಿದರು' ಎಂದು ವಿದೇಶಾಂಗ ಇಲಾಖೆ ವಕ್ತಾರ ನೆಡ್ ಪ್ರೈಸ್ ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ನೇರ ಮಾತುಕತೆ: ಬಿಗ್ ಬಾಸ್ ಕನ್ನಡ ಸೀಸನ್ 8ರ ಟಾಪ್ 5 ಸ್ಪರ್ಧಿಗಳಲ್ಲೊಬ್ಬರಾದ **ಪ್ರಶಾಂತ್ ಸಂಬರಗಿ** ಜೊತೆಗೆ
ಸಂಜೆ 4.30 – 5.30



ಜಸ್ಟ್ ಮ್ಯೂಸಿಕ್
ಸಂಗೀತ ವಿಜ್ಞಾನಿಗೆ ಡಾ.ರಾಜ್ ಸ್ಪರ್ಶ!
https://bit.ly/37HJwWs

ಪಾಡ್‌ಕಾಸ್ಟ್: ಇಂದಿನ ವಿಶೇಷ: **ಹರಟೆ ಕಟ್ಟೆ,** ಪ್ರತೀ ದಿನ: **ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಸ್ವಾತಂತ್ರ್ಯದ ಅಮೃತ ಮಹೋತ್ಸವ: **ರಾಜ್ಯದ ಮೂಲೆ ಮೂಲೆಯ ಚಿಣ್ಣರ ಹಾಡು.,** ಕಾರ್ಯಕ್ರಮ ವಿನ್ಯಾಸ: **ಶ್ರೀನಿವಾಸ ಜಿ ಕಪ್ಪಣ್ಣ.** ಸಂಗೀತ ವಿನ್ಯಾಸ: **ರಮಾ ಪುಸ್ತಕಂ.** ಸಂಘಟನೆ-ಸಮನ್ವಯ: **ಡಾ.ನಿರಂಜನಾರಾಧ್ಯ ವಿ.ಪಿ.,** ಸಹಕಾರ: **ರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ.**
ಬೆಳಿಗ್ಗೆ 10ರಿಂದ

ರಂಗಭೂಮಿಯ ಕಾಲ ಮುಗಿಯಿತೆ?: ಒಂದು ಗಂಭೀರ ಚರ್ಚೆ, ಭಾಗವಹಿಸುವವರು: **ಅಡ್ಡಂಡ ಕಾರ್ಯಪ್ಪ,** ನಿರ್ದೇಶಕ, ಮೈಸೂರು ರಂಗಾಯಣ., **ಜೆ.ಲೋಕೇಶ್,** ಮಾಜಿ ಅಧ್ಯಕ್ಷ, ಕರ್ನಾಟಕ ನಾಟಕ ಅಕಾಡೆಮಿ., **ರಜನಿ ಗರುಡ,** ನಟಿ, ನಿರ್ದೇಶಕಿ., **ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ,** ನಿರ್ದೇಶಕ,. **ಮಲ್ಲಿಕಾರ್ಜುನ ಕಡಕೋಳ,** ವೃತ್ತಿ ರಂಗಭೂಮಿ ತಜ್ಞ. **ಬೆಳಿಗ್ಗೆ 10.30 ರಿಂದ 12.30** ಮತ್ತು ನೀವು
ಕ್ಲಬ್ ಹೌಸ್ ಪ್ರಜಾವಾಣಿ ಆಲದಮರ

ಖಾತೆ 'ಲಾಕ್' ಮಾಡಿದ ಪ್ರಕರಣ: ರಾಹುಲ್ ಏಟು, ಬಿಜೆಪಿ ತಿರುಗೇಟು

'ಟ್ವಿಟರ್ ಕ್ರಮ ಪ್ರಜಾಪ್ರಭುತ್ವಕ್ಕೆ ಮಾರಕ'

ರಾಹುಲ್ ಗಾಂಧಿ ಅವರ ಟ್ವಿಟರ್ ಖಾತೆಯನ್ನು 'ಲಾಕ್' ಮಾಡಿರುವುದು ರಾಜಕೀಯ ಆರೋಪ-ಪ್ರತ್ಯಾರೋಪಗಳಿಗೆ ಕಾರಣವಾಗಿದೆ. ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದು ರಾಹುಲ್ ಆರೋಪಿಸಿದ್ದಾರೆ. ದೇಶದ ಕಾನೂನನ್ನು ಪಾಲಿಸಿ ಎಂದು ಬಿಜೆಪಿ ತಿರುಗೇಟು ನೀಡಿದೆ. ಸಾಮಾಜಿಕ ಜಾಲತಾಣಗಳಲ್ಲೂ ಇದು ವ್ಯಾಪಕವಾಗಿ ಚರ್ಚೆಯಾಗುತ್ತಿದೆ

'ಪ್ರಜಾಪ್ರಭುತ್ವಕ್ಕೆ ಮಾರಕ'

ನನ್ನ ಟ್ವಿಟರ್ ಖಾತೆಯನ್ನು ಸ್ಥಗಿತಗೊಳಿಸುವ ಮೂಲಕ, ನಾವು ಹೇಗೆ ರಾಜಕಾರಣ ಮಾಡಬೇಕು ಎಂಬುದನ್ನು ಟ್ವಿಟರ್ ನಿರ್ದೇಶಿಸುತ್ತಿದೆ. ನಮ್ಮ ದೇಶದಲ್ಲಿ ವಾಣಿಜ್ಯ ವಹಿವಾಟು ನಡೆಸುತ್ತಿರುವ ಕಂಪೆನಿಯು, ನಮ್ಮ ರಾಜಕಾರಣವನ್ನು ನಿರ್ದೇಶಿಸುತ್ತಿದೆ. ಒಬ್ಬ ರಾಜಕಾರಣಿಯಾಗಿ ನಾನು ಇದನ್ನು ಒಪ್ಪುವುದಿಲ್ಲ. ಇದು ರಾಹುಲ್ ಗಾಂಧಿ ಮೇಲೆ ಮಾತ್ರ ನಡೆಸಿದ ದಾಳಿಯಲ್ಲ. ನನಗೆ ಟ್ವಿಟರ್‌ನಲ್ಲಿ 2 ಕೋಟಿ ಫಾಲೋವರ್‌ಗಳು ಇದ್ದಾರೆ. ಅಭಿಪ್ರಾಯ ಕೇಳುವ ಅವರ ಹಕ್ಕನ್ನು ನೀವು ನಿರಾಕರಿಸಿದ್ದೀರಿ. ಇದು ಪ್ರಜಾಪ್ರಭುತ್ವಕ್ಕೆ ಮಾರಕ. ಟ್ವಿಟರ್ ಅಪಾಯಕಾರಿಯಾದ ಆಟವನ್ನು ಆಡುತ್ತಿದೆ. ನಮ್ಮ ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಸಂಸತ್ತಿನಲ್ಲಿ ಮಾತನಾಡಲೂ ನಮಗೆ ಅವಕಾಶ ನೀಡುತ್ತಿಲ್ಲ. ಮಾಧ್ಯಮಗಳನ್ನೂ ನಿಯಂತ್ರಿಸಲಾಗುತ್ತಿದೆ. ಕನಿಷ್ಠಪಕ್ಷ ಟ್ವಿಟರ್‌ನಲ್ಲಾದರೂ ನಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶವಿದೆ ಎಂದುಕೊಂಡಿದ್ದೆ. ಆದರೆ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿದೆ. ನನ್ನ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ ಇದೇ ರೀತಿಯ ಟ್ವೀಟ್ ಮಾಡಿರುವ ಬಿಜೆಪಿ ನಾಯಕರ ವಿರುದ್ಧ ಟ್ವಿಟರ್ ಯಾವುದೇ ಕ್ರಮ ತೆಗೆದುಕೊಂಡಿಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ಸಂಸದ

'ಟ್ವಿಟರ್‌ನಿಂದಲೂ ಹೊರಗಟ್ಟಲಾಗಿದೆ'

ರಾಹುಲ್ ಗಾಂಧಿ ಟ್ವಿಟರ್‌ನಲ್ಲಿ ಮಾತ್ರವೇ ಸಕ್ರಿಯವಾಗಿದ್ದರು. ಈಗ ಅಲ್ಲಿಂದಲೂ ಅವರನ್ನು ಹೊರಗಟ್ಟಲಾಗಿದೆ. ಅತ್ಯಾಚಾರ ಸಂತ್ರಸ್ತ ಬಾಲಕಿಯ ಕುಟುಂಬದವರ ಗುರುತನ್ನು ಬಹಿರಂಗಪಡಿಸುವುದು ಕಾನೂನುಬಾಹಿರ, ಅಸಭ್ಯ ಮತ್ತು ಅಮಾನವೀಯ. ಆ ಕೃತ್ಯವನ್ನು ರಾಹುಲ್ ಅವರು ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಮರೆಮಾಚಲು ಸಾಧ್ಯವಾಗುವುದಿಲ್ಲ. ಮೋದಿ ಅವರು ರಚಿಸಿರುವ ದೇಶದ ಕಾನೂನನ್ನು ರಾಹುಲ್ ಮತ್ತು ಕಾಂಗ್ರೆಸ್ಸಿಗರು ಪಾಲಿಸಲಿ. ನಂತರ ತಮ್ಮ ಖಾತೆಯನ್ನು ಅನ್‌ಲಾಕ್ ಮಾಡಲು ಯತ್ನಿಸಲಿ

ತೇಜಸ್ವಿ ಸೂರ್ಯ, ಬಿಜೆಪಿ ಸಂಸದ ಮತ್ತು ಬಿಜೆಪಿ ಯುವಮೋರ್ಚಾ ರಾಷ್ಟ್ರೀಯ ಅಧ್ಯಕ್ಷ

'ಡಿಸ್ನಿ ರಾಜಕುಮಾರ...'

ಡಿಸ್ನಿ ರಾಜಕುಮಾರ ರಾಹುಲ್ ಗಾಂಧಿ ಅವರು ತಮ್ಮ ರಾಜಕಾರಣಕ್ಕಾಗಿ, ಅತ್ಯಾಚಾರ ಸಂತ್ರಸ್ತೆಯ ಕುಟುಂಬದವರ ವಿವರ ಬಹಿರಂಗಪಡಿಸಬಾರದಿತ್ತು. ಇದು ಡಿಸ್ನಿ ಪ್ರಪಂಚವಲ್ಲ, ಬದಲಿಗೆ ನಿಜವಾದ ಪ್ರಪಂಚ ಎಂಬುದನ್ನು ರಾಹುಲ್ ಅರ್ಥಮಾಡಿಕೊಳ್ಳಬೇಕಿತ್ತು

ತರುಣ್ ಛೂಘ್, ಬಿಜೆಪಿ ಪ್ರಧಾನ ಕಾರ್ಯದರ್ಶಿ

'ಅತ್ಯಾಚಾರಿಗಳ ವಿರುದ್ಧ ಕ್ರಮ ಜರುಗಿಸಿ'

ಸಂತ್ರಸ್ತೆಯ ಕುಟುಂಬದ ಗುರುತು ಬಹಿರಂಗಪಡಿಸಿದ ರಾಹುಲ್ ಗಾಂಧಿಯ ವಿರುದ್ಧ ಕ್ರಮ ತೆಗೆದುಕೊಂಡಿದ್ದು ಸರಿಯಾಗಿಯೇ ಇದೆ. ಆದರೆ, ಅತ್ಯಾಚಾರಿಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ಹಲವರು ಟ್ವಿಟರ್‌ನಲ್ಲಿ ಒತ್ತಾಯಿಸಿದ್ದಾರೆ. ಇದರಲ್ಲಿ ಕಾಂಗ್ರೆಸ್‌ನ ಕಾರ್ಯಕರ್ತರೂ ಸೇರಿದ್ದಾರೆ. ಸಾರ್ವಜನಿಕರು ಮಾಡಿರುವ ಇಂತಹ ಟ್ವೀಟ್‌ಗಳನ್ನು ಕಾಂಗ್ರೆಸ್‌ನ ಹಲವು ಕಾರ್ಯಕರ್ತರು ರಿಟ್ವೀಟ್ ಮಾಡಿದ್ದಾರೆ.

ರಾಹುಲ್ ಅವರಿಗೆ ಬೆಂಬಲ ಸೂಚಿಸಿ, ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಟ್ವಿಟರ್‌ನಲ್ಲಿ ಅಭಿಯಾನ ಆರಂಭಿಸಿದ್ದಾರೆ. ತಮ್ಮ ಟ್ವಿಟರ್ ಹ್ಯಾಂಡಲ್‌ಗಳ ಹೆಸರನ್ನು 'ರಾಹುಲ್ ಗಾಂಧಿ' ಎಂದು ಬದಲಿಸಿದ್ದಾರೆ. ತಮ್ಮ ಪ್ರೊಫೈಲ್ ಚಿತ್ರದ ಬದಲಿಗೆ, ರಾಹುಲ್ ಗಾಂಧಿ ಅವರ ಚಿತ್ರವನ್ನು ಹಾಕಿದ್ದಾರೆ.

'ಪೋಸ್ಟ್ ತೆಗೆದರೆ ಖಾತೆ ಸಕ್ರಿಯ'

ದೇಶದ ನಿಯಮಗಳನ್ನು ರಾಹುಲ್ ಗಾಂಧಿ ಅವರು ಉಲ್ಲಂಘಿಸಿದ್ದಾರೆ. ನಿಮಯ ಉಲ್ಲಂಘನೆ ಮಾಡಿರುವ ಪೋಸ್ಟ್‌ಗಳನ್ನು ಮರೆಮಾಚಿದ್ದೇವೆ ಮತ್ತು ಅವರ ಖಾತೆಯನ್ನು ಲಾಕ್ ಮಾಡಿದ್ದೇವೆ. ದೇಶದ ಕಾನೂನು ಮತ್ತು ನಿಯಮಗಳು ಎಲ್ಲರಿಗೂ ಏಕರೀತಿಯಲ್ಲಿ ಅನ್ವಯವಾಗುತ್ತವೆ. ನಿಯಮ ಉಲ್ಲಂಘನೆ ಮಾಡಿರುವ ಪೋಸ್ಟ್ ಅನ್ನು ಡಿಲೀಟ್ ಮಾಡಿದರೆ, ಖಾತೆ ಸಕ್ರಿಯಗೊಳಿಸಲು ಕ್ರಮ ತೆಗೆದುಕೊಳ್ಳುತ್ತೇವೆ. ವ್ಯಕ್ತಿಗಳ ಖಾಸಗಿತನ ಮತ್ತು ವೈಯಕ್ತಿಕ ಮಾಹಿತಿಗೆ ನಾವು ಹೆಚ್ಚು ಮಹತ್ವ ನೀಡುತ್ತೇವೆ. ಅವುಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುತ್ತೇವೆ.

-ಟ್ವಿಟರ್

'ಜೈ ಶ್ರೀ ರಾಮ್' ಕೂಗುವಂತೆ ಥಳಿತ: ಮೂವರ ಬಂಧನ

ಕಾನ್ಪುರ, ಉತ್ತರಪ್ರದೇಶ (ಪಿಟಿಐ): ಮುಸ್ಲಿಂ ಸಮುದಾಯದ ಇ-ರಿಕ್ಷಾ ಚಾಲಕನಿಗೆ 'ಜೈ ಶ್ರೀ ರಾಮ್' ಘೋಷಣೆ ಕೂಗುವಂತೆ ಥಳಿಸಿದ ಆರೋಪದ ಮೇಲೆ ವಿಶ್ವ ಹಿಂದೂ ಪರಿಷತ್‌ಗೆ ಸೇರಿದ ಒಬ್ಬ ವ್ಯಕ್ತಿ ಸೇರಿ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಗುರುವಾರ ರಾತ್ರಿ ಅಮನ್ ಗುಪ್ತಾ, ರಾಜೇಶ್ ಅಲಿಯಾಸ್ ಜಯ್ ಮತ್ತು ರಾಹುಲ್ ಎಂಬುವರನ್ನು ಬಂಧಿಸಲಾಗಿದೆ. ಅಮನ್ ಗುಪ್ತಾಗೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಜತೆಗೆ ಸಂಬಂಧವಿದೆ ಎಂದು ಕಾನ್ಪುರ ಪೊಲೀಸ್ ಆಯುಕ್ತ ಅಸಿಮ್ ಅರುಣ್ ತಿಳಿಸಿದ್ದಾರೆ.

45 ವರ್ಷದ ಅಸ್ರಾರ್ ಅಹ್ಮದ್ ಎಂಬುವರನ್ನು ಕೆಲವು ವ್ಯಕ್ತಿಗಳು 'ಜೈ ಶ್ರೀ ರಾಮ್' ಎಂದು ಘೋಷಣೆ ಕೂಗುವಂತೆ ಥಳಿಸಿದ ದೃಶ್ಯವಿರುವ ಒಂದು ನಿಮಿಷದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಅಹ್ಮದ್ ಅವರ ಪುತ್ರಿ ತನ್ನ ತಂದೆಯನ್ನು ಹೊಡೆಯಬೇಡಿ ಎಂದು ಅಳುತ್ತಾ ದಾಳಿಕೋರರನ್ನು ಬೇಡಿಕೊಳ್ಳುತ್ತಿರುವ ದೃಶ್ಯ ಈ ವಿಡಿಯೊದಲ್ಲಿತ್ತು. ಕಾನ್ಪುರದ ಬರ್ರಾ ಪ್ರದೇಶದ ಕಚ್ಚಿ ಬಸ್ತಿಯಲ್ಲಿ ಬುಧವಾರ ಈ ಘಟನೆ ನಡೆದಿತ್ತು.

ಭೂಮಿ ರಕ್ಷಣೆಗೆ ಬಾಲಕನ ಪಾದಯಾತ್ರೆ

ವೊಬರ್ನ್ ಸ್ಯಾಂಡ್ಸ್ (ರಾಯಿಟರ್ಸ್): ಭೂಮಿಯ ರಕ್ಷಣೆಗಾಗಿ 11 ವರ್ಷದ ಬಾಲಕನೊಬ್ಬ ಪಾದಯಾತ್ರೆ ಹಮ್ಮಿಕೊಂಡು, ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾನೆ.

ಉತ್ತರ ಇಂಗ್ಲೆಂಡ್‌ನ ಹೆಬ್ಡೆನ್ ಬ್ರಿಡ್ಜ್ ನಗರದಿಂದ ಲಂಡನ್‌ಗೆ ಜ್ಯೂಡ್ ವಾಕರ್ ಪಾದಯಾತ್ರೆ ಕೈಗೊಂಡಿದ್ದು, ಪರಿಸರ ರಕ್ಷಣೆಯ ಜಾಗೃತಿ ಮೂಡಿಸುವ ಪ್ರಯತ್ನ ಮೂಡಿಸುತ್ತಿದ್ದಾನೆ.

ಗ್ರೇಟಾ ಥನ್‌ಬರ್ಗ್ ಅವರಿಂದ ಸ್ಫೂರ್ತಿ ಪಡೆದಿರುವ ಈ ಬಾಲಕ, ಕಾರ್ಬನ್ ಹೊರಸೂಸುವಿಕೆ ತಡೆಯುವ ಕ್ರಮಗಳನ್ನು ಕೈಗೊಳ್ಳುವಂತೆ ಸಂದೇಶ ಸಾರುತ್ತಿದ್ದಾನೆ. ವಾಕರ್ ಮನವಿಗೆ 57 ಸಾವಿರ ಮಂದಿ ಸಹಿ ಹಾಕಿದ್ದಾರೆ. ಒಂದು ಲಕ್ಷ ಸಹಿ ಹಾಕಿದರೆ ಸಂಸತ್‌ನಲ್ಲಿ ಚರ್ಚಿಸಲು ಪರಿಗಣಿಸಲಾಗುತ್ತದೆ.

ಮೇಲ್ಮನೆಗೆ ಸದಸ್ಯರ ನಾಮಕರಣ ಶಿಫಾರಸು

'ಇದು, ರಾಜ್ಯಪಾಲರ ಸಾಂವಿಧಾನಿಕ ಜವಾಬ್ದಾರಿ' ಎಂದು ಬಾಂಬೆ ಹೈಕೋರ್ಟ್ ವಿಭಾಗೀಯ ಪೀಠ ಹೇಳಿತು.

'ನಿಗದಿತ ಅವಧಿಯಲ್ಲಿ ಗವರ್ನರ್ ತೀರ್ಮಾನಿಸಲಿ'

ಮುಂಬೈ (ಪಿಟಿಐ): 'ವಿಧಾನಪರಿಷತ್ತಿಗೆ 12 ಸದಸ್ಯರ ನಾಮಕರಣ ಕುರಿತು ಸರ್ಕಾರದ ಶಿಫಾರಸು ಕುರಿತು ಸಂವಿಧಾನಬದ್ಧ ಕರ್ತವ್ಯದ ಅನುಸಾರ ರಾಜ್ಯಪಾಲರು ನಿಗದಿತ ಅವಧಿಯಲ್ಲಿ ಪಟ್ಟಿಯನ್ನು ಅನುಮೋದಿಸುವುದು ಅಥವಾ ತಿರಸ್ಕರಿಸುವುದು ಕಡ್ಡಾಯವಾಗಿದೆ' ಎಂದು ಬಾಂಬೆ ಹೈಕೋರ್ಟ್ ಶುಕ್ರವಾರ ಹೇಳಿದೆ.

'ಇದು, ರಾಜ್ಯಪಾಲರ ಸಾಂವಿಧಾನಿಕ ಜವಾಬ್ದಾರಿಯಾಗಿದೆ' ಎಂದು ಹೇಳಿತು.

ರಾಜ್ಯ ವಿಧಾನಪರಿಷತ್ತಿಗೆ 12 ಸದಸ್ಯರ ನಾಮಕರಣ ಮಾಡುವ ಕುರಿತಂತೆ ಸಚಿವ ಸಂಪುಟದ ನಿರ್ಧಾರ ಒಳಗೊಂಡ ಪಟ್ಟಿಯನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ರಾಜ್ಯಪಾಲ ಬಿ.ಎಸ್.ಕೋಶಿಯಾರಿ ಅವರ ಅನುಮೋದನೆಗಾಗಿ ನವೆಂಬರ್ 2020ರಲ್ಲಿ ಕಳುಹಿಸಿದ್ದರು. ಆದರೆ, ಇದು ನನೆಗುದಿಗೆ ಬಿದ್ದಿತ್ತು. ಈ ಕುರಿತು ತೀರ್ಮಾನ ತೆಗೆದುಕೊಳ್ಳಲು ರಾಜ್ಯಪಾಲರಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ನಾಸಿಕ್‌ನ ನಿವಾಸಿ ರತನ್ ಸೋಲಿ ಲೂಥ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಜಿ.ಎಸ್.ಕುಲಕರ್ಣಿ ಅವರಿದ್ದ ವಿಭಾಗೀಯ ಪೀಠ ಕೈಗೊಂಡಿತ್ತು.

'15 ದಿನದಲ್ಲಿ ನಿರ್ಧಾರ ತಿಳಿಸಬಹುದು ಎಂದು ಸರ್ಕಾರ ಭಾವಿಸಿತ್ತು. ಆದರೆ, ಎಂಟು ತಿಂಗಳು ಕಳೆದಿದೆ. ಇನ್ನಷ್ಟು ವಿಳಂಬ ಮಾಡದೇ ನಿರ್ಧಾರ ತಿಳಿಸಬೇಕು. ರಾಜ್ಯಪಾಲರು ಕೋರ್ಟ್‌ಗೆ ಉತ್ತರಿಸುವ ಅಗತ್ಯವಿಲ್ಲ ಎಂಬುದು ನಿಜ. ಆದರೆ, ಸಾಂವಿಧಾನಿಕ ಕರ್ತವ್ಯ ನಿಭಾಯಿಸಲಾಗುತ್ತದೆ ಎಂದು ಭಾವಿಸುತ್ತೇವೆ' ಎಂದೂ ಪೀಠ ಹೇಳಿತು.

ಮೇಲ್ಮನೆಯಲ್ಲಿ 12 ಸದಸ್ಯರ ಅಧಿಕಾರವಧಿ ಕಳೆದ ವರ್ಷದ ಜೂನ್‌ನಲ್ಲೇ ಮುಗಿದಿತ್ತು. ಶಿವಸೇನೆ ನೇತೃತ್ವದ ಮೈತ್ರಿ ಸರ್ಕಾರವು ನವಂಬರ್‌ವರೆಗೂ ಪಟ್ಟಿ ಕಳುಹಿಸಿರಲಿಲ್ಲ. ಆ ನಂತರ 12 ಜನರ ಪಟ್ಟಿಯನ್ನು ಕಳುಹಿಸಿಕೊಟ್ಟಿತ್ತು. ಆದರೆ, ಈ ಬಗ್ಗೆ ರಾಜ್ಯಪಾಲರು ಯಾವುದೇ ತೀರ್ಮಾನ ಕೈಗೊಂಡಿರಲಿಲ್ಲ.

'ಹೊಸ ಐಟಿ ನಿಯಮಗಳ ಅವಶ್ಯಕತೆ ಏನಿತ್ತು?'

ಮುಂಬೈ (ಪಿಟಿಐ): 'ಈ ಮೊದಲು ಚಾಲ್ತಿಯಲ್ಲಿದ್ದ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ರದ್ದುಪಡಿಸದೆಯೇ, ಹೊಸ ಪ್ರತ್ಯೇಕ ನಿಯಮಗಳನ್ನು ತರಾತುರಿಯಲ್ಲಿ ಜಾರಿಗೆ ತರುವ ಅವಶ್ಯಕತೆ ಏನಿತ್ತು' ಎಂದು ಕೇಂದ್ರ ಸರ್ಕಾರವನ್ನು ಬಾಂಬೆ ಹೈಕೋರ್ಟ್ ಪ್ರಶ್ನಿಸಿದೆ.

ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳ ವಿರುದ್ಧ ಆನ್‌ಲೈನ್ ಸುದ್ದಿತಾಣ ಲೀಫ್‌ಲೆಟ್ ಮತ್ತು ಪತ್ರಕರ್ತ ನಿಖಿಲ್ ವಾಗ್ಳೆ ಅವರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ವೇಳೆ, ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಅವರಿದ್ದ ಪೀಠವು ಸರ್ಕಾರಕ್ಕೆ ಈ ಪ್ರಶ್ನೆ ಕೇಳಿದೆ.

'ಸಂವಿಧಾನವು ಕೊಡಮಾಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳು ಭಾರಿ ದುಷ್ಪರಿಣಾಮ ಬೀರುತ್ತವೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಅಡಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ವಿಧಿಸಲಾಗಿರುವ ನಿರ್ಬಂಧದ ವ್ಯಾಪ್ತಿಯನ್ನು ಮೀರಿ, ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಹೇರಲಾಗಿದೆ' ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

'ಭಾರತೀಯ ಪ್ರೆಸ್ ಕೌನ್ಸಿಲ್ (ಪಿಸಿಐ) ನೀಡಿರುವ ನೀತಿಸಂಹಿತೆಗಳನ್ನು ಪತ್ರಕರ್ತರು ಪಾಲಿಸಬೇಕು' ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ಹೇಳಿದರು. ಅವರ ವಾದವನ್ನು ಪೀಠವು ತಳ್ಳಿ ಹಾಕಿತು.

'ಪಿಸಿಐ ಕೇವಲ ನೀತಿಸಂಹಿತೆಗಳನ್ನು ಹೇಳುತ್ತದೆ. ಅವನ್ನು ಉಲ್ಲಂಘಿಸಿದರೆ ಕಠಿಣ ಶಿಕ್ಷೆ ವಿಧಿಸಿ ಎಂದು ಹೇಳುವುದಿಲ್ಲ. ಪಿಸಿಐ ಮಾರ್ಗಸೂಚಿಗಳಿಗೆ ಅಷ್ಟೊಂದು ಪ್ರಾಮುಖ್ಯವನ್ನು ಹೇಗೆ ನೀಡುತ್ತೀರಿ? ಮಾರ್ಗಸೂಚಿಗಳನ್ನು ಪಾಲಿಸದಿದ್ದರೆ ದಂಡ ವಿಧಿಸುತ್ತೀರಾ? ಯೋಚಿಸುವ ಸ್ವಾತಂತ್ರ್ಯವಿಲ್ಲದೆ, ಏನನ್ನಾದರೂ ಅಭಿವ್ಯಕ್ತಿಪಡಿಸಲು ಹೇಗೆ ಸಾಧ್ಯ? ಬೇರೊಬ್ಬರ ಯೋಚನಾ ಲಹರಿಯನ್ನು ನೀವು ಹೇಗೆ ನಿರ್ಬಂಧಿಸುತ್ತೀರಿ' ಎಂದು ಪೀಠವು ಸರ್ಕಾರವನ್ನು ಪ್ರಶ್ನಿಸಿತು.

'ನೂತನ ನಿಯಮಗಳನ್ನು ಉಲ್ಲಂಘಿಸಿದವರನ್ನು ಕಠಿಣ ಶಿಕ್ಷೆಗೆ ಗುರಿ ಮಾಡಲಾಗುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಕ್ರಮ ತೆಗೆದುಕೊಳ್ಳಬೇಕಾದ ಸಮಿತಿ ಇನ್ನೂ ರಚನೆಯಾಗಿಲ್ಲ. ಹೀಗಾಗಿ ಹೆದರುವ ಅವಶ್ಯಕತೆ ಇಲ್ಲ' ಎಂದು ಅನಿಲ್ ಸಿಂಗ್ ಹೇಳಿದರು. ಅವರ ವಾದವನ್ನು ಪೀಠವು ತಿರಸ್ಕರಿಸಿತು.

'ಸಮಿತಿ ರಚನೆಯಾಗಿಲ್ಲ ಎಂದು ಹೇಳುತ್ತೀರಿ. ಆದರೆ ಅರ್ಜಿದಾರರ ನೆತ್ತಿಯ ಮೇಲೆ ಕತ್ತಿ ತೂಗುತ್ತಲೇ ಇರುತ್ತದೆ ಅಲ್ಲವೇ. ಕಳವಳ ಇರುವುದೇ ಅಲ್ಲಿ' ಎಂದು ಪೀಠವು ಹೇಳಿತು.

'ಮೂಲ ಕಾಯ್ದೆಯ ಜತೆಯಲ್ಲಿಯೇ ಹೊಸ ನಿಯಮಗಳು ಪ್ರತ್ಯೇಕ ಮತ್ತು ಪರ್ಯಾಯ ಕಾನೂನಿನಂತೆ ಕೆಲಸ ಮಾಡುತ್ತವೆ' ಎಂದು ಅರ್ಜಿದಾರರ ಪರ ವಕೀಲರು ಪ್ರತಿಪಾದಿಸಿದರು. ಪೀಠವೂ ಸರ್ಕಾರದ ಮುಂದೆ ಈ ಪ್ರಶ್ನೆ ಇರಿಸಿತು.

ಇಸ್ರೊ ಬೇಹುಗಾರಿಕೆ ಪ್ರಕರಣ: ನಾಲ್ವರಿಗೆ ನಿರೀಕ್ಷಣಾ ಜಾಮೀನು

ಕೊಚ್ಚಿ (ಪಿಟಿಐ): ಇಸ್ರೊ ಬೇಹುಗಾರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಮಾಜಿ ಪೊಲೀಸ್ ಅಧಿಕಾರಿಗಳು ಹಾಗೂ ಗುಪ್ತಚರ ಇಲಾಖೆಯ (ಐಬಿ) ಒಬ್ಬ ನಿವೃತ್ತ ಅಧಿಕಾರಿಗೆ ಕೇರಳ ಹೈಕೋರ್ಟ್ ಶುಕ್ರವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿ ಅಶೋಕ್ ಮೆನನ್ ಅವರು, ಮಾಜಿ ಪೊಲೀಸ್ ಅಧಿಕಾರಿಗಳಾದ ಆರ್. ಬಿ.ಶ್ರೀಕುಮಾರ್, ಎಸ್. ವಿಜಯನ್ ಮತ್ತು ಥಂಪಿ ಎಸ್. ದುರ್ಗಾ ದತ್ ಮತ್ತು ಗುಪ್ತಚರ ಇಲಾಖೆಯ ಮಾಜಿ ಅಧಿಕಾರಿ ಪಿ.ಎಸ್. ಜಯಪ್ರಕಾಶ್ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದಾರೆ.

1994ರ ಇಸ್ರೊ ಬೇಹುಗಾರಿಕೆ ಪ್ರಕರಣದಲ್ಲಿ ಇಸ್ರೊ ಮಾಜಿ ವಿಜ್ಞಾನಿ ನಂಬಿ ನಾರಾಯಣನ್ ಮತ್ತು ಮಾಲ್ಡೀವ್ಸ್‌ನ ಇಬ್ಬರು ಪ್ರಜೆಗಳನ್ನು ಬಂಧಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಈ ನಾಲ್ವರು ಅಧಿಕಾರಿಗಳು ಸೇರಿ ಇತರೆ 14 ಮಂದಿ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು. ಈ ನಾಲ್ವರು ನಿರೀಕ್ಷಣಾ ಜಾಮೀನಿಗಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಇತ್ತೀಚೆಗೆ ಈ ನಾಲ್ವರನ್ನು ಬಂಧಿಸುವುದರ ವಿರುದ್ಧ ಮಧ್ಯಂತರ ರಕ್ಷಣೆಯನ್ನು ಹೈಕೋರ್ಟ್ ನೀಡಿತ್ತು.

ಇಸ್ರೊ ಬೇಹುಗಾರಿಕೆ ಪ್ರಕರಣದಲ್ಲಿ ವಿಜ್ಞಾನಿ ನಂಬಿ ನಾರಾಯಣನ್ ಜೊತೆಗೆ, ಮಾಲ್ಡೀವ್‌ನ ಮರಿಯಮ್ ರಶೀದಾ ಮತ್ತು ಫೌಜಿಯಾ ಹಸನ್ ಎಂಬ ಇಬ್ಬರು ಮಹಿಳೆರನ್ನು ಬಂಧಿಸಲಾಗಿತ್ತು. ಇವರು ಮೂರು ವರ್ಷಗಳಿಗೂ ಹೆಚ್ಚು ಸಮಯ ಜೈಲಿನಲ್ಲಿದ್ದರು.

ಮಾಲಿನ್ಯ ನಿಯಂತ್ರಣಕ್ಕೆ ಕ್ರಮ; ಪ್ಲಾಸ್ಟಿಕ್ ಕೈಚೀಲಗಳ ದಪ್ಪ ಹೆಚ್ಚಿಸಲು ಆದೇಶ

ಮುಂದಿನ ಜುಲೈನಿಂದ ಏಕಬಳಕೆ ಪ್ಲಾಸ್ಟಿಕ್ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಒಂದೇ ಸಲ ಬಳಸಬಹುದಾದ ಪ್ಲಾಸ್ಟಿಕ್ ಉತ್ಪನ್ನಗಳ ತಯಾರಿಕೆ, ಆಮದು ಹಾಗೂ ಮಾರಾಟವನ್ನು ನಿಷೇಧಿಸಿ ಕೇಂದ್ರ ಪರಿಸರ ಸಚಿವಾಲಯವು ಅಧಿಸೂಚನೆ ಹೊರಡಿಸಿದ್ದು, ಇದು 2022ರ ಜುಲೈನಿಂದ ಅನ್ವಯವಾಗಲಿದೆ.

ಪ್ಲಾಸ್ಟಿಕ್ ಕಡ್ಡಿ ಇರುವ ಇಯರ್ ಬಡ್, ಬಲೂನ್ ಹಿಡಿಕೆ, ಪ್ಲಾಸ್ಟಿಕ್ ಧ್ವಜಗಳು, ಕ್ಯಾಂಡಿ ಹಾಗೂ ಐಸ್‌ಕ್ರೀಂ ಕಡ್ಡಿಗಳು, ಅಲಂಕಾರಕ್ಕೆ ಬಳಸುವ ಥರ್ಮಾಕೋಲ್, ಸಭೆ–ಸಮಾರಂಭಗಳಲ್ಲಿ ಬಳಸಲಾಗುವ ಪ್ಲಾಸ್ಟಿಕ್ ತಟ್ಟೆ, ಲೋಟ, ಕಪ್, ಫೋರ್ಕ್, ಚಮಚ, ಚಾಕು, ಸ್ಟ್ರಾ, ಟ್ರೇ, ಪೊಟ್ಟಣ ಕಟ್ಟಲು ಬಳಸುವ ಅಥವಾ ಸಿಹಿತಿಂಡಿ ಡಬ್ಬಿಗಳ ಸುತ್ತ ಅಂಟಿಸುವ ಪ್ಲಾಸ್ಟಿಕ್ ಫಿಲ್ಮ್‌ಗಳು, ಆಮಂತ್ರಣ ಪತ್ರಿಕೆ, ಸಿಗರೇಟ್ ಪೊಟ್ಟಣ, 100 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಇಲ್ಲವೇ ಪಿವಿಸಿ ಬ್ಯಾನರ್‌ಗಳು ಮತ್ತು ಕಡ್ಡಿಗಳ ಉತ್ಪಾದನೆ ಹಾಗೂ ಬಳಕೆಯನ್ನು ನಿಷೇಧಿಸಲಾಗಿದೆ.

ಇದೇ ಸೆ. 30ರಿಂದ, 75 ಮೈಕ್ರಾನ್‌ಗಿಂತ ಕಡಿಮೆ ಇರುವ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳ ಉತ್ಪಾದನೆ ಹಾಗೂ ಬಳಕೆಯನ್ನೂ ನಿಷೇಧಿಸಲಾಗುತ್ತಿದ್ದು, ಅವುಗಳ ದಪ್ಪವನ್ನು 50 ಮೈಕ್ರಾನ್‌ನಿಂದ 75 ಮೈಕ್ರಾನ್‌ಗೆ ಹೆಚ್ಚಿಸುವಂತೆ ಆದೇಶಿಸಲಾಗಿದೆ. ಅಲ್ಲದೇ 2022ರ ಡಿಸೆಂಬರ್ 31ರಿಂದ, 120 ಮೈಕ್ರಾನ್‌ಗಳಿಗೆ ಹೆಚ್ಚಿಸುವುದು ಕಡ್ಡಾಯ ಎಂದು ಪರಿಸರ ಸಚಿವಾಲಯ ಹೇಳಿದೆ.

ಈ ಬಗ್ಗೆ ಗುರುವಾರ ಆದೇಶ ಹೊರಡಿಸಿರುವ ಸಚಿವಾಲಯ, ದಪ್ಪ ಹೆಚ್ಚಿಸಿದ ಪ್ಲಾಸ್ಟಿಕ್ ಚೀಲಗಳನ್ನು ಮರುಬಳಕೆ ಮಾಡಬಹುದಾಗಿದ್ದು, ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟಿದೆ.

ವಿಜ್ಞಾನ ಹಾಗೂ ಪರಿಸರ ಕೇಂದ್ರದ ವರದಿಯ ಪ್ರಕಾರ, ಭಾರತವು 2018–19ರಲ್ಲಿ 33.5 ಲಕ್ಷ ಮೆಟ್ರಿಕ್ ಟನ್ (ನಿತ್ಯ ಅಂದಾಜು 9,200 ಮೆಟ್ರಿಕ್ ಟನ್) ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸಿತ್ತು.

ಅತಿ ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸುತ್ತಿರುವ ಏಳು ರಾಜ್ಯಗಳ ಪೈಕಿ ಕರ್ನಾಟಕವೂ ಇದೆ. ಮಹಾರಾಷ್ಟ್ರ, (ಶೇ 12), ತಮಿಳುನಾಡು (ತಲಾ ಶೇ 12) ಗುಜರಾತ್ (ಶೇ 11), ಪಶ್ಚಿಮ ಬಂಗಾಳ (ಶೇ 9), ಕರ್ನಾಟಕ (ಶೇ 8), ಉತ್ತರ ಪ್ರದೇಶ (ಶೇ 7) ಹಾಗೂ ದೆಹಲಿ (ತಲಾ ಶೇ 7) ಹೆಚ್ಚು ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಸುತ್ತಿರುವ ರಾಜ್ಯಗಳು.

ಏಕ ಬಳಕೆಯ ಪ್ಲಾಸ್ಟಿಕ್ ನಿರ್ಮೂಲನೆ ಹಾಗೂ ಪ್ಲಾಸ್ಟಿಕ್ ತ್ಯಾಜ್ಯದ ಪರಿಣಾಮಕಾರಿ ನಿರ್ವಹಣೆಗಾಗಿ, ರಾಜ್ಯಗಳು ಹಾಗೂ ಕೇಂದ್ರದ ವಿವಿಧ ಇಲಾಖೆಗಳು ನಿಗದಿತ ಅವಧಿಯಲ್ಲಿ ಸಮಗ್ರ ಕಾರ್ಯಯೋಜನೆಯೊಂದನ್ನು ರೂಪಿಸುವಂತೆಯೂ ಹೇಳಿದೆ. ಪ್ಲಾಸ್ಟಿಕ್ ಬಳಕೆಯ ಬಗೆಗಿನ ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಮುಂದಾಗುವಂತೆ ರಾಜ್ಯಗಳಿಗೆ ಸೂಚಿಸಿದೆ.

ರಷ್ಯಾದ ಆರ್‌ಡಿಐಎಫ್ ಜೊತೆ ವೊಕ್ಹಾರ್ಟ್ ಲಿಮಿಟೆಡ್ ಸಂಸ್ಥೆಯ ಒಪ್ಪಂದ

ಸ್ಫುಟ್ನಿಕ್ ವಿ, ಸ್ಫುಟ್ನಿಕ್ ಲೈಟ್ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತದಲ್ಲಿ ಸ್ಫುಟ್ನಿಕ್ ವಿ ಮತ್ತು ಸ್ಫುಟ್ನಿಕ್ ಲೈಟ್ ಲಸಿಕೆಗಳನ್ನು ಉತ್ಪಾದಿಸಿ, ಪೂರೈಸುವ ಕುರಿತು ವೊಕ್ಹಾರ್ಟ್ ಲಿಮಿಟೆಡ್ ಸಂಸ್ಥೆಯು ರಷ್ಯಾದ ರಷಿಯನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಫಂಡ್ (ಆರ್‌ಡಿಐಎಫ್) ಜೊತೆಗೆ ಒಡಂಬಡಿಕೆ ಮಾಡಿಕೊಂಡಿದೆ.

ಕೋವಿಡ್–19 ವಿರುದ್ಧದ ಈ ಲಸಿಕೆಗಳನ್ನು ದೇಶಿಯವಾಗಿ ಉತ್ಪಾದಿಸಿ, ಪೂರೈಸಲು ಆರ್‌ಡಿಐಎಫ್‌ನ ಸಹಯೋಗಿ ಸಂಸ್ಥೆ ಎನ್‌ಸೊ ಹೆಲ್ತ್ ಕೇರ್ ಜೊತೆಗೆ ಒಡಂಬಡಿಕೆ ಏರ್ಪಟ್ಟಿದೆ ಎಂದು ಹೇಳಿಕೆ ತಿಳಿಸಿದೆ. ಒಪ್ಪಂದದ ಅವಧಿಯು ಜೂನ್ 2023ರವರೆಗೂ ಇರಲಿದೆ.

ಹೇಳಿಕೆಯ ಅನುಸಾರ, ಸ್ಫುಟ್ನಿಕ್ ವಿ ಲಸಿಕೆಯು 69 ದೇಶಗಳಲ್ಲಿ ನೋಂದಣಿಯಾಗಿದೆ. ಈ ಲಸಿಕೆಯು ಕೊರೊನಾ ರೂಪಾಂತರ ತಳಿ ಡೆಲ್ಟಾ ವಿರುದ್ಧ ಶೇ 83.1 ರಷ್ಟು ಪರಿಣಾಮಕಾರಿ.ಆಸ್ಪತ್ರೆಗೆ ದಾಖಲಾದವರಲ್ಲಿಯೂ ಇದು ಶೇ 94.4ರಷ್ಟು ಪರಿಣಾಮಕಾರಿಯಾಗಿದೆ.

ಪ್ರಾತಿನಿಧಿಕ ಚಿತ್ರ

ವೊಕ್ಹಾರ್ಟ್ ಸ್ಥಾಪಕ ಅಧ್ಯಕ್ಷ ಡಾ.ಹಬಿಲ್ ಖೋರಕಿವಾಲಾ ಅವರು, ಆರ್‌ಡಿಐಎಫ್ ಜೊತೆಗಿನ ಪಾಲುದಾರಿಕೆ ಸಂತಸ ತಂದಿದೆ. ಇದು, ಕೋವಿಡ್ ವಿರುದ್ಧ ಹೋರಾಟದಲ್ಲಿ ನಮ್ಮ ಬದ್ಧತೆಯನ್ನು ಬಿಂಬಿಸಿದೆ' ಎಂದು ಹೇಳಿದರು.

ಎನ್‌ಸೊ ಹೆಲ್ತ್ ಕೇರ್ ಸಂಸ್ಥೆಯ ವಿನಯ್ ಮಾಲೂ ಅವರು, 'ಸ್ಫುಟ್ನಿಕ್ ವಿ ಹೆಚ್ಚು ಪರಿಣಾಮಕಾರಿ ಹಾಗೂ ವಿಶ್ವಾಸಾರ್ಹ ಲಸಿಕೆ ಎಂಬುದು ಸಾಬೀತಾಗಿದೆ' ಎಂದು ಹೇಳಿದರು.

ಕೋವಿಡ್ ನಾಸಲ್ ಲಸಿಕೆ: 2,3ನೇ ಪ್ರಯೋಗಕ್ಕೆ ಅನುಮೋದನೆ

ನವದೆಹಲಿ: 'ಕೋವಿಡ್ ನಿಯಂತ್ರಣಕ್ಕಾಗಿ ಮೂಗಿನ ಮೂಲಕ ಬಳಸಬಹುದಾದ ದೇಶದ ಮೊದಲ ಕೋವಿಡ್ ಇಂಟ್ರಾನಾಸಲ್ ಲಸಿಕೆಯನ್ನು ಭಾರತ್ ಬಯೋಟೆಕ್ ಕಂಪನಿಯ ಅಭಿವೃದ್ಧಿ ಪಡಿಸಿದ್ದು, ಇದರ 2 ಮತ್ತು 3ನೇ ಕ್ಲಿನಿಕಲ್ ಪ್ರಯೋಗಕ್ಕೆ ಔಷಧ ನಿಯಂತ್ರಕರ ಅನುಮೋದನೆ ದೊರೆತಿದೆ' ಎಂದು ಜೈವಿಕ ತಂತ್ರಜ್ಞಾನ ಇಲಾಖೆ ಶುಕ್ರವಾರ ತಿಳಿಸಿದೆ.

'ಈ ಲಸಿಕೆಯ ಮೊದಲ ಕ್ಲಿನಿಕಲ್ ಪ್ರಯೋಗವನ್ನು 18 ರಿಂದ 60 ವರ್ಷ ವಯೋಮಾನದವರ ಮೇಲೆ ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಭಾರತದಲ್ಲಿ ಮಾನವನ ಮೇಲೆ ಕ್ಲಿನಿಕಲ್ ಪ್ರಯೋಗಕ್ಕೊಳಗಾದ ಮೊದಲ ಕೋವಿಡ್ ಇಂಟ್ರಾನಾಸಲ್ ಲಸಿಕೆ ಇದಾಗಿದೆ' ಎಂದೂ ಇಲಾಖೆ ಮಾಹಿತಿ ನೀಡಿದೆ.

ಭಾರತ್ ಬಯೋಟೆಕ್ ಕಂಪನಿಯು, ಅಮೆರಿಕದ ಸೇಂಟ್ ಲೂಯಿಸ್‌ನಲ್ಲಿರುವ ವಾಷಿಂಗ್ಟನ್ ವಿಶ್ವವಿದ್ಯಾಲಯದಿಂದ ಪರವಾನಗಿ ಪಡೆದ ತಂತ್ರಜ್ಞಾನವನ್ನು ಹೊಂದಿದೆ.

ಲಾರ್ಡ್ಸ್ ಟೆಸ್ಟ್: 5 ವಿಕೆಟ್ ಗೊಂಚಲು ಗಳಿಸಿದ ಆ್ಯಂಡರ್ಸನ್; ಜಡೇಜ ಉತ್ತಮ ಆಟದ ಕಾಣಿಕೆ

ಭಾರತದ 'ಓಟ'ಕ್ಕೆ ಜೇಮ್ಸ್ ಕಡಿವಾಣ

ಲಂಡನ್ (ಪಿಟಿಐ): ಲಾರ್ಡ್ಸ್ ಕ್ರೀಡಾಂಗಣದಲ್ಲಿ ಗುರುವಾರ ಕೆ.ಎಲ್. ರಾಹುಲ್ ಬ್ಯಾಟಿಂಗ್ ವೈಭವ ನೋಡಿದ್ದ ಕ್ರಿಕೆಟ್ ಪ್ರೇಮಿಗಳು ಶುಕ್ರವಾರ ಜೇಮ್ಸ್ ಆ್ಯಂಡರ್ಸನ್ ಬೌಲಿಂಗ್‌ನ ಅಂದ ಚೆಂದವನ್ನೂ ಕಣ್ತುಂಬಿಕೊಂಡರು.

39 ವರ್ಷದ ಆ್ಯಂಡರ್ಸನ್ (62ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಬೃಹತ್ ಮೊತ್ತ ದಾಖಲಿಸುವ ಗುರಿ ಕೈಗೂಡಲಿಲ್ಲ. 126.1 ಓವರ್‌ಗಳಲ್ಲಿ 364 ರನ್ ಗಳಿಸಿ ಆಲೌಟ್ ಆಯಿತು. ಬ್ಯಾಟಿಂಗ್ ಆರಂಭಿಸಿದ ಆತಿಥೇಯ ತಂಡ 45 ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ 118 ರನ್ ಗಳಿಸಿತು.

ಜೇಮ್ಸ್ 31ನೇ ಬಾರಿ ಐದು ವಿಕೆಟ್‌ಗಳ ಗೊಂಚಲು ಗಳಿಸಿದರು. ಭಾರತದ ವಿರುದ್ಧ ಇದು ಏಳನೇಯದ್ದು. ತಂಡದ ಇನ್ನೊಬ್ಬ ವೇಗಿ ಮಾರ್ಕ್ ವುಡ್ ಕೂಡ ಎರಡು ವಿಕೆಟ್ ಗಳಿಸಿದರು.

ಮೊದಲ ದಿನದಾಟದಲ್ಲಿ ಭಾರತ ತಂಡವು ರಾಹುಲ್ ಶತಕದ ಬಲದಿಂದ ಮೂರು ವಿಕೆಟ್‌ಗಳಿಗೆ 276 ರನ್ ಗಳಿಸಿತ್ತು. ರಾಹುಲ್ ಮತ್ತು ಅಜಿಂಕ್ಯ ರಹಾನೆ ಕ್ರೀಸ್‌ನಲ್ಲಿದ್ದರು.

ವಿಕೆಟ್ ಗಳಿಸಿದ ಜೇಮ್ಸ್ ಆ್ಯಂಡರ್ಸನ್ ಸಂತಸ –ರಾಯಿಟರ್ಸ್ ಚಿತ್ರ

ಎರಡನೇ ದಿನದಾಟದಲ್ಲಿ ಕೇವಲ 88 ರನ್‌ಗಳ ಅಂತರದಲ್ಲಿ ಏಳು ವಿಕೆಟ್‌ಗಳನ್ನು ತಂಡವು ಕಳೆದುಕೊಂಡಿತು. ಇದರ ನಡುವೆಯೂ ರಿಷಭ್ ಪಂತ್ (37 ರನ್) ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ (40) ಎಂದಿನಂತೆ ತಮ್ಮ ಕಾಣಿಕೆ ನೀಡುವುದನ್ನು ತಪ್ಪಿಸಲಿಲ್ಲ. ಊಟದ ವಿರಾಮದ ವೇಳೆಗೆ ಭಾರತ ತಂಡವು ಏಳು ವಿಕೆಟ್‌ಗಳ ನಷ್ಟಕ್ಕೆ 346 ರನ್ ಗಳಿಸಿತ್ತು. ಮೊದಲ ಅವಧಿಯಲ್ಲಿ ರಾಹುಲ್ (129), ರಿಷಭ್ (37), ರಹಾನೆ (1) ಮತ್ತು ಖಾತೆ ತೆರೆಯದ ಮೊಹಮ್ಮದ್ ಶಮಿ ಔಟಾದರು.

ಈ ಇಬ್ಬರೂ ಎಡಗೈ ಬ್ಯಾಟ್ಸ್‌ಮನ್‌ಗಳ ವಿಕೆಟ್‌ಗಳನ್ನೂ ಮಾರ್ಕ್ ವುಡ್ ಪಡೆದರು. ಇದರಿಂದಾಗಿ ಭಾರತ ತಂಡವು 400 ರನ್‌ಗಳ ಗಡಿ ದಾಟಲು ಸಾಧ್ಯವಾಗಲಿಲ್ಲ. ಕೊನೆಯಲ್ಲಿ ಮೊಹಮ್ಮದ್ ಸಿರಾಜ್ ಮತ್ತು ಜಸ್‌ಪ್ರೀತ್ ಬೂಮ್ರಾ ಖಾತೆ ತೆರೆಯದೇ ನಿರ್ಗಮಿಸಿದರು.

ಭಾರತ ಇನಿಂಗ್ಸ್‌ನ ಪಾನೀಯ ವಿರಾಮದ ವೇಳೆ ರಿಷಭ್ ಪಂತ್ ಮತ್ತು ರವೀಂದ್ರ ಜಡೇಜ –ಎಪಿ/ಪಿಟಿಐ ಚಿತ್ರ

ರೆಡ್ ಫಾರ್ ರುಥ್ ಡೇ ಅಭಿಯಾನ

ಲಾರ್ಡ್ಸ್‌ನಲ್ಲಿ ಎರಡನೇ ದಿನದಾಟದ ಸಂದರ್ಭದಲ್ಲಿ ಕೆಂಪು ರಂಗು ಆವರಿಸಿತು. ಉಭಯ ತಂಡಗಳ ಆಟಗಾರರು ಕೆಲಹೊತ್ತು ಕೆಂಪು ಕ್ಯಾಪ್ ಧರಿಸಿದ್ದರು. ಅಭಿಮಾನಿಗಳ ಬಳಗದಲ್ಲಿ ಹಲವರು ಕೆಂಪು ಪೋಷಾಕು ಧರಿಸಿದ್ದರು. ಮಾಜಿ ಕ್ರಿಕೆಟಿಗ ಆ್ಯಂಡ್ರ್ಯೂ ಸ್ಟ್ರಾಸ್ ಅವರು ತಮ್ಮ ಪತ್ನಿ, ದಿವಂಗತ ರುಥ್ ಸ್ಟ್ರಾಸ್ ಸ್ಮರಣಾರ್ಥ ಸ್ಥಾಪಿಸಿರುವ ಪ್ರತಿಷ್ಠಾನಕ್ಕೆ ದೇಣಿಗೆ ಸಂಗ್ರಹಿಸಲು ನಡೆದ ರೆಡ್ ಫಾರ್ ರುಥ್ ಡೇ ಅಭಿಯಾನ ನಡೆಯಿತು. ರುಥ್ ಅವರು ಶ್ವಾಸಕೋಶದ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದರು. ಕೆಂಪು ಸೂಟ್ ಧರಿಸಿದ್ದ ಸ್ಟ್ರಾಸ್ ತಮ್ಮ ಮಕ್ಕಳು ಮತ್ತು ಪ್ರತಿಷ್ಠಾನದ ಸದಸ್ಯರೊಂದಿಗೆ ಮೈದಾನದಲ್ಲಿ ಪಥಸಂಚಲನ ನಡೆಸಿ ಜಾಗೃತಿ ಮೂಡಿಸಿದರು.

ಆ್ಯಂಡ್ರ್ಯೂ ಸ್ಟ್ರಾಸ್ ತಮ್ಮ ಮಕ್ಕಳೊಂದಿಗೆ ರೆಡ್ ಫಾರ್ ರುಥ್ ಡೇ ಅಭಿಯಾನ ನಡೆಸಿದರು –ರಾಯಿಟರ್ಸ್ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 364 (126.1 ಓವರ್) (ಗುರುವಾರ 90 ಓವರ್‌ಗಳಲ್ಲಿ 3 ವಿಕೆಟ್‌ಗೆ 276)

ರಾಹುಲ್ ಸಿ ಸಿಬ್ಲಿ ಬಿ ರಾಬಿನ್ಸನ್ 129 (250ಎ, 4X12, 6X1), ರಹಾನೆ ಸಿ ರೂಟ್ ಬಿ ಆ್ಯಂಡರ್ಸನ್ 1 (23ಎ), ಪಂತ್ ಸಿ ಬಟ್ಲರ್ ಬಿ ವುಡ್ 37 (58ಎ, 4X5), ಜಡೇಜ ಸಿ ಆ್ಯಂಡರ್ಸನ್ ಬಿ ವುಡ್ 40 (120ಎ, 4X3), ಶಮಿ ಸಿ ಬರ್ನ್ಸ್ ಬಿ ಮೊಯಿನ್ 0 (2ಎ), ಇಶಾಂತ್ ಎಲ್‌ಬಿಡಬ್ಲ್ಯು ಆ್ಯಂಡರ್ಸನ್ 8 (29ಎ, 4X1), ಬೂಮ್ರಾ ಸಿ ಬಟ್ಲರ್ ಬಿ ಆ್ಯಂಡರ್ಸನ್ 0 (6ಎ), ಸಿರಾಜ್ ಔಟಾಗದೆ 0

ಇತರೆ (ಬೈ 8, ಲೆಗ್‌ಬೈ 5, ನೋಬಾಲ್ 2) 15

ವಿಕೆಟ್ ಪತನ: 4–278 (ಕೆ.ಎಲ್. ರಾಹುಲ್, 90.2), 5–282 (ಅಜಿಂಕ್ಯ ರಹಾನೆ, 91.1), 6–331 (ರಿಷಭ್ ಪಂತ್, 109.6), 7–336 (ಮೊಹಮ್ಮದ್ ಶಮಿ, 110.5), 8–362 (ಇಶಾಂತ್ ಶರ್ಮಾ, 123.6), 9–364 (ಜಸ್‌ಪ್ರೀತ್ ಬೂಮ್ರಾ, 125.6), 10–364 (ರವೀಂದ್ರ ಜಡೇಜ, 126.1)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 29–7–62–5, ಒಲಿ ರಾಬಿನ್ಸನ್ 33–10–73–2, ಸ್ಯಾಮ್ ಕರನ್ 22–2–72–0, ಮಾರ್ಕ್ ವುಡ್ 24.1–2–91–2, ಮೋಯಿನ್ ಅಲಿ 18–1–53–1

ಇಂಗ್ಲೆಂಡ್ (ಮೊದಲ ಇನಿಂಗ್ಸ್) 3 ವಿಕೆಟ್‌ಗಳಿಗೆ 119 (45 ಓವರ್)

ರೋರಿ ಎಲ್‌ಬಿಡಬ್ಲ್ಯು ಶಮಿ 49 (136ಎ, 4X7), ಸಿಬ್ಲಿ ಸಿ ರಾಹುಲ್ ಬಿ ಸಿರಾಜ್ 11 (44ಎ, 4X1), ಹಮೀದ್ ಬಿ ಸಿರಾಜ್ 0 (1ಎ), ರೂಟ್ ಬ್ಯಾಟಿಂಗ್ 48 (75ಎ, 4X6), ಬೇಸ್ಟೊ ಬ್ಯಾಟಿಂಗ್ 6 (17 ಎ)

ಇತರೆ (ಲೆಗ್‌ಬೈ 2, ನೋಬಾಲ್ 3) 5

ವಿಕೆಟ್ ಪತನ: 1–23 (ಡಾಮ್ ಸಿಬ್ಲಿ, 14.2), 2–23 (ಹಸೀಬ್ ಹಮೀದ್, 14.3). 3–108 (ರೋರಿ ಬರ್ನ್ಸ್, 41.2)

ಬೌಲಿಂಗ್: ಇಶಾಂತ್ ಶರ್ಮಾ 11–2–32–0, ಜಸ್‌ಪ್ರೀತ್ ಬೂಮ್ರಾ 9–3–23–0, ಮೊಹಮ್ಮದ್ ಶಮಿ 8–2–22–1, ಮೊಹಮ್ಮದ್ ಸಿರಾಜ್ 13–4–34–2, ರವೀಂದ್ರ ಜಡೇಜ 4–1–6–0.

ಫುಟ್‌ಬಾಲ್: ಮಹಿಳಾ ತಂಡಕ್ಕೆ ಡೆನ್ನರ್‌ಬಿ ಮುಖ್ಯ ಕೋಚ್

ನವದೆಹಲಿ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಆಗಿ ಥಾಮಸ್ ಡೆನ್ನರ್‌ಬಿ ಶೀಘ್ರವೇ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಶುಕ್ರವಾರ ತಿಳಿಸಿದೆ.

ಡೆನ್ನರ್‌ಬಿ– ಟ್ವಿಟರ್ ಚಿತ್ರ

ಸ್ವೀಡನ್‌ನ 62 ವರ್ಷದ ಥಾಮಸ್, ಈ ಹಿಂದೆ ಭಾರತದ 17 ವರ್ಷದೊಳಗಿನ ಮಹಿಳಾ ತಂಡದ ತರಬೇತುದಾರರಾಗಿದ್ದರು. 2022ರಲ್ಲಿ ಭಾರತದಲ್ಲೇ ನಡೆಯಲಿರುವ ಎಎಫ್‌ಸಿ ಏಷ್ಯಾಕಪ್ ಟೂರ್ನಿಗೆ ಸಜ್ಜುಗೊಳ್ಳಲು ಸೀನಿಯರ್ ತಂಡಕ್ಕೆ ನೆರವಾಗುತ್ತಿದ್ದಾರೆ.

'ಎಐಎಫ್‌ಎಫ್‌ಗೆ ಆಭಾರಿಯಾಗಿದ್ದೇನೆ. ಇದು ನನಗೆ ದೊರೆತ ಗೌರವ. ತಂಡದ ಶಕ್ತಿಯ ಬಗೆಗೆ ನನಗೆ ಅರಿವಿದೆ. ಏಷ್ಯಾಕಪ್‌ಗೆ ಮಹಿಳಾ ತಂಡವನ್ನು ಸಜ್ಜುಗೊಳಿಸುವುದು ನನ್ನ ಮುಂದಿರುವ ಸವಾಲು. ಇಂತಹ ಸವಾಲುಗಳನ್ನು ಎದುರಿಸಲು ನನಗೆ ಖುಷಿಯಾಗುತ್ತದೆ' ಎಂದು ಡೆನ್ನರ್‌ಬಿ ಹೇಳಿದ್ದಾರೆ.

ಜಾರ್ಖಂಡ್‌ನಲ್ಲಿ ಶಿಬಿರ 16ರಿಂದ

ನವದೆಹಲಿ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡದ ಅಭ್ಯಾಸ ಶಿಬಿರ ಜಾರ್ಖಂಡ್‌ನಲ್ಲಿ ಇದೇ 16ರಿಂದ ನಡೆಯಲಿದೆ.

ಶಿಬಿರಕ್ಕೆ ಆಯ್ಕೆಯಾದವರು: **ಗೋಲ್‌ಕೀಪರ್:** ಅದಿತಿ ಚೌಹಾಣ್, ಸೌಮ್ಯಾ ನಾರಾಯಣಸ್ವಾಮಿ, ಲಿಂಥೊಯ್ಗಂಬಿ ದೇವಿ, ಶ್ರೇಯಾ ಹೂಡಾ; **ಡಿಫೆಂಡರ್:** ಜಪಮಣಿ ತುಡು, ಆಶಾಲತಾ ದೇವಿ, ಸ್ವೀಟಿ ದೇವಿ, ಹೇಮಂ ಶಿಲ್ಕಿ ದೇವಿ, ಮೈಕೆಲ್ ಕಾಸ್ಟನ್ಹ, ರಿತು ರಾಣಿ, ರಂಜನಾ ಚಾನು, ಲಿಂಥೊಯ್ಗಂಬಿ ದೇವಿ, ಕೃತಿನಾ ದೇವಿ, ಅಂಜು, ಅಸೇಮ್ ರೋಜಾ ದೇವಿ; **ಮಿಡ್‌ಫೀಲ್ಡರ್:** ಇಂದುಮತಿ, ಸಂಗೀತಾ, ಮಾರ್ಟಿನಾ, ಡಂಗ್ಮೆ ಗ್ರೇಸ್, ಸೌಮ್ಯಾ ಗುಗುಲೊತ್, ಸುಮಿತ್ರಾ, ಮರಿಯಮ್ಮಾಳ್, ಸಂಜು, ಮನೀಷಾ; **ಫಾರ್ವರ್ಡ್:** ರೇಣು, ಕರೀಷ್ಮಾ ಶಿರ್ವೊಯ್ಕರ್, ಸಂಧ್ಯಾ ರಂಗನಾಥನ್, ಸುಮತಿ ಕುಮಾರಿ, ದಯಾ ದೇವಿ, ಪ್ಯಾರಿ ಕ್ಸಕ್ಸ.

ಸುದ್ದಿ 2 ನಿಮಿಷ

ಟಿ20 ಕ್ರಿಕೆಟ್ ವಿಶ್ವಕಪ್: 15 ಆಟಗಾರರಿಗೆ ಅವಕಾಶ

ಕರಾಚಿ (ಪಿಟಿಐ): ಈ ಬಾರಿಯ ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಪ್ರತಿ ತಂಡಕ್ಕೆ 15 ಆಟಗಾರರು ಹಾಗೂ ಎಂಟು ಅಧಿಕಾರಿಗಳನ್ನು ಕರೆತರಲು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅವಕಾಶ ನೀಡಿದೆ.

'ಟೂರ್ನಿಯಲ್ಲಿ ಭಾಗವಹಿಸುವ ದೇಶಗಳು ತಮ್ಮ ತಂಡದ 15 ಆಟಗಾರರು, ಎಂಟು ಅಧಿಕಾರಿಗಳ (ಕೋಚ್‌ಗಳು ಮತ್ತು ನೆರವು ಸಿಬ್ಬಂದಿ ಸೇರಿ) ಅಂತಿಮ ಪಟ್ಟಿ ಸಲ್ಲಿಸಲು ಐಸಿಸಿ ಸೆಪ್ಟೆಂಬರ್ 10ರ ಗಡುವು ಎಂದು ನಿಗದಿಪಡಿಸಿದೆ' ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಅಧಿಕಾರಿಯೊಬ್ಬರು ಶುಕ್ರವಾರ ಖಚಿತಪಡಿಸಿದ್ದಾರೆ.

'ಕೋವಿಡ್–19 ಸೃಷ್ಟಿಸಿರುವ ಬಿಕ್ಕಟ್ಟು ಮತ್ತು ಬಯೋಬಬಲ್ ಹಿನ್ನೆಲೆಯಲ್ಲಿ ಹೆಚ್ಚುವರಿ ಆಟಗಾರರನ್ನು ಕರೆತರಲೂ ಐಸಿಸಿ ಅವಕಾಶ ನೀಡಿದೆ. ಆದರೆ ಈ ಆಟಗಾರರ ವೆಚ್ಚವನ್ನು ಆಯಾ ದೇಶದ ಮಂಡಳಿಗಳೇ ಭರಿಸಬೇಕಿದೆ' ಎಂದು ಅಧಿಕಾರಿ ನುಡಿದರು. 15 ಮಂದಿ ವೆಚ್ಚವನ್ನು ಮಾತ್ರ ಐಸಿಸಿ ನೋಡಿಕೊಳ್ಳಲಿದೆ.

2016ರ ಬಳಿಕ ಮೊದಲ ಬಾರಿ ಟಿ20 ವಿಶ್ವಕಪ್ ನಿಗದಿಯಾಗಿದೆ. ಅಕ್ಟೋಬರ್ 17ರಿಂದ ನವೆಂಬರ್ 14ರವರೆಗೆ ಒಮನ್, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಮೂರು ತಾಣಗಳಾದ ದುಬೈ, ಅಬುಧಾಬಿ ಮತ್ತು ಶಾರ್ಜಾದಲ್ಲಿ ಪಂದ್ಯಗಳು ನಡೆಯಲಿವೆ.

ಮಹಿಳಾ ಹಾಕಿ: ಸಹಾಯಕ ಕೋಚ್ ಅಂಕಿತಾಗೆ ಸನ್ಮಾನ

ಬೆಂಗಳೂರು: ಭಾರತ ಮಹಿಳಾ ಹಾಕಿ ತಂಡದ ಸಹಾಯಕ ಕೋಚ್ ಅಂಕಿತಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಸನ್ಮಾನಿಸಿದರು.

'ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತದ ಮಹಿಳಾ ಹಾಕಿ ತಂಡ ಅತ್ಯುತ್ತಮ ಪ್ರದರ್ಶನ ತೋರಿದೆ. ಪದಕ ಗೆಲ್ಲಲು ಸಾಧ್ಯವಾಗದಿದ್ದರೂ ಭಾರತೀಯರ ಮನಸ್ಸನ್ನು ತಂಡ ಗೆದ್ದಿದೆ. ಕನ್ನಡದ ಯುವತಿ ಭಾರತದ ತಂಡದ ಸಿಬ್ಬಂದಿಯಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ' ಎಂದು ಬೊಮ್ಮಾಯಿ ಹೇಳಿದರು. ಮಡಿಕೇರಿಯ ಅಂಕಿತಾ ಎರಡು ವರ್ಷಗಳಿಂದ ಮಹಿಳಾ ಹಾಕಿ ತಂಡದ ಜೊತೆ ಇದ್ದಾರೆ.

ಸಂಕ್ಷಿಪ್ತ ಸುದ್ದಿ

ಬೀಚ್ ಕುಸ್ತಿ: ಆಯ್ಕೆ ಟ್ರಯಲ್ಸ್ 16ರಿಂದ

ಬೆಂಗಳೂರು: ಪುರುಷ ಮತ್ತು ಮಹಿಳೆಯರ ರಾಷ್ಟ್ರೀಯ ಬೀಚ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆ ಇದೇ 16ರಂದು ಗದುಗಿನಲ್ಲಿ ನಿಗದಿಯಾಗಿದೆ.

ಪುರುಷರ 70 ಕೆಜಿ, 80 ಕೆಜಿ, 90 ಕೆಜಿ ಮತ್ತು +90 ಕೆಜಿ ವಿಭಾಗಗಳು ಮತ್ತು ಮಹಿಳೆಯರ 50 ಕೆಜಿ, 60 ಕೆಜಿ, 70 ಕೆಜಿ ಮತ್ತು +70 ಕೆಜಿ ವಿಭಾಗಗಳ ಆಯ್ಕೆಯಾಗಿ ಟ್ರಯಲ್ಸ್ ನಡೆಯಲಿದೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಇದೇ 29ರಿಂದ 30ರವರೆಗೆ ತಮಿಳುನಾಡಿನಲ್ಲಿ ನಿಗದಿಯಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೋಚ್‌ಗಳಾದ ಶರಣಗೌಡ (ಮೊ.ಸಂ. 9632052765) ಮತ್ತು ರಮೇಶ್ (7019909528) ಅವರನ್ನು ಸಂಪರ್ಕಿಸುವಂತೆ ಕರ್ನಾಟಕ ಕುಸ್ತಿ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗ್ರ್ಯಾಂಡ್ ಸ್ವಿಸ್ ಲೀಗ್‌ಗೆ ವಿದಿತ್

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ವಿದಿತ್ ಗುಜರಾತಿ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಲೀಗ್‌ಗೆ ಅರ್ಹತೆ ಗಳಿಸಿದ್ದಾರೆ. ಲಾಟ್ವಿಯಾದ ರಿಗಾದಲ್ಲಿ ಅಕ್ಟೋಬರ್ 25ರಿಂದ ಟೂರ್ನಿ ನಡೆಯಲಿದೆ.

ನಾಸಿಕ್ ಮೂಲದ ವಿದಿತ್, ಇತ್ತೀಚೆಗೆ ಕೊನೆಗೊಂಡ ವಿಶ್ವಕಪ್‌ನಲ್ಲಿ ಅಗ್ರ ಎಂಟರೊಳಗಿನ ಸ್ಥಾನ ಗಳಿಸುವ ಮೂಲಕ 2022ರ ಫಿಡೆ ಗ್ರ್ಯಾನ್ ಪ್ರಿಗೂ ಪ್ರವೇಶ ಗಿಟ್ಟಿಸಿದ್ದಾರೆ. ಸೋಚಿಯಲ್ಲಿ ನಡೆದ ವಿಶ್ವಕಪ್‌ನಲ್ಲಿ ವಿದಿತ್ ಕ್ವಾರ್ಟರ್‌ಫೈನಲ್ ತಲುಪಿದ್ದರು. ವಿಶ್ವನಾಥನ್ ಆನಂದ್ ಬಳಿಕ ಈ ಹಂತ ತಲುಪಿದ ಭಾರತದ ಆಟಗಾರ ಎನಿಸಿಕೊಂಡಿದ್ದರು.

ಆರ್ಚರಿ ಕೋಚ್ ತಿವಾರಿ ಸ್ಥಿತಿ ಗಂಭೀರ

ಜಮಶೆಡ್‌ಪುರ (ಪಿಟಿಐ): ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ, ಭಾರತದ ಆರ್ಚರಿ ಕೋಚ್ ಧರ್ಮೇಂದ್ರ ತಿವಾರಿ ಅವರಿಗೆ ಪಾರ್ಶ್ವವಾಯು ಬಾಧಿಸಿದೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಗಂಭೀರವಾಗಿದೆ.

ತಾರಾ ಆರ್ಚರಿ ಪಟುಗಳಾದ ದೀಪಿಕಾ ಕುಮಾರಿ, ಅತನು ದಾಸ್ ಮತ್ತಿತರಿಗೆ ತರಬೇತಿ ನೀಡಿರುವ 49 ವರ್ಷದ ಧರ್ಮೇಂದ್ರ ಅವರಿಗೆ ಗುರುವಾರ ಮೆದುಳಿನ ಶಸ್ತ್ರಚಿಕಿತ್ಸೆ ನೆರವೇರಿಸಲಾಗಿದೆ. ಸದ್ಯ ಅವರ ಆರೋಗ್ಯದ ಮೇಲೆ ವೈದ್ಯರು ನಿಗಾ ಇಟ್ಟಿದ್ದಾರೆ.

'ಯುವ'ನಾಯಕ ಉನ್ಮುಕ್ತ್ ವಿದಾಯ

ಮುಂಬೈ (ಪಿಟಿಐ): ಒಂಬತ್ತು ವರ್ಷಗಳ ಹಿಂದೆ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕರಾಗಿದ್ದ ಉನ್ಮುಕ್ತ್ ಚಾಂದ್ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ಶುಕ್ರವಾರ ನಿವೃತ್ತಿ ಘೋಷಿಸಿದ್ದಾರೆ.

2012ರಲ್ಲಿ ಉತ್ತಮ ಸಾಧನೆ ಮಾಡಿದರೂ ಭಾರತ ತಂಡದಲ್ಲಿ ಆಡುವ ಅವಕಾಶ ಚಾಂದ್‌ಗೆ ಸಿಕ್ಕಿರಲಿಲ್ಲ. ದೇಶಿ ಕ್ರಿಕೆಟ್ ಟೂರ್ನಿಗಳಿಗೆ ಮಾತ್ರ ಸೀಮಿತರಾದರು. 28 ವರ್ಷದ ಚಾಂದ್ ಸರಣಿ ಟ್ವೀಟ್‌ಗಳ ಮೂಲಕ ತಮ್ಮ ನಿವೃತ್ತಿ ನಿರ್ಧಾರವನ್ನು ಘೋಷಿಸಿದ್ದಾರೆ. ವಿಶ್ವಕಪ್ ವಿಜಯದ ಸ್ಮರಣೀಯ ವಿಡಿಯೊ ತುಣುಕುಗಳನ್ನೂ ಅವುಗಳೊಂದಿಗೆ ಲಗತ್ತಿಸಿದ್ದಾರೆ.

ಅವರು ಅಮೆರಿಕದಲ್ಲಿ ನಡೆಯಲಿರುವ ಟಿ20 ಲೀಗ್‌ನಲ್ಲಿ ಆಡುವ ಸಾಧ್ಯತೆ ಇದೆ. ಅವರ ಸಹ ಆಟಗಾರ ಸ್ಮಿತ್ ಪಟೇಲ್ ಈಗಾಗಲೇ ಅಮೆರಿಕದಲ್ಲಿ ಆಡುತ್ತಿದ್ದಾರೆ. ಅಲ್ಲಿಗೆ ತೆರಳಲು ಬಿಸಿಸಿಐನಿಂದ ನಿರಾಕ್ಷೇಪಣ ಪತ್ರ ಪಡೆಯುವುದು ಅವಶ್ಯಕ. ಅದಕ್ಕಾಗಿ ಇಲ್ಲಿ ರಾಜೀನಾಮೆ ನೀಡುವುದು ಕಡ್ಡಾಯ.

ಉನ್ಮುಕ್ತ್ ಚಾಂದ್

'ಈ ನಿರ್ಧಾರ ತೆಗೆದುಕೊಳ್ಳುವುದು ಮನಸ್ಸಿಗೆ ಹಿತವೆನಿಸುತ್ತಿಲ್ಲ. ಕಳೆದ ಕೆಲವು ವರ್ಷಗಳಿಂದ ಅವಕಾಶಗಳು ಮುಕ್ತವಾಗಿಲ್ಲ. ಆದರೂ ಇಲ್ಲಿಯವರೆಗಿನ ಪಯಣ ಬೆಳ್ಳಿಗೆರೆಯಂತೆ ಇದೆ. ಅತ್ಯುತ್ತಮ ನೆನಪುಗಳು ನನ್ನೊಂದಿಗಿವೆ' ಎಂದು ಉನ್ಮುಕ್ತ್ ಬರೆದಿದ್ದಾರೆ.

ಬಲಗೈ ಬ್ಯಾಟ್ಸ್‌ಮನ್ ಮತ್ತು ಆಫ್‌ಬ್ರೇಕ್ ಬೌಲರ್ ಚಾಂದ್ ನಾಯಕತ್ವದ ತಂಡವು 2012ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿತ್ತು. ಫೈನಲ್‌ನಲ್ಲಿ ಅಜೇಯ ಶತಕ (111) ಬಾರಿಸಿದ್ದ ಚಾಂದ್, ಪಂದ್ಯಶ್ರೇಷ್ಠ ಗೌರವ ಗಳಿಸಿದ್ದರು.

'ಹಲವು ಶಿಬಿರಗಳು, ಟೂರ್ನಿಗಳ ಮೂಲಕ ನನ್ನ ಪ್ರತಿಭೆಯನ್ನು ಸಾಬೀತುಪಡಿಸಲು ಅವಕಾಶ ಕೊಟ್ಟ ಬಿಸಿಸಿಐಗೆ ಕೃತಜ್ಞ. ವಯೋಮಿತಿಯ ಟೂರ್ನಿಗಳು ಮತ್ತು ಐಪಿಎಲ್ ಟೂರ್ನಿ ಗಳಲ್ಲಿ ಆಡಲು ಅವಕಾಶ ನೀಡಿದೆ' ಎಂದು ಹೇಳಿದ್ದಾರೆ.

ಚಾಂದ್ 67 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. 3379 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ ಎಂಟು ಶತಕ ಮತ್ತು 16 ಅರ್ಧಶತಕಗಳು ಇವೆ. ಅವರು ದೆಹಲಿ ತಂಡದಲ್ಲಿ ಆಡಿದ್ದರು. ನಂತರ ಕೆಲಕಾಲ ಉತ್ತರಾಖಂಡ ತಂಡದ ನಾಯಕರೂ ಆಗಿದ್ದರು.

ರೊನಾಲ್ಡೊ–ಪ್ಯಾಂಥರ್ಸ್ ಫೈನಲ್ ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೊನಾಲ್ಡೊ ಎಫ್‌ಸಿ ಮತ್ತು ಬೆಂಗಳೂರು ಪ್ಯಾಂಥರ್ಸ್ ಎಫ್‌ಸಿ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಮತ್ತು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ (ಬಿಡಿಎಫ್‌ಎ) 'ಸಿ' ಡಿವಿಷನ್ ಲೀಗ್‌ನ ಪ್ರಶಸ್ತಿಗಾಗಿ ಸೆಣಸಲಿವೆ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಬೆಂಗಳೂರು ಪ್ಯಾಂಥರ್ಸ್ 3–2ರಲ್ಲಿ ಮಹೇಶ್ ರಾಜ್ ಎಫ್‌ಸಿಯನ್ನು ಮಣಿಸಿತು.

ರೊನಾಲ್ಡೊ ಎಫ್‌ಸಿ 2–0ಯಿಂದ ಬೆಂಗಳೂರು ಸಿಟಿ ಎಫ್‌ಸಿಗೆ ಸೋಲುಣಿಸಿತು. ಫೈನಲ್ ಪಂದ್ಯ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಯೂತ್ ಆರ್ಚರಿ: ಭಾರತದ ಪಾರಮ್ಯ

ರೋಕ್ಲೊ, ಪೋಲೆಂಡ್ (ಪಿಟಿಐ): ವಿಶ್ವ ಯೂತ್ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪಾರಮ್ಯ ಮುಂದುವರಿದಿದೆ.

18 ವರ್ಷದೊಳಗಿನ ಮತ್ತು 21 ವರ್ಷದೊಳಗಿನವರ ವಿಭಾಗದ ನಾಲ್ಕು ಸ್ಪರ್ಧೆಗಳಲ್ಲಿ ದೇಶದ ಬಿಲ್ಗಾರರು ಶುಕ್ರವಾರ ಫೈನಲ್ ತಲುಪಿದ್ದಾರೆ.

ಪುರುಷರ ರಿಕರ್ವ್ ಕೆಡೆಟ್ ವಿಭಾಗದಲ್ಲಿ ಬಿಶಾಲ್ ಚಾಂಗ್ಮೈ, ಅಮಿತ್ ಕುಮಾರ್ ಮತ್ತು ವಿಕಿ ರುಹಾಲ್ 5–1ರಿಂದ ಸ್ಪೇನ್ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಕಾಲಿಟ್ಟರು. ರಿಕರ್ವ್ ಜೂನಿಯರ್ ಪುರುಷರ ವಿಭಾಗದಲ್ಲಿ ಪಾರ್ಥ್ ಸಾಳುಂಕೆ, ಆದಿತ್ಯ ಚೌಧರಿ ಮತ್ತು ಧೀರಜ್ ಬೊಮ್ಮದೇವರ 5–3ರಿಂದ ಅಮೆರಿಕ ಎದುರಾಳಿಗಳನ್ನು ಮಣಿಸಿ ಫೈನಲ್‌ಗೆ ಲಗ್ಗೆಯಿಟ್ಟರು.

ಲಂಕಾ ಪ್ರವಾಸ: ಪ್ರಶ್ನೆ ಹುಟ್ಟುಹಾಕಿದ ವೈದ್ಯಾಧಿಕಾರಿ ನಡೆ

ಕೃಣಾಲ್ ಕೋವಿಡ್ ಪರೀಕ್ಷೆ ವಿಳಂಬ?

ನವದೆಹಲಿ (ಪಿಟಿಐ): ಶ್ರೀಲಂಕಾ ಪ್ರವಾಸದ ವೇಳೆ ಕೊರೊನಾ ಸೋಂಕಿತರಾಗಿದ್ದ ಭಾರತದ ಕೃಣಾಲ್ ಪಾಂಡ್ಯ ಅವರ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲು ಅಧಿಕಾರಿಯೊಬ್ಬರು ವಿಳಂಬ ಮಾಡಿದ್ದು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಸರಣಿಗೆ ತೆರಳಿದ್ದ ಬಿಸಿಸಿಐ ವೈದ್ಯಾಧಿಕಾರಿಮಾಡಿದ ಪ್ರಮಾದದಿಂದಾಗಿ ಎಂಟು ಆಟಗಾರರು ಎರಡು ಟ್ವೆಂಟಿ–20 ಪಂದ್ಯಗಳಿಂದ ಹೊರಗುಳಿಯಬೇಕಾಯಿತು ಎನ್ನಲಾಗಿದೆ.

ಕೃಣಾಲ್ ಗಂಟಲು ನೋವು ಬಾಧಿಸುತ್ತಿರುವುದನ್ನು ಜುಲೈ 26ರಂದು ತಂಡದ ವೈದ್ಯ ಅಭಿಜೀತ್ ಸಾಳ್ವೆ ಅವರ ಗಮನಕ್ಕೆ ತಂದಿದ್ದರು. ಆದರೆ ಕೋವಿಡ್ ಕುರಿತ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಅಥವಾ ಆಟಗಾರನನ್ನು ಪ್ರತ್ಯೇಕವಾಸಕ್ಕೆ ಕಳುಹಿಸುವ ವ್ಯವಸ್ಥೆ ಅವರು ಮಾಡಿಲ್ಲ ಎಂಬುದು ಅನುಮಾನಕ್ಕೆ ಕಾರಣವಾಗಿದೆ. ಗಂಟಲು ನೋವಿದ್ದರೂ ತಂಡದ ವೈದ್ಯ, ಕೃಣಾಲ್ ಅವರಿಗೆ ತಂಡದ ಸಭೆಗೆ ಹಾಜರಾಗಲು ಅವಕಾಶ ನೀಡಿದರು. ಜುಲೈ 27ರ ಬೆಳಿಗ್ಗೆ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಯಿತು. ಮಧ್ಯಾಹ್ನ ವರದಿ ಬಂದಿತ್ತು. ಕೃಣಾಲ್ ಅವರ ನಿಕಟ ಸಂಪರ್ಕಿತರು ಎಂದು ಗುರುತಿಸಲಾದ ಎಂಟು ಆಟಗಾರರ ಪರೀಕ್ಷೆ ನಡೆಸಿದ ಬಳಿಕ ಬಿಸಿಸಿಐ ಹಾಗೂ ಶ್ರೀಲಂಕಾ ಕ್ರಿಕೆಟ್ ಮಂಡಳಿಗಳು ಪಂದ್ಯವನ್ನು ಒಂದು ದಿನ ಮುಂದೂಡುವ ನಿರ್ಧಾರ ತೆಗೆದುಕೊಂಡಿದ್ದವು. ಆರಂಭದಲ್ಲಿ ಆಟಗಾರರ ಕೋವಿಡ್ ಪರೀಕ್ಷಾ ವರದಿಗಳು ನೆಗೆಟಿವ್ ಬಂದಿದ್ದವು. ಆದರೆ ಲಂಕಾ ತೊರೆಯುವ ವೇಳೆ ಕೃಷ್ಣಪ್ಪ ಗೌತಮ್ ಹಾಗೂ ಯಜುವೇಂದ್ರ ಚಾಹಲ್ ಅವರಲ್ಲಿ ಸೋಂಕು ಪತ್ತೆಯಾಗಿತ್ತು.

ಕೃಣಾಲ್ ಪಾಂಡ್ಯ– ರಾಯಿಟರ್ಸ್ ಚಿತ್ರ

ಕುಸ್ತಿ: ನೋಟಿಸ್‌ಗೆ ಸೋನಮ್ ಉತ್ತರ

ನವದೆಹಲಿ (ಪಿಟಿಐ): 'ದುರ್ವರ್ತನೆ'ಗೆ ಭಾರತ ಕುಸ್ತಿ ಫೆಡರೇಷನ್‌ನಿಂದ ನೋಟಿಸ್ ಪಡೆದಿದ್ದ ಯುವ ಕುಸ್ತಿಪಟು ಸೋನಮ್ ಮಲಿಕ್ ಶುಕ್ರವಾರ ಪ್ರತಿಕ್ರಿಯಿಸಿದ್ದು, ತಪ್ಪು ಮರುಕಳಿಸುವುದಿಲ್ಲ ಎಂದಿದ್ದಾರೆ. ಫೆಡರೇಷನ್ ಈಗ ತಾತ್ಕಾಲಿಕವಾಗಿ ಅಮಾನತುಗೊಂಡಿರುವ ವಿನೇಶಾ ಫೋಗಟ್ ಅವರ ಉತ್ತರದ ನಿರೀಕ್ಷೆಯಲ್ಲಿದೆ.

ಒಲಿಂಪಿಕ್ಸ್ ವೇಳೆ ಮೂರು ನಿಯಮ ಉಲ್ಲಂಘಿಸಿ ಅಶಿಸ್ತು ತೋರಿದ್ದಾರೆಂದು ವಿನೇಶಾ ಅವರಿಗೆ ಡಬ್ಲ್ಯುಎಫ್‌ಐ ನೋಟಿಸ್ ನೀಡಿತ್ತು. ತಮ್ಮ ಪರವಾಗಿ ಪಾಸ್‌ಪೋರ್ಟ್ ಪಡೆದುಕೊಳ್ಳುವಂತೆ ಸಾಯ್ ಅಧಿಕಾರಿಗಳಿಗೆ ಹೇಳಿದ ಹಿನ್ನೆಲೆಯಲ್ಲಿ ಸೋನಮ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು.

ಶನಿವಾರ, 14 ಆಗಸ್ಟ್ 2021
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ತ್ವಚೆಯ ಹೊಳಪಿಗೆ ಅಕ್ಕಿ ತೊಳೆದ ನೀರು 2



ಕುಟುಂಬದವರೊಂದಿಗೆ ಊಟ ಸೌಹಾರ್ದಕ್ಕೆ ನಾಂದಿ

ಇತ್ತೀಚೆಗೆ ಕುಟುಂಬ ಸದಸ್ಯರ ನಡುವೆ ಸೌಹಾರ್ದ ಭಾವ ಕಡಿಮೆಯಾಗಿದೆ. ಆದರೆ ಕುಟುಂಬದವರೆಲ್ಲರೂ ಮನೆಯಲ್ಲಿ ಜೊತೆಯಾಗಿ ಕುಳಿತು ಊಟ ಮಾಡುವುದರಿಂದ ಕೌಟುಂಬಿಕ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳಬಹುದು.

ಮನಸ್ವಿ

ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿರುವ ಮಾನಸಿ ಶರ್ಮಾಗೆ ಗಂಡ–ಮಕ್ಕಳಿಗೆ ಸಮಯ ಕೊಡಲು ಆಗುತ್ತಿಲ್ಲ ಎಂಬ ಸಂಕಟ. ‘ಮೊದಲೆಲ್ಲಾ ದಿನಕ್ಕೊಮ್ಮೆಯಾದರೂ ಮನೆಯವರೆಲ್ಲಾ ಒಟ್ಟಿಗೆ ಕುಳಿತು ಊಟ–ತಿಂಡಿ ಮಾಡುತ್ತಿದ್ದೆವು. ಆದರೆ ಮನೆಯಿಂದಲೇ ಕಚೇರಿ ಕೆಲಸ ಆರಂಭವಾದಾಗಿನಿಂದ ಎಲ್ಲವೂ ಬದಲಾಗಿದೆ. ಗಂಡ–ಮಕ್ಕಳೊಂದಿಗೆ ಒಟ್ಟಿಗೆ ಕುಳಿತು ತಿನ್ನಲೂ ಸಮಯವಿಲ್ಲ’ ಎಂದು ಫೋನ್‌ನಲ್ಲಿ ಗೆಳತಿ ಜೊತೆ ಮನದ ಸಂಕಟ ಹೇಳಿಕೊಂಡಿದ್ದರು ಮಾನಸಿ.

‘ಈಗೀಗ ಹೆಂಡತಿ–ಮಕ್ಕಳ ಜೊತೆಗಿನ ಬಾಂಧವ್ಯವೇ ಕಡಿಮೆಯಾಗಿದೆ. ಮೊದಲೆಲ್ಲಾ ನಾವು ಒಂದಾಗಿ ಹೋಟೆಲ್‌ಗೆ ಹೋಗುವುದು, ಒಟ್ಟಿಗೆ ಕುಳಿತು ಊಟ ಮಾಡುವುದು ಮಾಡುತ್ತಿದ್ದೆವು. ಆದರೆ ಕೋವಿಡ್ ಶುರುವಾದಾಗಿನಿಂದ ಎಲ್ಲವೂ ಬದಲಾಗಿದೆ. ‘‘ನಾವು ಮೊದಲಿನಂತೆ ಇರಬೇಕು’’ ಎಂದು ಹೆಂಡತಿ–ಮಕ್ಕಳು ಹೇಳುವಾಗ ಸಂಕಟವಾಗುತ್ತದೆ’ ಎಂದು ನೋವು ತೋಡಿಕೊಳ್ಳುತ್ತಾರೆ ಮಾಧ್ಯಮ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಹರೀಶ್ ಗೌಡ.

ಕೊರೊನಾ, ಸತತವಾದ ಲಾಕ್‌ಡೌನ್, ಮನೆಯಿಂದಲೇ ಕಚೇರಿ ಕೆಲಸ ಆರಂಭವಾದಾಗಿನಿಂದ ಕೆಲಸದ ಒತ್ತಡ, ಮಾನಸಿಕ ಚಿಂತೆ, ಸಮಯದ ಅಭಾವದ ಕಾರಣದಿಂದ ಕುಟುಂಬದವರ ನಡುವಿನ ಬಾಂಧವ್ಯ–ಸೌಹಾರ್ದ ಕಡಿಮೆಯಾಗುತ್ತಿದೆ. ಇದರಿಂದ ಕುಟುಂಬದವರಿಗೆ ಸಮಯ ಕೊಡಲು ಸಾಧ್ಯವಾಗುತ್ತಿಲ್ಲ ಎಂಬುದು ದುಡಿಯುವ ಮಂದಿಯ ಅಳಲು. ಆದರೆ ಇದಕ್ಕೆ ಪರಿಹಾರವೆಂದರೆ ‘ಫ್ಯಾಮಿಲಿ ಮೀಲ್ಸ್’ ಅಥವಾ ಕುಟುಂಬದವರೆಲ್ಲಾ ಒಂದಾಗಿ ಕುಳಿತು ಊಟ ಮಾಡುವುದು. ಫ್ಯಾಮಿಲಿ ಮೀಲ್ಸ್ ಎಂಬುದು ಕುಟುಂಬದವರ ನಡುವೆ ಸೌಹಾರ್ದವನ್ನು ಹೆಚ್ಚಿಸುತ್ತದೆ ಎನ್ನುತ್ತದೆ ಅಧ್ಯಯನ. ಜೊತೆಗೆ ಒಟ್ಟಾಗಿ ಕುಳಿತು ಊಟ ಮಾಡುವುದರಿಂದ ಆರೋಗ್ಯವಾಗಿಯೂ, ಸಂತೋಷವಾಗಿಯೂ ಇರಬಹುದು. ದಿನದಲ್ಲಿ ಒಂದು ಬಾರಿಯಾದರೂ ಕುಟುಂಬದವರೆಲ್ಲಾ ಒಟ್ಟಾಗಿ ಕುಳಿತು ಊಟ ಮಾಡುವುದರಿಂದ ಮನಸ್ಸು ಹಾಗೂ ಹೊಟ್ಟೆ ಪ್ರಫುಲ್ಲವಾಗಿರುತ್ತದೆ. ಒಟ್ಟಾಗಿ ಕುಳಿತು ಮಾತನಾಡಿಕೊಂಡು ಊಟ ಮಾಡುವುದರಿಂದ ಮಾನಸಿಕ ಒತ್ತಡವನ್ನೂ ಕಡಿಮೆ ಮಾಡಿಕೊಳ್ಳಬಹುದು.

ಒಟ್ಟಾಗಿ ಇರಲು ಒಂದು ಅವಕಾಶ

ಎಲ್ಲರೂ ಕುಳಿತು ಊಟ ಮಾಡುವುದರಿಂದ ದಿನಕ್ಕೊಂದು ಬಾರಿಯಾದರೂ ಮನೆಯವರೆಲ್ಲರೂ ಒಂದು ಕಡೆ ಸೇರಲು ಅವಕಾಶ ಸಿಕ್ಕಂತಾಗುತ್ತದೆ. ಮಕ್ಕಳು ಕೂಡ ಒಂಟಿಯಾಗಿ ತಿನ್ನುವುದಕ್ಕಿಂತ ಪೋಷಕರ ಜೊತೆ ತಿನ್ನಲು ಹೆಚ್ಚು ಇಷ್ಟಪಡುತ್ತವೆ. ಎಲ್ಲರೂ ಸೇರಿ ಖುಷಿಯಿಂದ ಮಾತನಾಡಿಕೊಂಡು ಅಂದಿನ ದಿನಚರಿ ಹಾಗೂ ನಾಳೆಯ ಬಗ್ಗೆ ಚರ್ಚೆ ಮಾಡಿಕೊಂಡು ತಿನ್ನುವುದರಿಂದ ಮನಸ್ಸಿಗೂ ಖುಷಿ ಸಿಗುತ್ತದೆ. ಮಕ್ಕಳಿಗೂ ತಂದೆ–ತಾಯಿಯ ಜೊತೆ ಸಮಯ ಕಳೆಯಲು ಊಟದ ಟೇಬಲ್ ಉತ್ತಮ ಸ್ಥಳ.

ರುಚಿಯೊಂದಿಗೆ ಆರೋಗ್ಯ

ಮನೆಯವರೆಲ್ಲಾ ಹೋಟೆಲ್‌ಗೆ ಹೋಗಿ ಊಟ ಮಾಡುವುದಕ್ಕಿಂತ ಮನೆಯಲ್ಲೇ ಕುಳಿತು ಊಟ ಮಾಡುವುದು ಮಾನಸಿಕ ಹಾಗೂ ದೈಹಿಕ ಆರೋಗ್ಯ ಎರಡರ ದೃಷ್ಟಿಯಿಂದಲೂ ಉತ್ತಮ. ಮನೆಯಲ್ಲಿ ಎಲ್ಲರಿಗೂ ಇಷ್ಟವಾಗುವ ತಿನಿಸುಗಳನ್ನು ತಯಾರಿಸಿ, ಒಟ್ಟಿಗೆ ಕೂತು ತಿನ್ನುವ ಖುಷಿಯೇ ಬೇರೆ. ಎಲ್ಲರೂ ಒಟ್ಟಾಗಿ ಕುಳಿತು ತಿನ್ನುವಾಗ ಭಿನ್ನ ಖಾದ್ಯಗಳಿಗೆ ಪ್ರಾಮುಖ್ಯ ನೀಡಿ. ರುಚಿಯೊಂದಿಗೆ ಆರೋಗ್ಯಕ್ಕೂ ಹಿತ ಎನ್ನಿಸುವ ಆಹಾರಗಳು ಊಟದ ಟೇಬಲ್ ಅನ್ನು ಅಲಂಕರಿಸಲಿ. ಒಂದು ವೇಳೆ ಊಟಕ್ಕೆ ಜೊತೆಯಾಗಲಿ ಕುಳಿತುಕೊಳ್ಳಲು ಸಾಧ್ಯವಾಗದಿದ್ದರೆ ಸಂಜೆ ಸ್ನಾಕ್ಸ್ ಅಥವಾ ಬೆಳಗಿನ ಉಪಾಹಾರದ ಸಮಯದಲ್ಲಾದರೂ ಒಟ್ಟಾಗಿ ಕುಳಿತುಕೊಳ್ಳಿ.

ಹಾಸ್ಯಕ್ಕೂ ಇರಲಿ ಸಮಯ

ಊಟದ ಟೇಬಲ್‌ನಲ್ಲಿ ಹಾಸ್ಯಕ್ಕೆ ಅವಕಾಶವಿರಲಿ. ನಗುವಿಗೆ ನೋವು, ಒತ್ತಡ, ಚಿಂತೆ ಎಲ್ಲವನ್ನೂ ಮರೆಸುವ ಶಕ್ತಿ ಇದೆ. ಹಾಗಾಗಿ ಎಲ್ಲರೂ ಒಂದಾಗಿ ಊಟಕ್ಕೆ ಕುಳಿತಾಗ ಹಾಸ್ಯ ಚಟಾಕಿ ಹಾರಿಸುತ್ತಾ, ತಮಾಷೆ ಮಾಡಿಕೊಳ್ಳುತ್ತಾ ಊಟ ಮಾಡಿ. ಇದರಿಂದ ಹಿರಿಯರೊಂದಿಗೆ ಮಕ್ಕಳಿಗೂ ಸಂತಸ ಸಿಗುತ್ತದೆ.

ಸಮಯಕ್ಕೆ ಕಾಯಬೇಡಿ

ಒಟ್ಟಾಗಿ ಕುಳಿತು ಊಟ ಮಾಡಲು ನಿರ್ದಿಷ್ಟ ಸಮಯ ಬೇಕು ಎಂದು ಕಾಯಬೇಡಿ. ಈಗಿನ ದಿನಗಳಲ್ಲಿ ಸಮಯದ ಅಭಾವ ಸಾಮಾನ್ಯ, ಹಾಗಾಗಿ ಇರುವ ಸಮಯವನ್ನೇ ಹೊಂದಿಸಿಕೊಳ್ಳಿ. ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ಸಂಜೆ ಸ್ನ್ಯಾಕ್ಸ್, ರಾತ್ರಿ ಊಟ ಹೀಗೆ ಯಾವುದೇ ಇರಲಿ.. ಎಲ್ಲರೂ ಒಟ್ಟಿಗೆ ಕೂತು ತಿನ್ನುವ ಅಭ್ಯಾಸ ಮಾಡಿಕೊಳ್ಳಿ.

GRT JEWELLERS
Since 1964

ಶ್ರಾವಣ ಮಾಸ ಬಂದಿದೆ ! ಹಾಗೆಯೇ ಚಿನ್ನದ ಜೊತೆ ಸಂಪತ್ತು !

ನಮ್ಮ ಬಳೆಗಳ ಮೇಳಾಗೆ ಆಗಮಿಸಿ ಅಪಾರವಾದ ಡಿಜೈನ್‌ಗಳು ಹಾಗೂ ಅಸಂಖ್ಯಾತ ಕಲಾಕೃತಿಗಳನ್ನು ಆಯ್ಕೆಮಾಡಿ, ನಿಮ್ಮೊಂದಿಗೆ ಸಂಪತ್ತನ್ನು ಮನೆಗೆ ತೆಗೆದುಕೊಂಡು ಹೋಗಿ.

₹50 ಕಡಿಮೆ* /ಗ್ರಾಂಗೆ
ಚಿನ್ನಾಭರಣಗಳ ಮೇಲೆ
(7% ಗಿಂತ ಕಡಿಮೆ VA ಇರುವ ಆಭರಣಗಳಿಗೆ ಅನ್ವಯಿಸುವುದಿಲ್ಲ)

10% ಕಡಿಮೆ*
ವಜ್ರಗಳು ಮತ್ತು ಅನ್‌ಕಟ್ ವಜ್ರಗಳು
(ಸಾಲಿಟೈರ್‌ನ ಹೊರತುಪಡಿಸಿ)

ಬಳೆಗಳ ಮೇಳ
ಬಳೆಗಳ ಭರ್ಜರಿ ಕಲೆಕ್ಷನ್

ಬೆಳ್ಳಿ ಆಭರಣಗಳಿಗೆ MRP ಯ ಮೇಲೆ 10% ಕಡಿಮೆ*
ಬೆಳ್ಳಿ ಸಾಮಗ್ರಿಗಳ ವೇಸ್ಟೇಜ್ (VA)ನ ಮೇಲೆ 15% ಕಡಿಮೆ*

UPI ವರ್ಗಾವಣೆಗೆ ಉಡುಗೊರೆಯಾಗಿ ಪ್ರತಿ ಗ್ರಾಂ ಚಿನ್ನದ ಆಭರಣಕ್ಕೆ ಹೆಚ್ಚುವರಿ ರೂ. 20 ಕಡಿಮೆ.

HDFC BANK We understand your world | UPTO ₹5000 CASHBACK# on HDFC Bank Credit Cards. | #Min. transaction: ₹50,000 Offer - 2% cashback Valid till 16th July-15th Aug '2021. T&C apply. Discount valid for online transactions also.

*Offer does not apply to gold coins and bars. This offer cannot be combined with any other offers. Limited period offer. Terms and conditions apply.

ಚಿನ್ನ | ವಜ್ರ | ಪ್ಲಾಟಿನಮ್ | ಬೆಳ್ಳಿ | ಜೆಮ್ ಸ್ಟೋನ್‌ಗಳು

FLAGSHIP SHOWROOM: BENGALURU: JAYANAGAR: 4TH BLOCK, PH: 080-2665 1515
KAMMANAHALLI: PH: 080-2546 1515 | MALLESWARAM: PH: 080-2292 1515
MARATHAHALLI: PH: 080-2540 1515
TAMIL NADU | PUDUCHERRY | ANDHRA PRADESH | TELANGANA || SINGAPORE
Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

ಮೊಟ್ಟ ಮೊದಲ ಭಾರಿ ಬೃಹತ್ ರಿಯಾಯಿತಿ ಮೇಳ!

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಶೂಗಳ ಮೇಲೆ
ನೇರವಾಗಿ ಕಾರ್ಖಾನೆಯ ಉಗ್ರಾಣದಿಂದ ರಿಯಾಯಿತಿ

ಕೋವಿಡ್ 19 ಮತ್ತು **ಆರ್ಥಿಕ ಹಿನ್ನಡೆಯಿಂದಾಗಿ** ನಾವು ಇಂತಹ ಬೃಹತ್ ರಿಯಾಯಿತಿ ನೀಡುತ್ತಿದ್ದೇವೆ ಮತ್ತು **ಬೆಂಗಳೂರಿನ ದಿ ಲಲಿತ್ ಅಶೋಕ್ ಹೊಟೇಲ್‌ನಲ್ಲಿ** ಎಲ್ಲಾ ತಾಜಾ ದಾಸ್ತಾನನ್ನು ಬಿಡುಗಡೆ ಮಾಡಬೇಕೆಂದು ನಮ್ಮ ನಿರ್ದೇಶಕರು ನಿರ್ಧರಿಸಿರುವದರಿಂದ, ನಮ್ಮಲ್ಲಿರುವ ತಾಜಾ ದಾಸ್ತಾನನ್ನು ಸಂಪೂರ್ಣ ಮಾರಾಟ ಮಾಡಲು ಬಯಸುತ್ತಿದ್ದೇವೆ.

After Discount **80%** Sale at venue @ **Rs. 250/- to 1250/-**

Rozy Exports Presents

ಬ್ರಾಂಡೆಡ್ ಮೆನ್ಸ್ ಹಾಗೂ ವುಮನ್ ಫುಟ್‌ವೇರ್ & ಗಾರ್ಮೆಂಟ್ಸ್

Men's & Women Sportswear, T-Shirts, Shorts, Lower, Ladies Lower, Checks Shirts, Footwear MRP Rs.~~2000~~ to ~~3000~~ now only for **Rs.450/-** onwards

aurelia | Levi's | GUESS | ColorPlus | IZOD | W | PUMA | PARK AVENUE | parx | Raymond | Wrangler | JACK & JONES | The Roadster Life Co. | fcuk | BIBA

JACK & JONES Sweat Shirts & Sweaters MRP 3000-4500.......**Rs.800/-** Only

ಕೇವಲ 2 ದಿನಗಳ ಕೊಡುಗೆ ಶನಿ & ಭಾನು 14th & 15th August 2021

Venue

THE LALIT
THE LALIT ASHOK
Kumarakrupa Road, Opp. Golf Club, High Grounds, Bangalore

(Time : 10 am to 9 pm)

ಮಹಿಳೆಯರ, ಪುರುಷರ ಮತ್ತು ಮಕ್ಕಳ ಬ್ರಾಂಡೆಡ್ ಜೀನ್ಸ್, ಟ್ರಸರ್ಸ್, ಚಿನೋಸ್ ಪ್ಯಾಂಟ್, ಕಾರ್ಗೋ, 100% ಕಾಟನ್ ಷರ್ಟ್ಸ್, ಟಿ–ಷರ್ಟ್ಸ್, ಜಾಕೆಟ್ಸ್, ಬರ್ಮುಡಾ, ಫ್ಯಾನ್ಸಿ 3/4, ಮಹಿಳೆಯರಿಗಾಗಿ ಪ್ಯೂರ್ ಕಾಟನ್ ಷಿಕಾನ್ ಕುರ್ತಿ, ಟಾಪ್, ಟಿ–ಷರ್ಟ್, ಪ್ಲಾಜೊ, ಲೋವರ್, ಜೀನ್ಸ್ ಪ್ಯಾಂಟ್ ಮತ್ತು ಸಾವಿರಾರು ವೈವಿಧ್ಯಮಯ ಹಗೂ ವಿನ್ಯಾಸಗಳು ಉಪಲಬ್ಧ.

ಯಾವುದೇ ಐಟಂ ಕೇವಲ **450/– ಮತ್ತು 750/–** ಕ್ಕೆ ಲಭ್ಯ.

ಪಾರ್ಕಿಂಗ್ ಉಚಿತ.
ಪ್ರವೇಶ ಉಚಿತ.

• Bag, Suitcases etc. are restricted in the sale • Which items sold outs, the Counter will be closed. • Sale only for 2 days, in any circumstances it will not be extended.
Note : Our respected customers, please follow the social distancing rules in our exhibition and wear mask. Without mask entry is not allowed. Every hour hall will be sanitized.

ಎಲ್ಲಾ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ.

ಕ್ರಿಯಾಶೀಲ ಸೋಮವಾರಕ್ಕಿರಲಿ ಒಂದಿಷ್ಟು ಯೋಜನೆ

ಸೋಮವಾರ ಬಂತೆಂದರೆ ದುಡಿಯುವ ಮನಗಳಿಗೆ ಅದೇನೋ ಬೇಸರ, ಜೊತೆಗೆ ಆಲಸ್ಯ ಕೂಡ. ಆದರೆ ಒಂದಿಷ್ಟು ಯೋಜನೆಗಳನ್ನು ರೂಢಿಸಿಕೊಂಡರೆ ಸೋಮವಾರವನ್ನು ಖುಷಿಯಿಂದ ಸ್ವಾಗತಿಸಬಹುದು.

ಆರ್‌ಎಸ್

ಸದಾ ಕಚೇರಿ, ಕೆಲಸ, ಮೀಟಿಂಗ್ ಎಂದು ಬ್ಯುಸಿ ಇರುವವರಿಗೆ ಸೋಮವಾರ ಬಂತೆಂದರೆ ಸೋಮಾರಿತನ. ವಾರಾಂತ್ಯದಲ್ಲಿ ಆರಾಮವಾಗಿ ಕಾಲ ಕಳೆದವರಿಗೆ ಸೋಮವಾರ ಬೆಳಿಗ್ಗೆ ಎದ್ದೇಳಲು ಆಲಸ್ಯ. ನಾಳಿನ ಬಗ್ಗೆ ಭಾನುವಾರ ರಾತ್ರಿ ಮಲಗುವಾಗಲೇ ಚಿಂತಿಸುತ್ತಾ ಮಲಗುವವರೇ ಹೆಚ್ಚು. ಒಂದು ಅಧ್ಯಯನದ ಪ್ರಕಾರ ಶೇ 80ರಷ್ಟು ಮಂದಿ ಭಾನುವಾರ ರಾತ್ರಿ ಮಲಗುವಾಗ ಸೋಮವಾರದ ಬಗ್ಗೆ ಆತಂಕ ಪಡುತ್ತಾರಂತೆ. ಆದರೆ ಸೋಮವಾರದ ಬೆಳಗನ್ನು ಸಂತೋಷ ಹಾಗೂ ಉತ್ಸಾಹದಿಂದ ಸ್ವಾಗತಿಸಲು ಕೆಲವೊಂದು ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ಅದನ್ನು ಅನುಸರಿಸುವುದರಿಂದ ಕೇವಲ ಸೋಮವಾರ ಮಾತ್ರವಲ್ಲ ವಾರವಿಡೀ ಖುಷಿಯಿಂದ ಕಳೆಯಬಹುದು.

ಬೆಳಗೆದ್ದ ಕೂಡಲೇ ಇಮೇಲ್ ನೋಡಬೇಡಿ

ಕಚೇರಿ ಕೆಲಸ ಎಂದ ಮೇಲೆ ಇಮೇಲ್, ವ್ಯಾಟ್ಸ್‌ಆ್ಯಪ್ ನೋಡುವುದು ಅನಿವಾರ್ಯ. ಈಗಂತೂ ವರ್ಕ್ ಫ್ರಂ ಹೋಮ್ ಆಗಿರುವ ಕಾರಣ ಬಹುತೇಕ ಎಲ್ಲಾ ಕೆಲಸಗಳೂ ವಾಟ್ಸ್‌ಆ್ಯಪ್, ಇಮೇಲ್ ಮೂಲಕವೇ ನಡೆಯುತ್ತವೆ. ಹಾಗಂತ ಬೆಳಿಗ್ಗೆ ಎದ್ದ ಕೂಡಲೇ ಕಚೇರಿಗೆ ಸಂಬಂಧಿಸಿದ ವಾಟ್ಸ್‌ಆ್ಯಪ್, ಇಮೇಲ್ ಸಂದೇಶಗಳನ್ನು ನೋಡಬೇಡಿ. ಬೆಳಿಗ್ಗೆ ಎದ್ದ ಮೇಲೆ ಈ ಸಂದೇಶಗಳನ್ನು ನೋಡಲೆಂದೇ ಒಂದಿಷ್ಟು ಸಮಯ ಮೀಸಲಿಡಿ. ಹಾಸಿಗೆಯಿಂದ ಎದ್ದ ಕೂಡಲೇ ಕಚೇರಿ ಸಂದೇಶಗಳನ್ನು ನೋಡಿ ಮನಸ್ಸಿಗೆ ಒತ್ತಡ ತಂದುಕೊಳ್ಳಬೇಡಿ.

ಭಾನುವಾರ ಸಂಜೆಯೇ ಯೋಜನೆ ರೂಪಿಸಿ

ಸೋಮವಾರದ ಕೆಲಸಗಳಿಗೆ ಭಾನುವಾರವೇ ಯೋಜನೆ ರೂಪಿಸಿಕೊಳ್ಳಿ. ಸೋಮವಾರದಿಂದ ಮುಂದಿನ ವಾರಾಂತ್ಯದವರೆಗೆ ಏನೇನು ಕೆಲಸಗಳನ್ನು ಮಾಡಬೇಕು ಎಂದು ಪಟ್ಟಿ ತಯಾರಿಸಿಕೊಳ್ಳಿ. ಅದರ ಪ್ರಕಾರವೇ ನಡೆದುಕೊಳ್ಳಿ. ಇದೇ ಹವ್ಯಾಸವನ್ನು ರೂಢಿಸಿಕೊಂಡರೆ ಸೋಮವಾರದ ಬೆಳಗು ಬೇಸರ ತರಿಸುವುದಿಲ್ಲ. ನಿಮ್ಮ ದಿನಚರಿಯನ್ನು ವೇಳಾಪಟ್ಟಿಯಂತೆ ಪಾಲಿಸುವುದರಿಂದ ಮಾನಸಿಕ ಒತ್ತಡವೂ ಕಡಿಮೆಯಾಗುತ್ತದೆ. ಬೆಳಗಿನಿಂದ ಸಂಜೆಯವರೆಗೆ ಉಲ್ಲಾಸದಿಂದಿರಲು ಸಾಧ್ಯ.

ದೈಹಿಕ ಚಟುವಟಿಕೆ

ಹಲವರು ಬೆಳಿಗ್ಗೆ ಏಳುವ ಸಲುವಾಗಿ ಅಲಾರ್ಮ್ ಇರಿಸಿಕೊಂಡು ಮಲಗುತ್ತಾರೆ. ಆದರೆ ಅದರ ರಿಂಗ್ ಕೇಳಿಸಿದ ಕೂಡಲೇ ಅದನ್ನು ಬಂದ್ ಮಾಡಿ ಮತ್ತೆ ಮಲಗುತ್ತಾರೆ. ಇದು ಒಳ್ಳೆಯ ಅಭ್ಯಾಸವಲ್ಲ. ಜೊತೆಗೆ ಬೆಳಿಗ್ಗೆ ಎದ್ದ ಕೂಡಲೇ ಕನಿಷ್ಠ ಅರ್ಧ ಗಂಟೆಯಾದರೂ ದೈಹಿಕ ಚಟುವಟಿಕೆಗೆ ಸಮಯ ಮೀಸಲಿಡಬೇಕು. ಇದು ಮೆದುಳು 'ಫೀಲ್-ಗುಡ್' ರಾಸಾಯನಿಕವನ್ನು ಸ್ರವಿಸುವಂತೆ ಮಾಡಿ ದಿನವಿಡೀ ಸಕಾರಾತ್ಮಕ ಅಂಶ ದೇಹದಲ್ಲಿ ಇರುವಂತೆ ನೋಡಿಕೊಳ್ಳುತ್ತದೆ ಎನ್ನುತ್ತಾರೆ ತಜ್ಞರು. ಬೆಳಿಗ್ಗೆ ದೈಹಿಕ ಚಟುವಟಿಕೆ ಮಾಡುವುದರಿಂದ ಮಾನಸಿಕವಾಗಿಯೂ ಕ್ರಿಯಾಶೀಲರಾಗಿರಲು ಸಾಧ್ಯ.

ಆಲೋಚನೆಗಳನ್ನು ನಿಯಂತ್ರಿಸುವುದು

ಮನುಷ್ಯನ ಮೆದುಳು ಸಕಾರಾತ್ಮಕ ಯೋಚನೆಗಳಿಗಿಂತ ನಕಾರಾತ್ಮಕ ಯೋಚನೆಗಳ ಮೇಲೆ ಹೆಚ್ಚು ಗಮನ ಹರಿಸುತ್ತದೆ. ಆ ಕಾರಣಕ್ಕೆ ನಾವು ಉದ್ದೇಶಪೂರ್ವಕವಾಗಿ ನಮ್ಮ ಆಲೋಚನೆಗಳನ್ನು ನಿಯಂತ್ರಿಸಬೇಕು ಹಾಗೂ ಮನಸ್ಸನ್ನು ಸರಿಯಾದ ದಿಕ್ಕಿನಲ್ಲಿ ಯೋಚಿಸುವಂತೆ ಮಾರ್ಗದರ್ಶನ ನೀಡಬೇಕು. ಬೆಳಿಗ್ಗೆ ಎದ್ದ ಕೂಡಲೇ ಸಕಾರಾತ್ಮಕ ಅಂಶಗಳ ಮೇಲೆ ಗಮನ ಹರಿಸಬೇಕು. ಪ್ರಾರ್ಥನೆ, ಧ್ಯಾನ ರೂಢಿಸಿಕೊಳ್ಳಬೇಕು.

ಹಾಸಿಗೆ ಜೋಡಿಸುವುದು

ಬೆಳಿಗ್ಗೆ ಎದ್ದ ಕೂಡಲೇ ಹಾಸಿಗೆ, ಹೊದಿಕೆಯನ್ನು ಹೇಗಿದೆಯೋ ಹಾಗೇ ಇರಿಸಿ ಮುಂದಿನ ಕೆಲಸಗಳನ್ನು ಮಾಡುವುದು ಹಲವರ ಅಭ್ಯಾಸ. ಆದರೆ ಇದರಿಂದ ಮನುಷ್ಯನಲ್ಲಿ ದೈಹಿಕ ಹಾಗೂ ಮಾನಸಿಕವಾಗಿ ಉತ್ಪಾದಕತೆಯ ಅಂಶ ಕುಗ್ಗುತ್ತದೆ. ಆ ಕಾರಣಕ್ಕೆ ಹಾಸಿಗೆಯಿಂದ ಎದ್ದ ಕೂಡಲೇ ಹಾಸಿಗೆಯನ್ನು ನೀಟಾಗಿ ಜೋಡಿಸಿ ಇಡಬೇಕು. ಹೊದಿಕೆಯನ್ನು ಮಡಿಸಿ, ದಿಂಬುಗಳನ್ನು ಜೋಡಿಸಿ ಇಡಿ. ❖

ಮಣಿಕಟ್ಟಿಗೆ ಬ್ಯಾಂಡ್ ಸುತ್ತುವ ಮುನ್ನ..

ಆರೋಗ್ಯ

ತಲೆಕೂದಲನ್ನು ಗಾಳಿಗೆ ಹಾರಾಡಿಸಿಕೊಂಡಿರುವುದು ಹೆಣ್ಣುಮಕ್ಕಳಿಗೆ ಇಷ್ಟ. ಕೆಲವೊಮ್ಮೆ ಪೋನಿ ಹಾಕಿಕೊಂಡಿದ್ದರೂ ಹೇರ್ ಬ್ಯಾಂಡ್ ತೆಗೆದು ಕೂದಲನ್ನು ಹಾರಾಡಲು ಬಿಡುತ್ತಾರೆ. ಅಂತಹ ಸಂದರ್ಭದಲ್ಲಿ ಹೇರ್ ಬ್ಯಾಂಡ್ ಅನ್ನು ಕೈ ಮಣಿಕಟ್ಟಿಗೆ ಸಿಕ್ಕಿಸಿಕೊಂಡು ಓಡಾಡುತ್ತಾರೆ. ಕೆಲವರು ಸ್ಟೈಲ್‌ಗೂ ಕೂಡ ಬ್ಯಾಂಡ್ ಅನ್ನು ಮಣಿಕಟ್ಟಿಗೆ ಹಾಕಿಕೊಳ್ಳುತ್ತಾರೆ. ಆದರೆ ಈ ರೀತಿ ಮಾಡುವುದರಿಂದ ಚರ್ಮದ ಹಾಗೂ ನರದ ಸಮಸ್ಯೆಗೆ ಕಾರಣವಾಗುತ್ತದೆ ಎಂಬುದು ತಜ್ಞರ ಅಭಿಪ್ರಾಯ.

- ಹೇರ್ ಬ್ಯಾಂಡ್ ಅನ್ನು ಮಣಿಕಟ್ಟಿಗೆ ಸಿಕ್ಕಿಸಿಕೊಳ್ಳುವುದರಿಂದ ಚರ್ಮದ ಅಲರ್ಜಿ ಉಂಟಾಗುತ್ತದೆ, ಅಲ್ಲದೇ ಇದರಿಂದ ಚರ್ಮದಲ್ಲಿ ಕಿರಿಕಿರಿ ಉಂಟಾಗುತ್ತದೆ.
- ಬ್ಯಾಂಡ್ ಅನ್ನು ಮಣಿಕಟ್ಟಿಗೆ ಸಿಕ್ಕಿಸಿಕೊಳ್ಳುವ ಅಭ್ಯಾಸ ಹಾನಿಕಾರಕವಲ್ಲ, ಆದರೂ ಬಿಗಿಯಾಗಿ ಸಿಕ್ಕಿಸಿಕೊಳ್ಳುವುದು ಸರಿಯಲ್ಲ.
- ಬಿಗಿಯಾಗಿ ಕೈಗೆ ಬ್ಯಾಂಡ್ ಸುತ್ತಿಕೊಳ್ಳುವುದರಿಂದ ರಕ್ತ ಸಂಚಾರಕ್ಕೆ ತೊಂದರೆಯಾಗುತ್ತದೆ. ಅಲ್ಲದೇ ಕೆಲವೊಮ್ಮೆ ತೀವ್ರ ಸ್ವರೂಪದ ನೋವು ಹಾಗೂ ತೊಂದರೆಗೂ ಕಾರಣವಾಗಬಹುದು.
- ಬ್ಯಾಂಡ್ ಸುತ್ತಿಕೊಂಡಾಗ ಮಣಿಕಟ್ಟಿನ ಸುತ್ತಲೂ ಬಿಳಿಯಾಗುತ್ತದೆ. ಜೊತೆಗೆ ಆ ಜಾಗದಲ್ಲಿ ಚರ್ಮವು ತಣ್ಣಗಾಗುತ್ತದೆ. ಅಂತಹ ಸಂದರ್ಭದಲ್ಲಿ ತಟ್ಟನೆ ಬ್ಯಾಂಡ್ ತೆಗೆದಿರಿಸಬೇಕು.
- ಮಣಿಕಟ್ಟಿನ ಸುತ್ತಲೂ ಹೃದಯಕ್ಕೆ ಸಂಪರ್ಕಕ್ಕೆ ಹೊಂದುವ ನರಗಳಿರುತ್ತವೆ. ಅತಿ ಬಿಗಿಯಾಗಿ ಬ್ಯಾಂಡ್ ಸುತ್ತಿಕೊಳ್ಳುವುದರಿಂದ ಸ್ನಾಯುರಜ್ಜುಗಳು ಹಾಗೂ ನರಗಳು ಸಂಕುಚಿತಗೊಂಡು ಹೃದಯಕ್ಕೂ ತೊಂದರೆ ಉಂಟು ಮಾಡಬಹುದು.
- ಒಂದು ವೇಳೆ ರಕ್ತನಾಳಗಳು ಸಂಕುಚಿತಗೊಂಡರೆ ಸುತ್ತಲಿನ ಸ್ನಾಯು ಹಾಗೂ ನರಗಳಲ್ಲಿ ರಕ್ತಸಂಚಾರ ನಿಲ್ಲುತ್ತದೆ. ಇದರಿಂದ ನರಗಳಲ್ಲಿ ಝುಮ್ಮೆನ್ನುವ ಭಾವನೆ ಮೂಡುವುದು, ಮರಗಟ್ಟುವುದು ಹಾಗೂ ನೋವು ಕಾಣಿಸುತ್ತದೆ. ತಕ್ಷಣಕ್ಕೆ ತೆಗೆದರೆ ರಕ್ತಸಂಚಾರ ಸುಗಮವಾಗಿ ತೊಂದರೆಯಾಗುವುದನ್ನು ತಪ್ಪಿಸಬಹುದು. ರಕ್ತನಾಳಗಳು ತುಂಬಾ ದಿನಗಳವರೆಗೆ ಸಂಕುಚಿತವಾಗಿದ್ದರೆ ಶಾಶ್ವತವಾಗಿ ಹಾನಿಯಾಗುವ ಸಾಧ್ಯತೆಯೂ ಇದೆ.
- ಕಾರ್ಪಲ್ ಟನಲ್‌ನಲ್ಲಿನ ನರಗಳಿಗೆ ತೊಂದರೆಯಾದರೆ, ಅದಕ್ಕೆ ಆಳವಾಗಿ ಪೆಟ್ಟು ಬಿದ್ದರೆ ಅಕ್ಕಪಕ್ಕದ ನರಗಳಲ್ಲೂ ಸಹಿಸು ಅಸಾಧ್ಯವಾದ ನೋವು ಉಂಟಾಗುತ್ತದೆ.
- ಮಣಿಕಟ್ಟಿನಲ್ಲಿ ಹೇರ್‌ಬ್ಯಾಂಡ್‌ನಿಂದ ಚರ್ಮದ ಅಲರ್ಜಿ ಉಂಟಾದರೆ ಚರ್ಮ ಕೆಂಪಾಗುತ್ತದೆ, ಅಲ್ಲದೇ ದದ್ದು ಉಂಟಾಗಿ ಸಿಪ್ಪೆ ಏಳುತ್ತದೆ. ಇದರಿಂದ ಹೈಪರ್‌ಪಿಗ್ಮಂಟೇಶನ್ ಸಮಸ್ಯೆ ಕೂಡ ಕಾಣಿಸಬಹುದು.
- ಹೇರ್ ಬ್ಯಾಂಡ್ ಅಲರ್ಜಿ ಕೆಲವೊಮ್ಮೆ ತಕ್ಷಣಕ್ಕೆ ತಿಳಿಯುವುದಿಲ್ಲ. ನಿಧಾನಕ್ಕೆ ತಿಳಿಯುವುದಲ್ಲದೇ ದೀರ್ಘಕಾಲದವರೆಗೆ ತೊಂದರೆ ಇರುತ್ತದೆ.
- ಬಹಳ ಹೊತ್ತು ಹೇರ್ ಬ್ಯಾಂಡ್ ಧರಿಸುವುದರಿಂದ ಆ ಭಾಗದಲ್ಲಿ ಬ್ಯಾಕ್ಟೀರಿಯಾಗಳು ಸೇರಿಕೊಳ್ಳಬಹುದು. ಇವು ಚರ್ಮದಲ್ಲಿ ಸೋಂಕು ಉಂಟು ಮಾಡುವುದಲ್ಲದೇ ಚರ್ಮದ ಬಿರುಕಿಗೂ ಕಾರಣವಾಗುತ್ತವೆ. ಆ ಕಾರಣಕ್ಕೆ ಸಡಿಲವಾಗಿ ಹೇರ್ ಬ್ಯಾಂಡ್ ತೊಡುವುದು, ಅದನ್ನು ಆಗಾಗ ತೊಳೆಯುವುದು ಹಾಗೂ ಬದಲಿಸುವುದು ಸೂಕ್ತ. ❖

ಸಮಂತಾ ಅಕ್ಕಿನೇನಿ ಇನ್‌ಸ್ಟಾಗ್ರಾಮ್ ಚಿತ್ರ

ಆರ್ಗಾಂಝಾ ಸೀರೆಯಲ್ಲಿ ಅಡಗಿದೆ ಅಂದ

ರೇಷ್ಮಾ

ಫ್ಯಾಷನ್

ಹಬ್ಬಗಳ ಸಾಲು ಶುರುವಾಗಿದೆ. ಜೊತೆಗೆ ಕೋವಿಡ್ ಮಧ್ಯೆಯೂ ಕೆಲವು ವಿವಾಹ ಕಾರ್ಯಕ್ರಮಗಳು ನಡೆಯುತ್ತಿವೆ. ಹಬ್ಬವೆಂದರೆ, ಶುಭ ಕಾರ್ಯಗಳೆಂದರೆ ಸೀರೆಗಳ ವೈಭವವಿಲ್ಲದೇ ಊಹಿಸಲೂ ಸಾಧ್ಯವಿಲ್ಲ. ಸಣ್ಣಪುಟ್ಟ ವಿಶೇಷಗಳಿಗೂ ಸೀರೆ ಖರೀದಿಸಿ ವಾರ್ಡ್‌ರೋಬ್ ಅನ್ನು ತುಂಬಿಸುವ ಹೆಣ್ಣುಮಕ್ಕಳು ಇನ್ನು ವರಮಹಾಲಕ್ಷ್ಮಿಗೆ ಕೊಂಡುಕೊಳ್ಳದಿರುತ್ತಾರೆಯೇ? ಹಾಗೆಯೇ ಫ್ಯಾಷನ್ ಲೋಕದ ಬದಲಾವಣೆಗೆ ತಕ್ಕಂತೆ ಸೀರೆಯ ವಿನ್ಯಾಸ, ಬಟ್ಟೆಯಲ್ಲೂ ಬದಲಾವಣೆಯಾಗುತ್ತಿದ್ದು, ಹೊಸ ಫ್ಯಾಷನ್ನಿನ ಸೀರೆ ಕೊಂಡು ಸಂಭ್ರಮಿಸುವವರಿಗೇನೂ ಕೊರತೆಯಿಲ್ಲ. ಮಾರುಕಟ್ಟೆಯಲ್ಲಿ ತರಾವರಿ ಸೀರೆಗಳ ನಡುವೆ ಇತ್ತೀಚೆಗೆ ಹೆಚ್ಚು ಸದ್ದು ಮಾಡುತ್ತಿರುವುದೆಂದರೆ ಆರ್ಗಾಂಝಾ ಸೀರೆ.

ಆರ್ಗಾಂಝಾ ಸೀರೆ...

ಆರ್ಗಾಂಝಾ ಎನ್ನುವುದು ರೇಷ್ಮೆ ಬಟ್ಟೆಯಿಂದ ಸಾಂಪ್ರದಾಯಿಕವಾಗಿ ತಯಾರಿಸುವ, ಇತ್ತೀಚೆಗೆ ಹೆಚ್ಚು ಬೇಡಿಕೆ ಹೊಂದಿರುವ ಸೀರೆಯಾಗಿದೆ. ಕೆಲವೊಮ್ಮೆ ನೈಲಾನ್ ಅಥವಾ ಪಾಲಿಯೆಸ್ಟರ್ ಬಟ್ಟೆಯಿಂದಲೂ ಈ ಸೀರೆಯನ್ನು ತಯಾರಿಸಲಾಗುತ್ತದೆ. ಸರಳ ಹಾಗೂ ಸುಂದರವಾಗಿರುವ ಈ ಸೀರೆಯಲ್ಲಿ ನೇಯ್ಗೆಯು ಎದ್ದು ಕಾಣುವಂತೆ ಇರುತ್ತದೆ. ಡಿನ್ನರ್ ನೈಟ್, ಕಾಕ್‌ಟೇಲ್ ಪಾರ್ಟಿಗಳಿಗೆ ಈ ಸೀರೆ ಹೊಂದುತ್ತದೆ. ಇದನ್ನು ಉಟ್ಟರೆ ಐಷಾರಾಮಿ ನೋಟ ಸಿಗುವುದಲ್ಲದೇ ವರ್ಚಸ್ಸು ಹೆಚ್ಚುತ್ತದೆ. ತೆಳ್ಳನೆಯ ಸೀರೆಯ ಮೇಲೆ ಹೂವಿನ ಚಿತ್ತಾರವಿರುವ ಈ ಸೀರೆಯನ್ನು ಮೆಚ್ಚದೇ ಇರುವ ಹೆಣ್ಣುಮಕ್ಕಳು ಕಡಿಮೆ ಎಂದೇ ಹೇಳಬಹುದು.

ಮದುವೆ, ಪಾರ್ಟಿಯಲ್ಲಿ ರಂಗು

ಇತ್ತೀಚೆಗೆ ಮದುವೆ, ಗೃಹಪ್ರವೇಶದಂತಹ ಕಾರ್ಯಕ್ರಮಗಳಲ್ಲಿ ಹೆಣ್ಣುಮಕ್ಕಳು ಆರ್ಗಾಂಝಾ ಸೀರೆಯನ್ನು ಉಡಲು ಇಷ್ಟಪಡುತ್ತಾರೆ. ಧರಿಸಿದಾಗ ಸ್ಟೈಲಿಷ್ ಆಗಿ ಸೌಂದರ್ಯವನ್ನು ಹೆಚ್ಚಿಸುವ ಈ ಸೀರೆ ಇಂತಹ ಕಾರ್ಯಕ್ರಮಗಳಲ್ಲಿ ಎದ್ದು ಕಾಣುವಂತೆ ಮಾಡುತ್ತದೆ. ತಿಳಿ ಬಣ್ಣದ ಮೇಲೆ ಗಾಢ ಬಣ್ಣದ ಹೂವಿನ ಚಿತ್ತಾರವಿರುವ ಸೀರೆಗಳು ಮದುವೆಯಂತಹ ಕಾರ್ಯಕ್ರಮಕ್ಕೆ ಹೆಚ್ಚು ಸೂಕ್ತ ಎನ್ನಿಸುತ್ತವೆ. ಇತ್ತೀಚೆಗೆ ಹೆಣ್ಣುಮಕ್ಕಳು ಫ್ಯೂಷನ್ ಫ್ಯಾಷನ್ ಮೇಲೆ ಹೆಚ್ಚು ಒಲವು ತೋರುವ ಕಾರಣ ಇದು ಹೆಚ್ಚು ಬೇಡಿಕೆ ಪಡೆದುಕೊಂಡಿದೆ. ಭಿನ್ನ ವಿನ್ಯಾಸ ಹಾಗೂ ಹೆಚ್ಚು ವರ್ಕ್‌ಗಳಿರುವ ಸೆರಗು ಹೊಂದಿರುವ ಆರ್ಗಾಂಝಾ ಸೀರೆ ಒಳ್ಳೆಯ ಲುಕ್ ನೀಡುತ್ತದೆ.

ಮಿಲೇನಿಯಲ್‌ಗಳ ಅಚ್ಚುಮೆಚ್ಚು

ಸರಳ, ಹಗುರವಾಗಿದ್ದು ಸ್ಟೈಲಿಶ್ ಆಗಿರುವ ಸೀರೆ ಮಿಲೇನಿಯಲ್ ಯುವತಿಯರ ಮನ ಕದ್ದಿರುವುದು ಸುಳ್ಳಲ್ಲ. ನೋಡಲು ತೆಳು ಅನ್ನಿಸಿದರೂ ಸೀರೆ ಉಟ್ಟ ಮೇಲೆ ನೋಟವೇ ಬದಲಾಗುವಂತೆ ಮಾಡುವ ಈ ಸೀರೆಗೆ ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಇರುವುದರಿಂದ ಖ್ಯಾತ ವಿನ್ಯಾಸಕಾರರೂ ಇದರ ಬಗ್ಗೆ ಹೆಚ್ಚು ಆಸ್ಥೆ ವಹಿಸುತ್ತಿದ್ದಾರೆ.

ಬಾಲಿವುಡ್, ಹಾಲಿವುಡ್‌ನಲ್ಲೂ ಸದ್ದು

ಫ್ಯಾಷನ್ ಮಾರುಕಟ್ಟೆಯಲ್ಲಿ ಹೊಸತಾಗಿ ಯಾವುದೇ ಬರಲಿ ಅದನ್ನು ಮೊದಲು ಮೆಚ್ಚಿ ಪ್ರಚಾರ ನೀಡುವುದು ಸಿನಿತಾರೆಯರು. ಈ ಆರ್ಗಾಂಝಾ ಸೀರೆಯನ್ನೂ ಬಾಲಿವುಡ್ ಮಾತ್ರವಲ್ಲದೇ ಹಾಲಿವುಡ್ ಸಿನಿತಾರೆಯರೂ ಮೆಚ್ಚಿ ಧರಿಸಿದ್ದಾರೆ. ಕರೀನಾ ಕಪೂರ್, ಅನುಷ್ಕಾ ಶರ್ಮಾ, ಶಿಲ್ಪಾ ಶೆಟ್ಟಿ, ಸಮಂತಾ ಮೊದಲಾದ ನಟಿಮಣಿಯರು ಈ ಸೀರೆಯನ್ನು ಮೆಚ್ಚಿದ್ದಾರೆ, ಅಲ್ಲದೇ ಆರ್ಗಾಂಝಾ ಸೀರೆ ಧರಿಸಿದ್ದ ತಮ್ಮ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು ಖುಷಿಪಟ್ಟಿದ್ದಾರೆ.

ಆರ್ಗಾಂಝಾ ಸೀರೆಯ ಕೆಲವು ಆಸಕ್ತಿದಾಯಕ ಅಂಶಗಳು

- ಇದು ಯಾವುದೇ ಬಣ್ಣ ಹಾಗೂ ಶೇಡ್‌ನಲ್ಲಿ ಆಕರ್ಷಕವಾಗಿ ಕಾಣುತ್ತದೆ. ಆಕರ್ಷಕ ಟೋನ್ ಹಾಗೂ ಬಣ್ಣದ ಸೀರೆಗಳು ಲಭ್ಯವಿರುವ ಕಾರಣ ಎಲ್ಲರಿಗೂ ಇಷ್ಟವಾಗುತ್ತದೆ. ಹಣ ಹಾಗೂ ಆದ್ಯತೆಗೆ ತಕ್ಕಂತೆ ಖರೀದಿಸಲು ಸಾಧ್ಯವಿದೆ.
- ಈ ಸೀರೆಯ ಬಟ್ಟೆ ಭಿನ್ನವಾಗಿರುವ ಕಾರಣ ಸುಲಭವಾಗಿ ಡಿಜಿಟಲ್ ವಿನ್ಯಾಸ ಮಾಡಬಹುದಾಗಿದೆ. ಆ ಕಾರಣಕ್ಕೆ ಫ್ಯಾಷನ್ ವಿನ್ಯಾಸಕರು ಈ ಸೀರೆಯ ಮೇಲೆ ಭಿನ್ನ, ವಿಭಿನ್ನ ವಿನ್ಯಾಸಗಳನ್ನು ಚಿತ್ರಿಸುತ್ತಾರೆ. ಕಂಪ್ಯೂಟರ್ ಡಿಸೈನ್‌ಗಳನ್ನೂ ಸೀರೆಯಲ್ಲಿ ಹೆಚ್ಚಾಗಿ ಕಾಣಬಹುದು. ಫ್ಯಾಷನ್ ವಿನ್ಯಾಸಕರ ಕಲ್ಪನೆಯ ಹಲವು ಚಿತ್ತಾರಗಳನ್ನು ಸೀರೆಯಲ್ಲಿ ಮೂಡಿಸಬಹುದು.
- ಇದು ವಧುವಿನ ಉಡುಗೆಗಳಿಗೆ ಉತ್ತಮವಾಗಿರುತ್ತದೆ. ವಿಶೇಷ ವಿನ್ಯಾಸ, ಅನನ್ಯ ಫ್ಯಾಬ್ರಿಕ್ ಹೊಂದಿರುವ ಕಾರಣ ಧರಿಸಿದವರ ಸೊಬಗು ಹಾಗೂ ಸೌಂದರ್ಯವನ್ನು ಎತ್ತಿ ಹಿಡಿಯುತ್ತದೆ.

ಆನ್‌ಲೈನ್‌ನಲ್ಲೂ ಹೆಚ್ಚಿದ ಬೇಡಿಕೆ

ಸೀರೆ ಮಳಿಗೆಗಳಲ್ಲಿ ಮಾತ್ರವಲ್ಲದೇ ಆನ್‌ಲೈನ್‌ನಲ್ಲೂ ಆರ್ಗಾಂಝಾ ಸೀರೆ ಖರೀದಿಯ ಭರಾಟೆ ಜೋರಾಗಿದೆ. ಅದರಲ್ಲೂ ಹಬ್ಬಹರಿದಿನಗಳಲ್ಲಿ ಆನ್‌ಲೈನ್ ಖರೀದಿ ಬೇಡಿಕೆ ಹೆಚ್ಚಿದೆ. ಬಹುತೇಕ ಎಲ್ಲಾ ಆನ್‌ಲೈನ್ ಮಾರುಕಟ್ಟೆಯಲ್ಲಿ ವಿಭಿನ್ನ ವಿನ್ಯಾಸ ಹಾಗೂ ಬಣ್ಣದ ಆರ್ಗಾಂಝಾ ಸೀರೆಗಳಿವೆ. ಆಫ್‌ಲೈನ್ ಮಳಿಗೆಗಳಿಗೆ ಹೋಲಿಸಿದರೆ ಆನ್‌ಲೈನ್ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ಕಡಿಮೆ ಇದೆ. ಅಲ್ಲದೇ ಹಬ್ಬದ ದಿನಗಳಲ್ಲಿ ವಿಶೇಷ ರಿಯಾಯಿತಿ ಇರುವ ಕಾರಣ ಇನ್ನಷ್ಟು ಕಡಿಮೆ ಬೆಲೆಗೆ ಗ್ರಾಹಕರನ್ನು ತಲುಪುತ್ತಿದೆ. ❖

ತ್ವಚೆಯ ಹೊಳಪಿಗೆ ಅಕ್ಕಿ ತೊಳೆದ ನೀರು

ಸೌಂದರ್ಯ



ಕೊರಿಯನ್ನರು ಹಾಗೂ ಜಪಾನಿಗರಲ್ಲಿ ಸೌಂದರ್ಯ ಪ್ರಜ್ಞೆ ಕೊಂಚ ಹೆಚ್ಚೇ ಎಂದು ಹೇಳಬಹುದು. ಅವರ ಚರ್ಮದ ಹೊಳಪು ನೋಡಿದಾಗ ನಮ್ಮ ಚರ್ಮವು ಹೀಗೇ ಕಾಂತಿಯಿಂದ ಇರಬೇಕು ಎನ್ನಿಸುವುದು ಸಹಜ. ಹಾಗಾದ್ರೆ ಅವರ ಸೌಂದರ್ಯದ ಗುಟ್ಟೇನು ಎಂದರೆ ಅಕ್ಕಿ ತೊಳೆದ ನೀರು. ಅಕ್ಕಿ ತೊಳೆದ ಅಥವಾ ನೆನೆಸಿದ ನೀರಿನಲ್ಲಿ ಅಮಿನೊ ಆ್ಯಸಿಡ್, ವಿಟಮಿನ್ ಹಾಗೂ ಮಿನರಲ್ಸ್ ಅಧಿಕ ಪ್ರಮಾಣದಲ್ಲಿದೆ. ಇದು ಚರ್ಮದ ಸೌಂದರ್ಯ ಹೆಚ್ಚಿಸುವಲ್ಲಿ ಹಲವು ರೀತಿಯಲ್ಲಿ ಸಹಾಯ ಮಾಡುತ್ತದೆ.

- **ಚರ್ಮದ ಹೊಳಪಿಗೆ:** ಅಕ್ಕಿ ತೊಳೆದ ನೀರಿನಲ್ಲಿ ಚರ್ಮಕ್ಕೆ ಹೊಳಪು ನೀಡುವ ಕಿಣ್ವಗಳಿವೆ. ಇದು ಮುಖದ ಮೇಲಿನ ಕಪ್ಪು ಕಲೆಗಳು ಹಾಗೂ ಇನ್ನಿತರ ಕಲ್ಮಶಗಳನ್ನು ಸ್ವಚ್ಛ ಮಾಡಿ ಹೊಳಪು ಹೆಚ್ಚಲು ನೆರವಾಗುತ್ತದೆ.
- **ಆ್ಯಂಟಿ ಏಜಿಂಗ್:** ಇದರಲ್ಲಿ ಆ್ಯಂಟಿ ಆಕ್ಸಿಡೆಂಟ್ ಅಂಶ ಅಧಿಕವಿದೆ. ಇದರಿಂದ ಚರ್ಮ ಸುಕ್ಕುಗಟ್ಟುವುದು, ನೆರಿಗೆ ಮೂಡುವುದು ಮುಂತಾದ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇದು ಉತ್ತಮ ಆ್ಯಂಟಿ ಏಜಿಂಗ್.
- **ಚರ್ಮದ ಆರೋಗ್ಯಕ್ಕೆ:** ಚರ್ಮದ ಹಲವು ಸಮಸ್ಯೆಗಳಿಗೆ ಅಕ್ಕಿ ತೊಳೆದ ಅಥವಾ ಬೇಯಿಸಿದ ನೀರು ನೈಸರ್ಗಿಕವಾಗಿ ಪರಿಹಾರ ನೀಡುತ್ತದೆ. ಮಾಲಿನ್ಯದಿಂದಾಗುವ ಸಮಸ್ಯೆಗಳಿಗೂ ಇದು ಪರಿಹಾರ ಒದಗಿಸುತ್ತದೆ.
- ಸನ್‌ಬರ್ನ್, ಟ್ಯಾನ್‌ನಂತಹ ಸಮಸ್ಯೆಗಳಿಗೂ ಇದರಿಂದ ಪರಿಹಾರ ಕಂಡುಕೊಳ್ಳಬಹುದು.
- ಇದು ಮುಖಕ್ಕೆ ಮಾಯಿಶ್ಚರೈಸರ್‌ನಂತೆ ಕೆಲಸ ಮಾಡುತ್ತದೆ.
- ಅಕ್ಕಿ ತೊಳೆದ ನೀರನ್ನು ಪ್ರತಿನಿತ್ಯ ಬಳಸುವುದರಿಂದ ಮುಖದ ಚರ್ಮವು ತಾಜಾ ಆಗಿ ಹಾಗೂ ಎಳಸಾಗಿಯೇ ಇರುತ್ತದೆ. ಇದರ ಬಳಕೆಯಿಂದ ಚರ್ಮದ ಕಾಂತಿ ಹೆಚ್ಚುತ್ತದೆ, ಹೊಳಪು ಹೆಚ್ಚುತ್ತದೆ. ಅಲ್ಲದೇ ಇದು ಮೊಡವೆ, ಕಪ್ಪುಕಲೆ, ಹೈಪರ್‌ಪಿಗ್ಮಂಟೇಷನ್, ಸುಕ್ಕಿನಂತಹ ಇತರ ಸಮಸ್ಯೆಗಳಿಗೂ ಪರಿಹಾರ ಒದಗಿಸುತ್ತದೆ.

ಅಕ್ಕಿ ತೊಳೆದ ನೀರಿನ ಬಳಕೆ ಹೇಗೆ?

ಒಂದು ಕಪ್ ಅಕ್ಕಿಯನ್ನು ಅರ್ಧಗಂಟೆ ಕಾಲ ನೀರಿನಲ್ಲಿ ನೆನೆಸಬೇಕು. ನಂತರ ನೀರನ್ನು ತೆಗೆದು ಒಂದು ಪಾತ್ರೆಯಲ್ಲಿ ಇರಿಸಬೇಕು. ಅದರಿಂದ ಮುಖ ತೊಳೆಯಬೇಕು.

ಅನ್ನ ಬೇಯಿಸಿದ ನೀರಿನಿಂದಲೂ ಮುಖ ತೊಳೆದುಕೊಳ್ಳಬಹುದು. ಅದನ್ನು ಫ್ರಿಜ್‌ನಲ್ಲಿಟ್ಟು ವಾರಗಳ ಕಾಲ ಬಳಸಬಹುದು. ❖

ಫ್ರಿಜ್‌ನಲ್ಲಿ ಏನಿರಬೇಕು?

ಸುಕೃತ ಎಸ್.

ಇವತ್ತು ವಾರದ ಸಂತೆ; ಮನೆಗೆ ಅಗತ್ಯವಿರುವಷ್ಟು ತರಕಾರಿ, ಸೊಪ್ಪು ಎಲ್ಲವನ್ನೂ ತಂದಾಯಿತು. ಇವತ್ತು ಮನೆಗೆ ತಿಂಗಳ ಸಾಮಾನು ತರುವ ದಿನ; ಮನೆಗೆ ಕಾಳು-ಕಡಿ, ಅಕ್ಕಿ-ಬೇಳೆ ಮುಂತಾದವುಗಳು ಬಂದವು. ಹೀಗೆ ಮನೆಗೆ ರಾಶಿ ಸಾಮಾನು, ತರಕಾರಿಗಳು ಬಂದು ಬಿದ್ದ ದಿನ, ಅದನ್ನು ಸೇರಿಸಿ ಇಡುವುದೇ ಒಂದು ಒಪ್ಪತ್ತಿನ ಕೆಲಸ.

ಬಂದ ತರಕಾರಿ, ಮನೆ ಸಾಮಾನುಗಳನ್ನು ಸೇರಿಸಿ ಇಡುವ ಹೊತ್ತಿಗೆ ಸದಾ ನಮ್ಮನ್ನು ಒಂದು ವಿಷಯ ಕಾಡಬಹುದು– ಇದನ್ನು ಫ್ರಿಜ್‌ನಲ್ಲಿ ಇಡುವುದಾ ಅಥವಾ ಹೊರಗೆ ಇಡುವುದಾ ಎಂಬುದಾಗಿ. ಫ್ರಿಜ್‌ನಲ್ಲೇ ಇಡುವುದಾದರೆ ಫ್ರಿಜ್ ಒಳಗೆ ಇಟ್ಟರೆ ಸಾಕೇ ಅಥವಾ ಫ್ರೀಜರ್‌ನಲ್ಲಿ ಇಡಬೇಕೇ? ಇಲ್ಲಿಗೆ ಮುಗಿಯುವುದಿಲ್ಲ ಸಮಸ್ಯೆ. ಅವುಗಳನ್ನು ಹೇಗೆ ಇಡಬೇಕು ಎಂಬ ತಲೆನೋವು ಶುರುವಾಗುತ್ತದೆ.

ತರಕಾರಿ–ಹಣ್ಣುಗಳಂತೂ ಒಂದೆರಡು ದಿನಕ್ಕೆ ಬಾಡಲಿಕ್ಕೆ ಶುರುವಾಗುತ್ತವೆ. ಈಗಂತೂ ಸಣ್ಣ ಸಣ್ಣ ಕುಟುಂಬಗಳಾದ್ದರಿಂದ ತರಕಾರಿ–ಹಣ್ಣುಗಳು ಮತ್ತು ಮನೆಯ ಇತರ ಕೆಲವು ಅಡುಗೆ ಸಾಮಾನುಗಳು ಬೇಗನೇ ಖಾಲಿ ಆಗುವುದಿಲ್ಲ. ಕೆಲವು ದಿನ ಇಟ್ಟು ತಿನ್ನಬೇಕಾಗುತ್ತದೆ. ಈ ಸಂದರ್ಭದಲ್ಲಿ ಅವನ್ನು ಹೇಗೆ ಹಲವು ದಿನ ಫ್ರಿಜ್‌ನಲ್ಲಿ ಇಟ್ಟು ತಿನ್ನಬಹುದು?

ಸಿಟ್ರಸ್ ಹಣ್ಣುಗಳು

ನಿಂಬೆ ಹಣ್ಣು, ಕಿತ್ತಲೆ ಹಣ್ಣು, ಮೋಸಂಬಿ ಅಂಥ ಸಿಟ್ರಸ್ ಹಣ್ಣುಗಳನ್ನು ಫ್ರಿಜ್‌ನಲ್ಲಿ ಇಟ್ಟರೆ ಒಳ್ಳೆಯದು. ಬಿಸಿಲಿಗೆ ಇವುಗಳು ಒಣಗಿ ಬೇಗ ಬಾಡಿಹೋಗುತ್ತವೆ. ಗಾಳಿ ಹೋಗದಂಥ ಬ್ಯಾಗ್‌ನಲ್ಲಿ ಇಟ್ಟರೆ ಒಂದು ತಿಂಗಳವರೆಗೆ ತಾಜಾ ಆಗಿಯೇ ಇರುತ್ತದೆ; ಫ್ರೀಜರ್‌ನಲ್ಲಿ ಇಟ್ಟರೆ ಮೂರು ನಾಲ್ಕು ತಿಂಗಳುಗಳೇ ಉಪಯೋಗಕ್ಕೆ ಬರುತ್ತದೆ.

ಡ್ರೈ ಫ್ರೂಟ್ಸ್‌ಗಳು ಮತ್ತು ಹಣ್ಣುಗಳು

ಬಾದಾಮಿ, ಗೋಡಂಬಿ, ಪಿಸ್ತಾ, ಒಣದ್ರಾಕ್ಷಿ ಮತ್ತು ಕರ್ಜೂರದಂಥ ಕೆಲವು ಡ್ರೈ ಫ್ರೂಟ್ಸ್‌ಗಳ ತಾಜಾತನವನ್ನು ಹಾಗೆ ಉಳಿಸಿಕೊಳ್ಳಲು ಇವುಗಳನ್ನು ಫ್ರಿಜ್‌ನಲ್ಲಿ ಇಡುವುದೇ ಒಳಿತು. ಗಾಳಿ– ಬೆಳಕಿಗೆ ಬಿಟ್ಟರೆ ಅವುಗಳಿಗೆ ಫಂಗಸ್ ಬರುವ ಸಾಧ್ಯತೆ ಹೆಚ್ಚು. ಇವುಗಳನ್ನು ಕಟ್ ಮಾಡಿ, ಗ್ರೈಂಡ್ ಮಾಡಿದ್ದರೂ ಸರಿ ಗಾಳಿ ಒಳಗೆ ಹೋಗದಂಥ ಮುಚ್ಚಳ ಇರುವ ಡಬ್ಬಿಯಲ್ಲಿ ಹಾಕಿ ಫ್ರೀಜರ್‌ನಲ್ಲಿ ಇಟ್ಟರೆ ಅದರ ತಾಜಾತನವು ಹಾಳಾಗದೆ ಹಾಗೇ ಇರುತ್ತದೆ. ಹೀಗೆ ಮಾಡಿದರೆ, ಆರು ತಿಂಗಳವರೆಗೆ ತಾಜಾತನವನ್ನು ಕಾಪಾಡಿಕೊಳ್ಳಬಹುದಾಗಿದೆ.

ಚಪಾತಿ

ರೆಡಿಮೇಡ್ ಚಪಾತಿಗಳು ಈಗ ಅಂಗಡಿ ಮಳಿಗೆಯಲ್ಲಿ ಲಭ್ಯ. ಒಮ್ಮೆ ಪ್ಯಾಕೆಟ್ ತೆರೆದರೆ ಒಂದೋ ಎರಡೋ ಚಪಾತಿ ತಿನ್ನಬಹುದು. ಉಳಿದದ್ದನ್ನು ಕೆಡದಂತೆ ಇಡಲು ಹೀಗೆ ಮಾಡಿ– ಸ್ವಲ್ಪವೂ ಗಾಳಿ ಒಳಗೆ ಹೋಗದ ಹಾಗೆ ಒಂದು ಬ್ಯಾಗ್‌ನಲ್ಲಿ ಉಳಿದ ಚಪಾತಿಗಳನ್ನು ಹಾಕಿ ಫ್ರಿಜ್‌ನಲ್ಲಿ ಇಡಿ. ಸುಮಾರು ಏಳು ದಿನಗಳವರೆಗೆ ತಾಜಾ ಆಗಿರುತ್ತವೆ. ಇನ್ನೂ ಹೆಚ್ಚಿನ ದಿನಗಳವರೆಗೆ ತಾಜಾ ಆಗಿಯೇ ಚಪಾತಿಗಳನ್ನು ಇಡಬೇಕು ಎಂದಿದ್ದರೆ, ಚಪಾತಿಗಳ ಮಧ್ಯೆ ವ್ಯಾಕ್ಸ್ ಪೇಪರ್ ಹಾಕಿ ಗಾಳಿ ಒಳಗೆ ಹೋಗದಂತೆ ಕವರ್ ಮಾಡಿ ಫ್ರೀಜರ್‌ನಲ್ಲಿ ಇಡಿ.

ಸೊಪ್ಪುಗಳು

ಹೆಚ್ಚಿನ ಸಂದರ್ಭಗಳಲ್ಲಿ ತಂದ ಸೊಪ್ಪುಗಳನ್ನು ಹಾಳಾಗದಂತೆ ಕಾಪಾಡಿಕೊಳ್ಳುವುದೇ ದೊಡ್ಡ ತಲೆನೋವಾಗಿ ಬಿಡುತ್ತದೆ. ಅಡುಗೆಗೆ ಬಳಸುವುದಕ್ಕಿಂತ ಎಸೆಯುವ ಪ್ರಮಾಣವೇ ಕೆಲವೊಮ್ಮೆ ಹೆಚ್ಚಿರುತ್ತದೆ. ಇಂಥ ಸಂದರ್ಭದಲ್ಲಿ ಇವುಗಳನ್ನು ಫ್ರಿಜ್‌ನಲ್ಲಿ ಇಡಬಹುದು.

ತೆಳ್ಳಗೆ ಇರುವ ಎಲೆಗಳಿರುವ ಸೊಪ್ಪಿನ ಕೆಳಭಾಗವನ್ನು ಕತ್ತರಿಸಿ, ಒಂದು ಜಾರ್‌ನಲ್ಲಿ ಕಾಂಡ ಮಾತ್ರ ಮುಳುಗುವಂತೆ ತಣ್ಣಗಿನ ನೀರು ಹಾಕಿಡಿ. ಸೊಪ್ಪನ್ನು ಒಂದು ಬ್ಯಾಗ್‌ನಿಂದ ಕವರ್ ಮಾಡಿ. ನೀರನ್ನು ಬದಲಾಯಿಸುತ್ತಾ ಇರಿ. ಗಟ್ಟಿ ಕಾಂಡ ಇರುವ ದಪ್ಪ ಎಲೆಯ ಸೊಪ್ಪುಗಳನ್ನು ಪೇಪರ್ ಟವಲ್‌ನಲ್ಲಿ ಕಟ್ಟಿ ಇಟ್ಟರೆ ಹೆಚ್ಚು ದಿನಗಳವರೆಗೆ ಬಾಳಿಕೆ ಬರುತ್ತದೆ. ಮೂರು– ನಾಲ್ಕು ವಾರಗಳವರೆಗೆ ಸೊಪ್ಪುಗಳನ್ನು ತಾಜಾ ಆಗಿ ಇಡಬಹುದು. ❖

ಚಹ ಎಂದರೆ ಆಹಾ ಎನ್ನುವಂತಿರಬೇಕು!

ಚಹ ಕುಡಿಯುವ ಅಭ್ಯಾಸವಿರುವವರನ್ನು ಕೇಳಿ ನೋಡಿ, ಯಾವಾಗಲೂ ನೀವು ಮಾಡುವ ಚಹದ ರುಚಿ ಒಂದೇ ರೀತಿಯಾಗಿರುತ್ತದೆಯೇ ಎಂದು. 'ಕೆಲವೊಮ್ಮೆ ರುಚಿ ಹೆಚ್ಚು ಕಡಿಮೆಯಾಗುತ್ತದೆ. ನಾವೇ ತಯಾರಿಸಿದ್ದೇವಲ್ಲ ಎಂದುಕೊಂಡು ಕುಡಿಯುವುದು ಅಷ್ಟೆ' ಎಂಬ ಉತ್ತರ ಬರುತ್ತದೆ. ತಮ್ಮ ಜೀವಮಾನದಲ್ಲಿ ಸಾವಿರಾರು ಕಪ್ ಚಹ ತಯಾರಿಸಿದವರೂ ಕೂಡ ಸರಿಯಾಗಿ ಚಹ ತಯಾರಿಸುವುದು ಕಡಿಮೆಯೇ. ಬಿಸಿ ನೀರಿಗೆ ಚಹದ ಎಲೆಗಳನ್ನು ಹಾಕಿ ಕುದಿಸಿ, ಅದಕ್ಕೊಂದಿಷ್ಟು ಹಾಲು ಸುರುವಿ, ಸಕ್ಕರೆ ಸೇರಿಸಿ ಕುಡಿಯುವುದು ಅಥವಾ ಹಾಲಿಗೇ ನೇರವಾಗಿ ಚಹದ ಪುಡಿ ಹಾಕಿ ಕುದಿಸಿ ಸೇವಿಸುವುದು ಅಥವಾ ಬಿಸಿ ನೀರಿನಲ್ಲಿ ಟೀಬ್ಯಾಗ್ ಅದ್ದಿ ಡಿಪ್‌ಚಾಯ್ ಮಾಡಿಕೊಂಡು ಕುಡಿಯುವುದು ಅಥವಾ ಬ್ಲ್ಯಾಕ್ ಟೀ ತಯಾರಿಸಿ ಸಿಪ್ ಮಾಡುವುದು... ಹೀಗೆ ಎಷ್ಟೋ ಬಗೆಯಲ್ಲಿ ಚಹ ತಯಾರಿಸಿ ಸವಿಯಬಹುದು.

ಬೆಳಗಿನ ಖಡಕ್ ಚಹ ಕುಡಿಯಬೇಕಾದರೆ ಕೆಲವೊಂದು ತಪ್ಪುಗಳನ್ನು ಮಾಡದೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಹಿಂದಿನ ದಿನ ಕುದಿಸಿ ಆರಿಸಿದ ನೀರನ್ನು ಮತ್ತೆ ಕುದಿಸಿ ಅದರಿಂದ ಚಹ ತಯಾರಿಸಿದರೆ ಸಪ್ಪೆ ಎನಿಸುತ್ತದೆ ಎನ್ನುತ್ತಾರೆ ಈ ವಿಷಯದಲ್ಲಿ ಅನುಭವಿಗಳು. ಯಾವಾಗಲೂ ತಾಜಾ ತಣ್ಣಗಿನ ನೀರನ್ನು, ಸಾಧ್ಯವಿದ್ದರೆ ಫಿಲ್ಟರ್ ನೀರನ್ನು ಕುದಿಸಲು ಇಡಿ. ಇದಕ್ಕೆ ಕಾರಣ ಒಮ್ಮೆ ಕುದಿಸಿದ ನೀರಲ್ಲಿ ಆಮ್ಲಜನಕದ ಅಂಶ ಕಡಿಮೆ ಇರುತ್ತದೆ. ಹೀಗಾಗಿ ತಣ್ಣೀರಿನಲ್ಲಿರುವ ಆಮ್ಲಜನಕ ಚಹದ ಪರಿಮಳ, ರುಚಿ ಹೆಚ್ಚಿಸಲು ನೆರವಾಗುತ್ತದೆ.



ಹಾಲನ್ನು ಮೊದಲೇ ಸೇರಿಸಿ. ನೀರನ್ನು ಕುದಿಸಿ ಅದಕ್ಕೆ ಚಹದ ಪುಡಿ ಸೇರಿಸಿದರೆ ಅದರಲ್ಲಿರುವ ಟ್ಯಾನಿನ್ ಚಹಕ್ಕೆ ರುಚಿ, ಪರಿಮಳ ನೀಡುತ್ತದೆ. ಹಾಗೆಯೇ ಜೊತೆಗೆ ಹಾಲನ್ನೂ ಸೇರಿಸಿ. ಹಾಲಿನಲ್ಲಿರುವ ಪ್ರೊಟೀನ್ ಟ್ಯಾನಿನ್ ಹಾಗೂ ನೀರಿನಲ್ಲಿರುವ ಇತರ ಖನಿಜಾಂಶಗಳ ಜೊತೆ ಸೇರಿಕೊಂಡು ರುಚಿಕಟ್ಟಾದ ಚಹ ಸಿದ್ಧವಾಗುತ್ತದೆ.

ಚಹದ ಪುಡಿ ಅಥವಾ ಟೀ ಬ್ಯಾಗ್ ಮೇಲೆ ಬಿಸಿ ನೀರು ಸುರಿವಿದರೆ ಚಹ ಸುಟ್ಟಂತಾಗಿ ಒಳ್ಳೆಯ ರುಚಿ ಬರುವುದಿಲ್ಲ. ಅದರ ಬದಲು ಕುದಿಸುವುದು ಸೂಕ್ತ.

ಹಾಗೆಯೇ ಚಹ ತಿರುವುವಾಗ ಸ್ಟೀಲ್ ಚಮಚ ಬಳಸಿ. ಅದರ ಬದಲು ಅಲ್ಯೂಮಿನಿಯಂ ಅಥವಾ ಬೆಳ್ಳಿಯ ಚಮಚ ಬಳಸಿದರೆ ಒಂದು ರೀತಿಯ ಲೋಹದ ರುಚಿ ಸೇರಿಕೊಳ್ಳುತ್ತದೆ. ❖

ಮನೆಯಲ್ಲೇ ರುಚಿಕರ ಕಪ್ ನೂಡಲ್ ತಯಾರಿಕೆ ಬಲು ಸುಲಭ

ನೂಡಲ್ಸ್ ಅಂದರೆ ಯಾರಿಗೆ ಇಷ್ಟವಿಲ್ಲ ಹೇಳಿ! ಕಪ್ ನೂಡಲ್ ಆದರಂತೂ ಕಚೇರಿಗೂ ಒಯ್ಯಬಹುದಿತ್ತು. ಈಗ ಮನೆಯಲ್ಲೇ ಕುಳಿತು ಕೆಲಸ ಮಾಡುವಾಗಲೂ ಬೇಕೆಂದಾಗ ತಿನ್ನಬಹುದು. ಆದರೆ ರಾಸಾಯನಿಕ ವಸ್ತು ಸೇರಿಸಿದ, ಒಣಗಿದ ತರಕಾರಿ ಚೂರುಗಳು.. ಅದೂ ಅಲ್ಲೊಂದು ಇಲ್ಲೊಂದು ಎಂದು ಇಣುಕುವ ಕ್ಯಾರಟ್, ಬೀನ್ಸ್... ಒಂದು ರೀತಿ ಪ್ಲಾಸ್ಟಿಕ್ ಅಗಿದಂತಾಗಿ ಹೇವರಿಕೆ ಹುಟ್ಟುತ್ತದೆ. ಹಾಗಂತ ನೂಡಲ್ಸ್ ತಿನ್ನುವುದನ್ನೇ ಬಿಟ್ಟುಬಿಡಲಾದೀತೇ? ಮನೆಯಲ್ಲೇ ಇದನ್ನು ಸಿದ್ಧಪಡಿಸಿಕೊಂಡು ನಾಲಗೆಯ ರುಚಿಯನ್ನು ತಣಿಸಿಕೊಳ್ಳಬಹುದಲ್ಲ.

ಈ ಕಪ್ ನೂಡಲ್ ತಯಾರಿಸುವುದು ಸುಲಭ ಕೂಡ. ನಿಮಗೆ ಇಷ್ಟವಾದ ಸಾಮಗ್ರಿಗಳನ್ನು ನೂಡಲ್ ಜೊತೆ ಸೇರಿಸಿ ಗಾಜಿನ ಜಾರ್‌ನಲ್ಲಿ ತುಂಬಿ ಮುಚ್ಚಳ ಮುಚ್ಚಿ ಫ್ರಿಜ್‌ನಲ್ಲಿಟ್ಟರೆ ಕೆಲಸ ಸುಲಭ. ಬೇಕೆಂದಾಗ ಈ ಜಾರ್ ಮುಚ್ಚಳ ತೆಗೆದು ಬೇಕಾದಷ್ಟು ಬಿಸಿ ನೀರು ಸುರುವಿ ರುಚಿಕರವಾದ ನೂಡಲ್ಸ್ ಸವಿಯಬಹುದು. ಹಾಗಾದರೆ ನೂಡಲ್ಸ್ ಒದ್ದೆಮುದ್ದೆಯಾಗಿ ಗಾಜಿನ ಜಾರ್‌ನಲ್ಲಿ ಕೂತು ಅಕ್ಟೋಪಸ್‌ನ ಜೋತು ಬಿದ್ದ ಬಾಹುಗಳಂತೆ ಕಾಣುವುದಿಲ್ಲವೇ ಎಂಬ ಅನುಮಾನ ಹಲವರಲ್ಲಿರಬಹುದು. ಆದರೆ ತಣ್ಣಗಿನ ನೀರಿನಲ್ಲಿ ನೂಡಲ್ಸ್ ಮುಳುಗಿಸಿ ನೋಡಿ. ಅದು ಕರಗದೆ ಹಾಗೇ ತಾಜಾ ಆಗಿ ಕೂತಿರುತ್ತದೆ. ಅದಕ್ಕೆ ಬಿಸಿ ನೀರು ಸೋಕಿದರೆ ಮಾತ್ರ ಮೆತ್ತಗಾಗಿ ತಿನ್ನಲು ಸಿದ್ಧವಾಗುವುದು.

ಇದಕ್ಕೆ ಬೇಕಾಗಿರುವುದು ಸೂಪ್ ಪುಡಿ. ನಿಮಗೆ ಇಷ್ಟವಾದ ಪರಿಮಳದ, ಇಷ್ಟವಾದ ರುಚಿಯ ಸೂಪ್ ಪ್ಯಾಕೆಟ್ ಅಂಗಡಿಯಲ್ಲಿ ಲಭ್ಯ. ಖರೀದಿಸುವ ಮೊದಲು ಹೆಚ್ಚು ಪ್ರಿಸರ್ವೇಟಿವ್ ಇಲ್ಲದ ಸೂಪ್ ಪುಡಿ ಅಥವಾ ಪೇಸ್ಟ್ ಎಂದು ಖಾತ್ರಿಪಡಿಸಿಕೊಳ್ಳಿ. ಇದಕ್ಕೆ ನೀರು ಸೇರಿಸಿದರೆ ಮಂದವಾದ ದ್ರವ ಸಿದ್ಧ. ಇದಕ್ಕೆ ಬೇಕಿದ್ದರೆ ಸೋಯಾ ಸಾಸ್, ಕೆಂಪು ಖಾರ– ಬೆಳ್ಳುಳ್ಳಿ ಸಾಸ್ ಸೇರಿಸಬಹುದು.

ಮುಕ್ಕಾಲು ಕಪ್ ನೂಡಲ್ಸ್ ತೆಗೆದುಕೊಳ್ಳಿ. ಅಂಗಡಿಯಲ್ಲಿ ಸಿಗುವ ರೆಮೆನ್ ನೂಡಲ್ ಅನ್ನು ಹಾಗೆಯೇ ಬಳಸಬಹುದು. ಅಕ್ಕಿಯ ನೂಡಲ್ಸ್, ಸ್ಪೆಗೆಟಿ ಅಥವಾ ಶ್ಯಾವಿಗೆಯಾದರೆ ಬೇಯಿಸಿದ್ದು.

ಕಾಲು ಕಪ್ ಫ್ರೋಜನ್ ಜೋಳ, ಹಸಿರು ಬಟಾಣಿ, ಕ್ಯಾರಟ್, ಮಾಂಸಪ್ರಿಯರಾದರೆ ಬೇಯಿಸಿದ ಮಾಂಸದ ಚೂರು, ಒಣಗಿದ ಅಣಬೆ... ಹೀಗೆ ಗುಡ್ಡೆ ಹಾಕಿಕೊಳ್ಳಬಹುದು. ಫ್ರೋಜನ್ ಆಗಿದ್ದು ಸಿಗದಿದ್ದರೆ, ಬೇಯಿಸಿ ಉಳಿದ ತರಕಾರಿ ಹೋಳುಗಳು ಕೂಡ ಆಗಬಹುದು.

ತಾಜಾ ತರಕಾರಿ, ಮೊಟ್ಟೆಯನ್ನು ಬೇಯಿಸಿ ಇಟ್ಟುಕೊಳ್ಳಿ. ಇದಕ್ಕೆ ಈರುಳ್ಳಿ, ಮೊಳಕೆ ಬಂದ ಹೆಸರು ಕಾಳು, ಲಿಂಬೆ ಹೋಳು.. ಹೀಗೆ ಸಿದ್ಧಪಡಿಸಿಕೊಳ್ಳಿ. ಹಾಗೆಯೇ ಕೊತ್ತಂಬರಿ ಸೊಪ್ಪು.

ಎಲ್ಲವನ್ನೂ ಪದರ ಪದರವಾಗಿ ಗಾಜಿನ ಜಾರ್‌ನಲ್ಲಿ ಜೋಡಿಸಿ, ಬಿಗಿ ಮುಚ್ಚಳ ಮುಚ್ಚಿ ಫ್ರಿಜ್‌ನಲ್ಲಿಟ್ಟರೆ ಒಂದು ವಾರ ತಾಜಾ ಇರುತ್ತದೆ. ❖